ಬುಧವಾರ, ಜುಲೈ 24, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 205 | ಪುಟ 20

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ತಂತ್ರಜ್ಞಾನ
ಮನೋರೋಗಗಳ ಚಿಕಿತ್ಸೆಯಲ್ಲಿ ವರ್ಚುವಲ್ ರಿಯಾಲಿಟಿ ತಂತ್ರಜ್ಞಾನವೂ ನೆರವಾಗುತ್ತಿದೆ

ಏಡ್ಸ್‌ನಿಂದ ಪ್ರತಿ ನಿಮಿಷಕ್ಕೆ ಒಬ್ಬರ ಸಾವು 14

ನಡುಗಡ್ಡೆಗಳಲ್ಲಿ ಸಿಲುಕಿದ ಜನ, ಜಾನುವಾರು 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,429	24,479	₹71,800 (ಬೆಂಗಳೂರು)	₹87,600 (ಬೆಂಗಳೂರು)	83.69

₹48.21 ಲಕ್ಷ ಕೋಟಿ ಬಜೆಟ್ ಗಾತ್ರ | ₹32.07 ಲಕ್ಷ ಕೋಟಿ ಸಾಲವನ್ನು ಹೊರತುಪಡಿಸಿದ ವರಮಾನ | ₹25.83 ಲಕ್ಷ ಕೋಟಿ ನಿವ್ವಳ ತೆರಿಗೆ ಆದಾಯ | 4.9% ವಿತ್ತೀಯ ಕೊರತೆ

ಉದ್ಯೋಗಕ್ಕೆ ಒತ್ತು: ಮಿತ್ರರಿಗಷ್ಟೇ ಸವಲತ್ತು

₹11.11 ಲಕ್ಷ ಕೋಟಿ ಮೂಲಸೌಕರ್ಯಕ್ಕೆ • ₹6.21 ಲಕ್ಷ ಕೋಟಿ ರಕ್ಷಣೆಗೆ • ₹11 ಲಕ್ಷ ಕೋಟಿ ಸಾಲದ ಬಡ್ಡಿಗೆ

ಎಐ ಚಿತ್ರ: ಕಣಕಾಲಮಠ

• ಮಂಜುನಾಥ ಹೆಬ್ಬಾರ್

ನವದೆಹಲಿ: ದೇಶದಲ್ಲಿ ಉದ್ಯೋಗ ಸೃಷ್ಟಿ ಪಾತಾಳಕ್ಕೆ ಕುಸಿದಿರುವುದನ್ನು ಮೊದಲ ಬಾರಿಗೆ ಪರೋಕ್ಷವಾಗಿ ಒಪ್ಪಿಕೊಂಡಿರುವ ಕೇಂದ್ರ ಸರ್ಕಾರ, ಉದ್ಯೋಗ ಸೃಷ್ಟಿ, ಕೌಶಲ ಅಭಿವೃದ್ಧಿ ಹಾಗೂ ತಯಾರಿಕಾ ವಲಯಕ್ಕೆ ಉತ್ತೇಜನ ನೀಡಲು ಹಲವು ಯೋಜನೆಗಳನ್ನು ಬಜೆಟ್‌ನಲ್ಲಿ ಪ್ರಕಟಿಸಿದೆ. ಹೊಸ ತೆರಿಗೆ ಪದ್ಧತಿಯಲ್ಲಿ ತುಸು ಮಾರ್ಪಾಡುಗಳನ್ನು ಮಾಡುವ ಮೂಲಕ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಧ್ಯಮ ವರ್ಗದ ಜನರಲ್ಲಿ ಹಿತಾನುಭವ ಮೂಡಿಸಲು ಯತ್ನಿಸಿದ್ದಾರೆ.

ನಿರ್ಮಲಾ ಅವರು ಸತತ ಏಳನೇ ಬಾರಿ ಬಜೆಟ್ ಮಂಡಿಸುವ ಮೂಲಕ ಸಿ.ಡಿ. ದೇಶಮುಖ್ ಅವರ ದಾಖಲೆಯನ್ನು ಸರಿಗಟ್ಟಿದರು. 1951ರಿಂದ 1956ರ ನಡುವೆ ದೇಶಮುಖ್ ಅವರು ಸತತ ಏಳು ಬಜೆಟ್ ಮಂಡಿಸಿದ್ದರು.

ಮೈತ್ರಿ ಸರ್ಕಾರಕ್ಕೆ ಊರುಗೋಲು ಆಗಿರುವ ಮಿತ್ರ ಪಕ್ಷಗಳ ಓಲೈಕೆಗೆ ಬಜೆಟ್‌ನಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ. ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಪರ ಬಲವಾಗಿ ನಿಂತ ಆಂಧ್ರ ಪ್ರದೇಶ, ಬಿಹಾರ ಹಾಗೂ ಒಡಿಶಾ ರಾಜ್ಯಗಳಿಗೆ ಹಾಗೂ ಬಿಜೆಪಿಯ ಸಾಂಪ್ರದಾಯಿಕ ನೆಲೆಗಳಾದ ಉತ್ತರಾಖಂಡ, ಹಿಮಾಚಲ ಪ್ರದೇಶದಂತಹ ರಾಜ್ಯಗಳಿಗೆ ದೊಡ್ಡ ಇಡುಗಂಟುಗಳನ್ನು ನೀಡಲಾಗಿದೆ. ಆಂಧ್ರ ಪ್ರದೇಶ ಹೊರತುಪಡಿಸಿ ದಕ್ಷಿಣದ ರಾಜ್ಯಗಳತ್ತ ಮತ್ತೆ ತಾತ್ಸಾರ ಭಾವ ಎದ್ದು ಕಂಡಿದೆ. 'ಈ ಬಜೆಟ್ ಕುರ್ಚಿ ಉಳಿಸಿಕೊಳ್ಳುವ ಕಸರತ್ತಿನ ಭಾಗ. ಕಾಂಗ್ರೆಸ್‌ನ ಪ್ರಣಾಳಿಕೆ 'ನ್ಯಾಯಪತ್ರ'ದ ನಕಲು' ಎಂದು 'ಕೈ' ನಾಯಕರು ಲೇವಡಿ ಮಾಡಿದ್ದಾರೆ.

9ನೇ ಪುಟ ನೋಡಿ

> ಧರ್ಮ, ಜಾತಿ ಮತ್ತು ಪಂಥವನ್ನು ಲೆಕ್ಕಿಸದೆ ಎಲ್ಲ ಭಾರತೀಯರ ಜೀವನದ ಗುರಿ ಮತ್ತು ಆಕಾಂಕ್ಷೆಗಳನ್ನು ಸಾಕಾರಗೊಳಿಸುವಲ್ಲಿ ಗಣನೀಯ ಪ್ರಗತಿ ಸಾಧಿಸುವುದನ್ನು ಖಚಿತಪಡಿಸಿಕೊಳ್ಳಲು ನಾವು ನಿರ್ಧರಿಸಿದ್ದೇವೆ. 'ವಿಕಸಿತ ಭಾರತ'ಕ್ಕೆ ಸಂಬಂಧಿಸಿದಂತೆ ಮಧ್ಯಂತರ ಬಜೆಟ್‌ನಲ್ಲಿ ರೂಪಿಸಲಾದ ಕಾರ್ಯತಂತ್ರಕ್ಕೆ ಅನುಗುಣವಾಗಿ, ಈ ಬಜೆಟ್‌ನಲ್ಲಿ ಎಲ್ಲರಿಗೂ ಹಲವು ಅವಕಾಶಗಳನ್ನು ಒದಗಿಸಿದ್ದೇವೆ
> **ನಿರ್ಮಲಾ ಸೀತಾರಾಮನ್,** ಹಣಕಾಸು ಸಚಿವೆ

ಚಿನ್ನ, ಬೆಳ್ಳಿ ಕಸ್ಟಮ್ಸ್ ಸುಂಕ ಕಡಿತ

ಚಿನ್ನ ಮತ್ತು ಬೆಳ್ಳಿ ಮೇಲೆ ವಿಧಿಸುತ್ತಿದ್ದ ಕಸ್ಟಮ್ಸ್ ಸುಂಕವನ್ನು ಶೇ 15ರಿಂದ ಶೇ 6ಕ್ಕೆ ಇಳಿಸಲಾಗಿದೆ. ಪ್ಲಾಟಿನಂ ಮೇಲಿನ ಸುಂಕವನ್ನು ಶೇ 15.4ರಿಂದ ಶೇ 6.4ಕ್ಕೆ ಕಡಿತಗೊಳಿಸಲಾಗಿದೆ.

ಸರ್ಕಾರದ ಈ ನಿರ್ಧಾರವು ಚಿನ್ನ ಮತ್ತು ಬೆಳ್ಳಿ ಉದ್ಯಮಕ್ಕೆ ವರದಾನವಾಗಿದೆ ಎಂದು ಹರಳು ಮತ್ತು ಚಿನ್ನಾಭರಣ ರಫ್ತು ಉತ್ತೇಜನಾ ಮಂಡಳಿ (ಜಿಜೆಇಪಿಸಿ) ತಿಳಿಸಿದೆ.

ಅಲ್ಲದೆ, ಒರಟು ವಜ್ರಗಳ ಮಾರಾಟದ ಮೇಲೆ ಶೇ 2ರಷ್ಟು ಏಕರೂಪ ತೆರಿಗೆ ವಿಧಿಸಲಾಗುತ್ತಿದೆ.

ವಜ್ರ ವ್ಯಾಪಾರ ವಲಯವನ್ನು ಈ ತೆರಿಗೆಯಿಂದ ಹೊರಗಿಡಲು ನಿರ್ಧರಿಸಿದೆ. ಇದು ಜಾಗತಿಕ ಮಟ್ಟದಲ್ಲಿ ಭಾರತವು ಕತ್ತರಿಸಿದ ಮತ್ತು ಪಾಲಿಷ್ ಮಾಡಿದ ವಜ್ರಗಳ ತಯಾರಿಕೆಯಲ್ಲಿ ಮುಂಚೂಣಿ ಸ್ಥಾನಕ್ಕೇರಲು ನೆರವಾಗಲಿದೆ ಎಂದು ಹೇಳಿದೆ.

> ಭಾರತವನ್ನು ಈ ಬಜೆಟ್ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕ ಶಕ್ತಿಯನ್ನಾಗಿ ಮಾಡಲಿದೆ. ದೂರದೃಷ್ಟಿಯ ಈ ಬಜೆಟ್ ಸಮಾಜದ ಎಲ್ಲ ವರ್ಗಗಳನ್ನು ಬಲಪಡಿಸುತ್ತದೆ. ಉದ್ಯೋಗಾವಕಾಶಗಳಿಗೆ ಭಾರಿ ಉತ್ತೇಜನ ನೀಡುತ್ತದೆ. ಇದು ಮಹಿಳಾ ಮತ್ತು ಅಭಿವೃದ್ಧಿ ಕೇಂದ್ರಿತ ಬಜೆಟ್
> **ನರೇಂದ್ರ ಮೋದಿ,** ಪ್ರಧಾನಮಂತ್ರಿ

> ಇದು ಕೇಂದ್ರ ಸರ್ಕಾರದ 'ಕುರ್ಚಿ ಬಚಾವೊ ಬಜೆಟ್'. ಇತರ ರಾಜ್ಯಗಳ ವೆಚ್ಚದಲ್ಲಿ ಬಿಜೆಪಿ ತನ್ನ ಮಿತ್ರ ಪಕ್ಷಗಳಿಗೆ 'ಪೊಳ್ಳು ಭರವಸೆ'ಗಳನ್ನು ನೀಡಿದೆ. ಅಲ್ಲದೆ ಈ ಬಜೆಟ್, ನಮ್ಮ ಕಾಂಗ್ರೆಸ್ ಪಕ್ಷದ 2024ರ ಚುನಾವಣಾ ಪ್ರಣಾಳಿಕೆಯ 'ಕಾಪಿ ಪೇಸ್ಟ್' ಆಗಿದೆ
> **ರಾಹುಲ್ ಗಾಂಧಿ,** ಲೋಕಸಭೆ ವಿರೋಧ ಪಕ್ಷದ ನಾಯಕ

> ರಾಜ್ಯದ ಅಗತ್ಯಗಳೇನು ಎಂಬುದನ್ನು, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವರಿಕೆ ಮಾಡಿಕೊಡಲಾಗಿತ್ತು. ಆದರೆ ಕೇಂದ್ರ ಬಜೆಟ್‌ನಲ್ಲಿ ರಾಜ್ಯವನ್ನು ಕಡೆಗಣಿಸಲಾಗಿದೆ. ಈ ಉದ್ದೇಶಪೂರ್ವಕ ನಿರ್ಲಕ್ಷ್ಯ ಮತ್ತು ತಾರತಮ್ಯವನ್ನು ಖಂಡಿಸುತ್ತೇವೆ. ಪ್ರತಿಭಟನಾರ್ಥಕವಾಗಿ ಇದೇ 27ರಂದು ಪ್ರಧಾನಿ ನೇತೃತ್ವದಲ್ಲಿ ನಡೆಯಲಿರುವ ನೀತಿ ಆಯೋಗದ ಸಭೆಯನ್ನು ಬಹಿಷ್ಕರಿಸುತ್ತೇವೆ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಹೊಸ ತೆರಿಗೆ ಪದ್ಧತಿ ಪಾಲಿಸುವ ತೆರಿಗೆದಾರರಿಗೆ ಕೊಂಚ ಸಿಹಿ



- ಮಾಸಿಕ ವೇತನ ಪಡೆಯುವ ಉದ್ಯೋಗಿಗಳ ಸ್ಟ್ಯಾಂಡರ್ಡ್ ಡಿಡಕ್ಷನ್ ಮೊತ್ತ ₹50 ಸಾವಿರದಿಂದ ₹75 ಸಾವಿರಕ್ಕೆ ಏರಿಕೆ
- ಪಿಂಚಣಿದಾರರ ಕುಟುಂಬ ಪಿಂಚಣಿಯಲ್ಲಿನ ಡಿಡಕ್ಷನ್ ಮೊತ್ತ ₹15 ಸಾವಿರದಿಂದ ₹25 ಸಾವಿರಕ್ಕೆ ಹೆಚ್ಚಳ

ಬಿಹಾರ, ಆಂಧ್ರಕ್ಕೆ ಬಂಪರ್ ಅನುದಾನ

ನವದೆಹಲಿ/ ಪಟ್ನಾ/ಅಮರಾವತಿ: ಎನ್‌ಡಿಎ ಮೈತ್ರಿಯ ಪ್ರಮುಖ ಮಿತ್ರಪಕ್ಷಗಳಾದ ಜೆಡಿಯು ಮತ್ತು ಟಿಡಿಪಿ ಅಧಿಕಾರದಲ್ಲಿರುವ ಬಿಹಾರ ಮತ್ತು ಆಂಧ್ರಪ್ರದೇಶಗಳಿಗೆ ಕೇಂದ್ರದ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಮಹತ್ವದ ಕೊಡುಗೆಗಳು ದೊರೆತಿವೆ.

ಸರ್ಕಾರಕ್ಕೆ ನಿರ್ಣಾಯಕ ಬೆಂಬಲ ನೀಡಿರುವ ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಮತ್ತು ಚಂದ್ರಬಾಬು ನಾಯ್ಡು ಅವರ ಟಿಡಿಪಿ ಪಕ್ಷಗಳನ್ನು ಓಲೈಸುವ ಕಾರ್ಯವನ್ನು ಕೇಂದ್ರ ಸರ್ಕಾರ ಈ ಮೂಲಕ ಮಾಡಿದೆ.

ಮುಂದಿನ ವರ್ಷ ವಿಧಾನಸಭಾ ಚುನಾವಣೆ ನಡೆಯಲಿರುವ ಬಿಹಾರಕ್ಕೆ ಸುಮಾರು ₹60,000 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ನಿರ್ಮಲಾ ಸೀತಾರಾಮನ್ ಅವರು ಪ್ರಸ್ತಾಪಿಸಿದ್ದಾರೆ. ಅಲ್ಲದೆ ಆಂಧ್ರಪ್ರದೇಶದ ರಾಜಧಾನಿ ಅಮರಾವತಿ ಅಭಿವೃದ್ಧಿಗೆ ಪ್ರಸ್ತಕ ಸಾಲಿನಲ್ಲಿ ವಿವಿಧ ಮೂಲಗಳಿಂದ ₹15,000 ಕೋಟಿ ಒದಗಿಸುವುದಾಗಿ ಹೇಳಿದ್ದಾರೆ.

ಬಿಹಾರಕ್ಕೆ ಹೂಡಿಕೆ ಮತ್ತು ಸಬ್ಸಿಡಿ ರೂಪದಲ್ಲಿ ಹಾಗೂ ಆಂಧ್ರ ಪ್ರದೇಶಕ್ಕೆ ವಿವಿಧ ಏಜೆನ್ಸಿಗಳ ಮೂಲಕ ಆರ್ಥಿಕ ನೆರವು ನೀಡಲಾಗುವುದು ಎಂದು ಅವರು ತಿಳಿಸಿದ್ದಾರೆ.

ಅಗ್ಗ	ದುಬಾರಿ
ಚಿನ್ನ, ಬೆಳ್ಳಿ, ಪ್ಲಾಟಿನಂ	ಪ್ರಯೋಗಾಲಯದ ರಾಸಾಯನಿಕ
ವಿದೇಶಿ ಮೊಬೈಲ್, ಚಾರ್ಜರ್	ಪ್ಲಾಸ್ಟಿಕ್
ಕ್ಯಾನ್ಸರ್‌ನ ಮೂರು ಔಷಧಿ	ವಿದೇಶಿ ಟೆಲಿಕಾಂ ಸಲಕರಣೆಗಳು
ಎಕ್ಸ್ ರೇ ಸಲಕರಣೆಗಳು	ಅಮೋನಿಯಂ ನೈಟ್ರೇಟ್
ಲಿಥಿಯಂ, ತಾಮ್ರ, ಕೋಬಾಲ್ಟ್ ಸೇರಿ 25 ಖನಿಜ	ಪಿವಿಸಿ, ಫ್ಲೆಕ್ಸ್, ಬ್ಯಾನರ್
ವಿದೇಶಿ ಬಟ್ಟೆ, ಚರ್ಮೋತ್ಪನ್ನ	
ಸೋಲಾರ್ ಪ್ಯಾನಲ್	
ಮೀನು, ಸಿಗಡಿ ಆಹಾರ	

ಬಜೆಟ್‌ನಲ್ಲಿ ವಿವಿಧ ಕ್ಷೇತ್ರಗಳನ್ನು ಒಂಬತ್ತು ಆದ್ಯತಾ ವಲಯಗಳಾಗಿ ಸಚಿವೆ ನಿರ್ಮಲಾ ವಿಂಗಡಿಸಿದ್ದಾರೆ. ಈ ಆದ್ಯತಾ ವಲಯಗಳ ವಿವರಗಳು ಪುಟ 9,10,11,12 ಮತ್ತು 13ರಲ್ಲಿವೆ
ಸಂಪಾದಕೀಯಕ್ಕೆ ಪುಟ 8 ನೋಡಿ

'ನೀಟ್–ಯುಜಿ ಮರು ಪರೀಕ್ಷೆ ಇಲ್ಲ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಪ್ರಶ್ನೆಪತ್ರಿಕೆ ಸೋರಿಕೆಯ ಘಟನೆಗಳಿಂದಾಗಿ ಇಡೀ ಪರೀಕ್ಷೆಯ ಪಾರದರ್ಶಕತೆಗೆ ಧಕ್ಕೆಯಾಗಿದೆ ಎಂಬುದನ್ನು ಲಭ್ಯವಿರುವ ದಾಖಲೆಗಳು ಸಾಬೀತುಪಡಿಸುವುದಿಲ್ಲ. ಈ ಕಾರಣಕ್ಕೆ, 2024ನೇ ಸಾಲಿನ ನೀಟ್–ಯುಜಿ ಪರೀಕ್ಷೆ ರದ್ದುಗೊಳಿಸಿ, ಮರು ಪರೀಕ್ಷೆಗೆ ಆದೇಶಿಸಬೇಕೆಂಬ ಮನವಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ತಿರಸ್ಕರಿಸಿದೆ.

ಈ ಸಂಬಂಧ ಸಲ್ಲಿಕೆಯಾಗಿದ್ದ ಅರ್ಜಿಗಳನ್ನು ವಿಚಾರಣೆ ನಡೆಸಿದ ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ಪೀಠವು, ದೇಶದಾದ್ಯಂತ ವೈದ್ಯಕೀಯ ಕಾಲೇಜುಗಳಲ್ಲಿನ ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ ಮೇ 5ರಂದು ನಡೆದ ಪರೀಕ್ಷೆಯ ಪ್ರಶ್ನೆಪತ್ರಿಕೆ ವ್ಯವಸ್ಥಿತವಾಗಿ ಸೋರಿಕೆಯಾಗಿರುವುದನ್ನು ಸದ್ಯ ಲಭ್ಯವಿರುವ ದಾಖಲೆಯಲ್ಲಿರುವ ಮಾಹಿತಿಯು ಸೂಚಿಸುವುದಿಲ್ಲ ಎಂದು ಹೇಳಿದೆ.

'ಪ್ರಶ್ನೆ ಪತ್ರಿಕೆಗಳ ಸೋರಿಕೆ ಇಡೀ ಪರೀಕ್ಷಾ ಪ್ರಕ್ರಿಯೆಯ ಪಾವಿತ್ರ್ಯತೆ ಮೇಲೆ ಪರಿಣಾಮ ಬೀರಿದೆ ಎಂಬುದನ್ನು ಸಾಬೀತುಪಡಿಸುವ ಅಂಶಗಳು ಲಭ್ಯವಾಗಿಲ್ಲ. ಹೀಗಾಗಿ ನ್ಯಾಯದಾನದ ಮೂಲತತ್ವಗಳಿಗೆ ಅನುಗುಣವಾಗಿ ಇಡೀ ಪರೀಕ್ಷೆಯನ್ನೇ ರದ್ದುಗೊಳಿಸುವುದು ಸಮರ್ಥನೀಯವಲ್ಲ' ಎಂದು ಹೇಳಿದೆ.

ಪಟ್ನಾ ಮತ್ತು ಹಜಾರಿಬಾಗ್‌ನಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ, ಈ ಘಟನೆಯಲ್ಲಿ ಪಟ್ನಾ ಮತ್ತು ಹಜಾರಿಬಾಗ್‌ನ 155 ವಿದ್ಯಾರ್ಥಿಗಳಿಗೆ ಮಾತ್ರವೇ ಲಾಭವಾಗಿದೆ ಎಂದು ಸಿಬಿಐ ವರದಿಯಿಂದ ತಿಳಿದುಬಂದಿದೆ. ಪ್ರಸ್ತುತ ವರ್ಷದಲ್ಲಿ ಹೊಸದಾಗಿ ನೀಟ್–ಯುಜಿ ಪರೀಕ್ಷೆ ನಡೆಸಲು ನಿರ್ದೇಶಿಸಿದರೆ, ಈಗಾಗಲೇ ಪರೀಕ್ಷೆ ಬರೆದ 24 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತದೆ. ವೈದ್ಯಕೀಯ ಕಾಲೇಜು ಪ್ರವೇಶಾತಿ, ವೈದ್ಯಕೀಯ ಶಿಕ್ಷಣ, ಭವಿಷ್ಯದಲ್ಲಿ ಅರ್ಹತೆ ಹೊಂದಿದ ವೈದ್ಯಕೀಯ ವೃತ್ತಿಪರರ ಲಭ್ಯತೆ ಸೇರಿ ಇನ್ನಿತರ ಅಂಶಗಳ ಮೇಲೆ ಪರಿಣಾಮ ಬೀರಲಿದೆ ಎಂದು ಪೀಠವು ಅಭಿಪ್ರಾಯಪಟ್ಟಿತು.

ಅಭ್ಯರ್ಥಿಗಳ ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ತೀರ್ಪಿನ ಆಯ್ದಭಾಗ ಪ್ರಕಟಿಸಿದ ಪೀಠವು, ತೀರ್ಪಿನ ವಿಸ್ತೃತ ಅಂಶಗಳನ್ನು ಶೀಘ್ರವೇ ಪ್ರಕಟಿಸಲಾಗುವುದು ಎಂದು ತಿಳಿಸಿದೆ.

ಇನ್ನಷ್ಟು ಸುದ್ದಿಗಳು 15

ಹಣ ದುರ್ಬಳಕೆ: 25 ವರ್ಷಗಳಾದರೂ ಕ್ರಮವಿಲ್ಲ

ಬೆಂಗಳೂರು: ಸರ್ಕಾರಿ ಅನುದಾನದ ದುರ್ಬಳಕೆ ಮತ್ತು ಸರ್ಕಾರಿ ಸಾಮಗ್ರಿಗಳ ಕಳ್ಳತನ ಮಾಡಿದ್ದ ಆರೋಪಿಗಳ ವಿರುದ್ಧ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ಸಂಸ್ಥೆಗಳು 25 ವರ್ಷಗಳಾದರೂ ಕ್ರಮ ಜರುಗಿಸಿಲ್ಲ ಎಂದು ಸಿಎಜಿ ವರದಿ ಹೇಳಿದೆ. 7

ಕಾನೂನು ತಜ್ಞರ ಸಭೆಗೆ ಆಗ್ರಹ

ಬೆಂಗಳೂರು: ಶೀಘ್ರವೇ ಕಾನೂನು ತಜ್ಞರ ಸಭೆ ಕರೆದು, ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡುವಂತೆ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಸರ್ಕಾರವನ್ನು ಆಗ್ರಹಿಸಿದರು. 5

ಇ.ಡಿ ವಿರುದ್ಧದ ಎಫ್‌ಐಆರ್‌ಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನೂ ಆರೋಪಿಯನ್ನಾಗಿಸಲು ಒತ್ತಡ ಹೇರುತ್ತಿದ್ದಾರೆ ಎಂದು ಆರೋಪಿಸಿ ಜಾರಿ ನಿರ್ದೇಶನಾಲಯದ (ಇ.ಡಿ) ಇಬ್ಬರು ಅಧಿಕಾರಿಗಳ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಮತ್ತು ಮುಂದಿನ ಎಲ್ಲ ಪ್ರಕ್ರಿಯೆಗಳಿಗೆ ಹೈಕೋರ್ಟ್ ತಡೆ ನೀಡಿದೆ.

ಈ ಕುರಿತಂತೆ ಇ.ಡಿ ಉಪ ನಿರ್ದೇಶಕ ಮನೋಜ್ ಮಿತ್ತಲ್ ಮತ್ತು ಸಹಾಯಕ ನಿರ್ದೇಶಕ ಮುರಳಿ ಕಣ್ಣನ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ಪ್ರಕರಣಕ್ಕೆ ಸಂಬಂಧಿಸಿ ಆಕ್ಷೇಪಣೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿ ವಿಚಾರಣೆಯನ್ನು ಆಗಸ್ಟ್ 21ಕ್ಕೆ ಮುಂದೂಡಿತು.

'ಅಧಿಕಾರಿಗಳು ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸುತ್ತಾ ಹೋದರೆ, ಯಾವ ಅಧಿಕಾರಿಯೂ ತನ್ನ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಅಧಿಕಾರಿಗಳ ವಿರುದ್ಧದ ಎಫ್‌ಐಆರ್ ಕುರಿತು ತನಿಖೆ ಮುಂದುವರಿಸಲು ಅನುಮತಿ ನೀಡಿದರೆ, ಅದು ಕಾನೂನು ಪ್ರಕ್ರಿಯೆಯ ದುರ್ಬಳಕೆಯಾಗಲಿದೆ' ಎಂದು ನ್ಯಾಯಪೀಠ ನುಡಿಯಿತು. ರಾಜ್ಯ ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಎಫ್‌ಐಆರ್‌ಗೆ ತಡೆ ನೀಡದಂತೆ ಬಲವಾಗಿ ಮನವಿ ಮಾಡಿದರು. 'ದೂರುದಾರ ಕಲ್ಲೇಶ್ ಅವರಿಗೆ ಪ್ರಕರಣದಲ್ಲಿ ಮುಖ್ಯಮಂತ್ರಿ ಹೆಸರು ಹೇಳುವಂತೆ ಅರ್ಜಿದಾರರು ಬೆದರಿಕೆ ಹಾಕಿದ್ದಾರೆ. ಅದು ಸಿಬಿಐ, ಇ.ಡಿ ಅಥವಾ ಯಾರೇ ಆಗಿರಲಿ, ಒಬ್ಬ ಅಧಿಕಾರಿ ಕಾನೂನನ್ನು ಉಲ್ಲಂಘಿಸಿದರೆ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ' ಎಂದು ಪ್ರತಿಪಾದಿಸಿದರು.

6ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

₹10 ಕೋಟಿಗೂ ಹೆಚ್ಚು ಮೊತ್ತದ ಅವ್ಯವಹಾರ

ಭೋವಿ ನಿಗಮದಲ್ಲೂ ಅಕ್ರಮ

• ಆದಿತ್ಯ ಕೆ.ಎ.

ಬೆಂಗಳೂರು: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಕೆಲವು ಅಧಿಕಾರಿಗಳು ಸಾರ್ವಜನಿಕರ ದಾಖಲೆಗಳನ್ನು ದುರ್ಬಳಕೆ ಮಾಡಿಕೊಂಡು ₹10 ಕೋಟಿಗೂ ಹೆಚ್ಚು ಮೊತ್ತದ ಅವ್ಯವಹಾರ ನಡೆಸಿರುವುದನ್ನು ಸಿಐಡಿ ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

ಉದ್ಯಮಶೀಲತಾ ಯೋಜನೆ ಮತ್ತು ನೇರ ಸಾಲ ಯೋಜನೆಗಳಡಿ ಲಕ್ಷಾಂತರ ರೂಪಾಯಿ ಮೊತ್ತದ ಸಾಲ ಕೊಡಿಸುವುದಾಗಿ ಮಧ್ಯವರ್ತಿಗಳ ಮೂಲಕ ಆಮಿಷವೊಡ್ಡಿ ಸಾರ್ವಜನಿಕರ ಗುರುತಿನ ದಾಖಲೆಗಳು, ಬ್ಯಾಂಕ್ ಚೆಕ್ ಪಡೆದು ದುರ್ಬಳಕೆ ಮಾಡಿಕೊಂಡಿರುವುದು ತನಿಖೆಯಲ್ಲಿ ಪತ್ತೆಯಾಗಿದೆ.

ಪ್ರಕರಣದ ಪ್ರಮುಖ ಆರೋಪಿ, ನಿಗಮದ ಕಚೇರಿಯಲ್ಲಿ 2021ರ ಏಪ್ರಿಲ್ 5ರಿಂದ 2022ರ ಜುಲೈ 8ರವರೆಗೆ ಕಚೇರಿ ಅಧೀಕ್ಷಕರಾಗಿದ್ದ ಪಿ.ಡಿ.ಸುಬ್ಬಪ್ಪ ಅವರನ್ನು ಸಿಐಡಿ ಪೊಲೀಸರು ಸೋಮವಾರ ತಡರಾತ್ರಿ ಬಂಧಿಸಿದ್ದಾರೆ.

221 ಕಡತ ಕದ್ದಿದ್ದ ಸುಬ್ಬಪ್ಪ

'ಪಿ.ಡಿ.ಸುಬ್ಬಪ್ಪ ಅವರು ಹಿಂದಿನ ಅಧೀಕ್ಷಕರಿಂದ ಕಚೇರಿಯ ಕಡತಗಳನ್ನು ಪಡೆದುಕೊಂಡಿದ್ದರು. ಆದರೆ, ಸುಬ್ಬಪ್ಪ ವರ್ಗಾವಣೆಯಾದ ಸಂದರ್ಭದಲ್ಲಿ ಲೆಕ್ಕಪತ್ರ ಕಡತ, ನಗದು ಪುಸ್ತಕ, ಯೋಜನಾ ಕಡತ, ಬ್ಯಾಂಕ್ ಚೆಕ್‌ಗಳಿಗೆ ಸಂಬಂಧಿಸಿದ 221 ಕಡತಗಳನ್ನು ಹಸ್ತಾಂತರಿಸದೇ ಕಳವು ಮಾಡಿದ್ದರು. ಆ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

'ಪ್ರಧಾನ ವ್ಯವಸ್ಥಾಪಕರಾಗಿದ್ದ ಡಾ.ಬಿ.ಕೆ. ನಾಗರಾಜಪ್ಪ ಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಲೀಲಾವತಿ ಅವರು ತಲೆಮರೆಸಿಕೊಂಡಿದ್ದು, ಪತ್ತೆಗೆ ಶೋಧ ಮುಂದುವರಿಸಲಾಗಿದೆ' ಎಂದು ಸಿಐಡಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

6ನೇ ಪುಟ ನೋಡಿ

ಬಡವರ ಬಂಧು, ದೀನದಲಿತರ ಆಶಾಕಿರಣ, ಆಪತ್ಬಾಂದವ, ಆಧುನಿಕ
ಕೆಂಪೇಗೌಡ ಯಲಹಂಕ ವಿ.ಕ್ಷೇತ್ರದ ಜನಪ್ರಿಯ ಶಾಸಕರಾದ
ಶ್ರೀ ಎಸ್.ಆರ್. ವಿಶ್ವನಾಥ್ ರವರಿಗೆ
ಜನ್ಮದಿನದ ಶುಭಾಶಯಗಳು
ಶುಭಕೋರುವವರು :
ಯಲಹಂಕ ವಿಧಾನಸಭಾ ಕ್ಷೇತ್ರದ ಬಿಜೆಪಿ
ಮುಖಂಡರು ಹಾಗೂ ಕಾರ್ಯಕರ್ತರು

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆ

ನೀರಿನ ದರ ಪರಿಷ್ಕರಣೆಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಲ ಮಂಡಳಿ ಆರ್ಥಿಕ ಸಂಕಷ್ಟ ಎದುರಿಸುತ್ತಿದೆ. ಕಾವೇರಿ ನೀರಿನ ದರ ಪರಿಷ್ಕರಣೆ ಕುರಿತು ವಿಧಾನಸಭೆ ಅಧಿವೇಶನದ ಬಳಿಕ ಮಂಡಳಿಯ ಅಧಿಕಾರಿಗಳ ಜತೆಗೆ ಚರ್ಚಿಸಿ, ಕ್ರಮ ಕೈಗೊಳ್ಳಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಜಲ ಮಂಡಳಿಯು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ನೌಕರರ ಸಂಘ, ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಬಳಗದ ಸಹಯೋಗದಲ್ಲಿ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕೆಂಪೇಗೌಡ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಕಾವೇರಿ ನೀರಿನ ದರ ಹೆಚ್ಚಳ ಮಾಡಿ 12 ವರ್ಷಗಳಾಗಿವೆ. ಈಗ ನೀರಿನ ಬೆಲೆ ಹೆಚ್ಚಿಸಬೇಕೆಂಬ ಒತ್ತಡವಿದೆ. ಇಲ್ಲವಾದರೆ ಮಂಡಳಿ ಸತ್ತು ಹೋಗುತ್ತದೆ. ಒಮ್ಮೆಯೇ ದರ ಹೆಚ್ಚಿಸಿದರೆ ವಿರೋಧ ಪಕ್ಷದವರು ಟೀಕೆ ಮಾಡುತ್ತಾರೆ. ಅವರು ಟೀಕೆ ಮಾಡಿದರೂ ಪರವಾಗಿಲ್ಲ, ನಮಗೆ ಮಂಡಳಿ ಉಳಿಯಬೇಕು. ಹೊಸ ಯೋಜನೆಗಳನ್ನು ಕೈಗೊಂಡು ಜನರಿಗೆ ನೀರನ್ನು ಪೂರೈಸಬೇಕು. ಮಂಡಳಿಯಲ್ಲಿ ಸಿಬ್ಬಂದಿ ಕೊರತೆಯೂ ಇದೆ. ವಿಧಾನಸಭೆ ಅಧಿವೇಶನದ ಬಳಿಕ ಮಂಡಳಿ ಅಧ್ಯಕ್ಷರ ಜತೆಗೆ ಸಭೆ ನಡೆಸಿ, ವಿವಿಧ ಪ್ರಸ್ತಾವಗಳ ಬಗ್ಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

'ನಗರ ಹಾಗೂ ಹೊರವಲಯದ ವ್ಯಾಪ್ತಿಯಲ್ಲಿ ಇರುವ ಕೆರೆಗಳನ್ನು ಜಲಮಂಡಳಿಯ ವಶಕ್ಕೆ ತೆಗೆದುಕೊಳ್ಳಲು ಚಿಂತನೆ ನಡೆದಿದೆ. ಕರ್ನಾಟಕ ರಾಜ್ಯ ಕೆರೆ ಸಂರಕ್ಷಣಾ ಪ್ರಾಧಿಕಾರದ ಜತೆಗೆ ಸಭೆ ನಡೆಸಿ, ನಗರದಲ್ಲಿರುವ ಎಲ್ಲ ಕೆರೆಗಳ ಅಂತರ್ಜಲ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಗಡಿ ಮೀರಿ ಬೆಳೆಯುತ್ತಿದೆ ನಗರ

ಬೆಂಗಳೂರು: 'ಅತ್ಯಂತ ವೇಗವಾಗಿ ಗಡಿ ಮೀರಿ ಬೆಳೆಯುತ್ತಿರುವ ನಗರವನ್ನು ಕಾಪಾಡಬೇಕಿದೆ. ಈ ನಿಟ್ಟಿನಲ್ಲಿ ನಗರದ ಸಮರ್ಪಕ ನಿರ್ವಹಣೆ ಹಾಗೂ ಸರ್ವತೋಮುಖ ಅಭಿವೃದ್ಧಿಗೆ 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ' ತರಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಜಲಮಂಡಳಿಯು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನೌಕರರ ಸಂಘ ಹಾಗೂ ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಬಳಗದ ಸಹಯೋಗದಲ್ಲಿ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಕೆಂಪೇಗೌಡ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ನಗರವು ನಾಡಪ್ರಭು ಕೆಂಪೇಗೌಡರು ಹಾಕಿದ್ದ ಗಡಿಯನ್ನು ಮೀರಿ ಬೆಳೆಯುತ್ತಿದೆ. 1.40 ಕೋಟಿ ಜನರನ್ನು ಹೊಂದಿರುವ ನಗರದಲ್ಲಿ, ರಸ್ತೆ, ನೀರು ಸೇರಿ ವಿವಿಧ ಮೂಲಸೌಕರ್ಯ ಒದಗಿಸುವುದು ಸುಲಭವಲ್ಲ. ಈ ಕಾರಣದಿಂದಾಗಿಯೇ ನಗರದ ಆಡಳಿತ ನಿರ್ವಹಣೆಗೆ ಪ್ರತ್ಯೇಕ ಮಸೂದೆ ತರಲಾಗಿದೆ. ಇದಕ್ಕೆ ಸುಮಾರು 70 ಸಾವಿರ ಸಲಹೆಗಳನ್ನು ಪಡೆಯಲಾಗಿದೆ. ನಗರದ ಅಭಿವೃದ್ಧಿಗೆ ಸಂಬಂಧಿಸಿದಂತೆ ನನ್ನದೇ ಆದ ಹೆಜ್ಜೆ ಗುರುತು ಮೂಡಿಸಬೇಕೆಂದು ವಿವಿಧ ಯೋಜನೆಗಳನ್ನು ಹಮ್ಮಿಕೊಂಡಿದ್ದೇನೆ' ಎಂದು ಹೇಳಿದರು.

'2006ರಲ್ಲಿ ಯೋಜನೆ ರೂಪಿಸದ ಕಾರಣ ವರ್ತುಲ ರಸ್ತೆಯು ನಗರದ ಒಳಗೆ ಬಂದಿದೆ. ಈಗ ಹೊಸದಾಗಿ 150 ಅಡಿ ಅಗಲದ ರಸ್ತೆ ನಿರ್ಮಾಣ ಮಾಡಲಾಗುತ್ತದೆ. ಸುಮಾರು ₹25 ಸಾವಿರ ಕೋಟಿ ಖರ್ಚಾಗಲಿದೆ. ಇದಕ್ಕೆ ಪ್ರತ್ಯೇಕ ಕಂಪನಿ ಸ್ಥಾಪಿಸಿ, ನಿರ್ಮಾಣ ಮಾಡಲಾಗುತ್ತದೆ. ಇದನ್ನು 'ಬೆಂಗಳೂರು ಬಿಸಿನೆಸ್ ಕಾರಿಡಾರ್' ಎಂದು ಕರೆಯಲಾಗುವುದು' ಎಂದು ತಿಳಿಸಿದರು.ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, 'ಮುಂದಿನ 20 ವರ್ಷಗಳಲ್ಲಿ ನಗರದ ಜನಸಂಖ್ಯೆ ಇನ್ನೂ ಒಂದು ಕೋಟಿ ಹೆಚ್ಚಾಗುವ ಸಾಧ್ಯತೆಯಿದೆ. ಆಗ ಸುಮಾರು 2.5 ಕೋಟಿ ಜನರಿಗೆ ಮೂಲಸೌಕರ್ಯಗಳನ್ನು ನೀಡುವ ಜತೆಗೆ ಎದುರಾಗುವ ಜ್ವಲಂತ ಸಮಸ್ಯೆಗಳ ನಿವಾರಣೆಗೂ ಸಜ್ಜಾಗಬೇಕು. ಈ ನಿಟ್ಟಿನಲ್ಲಿ ಕೆಂಪೇಗೌಡರು ನಿರ್ಮಿಸಿದ ಕೆರೆಗಳನ್ನು ಉಳಿಸಿ ಬೆಳೆಸುವ ಕಾರ್ಯ ಆಗಬೇಕು' ಎಂದು ಹೇಳಿದರು. ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಮಾತನಾಡಿದರು.

ನಾಡಪ್ರಭು ಕೆಂಪೇಗೌಡ ಜಯಂತಿಯಲ್ಲಿ ಬೆಂಗಳೂರು ಜಲ ಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್, ಆದಿಚುಂಚನಗಿರಿ ಮಠದ ಮಠಾಧೀಶ ನಿರ್ಮಲಾನಂದನಾಥ ಸ್ವಾಮೀಜಿ, ಉಪಮುಖ್ಯಮಂತ್ರಿಯ ಡಿ.ಕೆ. ಶಿವಕುಮಾರ್ ಮತ್ತು ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಅವರು ಕೆಂಪೇಗೌಡ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು —ಪ್ರಜಾವಾಣಿ ಚಿತ್ರ

ಆರು ಪಟ್ಟಣಗಳಿಗೆ ಉಪನಗರ ಭಾಗ್ಯ

'ರಾಜಧಾನಿಯ ಹೊರವಲಯದಲ್ಲಿರುವ ದೇವನಹಳ್ಳಿ, ನೆಲಮಂಗಲ, ಹೊಸಕೋಟೆ, ದೊಡ್ಡಬಳ್ಳಾಪುರ, ಮಾಗಡಿ ಮತ್ತು ಬಿಡದಿ ಪಟ್ಟಣಗಳನ್ನು ಉಪನಗರಗಳನ್ನಾಗಿ ಅಭಿವೃದ್ಧಿಪಡಿಸಲಾಗುವುದು' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಬಿಜೆಪಿಯ ಧೀರಜ್ ಮುನಿರಾಜು ಪ್ರಶ್ನೆಗೆ ಉತ್ತರಿಸಿದ ಅವರು, 'ಈ ಪ್ರಸ್ತಾವನೆಗೆ ಆರ್ಥಿಕ ಇಲಾಖೆ ಇದೇ 16ರಂದು ತಾತ್ವಿಕ ಅನುಮೋದನೆ ನೀಡಿದೆ. ರೈಲು ಮತ್ತು ರಸ್ತೆ ಸಂಪರ್ಕದೊಂದಿಗೆ ಉಪನಗರಗಳನ್ನು ಅಭಿವೃದ್ಧಿಪಡಿಸಲಾಗುವುದು. ಈ ಬಗ್ಗೆ ಎಲ್ಲ ಶಾಸಕರ ಅಭಿಪ್ರಾಯ ಪಡೆದೇ ಮುಂದುವರೆಯುತ್ತೇನೆ. ಆದರೆ, ಇವುಗಳನ್ನು 'ಗ್ರೇಟರ್ ಬೆಂಗಳೂರು' ವ್ಯಾಪ್ತಿಗೆ ಸೇರಿಸಲು ಸಾಧ್ಯವಿಲ್ಲ' ಎಂದರು.

ನಗರದಲ್ಲಿ ಇಂದು

ಹಾಸ್ಯ ಚಕ್ರವರ್ತಿ ಟಿ.ಆರ್. ನರಸಿಂಹರಾಜು ಜನ್ಮ ಶತಾಬ್ದಿ: 'ನಗುವಿನ ರಾಜು ನರಸಿಂಹರಾಜು' ಸ್ಮರಣ ಸಂಚಿಕೆ ಬಿಡುಗಡೆ, ಅತಿಥಿಗಳು: ಸುಧಾ ನರಸಿಂಹರಾಜು, ಕೆ. ಪುಟ್ಟಸ್ವಾಮಿ, ಅರವಿಂದ ನರಸಿಂಹರಾಜು, ಆಯೋಜನೆ: ಕರ್ನಾಟಕ ಸರ್ಕಾರ ಸಚಿವಾಲಯ ಕ್ಲಬ್, ಸ್ಥಳ: ಚನ್ನಬಸಪ್ಪ ಸಭಾಂಗಣ, ಕೆಜಿಐಎಸ್ ಕ್ಲಬ್, ಮಧ್ಯಾಹ್ನ 1.30

104ನೇ ದಯಾನಂದಸಾಗರ್ ಜಯಂತ್ಯುತ್ಸವ, ರಾಜ್ಯಮಟ್ಟದ ಸಾಂಸ್ಕೃತಿಕ ರಂಗೋತ್ಸವ, ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ವಿನಯ್ ಗುರೂಜಿ, ಉದ್ಘಾಟನೆ: ಶಿವರಾಜ ತಂಗಡಗಿ, ಅಧ್ಯಕ್ಷತೆ: ಡಿ. ಹೇಮಚಂದ್ರ ಸಾಗರ್, ಉಪಸ್ಥಿತಿ: ಧರಣಿದೇವಿ ಮಾಲಗತ್ತಿ, ಅತಿಥಿಗಳು: ಗಾಳಿಸ್ವಾಮಿ, ಮಾಲತಿ ಸುಧೀರ್, ಲಕ್ಷ್ಮಿ ವಜ್ರಮುನಿ, ಬಿ. ಕುಮಾರ್, ಎಂ.ಜಿ. ಮಣಿ ಹೆಗ್ಡೆ, ಆಯೋಜನೆ: ರಂಗಶ್ರೀ ಕಲಾಸಂಸ್ಥೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

'ಯಮನ ಸೋಲು' ನಾಟಕ ಪ್ರದರ್ಶನ: ಅತಿಥಿಗಳು: ರಂಗನಾಥ್, ದಿವಾಕರ್, ರವಿಚಂದ್ರನ್, ಆಯೋಜನೆ: ಸಾಯಿ ಸಾಂಸ್ಕೃತಿಕ ಕಲಾವೇದಿಕೆ, ಸ್ಥಳ: ಲಾಸ್ಯ ರಂಜಿನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ 6

22ನೇ ವರ್ಷದ ಇಷ್ಟಲಿಂಗ ಮಹಾಪೂಜೆ, ಧರ್ಮೋತ್ತೇಜಕ ಸಂಗಮ ಸಮಾವೇಶ: ಸಾನ್ನಿಧ್ಯ: ರಂಭಾಪುರಿ ಪ್ರಸನ್ನ ರೇಣುಕ ವೀರಸೋಮೇಶ್ವರ ಸ್ವಾಮೀಜಿ, ನೇತೃತ್ವ: ರೇಣುಕ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ವಿನಯ್ ಗುರೂಜಿ, ಈಶ್ವರ ಖಂಡ್ರೆ, ಎನ್.ಎಸ್. ಬೋಸರಾಜು, ಎಂ. ಕೃಷ್ಣಪ್ಪ, ಬಿ.ಎಸ್. ಪರಮಶಿವಯ್ಯ, ರೇವಣಸಿದ್ಧಯ್ಯ, ಆಯೋಜನೆ: ಶ್ರೀಮದ್ವೀರಶೈವ ಸದ್ಬೋಧನೆ ಸಂಸ್ಥೆ, ಸ್ಥಳ: ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಸಂಜೆ 6

'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.
nagaradalli_indu@prajavani.co.in

ADVERTORIAL

ಆರ್ಕಿಡ್ಸ್ ದಿ ಇಂಟರ್‌ನ್ಯಾಶನಲ್ ಶಾಲೆಯ

26 ವಿದ್ಯಾರ್ಥಿಗಳು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತಿನ (ಸಿಎಸ್‌ಐಆರ್) ಬೇಸಿಗೆ ಇಂಟರ್ನ್‌ಶಿಪ್‌ಗೆ ಆಯ್ಕೆ

ಗಮನಾರ್ಹವಾದ ಸಾಧನೆಯೊಂದರಲ್ಲಿ ಆರ್ಕಿಡ್ಸ್ ದಿ ಇಂಟರ್‌ನ್ಯಾಶನಲ್ ಶಾಲೆಯ 27 ವಿದ್ಯಾರ್ಥಿಗಳು ಸಿಎಸ್‌ಐಆರ್ ಜಿಜ್ಞಾಸಾ ಎಪಿಕ್ ಹ್ಯಾಕಥಾನ್ 2024ರಲ್ಲಿನ ತಮ್ಮ ಮಹೋನ್ನತ ಸಾಧನೆಯಿಂದ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತಿನ (ಸಿಎಸ್‌ಐಆರ್) ಬೇಸಿಗೆ ಇಂಟರ್ನ್‌ಶಿಪ್‌ಗೆ ಆಯ್ಕೆಯಾಗಿದ್ದಾರೆ.

ಸಾಯಿನೇಹಾ ವಲ್ಲೇರು (ಗ್ರೇಡ್ 8) ಕಾಡುಗೋಡಿ

ಜಿತೇನ್ ಆರಾಧ್ಯ (ಗ್ರೇಡ್ 7) ಮೈಸೂರು ರಸ್ತೆ

ಸಮರ್ಥ್ ಪ್ರೀತಮ್ (ಗ್ರೇಡ್ 8) ಮೈಸೂರು ರಸ್ತೆ

ತನವ್ ಶೆಟ್ಟಿ (ಗ್ರೇಡ್ 7) ಮೈಸೂರು ರಸ್ತೆ

ಕೃತಿಕ್ ಎಂ (ಗ್ರೇಡ್ 8) ಹೊರಮಾವು

ಸಂಪ್ರೀತ್ ರಾಘವನ್ (ಗ್ರೇಡ್ 7) ಮೈಸೂರು ರಸ್ತೆ

ಟ್ವಿಂಕಲ್ ಪ್ರಧಾನ್ (ಗ್ರೇಡ್ 8) ಪಣತೂರ್

ಸಾತ್ವಿಕ ಆಚಾರ್ (ಗ್ರೇಡ್ 8) ಮೈಸೂರು ರಸ್ತೆ

ವೈಭವ್ ಸುಕುಮಾರ್ (ಗ್ರೇಡ್ 8) ಹೊರಮಾವು

ವೋಹಿತ ಆದಿಗೋಪುಲ (ಗ್ರೇಡ್ 8) ಪಣತೂರ್

ಶಾಲಾ ವಿದ್ಯಾರ್ಥಿಗಳಲ್ಲಿ ನಾವೀನ್ಯ ಮತ್ತು ವೈಜ್ಞಾನಿಕ ಮನೋಧರ್ಮವನ್ನು ಪೋಷಿಸುವ ಉದ್ದೇಶದಿಂದ ನಡೆಸಲಾದ ಸಿಎಸ್‌ಐಆರ್ ಜಿಜ್ಞಾಸಾ ಎಪಿಕ್ ಹ್ಯಾಕಥಾನ್ ಸ್ಪರ್ಧೆಯಲ್ಲಿ 7–9ನೇ ಗ್ರೇಡ್ ವರ್ಗದ ಅಡಿಯಲ್ಲಿ ರಾಷ್ಟ್ರವ್ಯಾಪಿಯಾಗಿ ಒಟ್ಟು 960 ಯೋಜನೆಗಳನ್ನು ಪ್ರಸ್ತುತಪಡಿಸಲಾಗಿತ್ತು. ಈ ಪೈಕಿ ಆರ್ಕಿಡ್ಸ್ ದಿ ಇಂಟರ್‌ನ್ಯಾಶನಲ್ ಶಾಲೆಯು 14 ಯೋಜನೆಗಳನ್ನು ಪ್ರಸ್ತುತಪಡಿಸುವ ಮೂಲಕ ಮಹತ್ವದ ಕೊಡುಗೆ ನೀಡಿತ್ತು.

ಇಂಟರ್ನ್‌ಶಿಪ್‌ಗೆ ಆಯ್ಕೆಯಾದ ಈ ಪ್ರತಿಭಾಶಾಲಿ ವಿದ್ಯಾರ್ಥಿಗಳು ಬೆಂಗಳೂರು, ಪುಣೆ, ಮುಂಬೈ, ಇಂದೋರ್, ಜೈಪುರ ಮತ್ತು ಚೆನ್ನೈ ನಗರಗಳಿಗೆ ಸೇರಿದವರಾಗಿದ್ದು, ಜುಲೈ ತಿಂಗಳಲ್ಲಿ ಪ್ರಾರಂಭವಾಗುವ ಎರಡು ತಿಂಗಳ ಇಂಟರ್ನ್‌ಶಿಪ್‌ನ ಭಾಗವಾಗಲಿದ್ದಾರೆ. ಆರ್ಕಿಡ್ಸ್ ವಿದ್ಯಾಸಂಸ್ಥೆಯ ಮೆಂಟರ್‌ಗಳ ಮಾರ್ಗದರ್ಶನದಲ್ಲಿ, ಸಿಎಸ್‌ಐಆರ್ ಸಂಪನ್ಮೂಲಗಳ ಬೆಂಬಲದೊಂದಿಗೆ ಈ ವಿದ್ಯಾರ್ಥಿಗಳು "ಒಂದು ಆರೋಗ್ಯ" (ಒನ್ ಹೆಲ್ತ್) ಮತ್ತು "ಶುದ್ಧ ಮತ್ತು ಹಸಿರು ಇಂಧನ" (ಕ್ಲೀನ್ ಅಂಡ್ ಗ್ರೀನ್ ಎನರ್ಜಿ) ಎಂದು ವರ್ಗೀಕರಿಸಲಾಗಿರುವ ನವೀನವಾದ ಯೋಜನೆಗಳಲ್ಲಿ ಕಾರ್ಯನಿರ್ವಹಿಸಲಿದ್ದಾರೆ.

ವ್ಯಾಪಕವೂ ವಿಶಾಲವೂ ಆದ ಉದ್ದೇಶಗಳನ್ನು ಹೊಂದಿರುವ ಸಿಎಸ್‌ಐಆರ್ ಜಿಜ್ಞಾಸಾ ಔಟ್‌ರೀಚ್ ಕಾರ್ಯಕ್ರಮದ ಭಾಗವಾಗಿರುವ "ಎಪಿಕ್" – "ವಿದ್ಯಾರ್ಥಿಗಳಲ್ಲಿನ ಆವಿಷ್ಕಾರಿ ಮತ್ತು ಸೃಜನಶೀಲ ಶಕ್ತಿಗಳಿಗೆ ಬಲ ತುಂಬುವುದು" – ಉಪಕ್ರಮವು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಧರ್ಮ ಮತ್ತು ಸಮಸ್ಯೆಗಳನ್ನು ಪರಿಹರಿಸುವ ಶಕ್ತಿಯನ್ನು ಪೋಷಿಸುವ ಗುರಿಯನ್ನು ಹೊಂದಿದೆ.

ಆರ್ಕಿಡ್ಸ್, ದಿ ಇಂಟರ್‌ನ್ಯಾಶನಲ್ ಶಾಲೆಯ ಆರ್ಕಿಡ್ಸ್ ಕೆರಿಯರ್ ಫೌಂಡೇಶನ್ ಪ್ರೋಗ್ರಾಂನ (ಒಸಿಎಫ್‌ಪಿ) ಶೈಕ್ಷಣಿಕ ವಿಭಾಗದ ಉಪಾಧ್ಯಕ್ಷರಾದ ಶ್ಲೋಕ್ ಶ್ರೀವಾಸ್ತವ ಅವರು ತಮ್ಮ ವಿದ್ಯಾರ್ಥಿಗಳ ಸಾಧನೆಗೆ ಹೆಮ್ಮೆಯನ್ನು ವ್ಯಕ್ತಪಡಿಸುತ್ತ ನೈಜ–ಪ್ರಪಂಚದ ವಿಷಯಗಳನ್ನು ತಮ್ಮ ಯೋಜನೆಗಳ ಮೂಲಕ ನಿಭಾಯಿಸುವಲ್ಲಿ ಅವರು ತೋರಿದ ಶ್ರದ್ಧೆ, ಸಮರ್ಪಣಾ ಮನೋಭಾವ ಮತ್ತು ಸೃಜನಶೀಲತೆಯ ಅಂಶಗಳನ್ನು ಶ್ಲಾಘಿಸಿದರು. ಬದುಕಿನ ಸಂದರ್ಭಗಳೊಂದಿಗೆ ನೇರವಾದ ಅನುಭವ, ಮುಂಚೂಣಿಯ ವಿಜ್ಞಾನಿಗಳೊಂದಿಗೆ ವಿಚಾರ–ವಿನಿಮಯದ ಮೂಲಕ ತಮ್ಮ ವಿಚಾರಗಳನ್ನು ಕೈಗೆ ದಕ್ಕುವ ಆವಿಷ್ಕಾರಗಳಾಗಿ ಅಭಿವೃದ್ಧಿಪಡಿಸುವಲ್ಲಿ ಈ ವಿದ್ಯಾರ್ಥಿಗಳಿಗೆ ಸಿಎಸ್‌ಐಆರ್‌ನಲ್ಲಿನ ಇಂಟರ್ನ್‌ಶಿಪ್ ಒಂದು ಅನನ್ಯವಾದ ಅವಕಾಶವನ್ನು ಒದಗಿಸಲಿದೆ ಎಂದು ಶ್ಲೋಕ್ ಅವರು ಅಭಿಪ್ರಾಯಪಟ್ಟರು.

"ಇಂಟರ್ನ್‌ಶಿಪ್ ಅವಧಿಯಲ್ಲಿ ಮಿಶ್ರ ಮಾದರಿಯೊಂದರ ಮೂಲಕ ಸಿಎಸ್‌ಐಆರ್ ಪ್ರಯೋಗಾಲಯಗಳಿಗೆ ವಿದ್ಯಾರ್ಥಿಗಳು ಭೇಟಿ ನೀಡಲು ಅವಕಾಶವಿದ್ದು, ಇದರಿಂದ ಆಳವಾದ ಕಲಿಕೆ ಸಾಧ್ಯವಾಗುತ್ತದೆ ಮತ್ತು ತಮ್ಮ ಯೋಜನೆಗಳ ಪ್ರಯೋಗಾತ್ಮಕ ಸಾಧ್ಯತೆಗಳನ್ನು ವಿದ್ಯಾರ್ಥಿಗಳು ಅರಿಯಬಹುದಾಗಿದೆ" ಎಂದೂ ಶ್ಲೋಕ್ ಅವರು ಹೇಳಿದರು.

ತನ್ನ ವಿದ್ಯಾರ್ಥಿಗಳಲ್ಲಿ ನಾವೀನ್ಯ, ಆವಿಷ್ಕಾರ ಗುಣ, ವೈಚಾರಿಕ ಆಲೋಚನೆ ಮತ್ತು ವೈಜ್ಞಾನಿಕ ಅನ್ವೇಷಣೆಯ ಮನೋಧರ್ಮವನ್ನು ಪೋಷಿಸುವಂತಹ ಸಮಗ್ರವಾದ ಶಿಕ್ಷಣವನ್ನು ಒದಗಿಸಲು ಆರ್ಕಿಡ್ಸ್, ದಿ ಇಂಟರ್‌ನ್ಯಾಶನಲ್ ಶಾಲೆಯು ಸದಾ ಬದ್ಧವಾಗಿದ್ದು, ಇದಕ್ಕೆ ಈ ಬೇಸಗೆ ಇಂಟರ್ನ್‌ಶಿಪ್ ದ್ಯೋತಕವಾಗಿದೆ. ವಿದ್ಯಾರ್ಥಿಗಳ ಈ ಸಾಧನೆಯು ಆರ್ಕಿಡ್ಸ್ ದಿ ಇಂಟರ್‌ನ್ಯಾಶನಲ್ ಶಾಲೆಯಲ್ಲಿ ಯುಕ್ತ ರೀತಿಯಲ್ಲಿ ಅರಳುತ್ತಿರುವ ವಿದ್ಯಾರ್ಥಿಪ್ರತಿಭೆಯ ಅನಾವರಣ ಮಾತ್ರವಾಗಿರದೆ ಈ ಯುವ ಅನ್ವೇಷಕರಿಗೆ ಭವಿಷ್ಯದ ವೈಜ್ಞಾನಿಕ ಸಾಧನೆಗಳಿಗೆ ಅರ್ಥಪೂರ್ಣವಾದ ಕೊಡುಗೆಯನ್ನು ಸಲ್ಲಿಸುವ ಹಾದಿಯನ್ನು ತೆರೆಯುತ್ತದೆ, ಸಾಮಾಜಿಕ ಸವಾಲುಗಳಿಗೆ ಸನ್ನದ್ಧರಾಗುವ ನಿಟ್ಟಿನಲ್ಲಿ ಗಟ್ಟಿಯಾಗಿ ಮುನ್ನಡೆಸುವ ಸಾಧನವೂ ಆಗಿರುತ್ತದೆ.

100 ದಿನಗಳ ಖುಷಿ | ನಿಮ್ಮ ಖರೀದಿಗಳ ಮೇಲೆ 100% ಕ್ಯಾಶ್‌ಬ್ಯಾಕ್* ಗೆಲ್ಲುವ ಅವಕಾಶ ಪಡೆಯಿರಿ

INDIA'S FIRST 5 YEAR WARRANTY* *Conditions apply

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354|. Accessories and features shown may not be a part of standard fitment. Always wear a helmet while riding a two-wheeler. **Mileage of Splendor Xtec 2.0 as per internal testing conditions and may vary as per road & riding conditions. *This Centennial Celebration Campaign is open only for Indian residents who buy a new Hero two wheeler during campaign Period. This Campaign period is valid from 26th June 2024 to 3rd Oct 2024. Cashback money can be claimed by the winning Participant within 90 days from the date of declaration of winner status. Any claim raised after expiry of above 90 days period shall not be entertained. Terms & Conditions apply. For more details, visit https://www.heromotocorp.com/ or visit your nearest Hero MotoCorp dealership. Hero MotoCorp reserves the rights to modify or withdraw any or all the offers without prior notice.

ಇನ್ನೂ ಹೆಚ್ಚು ತಿಳಿಯಲು ಸ್ಕ್ಯಾನ್ ಮಾಡಿ ASK FOR XTEC

AUTHORISED DEALERS: BENGALURU - PEENYA: SAI HERO - PH: 9289922830. MAGADI ROAD: POORNA HERO - PH: 9289923212. BANASHANKARI: SAI HERO - PH: 9289922476. BANASWADI: BHAGATH HERO - PH: 9289922738. HOSUR ROAD: RT KRISHNA HERO - PH: 9289923177. BYATARAYANAPURA: BIMAL HERO - PH: 9289922863. LALBAGH ROAD: PRAKASH HERO - PH: 9289922117. RAJAJI NAGAR: MAX HERO - PH: 9289923023. MARATHALLI: VAAYURATHA HERO - PH: 9289923811. KAMAKSHIPALYA: POORNA MOTORS – PH: 9606922534. JP NAGAR: SAI HERO, PH: 99002 36280. KANAKPURA ROAD: SAI HERO - 8904677394. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. JIGANI: RT KRISHNA HERO – PH: 8762860999. RT NAGAR: BIMAL Hero 9535327710. DODDABALLAPURA: BIMAL Hero 9742202125. TUMKUR: SAI HERO - PH: 9289922986. B.H.ROAD – SAI HERO, PH. 7022752841. TIPTUR: SAI HERO PH. 9164840456. KUNIGAL: SAI HERO - PH: 7022752858. KOLAR: SAI BALAJI HERO PH. 9821745024. Associate Dealer: MADIWALA - 9731660639. BANASHANKARI 3RD STAGE - 9513353864. BANNERGHATTA ROAD - 41209619. KENGERI - 9739275523. YELAHANKA - 28462524, 9341025589. MYSORE ROAD:9611997733. DEVANAHALLI - 9964560599. KANAKAPURA - 9880212346. BAGEPALLI - 282828. SRINIVASPUR - 9738504002. SIDLAGHATTA - 254827. NELAMANGALA - 27723395. PAVAGADA - 9740324639. MADHUGIRI - 9972278989. VIJAYAPURA: 9449619920. SIRA: 9448417393. CHANDAPURA: 9481329064. Also Available at: DUNNASANDRA: 8310166369. HSR LAYOUT: 7428893265. MATHIKERE: 9035027951. DOMLUR: 7353919910- J.P.NAGAR: 9035024274. RT NAGAR: 9535327710. ATTIBELE: 8050609104. B NARAYANAPURA: 9945472149. VARTHUR: 9900877227. PAPAREDDYPALYA: 9916678309. ANEKAL: 9739519252. KONANKUNTE: 9886122251. SARJAPUR MAIN ROAD: 8762860999. BIDADI: 9844767719. RAMANAGARA: 9663399909. JIGANI: 9986498884. CHIKKANAYAKANAHALLI: 9880807399. TURUVEKERE: 9448403205. KORATAGERE: 9731713711. PERESANDRA: 9901502049. VIDYARANYAPURA: 9606934533. For Buy/Sell/Exchange Old any Vehicle contact VV PURAM, Bengaluru Olety Sai Hero Sure: 98450 74491.

VML.5742.2024KAN

ಅಬುಧಾಬಿಗೆ ನೇರ ವಿಮಾನ ಸಂಚಾರ ಶುರು

ಬೆಂಗಳೂರು: ಬೆಂಗಳೂರು– ಅಬುಧಾಬಿ ಮಧ್ಯೆ ನೇರವಾಗಿ ಹಾರಾಟ ನಡೆಸುವ ಮೊದಲ ಅಂತರರಾಷ್ಟ್ರೀಯ ವಿಮಾನ ಸೇವೆಯನ್ನು ಏರ್ ಇಂಡಿಯಾ ಎಕ್ಸ್‌ಪ್ರೆಸ್ ಮಂಗಳವಾರದಿಂದ ಆರಂಭಿಸಿದೆ. ವಾರಕ್ಕೆ 200ಕ್ಕೂ ಹೆಚ್ಚು ವಿಮಾನಗಳು 27 ನಗರಗಳನ್ನು ಸಂಪರ್ಕಿಸುತ್ತವೆ. ಬೆಂಗಳೂರು–ಅಬುಧಾಬಿ ಮತ್ತು ಅಬುಧಾಬಿ– ಬೆಂಗಳೂರಿಗೆ ಮಂಗಳವಾರ, ಗುರುವಾರ, ಶನಿವಾರ, ಭಾನುವಾರ ವಿಮಾನಗಳು ಸಂಚರಿಸಲಿವೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಪ್ರವೇಶಪತ್ರ ತಡ: ವಿದ್ಯಾರ್ಥಿಗಳ ಪರದಾಟ

• ಮೋಹನ್ ಕುಮಾರ ಸಿ.

ಮೈಸೂರು: ಇಲ್ಲಿನ 'ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯ'ವು ನಡೆಸುವ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯಗಳ ಲಿಖಿತ ಪರೀಕ್ಷೆಗೆ ನಾಲ್ಕು ದಿನವಿದ್ದಾಗ ಪ್ರವೇಶ ಪತ್ರ ಸಿಕ್ಕಿದೆ. ಅಲ್ಲದೆ ಹತ್ತಿರದ ಪರೀಕ್ಷಾ ಕೇಂದ್ರಗಳು ಸಿಗದೇ ವಿದ್ಯಾರ್ಥಿಗಳು ಪರದಾಡುವಂತೆ ಆಗಿದೆ.

ರಾಜ್ಯದಾದ್ಯಂತ 17 ಸಾವಿರ ಮಂದಿ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ. ಈ ಮೊದಲು ಶಿಕ್ಷಣ ಇಲಾಖೆಯು ಪರೀಕ್ಷೆಗಳನ್ನು ನಡೆಸುತ್ತಿತ್ತು. ಸರ್ಕಾರವು ಈಗ ಉಸ್ತುವಾರಿಯನ್ನು ಸಂಗೀತ ವಿಶ್ವವಿದ್ಯಾಲಯಕ್ಕೆ ನೀಡಿದೆ.

ಅದರಂತೆ, ಇದೇ 27, 28ರಂದು ಗಾಯನ, ವಾದ್ಯ ಸಂಗೀತ, ನೃತ್ಯ, ತಾಳವಾದ್ಯದ ಜೂನಿಯರ್ ಹಾಗೂ ಸೀನಿಯರ್ (ವಿದ್ವತ್ ಪೂರ್ವ, ವಿದ್ವತ್ ಅಂತಿಮ) ಪರೀಕ್ಷೆಗಳು ನಡೆಯುವುದಾಗಿ ವಿಶ್ವವಿದ್ಯಾಲಯವು ಪ್ರಕಟಿಸಿತ್ತು. ಆದರೆ, ಪ್ರವೇಶ ಪತ್ರ ಜುಲೈ 23ರ ಮಧ್ಯಾಹ್ನದಿಂದ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಲಭ್ಯವಾಗಿದೆ.

ರಾಜ್ಯದ 18 ಕೇಂದ್ರಗಳಲ್ಲಿ ಪರೀಕ್ಷೆಯನ್ನು ಆಯೋಜಿಸಲಾಗಿದ್ದು, ಪ್ರತಿ ಕೇಂದ್ರದಲ್ಲೂ ಜೂನಿಯರ್ ವಿಭಾಗದ 245 ಹಾಗೂ ಸೀನಿಯರ್, ವಿದ್ವತ್ ವಿಭಾಗದ 737 ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸುವಂತೆ ಎಲ್ಲ ಕೇಂದ್ರಗಳ ಪ್ರಾಂಶುಪಾಲರಿಗೆ ಜುಲೈ 8ರಂದು ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಪತ್ರ ಬರೆದಿದ್ದರು.

'ಪರೀಕ್ಷೆಗೆ ವಾರವಿದ್ದರೂ ವೆಬ್‌ಸೈಟ್‌ನಲ್ಲಿ ಪ್ರವೇಶಪತ್ರ ಸಿಗದಿದ್ದರಿಂದ ಆದ ತೊಂದರೆ ಬಗ್ಗೆ ಗಮನಕ್ಕೆ ತಂದರೂ ಪ್ರಯೋಜನವಾಗಿರಲಿಲ್ಲ. ವಿಶ್ವವಿದ್ಯಾಲಯದ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಸಂಗೀತ ಶಿಕ್ಷಕರು ಧ್ವನಿ ಎತ್ತಿದ್ದರು. 23ರಿಂದ ಆ ಗ್ರೂಪ್‌ನಲ್ಲಿ ಸಂದೇಶ ಕಳುಹಿಸದಂತೆ ಮಾಡಲಾಗಿತ್ತು' ಎಂದು ನೃತ್ಯಾರ್ಥಿ ಶೀತಲ್ ಬೇಸರ ವ್ಯಕ್ತಪಡಿಸಿದರು.

'ವಿಶ್ವವಿದ್ಯಾಲಯದವರು ಉತ್ತರಿಸುತ್ತಿಲ್ಲ'

'ಐವರು ಶಿಷ್ಯಂದಿರು ಪರೀಕ್ಷೆ ಬರೆಯುತ್ತಿದ್ದಾರೆ. ನಮಗೆ ಜ್ಞಾನಭಾರತಿ ಕೇಂದ್ರ ಹತ್ತಿರವಾಗುತ್ತಿತ್ತು. ಆದರೆ, ದೂರದ ದೇವನಹಳ್ಳಿ ಕೇಂದ್ರಕ್ಕೆ ಹೋಗಬೇಕಾಗಿದೆ. ವಿಶ್ವವಿದ್ಯಾಲಯಕ್ಕೆ ಫೋನ್ ಮಾಡಿದರೆ ಸ್ವೀಕರಿಸುವುದಿಲ್ಲ' ಎಂದು ಬೆಂಗಳೂರಿನ ದಾಸರಹಳ್ಳಿ 8ನೇ ಮೈಲಿಯಲ್ಲಿರುವ ಸಂಗೀತ ಶಿಕ್ಷಕಿ ಗಾಯತ್ರಿ ಅಳಲು ತೋಡಿಕೊಂಡರು.

ಲಿಖಿತ ಪರೀಕ್ಷೆಗಳ ಪ್ರವೇಶ ಪತ್ರ ತಾಂತ್ರಿಕ ಸಮಸ್ಯೆಯಿದ್ದರಿಂದ ನೀಡಲಾಗಿರಲಿಲ್ಲ. ಇದೀಗ ಬಗೆಹರಿಸಲಾಗಿದೆ. 23ರಿಂದ ವೆಬ್‌ಸೈಟ್‌ನಲ್ಲಿ ಸಿಗುತ್ತಿದೆ

ರೇಖಾ, ಪ್ರಭಾರ ಪರೀಕ್ಷಾಂಗ ಕುಲಸಚಿವೆ, ಸಂಗೀತ ವಿ.ವಿ

'ಅನರ್ಹತೆ ತಡೆ' ಮಸೂದೆಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು:ಶಾಸಕರು ಲಾಭದಾಯಕ ಹುದ್ದೆ ಹೊಂದಿದ ಕಾರಣಕ್ಕೆ ಅವರು ಅನರ್ಹರಾಗದಂತೆ ತಡೆಯುವ ಉದ್ದೇಶದಿಂದ ರಾಜ್ಯ ಸರ್ಕಾರ ಮಂಡಿಸಿದ 'ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) (ತಿದ್ದುಪಡಿ) ಮಸೂದೆ–2024'ಕ್ಕೆ ವಿಧಾನಸಭೆಯಲ್ಲಿ ಬಿಜೆಪಿ, ಜೆಡಿಎಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

ಕಾನೂನು ಸಚಿವ ಎಚ್‌.ಕೆ. ಪಾಟೀಲ ಅವರು ಮಸೂದೆಗೆ ಅಂಗೀಕಾರ ಕೋರುತ್ತಿದ್ದಂತೆ, 'ಈ ಮಸೂದೆ ಅನರ್ಹತೆಯ ನಿವಾರಣೆ ಅಲ್ಲ; ಅನರ್ಹರಿಗೆ ಅರ್ಹತೆ ಕೊಡುವ ಮಸೂದೆ' ಎಂದು ಬಿಜೆಪಿಯ ಎಸ್‌. ಸುರೇಶ್ ಕುಮಾರ್ ವ್ಯಂಗ್ಯ ಮಾಡಿದರು.

ವಿಧಾನಸಭೆ ಅಥವಾ ವಿಧಾನ ಪರಿಷತ್‌ನ ಸದಸ್ಯರಾಗಿರುವವರು ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ–1 ಮತ್ತು ಕಾರ್ಯದರ್ಶಿ–2 , ಮುಖ್ಯಮಂತ್ರಿಯ ಆರ್ಥಿಕ ಸಲಹೆಗಾರ, ಮುಖ್ಯಮಂತ್ರಿಯ ಸಲಹೆಗಾರ (ನೀತಿ ಮತ್ತು ಯೋಜನೆ) ಮತ್ತು ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನೆ ಆಯೋಗದ ಉಪಾಧ್ಯಕ್ಷರ ಹುದ್ದೆಗೆ ನೇಮಕಗೊಂಡರೆ ಅನರ್ಹರಾಗುವುದರಿಂದ ವಿನಾಯಿತಿ ನೀಡಲು ಈ ಮಸೂದೆಯನ್ನು ಮಂಡಿಸಲಾಗಿದೆ.

26, 28 ರಂದು ವಿಶೇಷ ರೈಲು

ಹುಬ್ಬಳ್ಳಿ: ಪ್ರಯಾಣಿಕರ ಬೇಡಿಕೆ ಮೇರೆಗೆ ಬೆಂಗಳೂರು ಮತ್ತು ಕಾರವಾರ ನಡುವೆ ಜುಲೈ 26 ಮತ್ತು 28ರಂದು ವಿಶೇಷ ರೈಲು ಓಡಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯನಿಲ್ದಾಣದಿಂದ ಎರಡೂ ದಿನ ಮಧ್ಯರಾತ್ರಿ 12.30ಕ್ಕೆ ಹೊರಡುವ ವಿಶೇಷ ರೈಲು (06567) ಸಂಜೆ 4ಕ್ಕೆ ಕಾರವಾರ ನಿಲ್ದಾಣ ತಲುಪಲಿದೆ. ಪುನಃ ಇದೇ ರೈಲು ಅವತ್ತೇ ರಾತ್ರಿ 11.30ಕ್ಕೆ ಕಾರವಾರ ನಿಲ್ದಾಣದಿಂದ ಹೊರಟು, ಮರುದಿನ ಸಂಜೆ 3.30ಕ್ಕೆ ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ನಿಲ್ದಾಣ ತಲುಪಲಿದೆ. ಬಾಣಸವಾಡಿ, ಚಿಕ್ಕಬಾಣಾವರ, ಕುಣಿಗಲ್, ಚನ್ನಪಟ್ಟಣ, ಹಾಸನ, ಸಕಲೇಶಪುರ, ಸುಬ್ರಹ್ಮಣ್ಯ ರೋಡ್, ಕಬಕಪುತ್ತೂರು, ಬಂಟ್ವಾಳ, ಸುರತ್ಕಲ್, ಮೂಲ್ಕಿ, ಉಡುಪಿ, ಬಾರ್ಕೂರು, ಕುಂದಾಪುರ, ಮೂಕಾಂಬಿಕಾ ರೋಡ್ ಬೈಂದೂರು, ಭಟ್ಕಳ, ಮುರುಡೇಶ್ವರ, ಹೊನ್ನಾವರ, ಕುಮಟಾ, ಗೋಕರ್ಣ ರೋಡ್ ಮತ್ತು ಅಂಕೋಲಾ ನಿಲ್ದಾಣಗಳಲ್ಲಿ ಈ ವಿಶೇಷ ರೈಲು ನಿಲುಗಡೆ ಹೊಂದಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎನ್‌ಜಿಇಎಫ್ ವಿದ್ಯುತ್ ನಿರ್ವಹಣಾ ಕೇಂದ್ರಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುವುದರಿಂದ ಜುಲೈ 25ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3 ಗಂಟೆಯವರೆಗೆ ನಗರದ ಹಲವೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಎಸ್‌ಎಂವಿಬಿ ರೈಲ್ವೆ ನಿಲ್ದಾಣ, ಇಂದಿರಾನಗರ 1ನೇ ಹಂತ, ಎಚ್‌ಎಎಲ್ 2ನೇ ಹಂತ, ಹಲಸೂರು, ಹಳೇ ಮದ್ರಾಸ್ ರಸ್ತೆ, ಬೆನ್ನಿಗಾನಹಳ್ಳಿ, ಎ ನಾರಾಯಣಪುರ, ಕಗ್ಗದಾಸಪುರ, ಆಕಾಶನಗರ, ಪೈ ಲೇಔಟ್, ಬೈರಸಂದ್ರ, ಸಿ.ವಿ. ರಾಮನ್ ನಗರ, ಸದಾನಂದನಗರ, ಕಸ್ತೂರಿನಗರ, ಭುವನೇಶ್ವರಿನಗರ, ಹೊಯ್ಸಳನಗರ, ದಯಾನಂದ ಲೇಔಟ್, ನಾಗಪ್ಪ ರೆಡ್ಡಿ ಲೇಔಟ್, ವರ್ತೂರು ರಸ್ತೆ, ಎಂ.ಜಿ. ರಸ್ತೆ, ಜೋಗುಪಾಳ್ಯ ರಸ್ತೆ, ಸಿ.ಎಂ.ಎಚ್ ರಸ್ತೆ, ಡಿಫೆನ್ಸ್ ಕಾಲೊನಿ, ಇಂದಿರಾನಗರ ಕ್ಲಬ್, ಕೆಪಿಟಿಸಿಎಲ್ ವಸತಿಗೃಹಗಳು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. 32/2024, ದಿನಾಂಕ: 17.07.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ: ಟೆಂಡರು ಮುಕ್ತಾಯ ಸಮಯ: 10.30 ಗಂಟೆಗೆ

ಕ್ರಸಂ	ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ	ಟೆಂಡರು ಕೊನೆಯ ದಿನಾಂಕ
1	ಎಲ್8249001ಬಿ	3–ಫೇಜ್ ಮೆಮು ಡಿಎಂಸಿಗಳ ಮಾರ್ಷಲಿಂಗ್ ಬಾಕ್ಸ್‌ಗಳಲ್ಲಿ ಆರ್‌ಡಿಎಸ್‌ಒ ನಿರ್ದಿಷ್ಟತೆ ಸಂ. ಆರ್‌ಡಿಎಸ್‌ಒ/ಪಿಇ/ಎಸ್‌ಪಿಇಸಿ/ಇಎಂಯು/0096–2008 (ರೆವ್ 4 ಅಥವಾ ಇತ್ತೀಚಿನ) ರ ಪ್ರಕಾರ ಎಲೆಕ್ಟ್ರಿಕಲ್ ವೈರಿಂಗ್ ಹಾರ್ನೆಸ್ ಮತ್ತು ಹಾರ್ಟಿಂಗ್ ಕನೆಕ್ಟರ್‌ಗಳನ್ನು ಒಳಗೊಂಡಂತೆ ಸಂಪೂರ್ಣವಾದ ಟ್ರ್ಯಾಕ್ಷನ್ ಟ್ರಾನ್ಸ್‌ಫಾರ್ಮರ್ ಜೊತೆಗೆ ಬಿಡಿಭಾಗಗಳ ಪೂರೈಕೆ. (ಪರಿಮಾಣ: 01 ಸಂ.)	12.08.2024
2	ಎಲ್8245805ಎ	500 ಸಿಎಫ್‌ಎಂ, 10.0 – 10.5 ಕೆಜಿ/ಸೆಮೀ² ನ ವಿದ್ಯುತ್‌ನಿಂದ ಚಾಲನೆಯಾಗಬಲ್ಲ, ರೋಟರಿ ಸ್ಕ್ರೂ, ಏರ್ ಕೂಲ್ಡ್, ಮೈಕ್ರೋ ಪ್ರೊಸೆಸರ್ ಆಧಾರಿತ ಸ್ಟೇಷನರಿ ಏರ್ ಕಂಪ್ರೆಸರ್‌ನ ವಿನ್ಯಾಸ, ಪೂರೈಕೆ, ಸ್ಥಾಪನೆ, ಕಾರ್ಯಾರಂಭ ಮತ್ತು ಯಂತ್ರದಿಂದ ಸಾಬೀತುಪಡಿಸುವ ಕೆಲಸಗಳು. (ಪರಿಮಾಣ: 01 ಸೆಟ್)	12.08.2024

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/286/AAMO/PRB/SWR/2024-25 — ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು

South Western Railway - SWR | SWRRLY | SWRRLY

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ

ನಿರ್ಮಾಣ ಮತ್ತು ನಿರ್ವಹಣೆ ವಿಭಾಗ, ಎಲ್‌ಪಿಎಸ್‌ಸಿ ಕ್ಯಾಂಪಸ್, 80 ಅಡಿ ರಸ್ತೆ, ಹೆಚ್‌ಎಎಲ್ 2 ನೇಹಂತ, ಬೆಂಗಳೂರು. ದೂ.ಸಂ: 080–25037204/080–25037214

ದಿನಾಂಕ: 23.07.2024

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಈ ಕೆಳಕಂಡ ಕಾಮಗಾರಿಗೆ ಐಟಂದರದ ಟೆಂಡರ್ ಆಹ್ವಾನಿಸಲಾಗಿದೆ.

ಕೆಲಸದ ಹೆಸರು	ಬೆಂಗಳೂರಿನ ಎಲ್‌ಪಿಎಸ್‌ಸಿ(ಬಿ) ಮುಖ್ಯ ಕಟ್ಟಡದ ಡಿ–ಬ್ಲಾಕ್‌ನ 2ನೇ ಮಹಡಿಯಲ್ಲಿರುವ ಶೌಚಾಲಯದ ನವೀಕರಣ ಕಾಮಗಾರಿ. (ಸಿವಿಲ್/ಪಿಹೆಚ್ ಕಾಮಗಾರಿಗಳು)
ಟೆಂಡರ್ ಪ್ರಕಟಣೆ	ಸಿಎಂಡಿ/ಎಲ್‌ಪಿಎಸ್‌ಸಿಬಿ/02/2002/ಸಿ/ಎಂಐ/2024–25 ದಿನಾಂಕ: 23.07.2024
ಅಂದಾಜು ಮೊತ್ತ	₹ 5.78 ಲಕ್ಷಗಳು
ಪೂರ್ಣಗೊಳಿಸುವ ಅವಧಿ	1 ತಿಂಗಳು
ಮಾರಾಟದ ಅವಧಿ	23.07.2024 ರಿಂದ 29.07.2024 ರವರೆಗೆ
ಇಎಂಡಿ	₹ 11,560/–

ಆಸಕ್ತಿಯುಳ್ಳ ಟೆಂಡರ್‌ದಾರರು ದಯವಿಟ್ಟು www.tenderwizard.com/ISRO ಪರಿವೀಕ್ಷಿಸಿ. ಅಲ್ಲದೇ ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳನ್ನೊಳಗೊಂಡ ವಿವರವಾದ ಟೆಂಡರ್ ಪ್ರಕಟಣೆಯನ್ನು (ಎನ್‌ಐಟಿ) ವೆಬ್‌ಸೈಟ್ www.isro.gov.in, www.lpsc.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಿ.

ಸಹಿ/– ಮುಖ್ಯಸ್ಥರು ಸಿಎಂಡಿ, ಎಲ್‌ಪಿಎಸ್‌ಸಿ(ಬಿ)

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ

ನಿರ್ಮಾಣ ಮತ್ತು ನಿರ್ವಹಣೆ ವಿಭಾಗ, ಎಲ್‌ಪಿಎಸ್‌ಸಿ ಕ್ಯಾಂಪಸ್, 80 ಅಡಿ ರಸ್ತೆ, ಹೆಚ್‌ಎಎಲ್ 2 ನೇಹಂತ, ಬೆಂಗಳೂರು. ದೂ.ಸಂ: 080–250372046/080–25037214

ದಿನಾಂಕ: 23.07.2024

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಈ ಕೆಳಕಂಡ ಕಾಮಗಾರಿಗೆ ಐಟಂದರದ ಟೆಂಡರ್ ಆಹ್ವಾನಿಸಲಾಗಿದೆ.

ಕೆಲಸದ ಹೆಸರು	ಬೆಂಗಳೂರಿನ ಎಲ್‌ಪಿಎಸ್‌ಸಿ ಕ್ಯಾಂಪಸ್‌ನಲ್ಲಿರುವ ಎಂಜಿಎಸ್‌ಇ ಮತ್ತು ಸ್ಟೋರ್ ಸ್ಕ್ರ್ಯಾಪ್ ಯಾರ್ಡ್‌ಗೆ ವಿವಿಧ ಸಿವಿಲ್ ಮತ್ತು ಪಿಹೆಚ್ ಕಾಮಗಾರಿಗಳು.
ಟೆಂಡರ್ ಪ್ರಕಟಣೆ	ಸಿಎಂಡಿ/ಎಲ್‌ಪಿಎಸ್‌ಸಿಬಿ/02/2003/ಸಿ/ಎಂಐ/2024–25 ದಿನಾಂಕ: 23.07.2024
ಅಂದಾಜು ಮೊತ್ತ	₹ 17.44 ಲಕ್ಷಗಳು
ಪೂರ್ಣಗೊಳಿಸುವ ಅವಧಿ	2 ತಿಂಗಳು
ಮಾರಾಟದ ಅವಧಿ	23.07.2024 ರಿಂದ 29.07.2024 ರವರೆಗೆ
ಇಎಂಡಿ	₹ 34,880/–

ಆಸಕ್ತಿಯುಳ್ಳ ಟೆಂಡರ್‌ದಾರರು ದಯವಿಟ್ಟು www.tenderwizard.com/ISRO ಪರಿವೀಕ್ಷಿಸಿ. ಅಲ್ಲದೇ ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳನ್ನೊಳಗೊಂಡ ವಿವರವಾದ ಟೆಂಡರ್ ಪ್ರಕಟಣೆಯನ್ನು (ಎನ್‌ಐಟಿ) ವೆಬ್‌ಸೈಟ್ www.isro.gov.in, www.lpsc.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಿ.

ಸಹಿ/– ಮುಖ್ಯಸ್ಥರು ಸಿಎಂಡಿ, ಎಲ್‌ಪಿಎಸ್‌ಸಿ(ಬಿ)

ನೈಋತ್ಯ ರೈಲ್ವೆ

ಉದ್ಯೋಗಿಕ ಸೂಚನೆ ಸಂ. CMP/02/GAZ ದಿನಾಂಕ: 18.07.2024

ನೈಋತ್ಯ ರೈಲ್ವೆ, ಮೈಸೂರು ವಿಭಾಗದಲ್ಲಿ ಗುತ್ತಿಗೆ ಆಧಾರದ ಮೇಲೆ ಪೂರ್ಣ ಅವಧಿಯ ಎರಡು (02) ವೈದ್ಯಕೀಯ ಚಿಕಿತ್ಸಕರ (ಜಿಡಿಎಂಓ) ಅವಶ್ಯಕತೆಯಿದ್ದು ಒಂದು (1) ವರ್ಷದ ಅವಧಿಗೆ ಅಥವಾ ನಿಯಮಿತ ಪದಾಧಿಕಾರಿಗಳು ಹುದ್ದೆಯಲ್ಲಿ ಬರುವವರೆಗೆ, ಇದರಲ್ಲಿ ಯಾವುದು ಮೊದಲೋ ಅದರಂತೆ ನೇಮಕಾತಿ ಮಾಡಲಾಗುವುದು. **ನೇರ ಸಂದರ್ಶನದ ಸ್ಥಳ:** ವರಿಷ್ಠ ವಿಭಾಗೀಯ ಸಿಬ್ಬಂದಿ ಅಧಿಕಾರಿಗಳು, ಡಿಆರ್‌ಎಂ ಕಚೇರಿ ಕಟ್ಟಡ, ಇರ್ವಿನ್ ರಸ್ತೆ, ಮೈಸೂರು – 570 001. **ನೇರ ಸಂದರ್ಶನದ ದಿನಾಂಕ:** 02.08.2024 (ಶುಕ್ರವಾರ), **ಸಮಯ:** ಬೆಳಿಗ್ಗೆ 11.00 ಗಂಟೆಯಿಂದ 17.00 ಗಂಟೆಯವರೆಗೆ.

ಹೆಚ್ಚಿನ ಮಾಹಿತಿಗಾಗಿ www.swr.indianrailways.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಿಬ್ಬಂದಿ ಅಧಿಕಾರಿ/ಸಂಯೋಜನೆ/ಮೈಸೂರು

PUB/293/AAMO/PRB/SWR/2024-25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: DefeCable_ADSTE2 section_1, ದಿನಾಂಕ: 18.07.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆ – ಬೆಂಗಳೂರು	ರೂ. 38,35,379.79

ವಿಭಾಗ: ಬೆಂಗಳೂರು ವಿಭಾಗದ ಸಹಾಯಕ ವಿಭಾಗೀಯ ಸಿಗ್ನಲ್ & ದೂರ ಸಂಪರ್ಕ ಇಂಜಿನಿಯರ್ /II/ಬೆಂಗಳೂರು ವ್ಯಾಪ್ತಿಯಲ್ಲಿ ದೋಷಪೂರಿತ ಕೇಬಲ್‌ಗಳ ಬದಲಾವಣೆ ಕಾರ್ಯಗಳು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09.08.2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ಬೆಂಗಳೂರು

PUB/290/AAMO/PRB/SWR/2024-25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಇ-ಟೆಂಡರು ಸೂಚನೆ ಸಂ. 19 UBL 2024-25 ದಿನಾಂಕ: 15.07.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್ / ಬಳ್ಳಾರಿ ವ್ಯಾಪ್ತಿಯಲ್ಲಿ ಬರುವ ಕ್ವಾರ್ಟರ್‌ಗಳು / ಸರ್ವೀಸ್ ಕಟ್ಟಡಗಳಿಗೆ ಬೇಕಾದ ವಿವಿಧ ನಿರ್ವಹಣಾ ಚಟುವಟಿಕೆಗಳು (ವಿಶೇಷ ಕಾಮಗಾರಿ–1).	ರೂ. 1,28,21,508.00
2	ಹುಬ್ಬಳ್ಳಿ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್ / ಗದಗ ವ್ಯಾಪ್ತಿಯಲ್ಲಿ ಬರುವ ಕ್ವಾರ್ಟರ್‌ಗಳು / ಸರ್ವೀಸ್ ಕಟ್ಟಡಗಳಿಗೆ ಬೇಕಾದ ವಿವಿಧ ನಿರ್ವಹಣಾ ಚಟುವಟಿಕೆಗಳು (ವಿಶೇಷ ಕಾಮಗಾರಿ–2).	ರೂ. 1,09,79,228.00
3	ಹುಬ್ಬಳ್ಳಿ ವಿಭಾಗ: ಹೊಸಪೇಟೆ (ಹೆಚ್‌ಪಿಟಿ), ತೋರಣಗಲ್ಲು (ಟಿಎನ್‌ಜಿಎಲ್), ಪಾಪಿನಾಯಕನಹಳ್ಳಿ (ಪಿಕೆಎಲ್), ಗಿಣಿಗೇರ (ಜಿಎನ್‌ಆರ್) ಗಳಲ್ಲಿರುವ ಸಿಬ್ಬಂದಿ ಕ್ವಾರ್ಟರುಗಳ ನೆಲಹೊದಿಕೆ, ಬಾಗಿಲುಗಳು ಮತ್ತು ಕಿಟಕಿಗಳ ಅಭಿವೃದ್ಧಿ.	ರೂ. 71,83,228.00
4	ಹುಬ್ಬಳ್ಳಿ ವಿಭಾಗ: ಹೊಸಪೇಟೆಯಲ್ಲಿ ಬರುವ ಹೊಸಪೇಟೆ (ಹೆಚ್‌ಪಿಟಿ) ನಿಲ್ದಾಣದ ಕಾಲೊನಿ ಮತ್ತು ಎ.ಎಸ್.ಜಿ. ಕಾಲೊನಿಯಲ್ಲಿ ಅಂಡರ್‌ಗ್ರೌಂಡ್ ಚರಂಡಿ ವ್ಯವಸ್ಥೆಯ ಪ್ರಸ್ತಾವನೆ.	ರೂ. 75,33,951.00
5	ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿ – ಕರಜಗಿ (ಯುಬಿಎಲ್–ಕೆಜೆಜಿ) ವಿಭಾಗ: ಯೆಳವಿಗಿ – ಗುಡಗೇರಿ (ವೈಎಲ್‌ಜಿ–ಜಿಡಿಐ) ನಿಲ್ದಾಣಗಳ ನಡುವೆ ಕಟ್ & ಕವರ್ / ಆರ್‌ಹೆಚ್ ಗಿರ್ಡರ್ ಮಾದರಿಯಲ್ಲಿ ರೀಟೇನಿಂಗ್ ಗೋಡೆಯೊಂದಿಗೆ ಕಿಮೀ. 425/500–700 ರಲ್ಲಿ 3x3x34 ಮೀ. ಅಳತೆಯ ಸೇತುವೆಯ ನಿರ್ಮಾಣ ಕಾರ್ಯಗಳು.	ರೂ. 2,02,12,544.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12.08.2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ ಹುಬ್ಬಳ್ಳಿ

PUB/284/AAMO/PRB/SWR/2024-25

South Western Railway - SWR | @SWRRLY | SWRRLY

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮುಇಂ(ವಿ)/ಪ್ರವ/ಕಾನಿಇಂ(ಸಿ)-2/ಸಕಾನಿಇಂ(ಸಿ)-2/2024-25/6903-07 ದಿನಾಂಕ: 22.07.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿ ವತಿಯಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1) ಬನ್ನೇರುಘಟ್ಟ (ಗೊಲ್ಲಹಳ್ಳಿ) 66/11ಕೆವಿ ಉಪ ಕೇಂದ್ರದ ಆವರಣದಲ್ಲಿ ಆರ್.ಸಿ.ಸಿ ತಡೆಗೋಡೆ, ಸುತ್ತುಗೋಡೆ ನಿರ್ಮಿಸುವುದು ಹಾಗೂ ಉಪ ಕೇಂದ್ರದ ಮಟ್ಟಕ್ಕೆ ಸಮತಟ್ಟು ಮಾಡುವ ಕಾಮಗಾರಿ (4ನೇ ಕರೆ). ಅಂದಾಜು ವೆಚ್ಚ (ಜಿಎಸ್‌ಟಿ ಸಹಿತ): ರೂ.2,67,65,000/-.

2) ಕೋಲಾರ ಜಿಲ್ಲೆಯ ತಾಯಲೂರಿನ 66/11ಕೆವಿ ಉಪ ಕೇಂದ್ರದ ಆವರಣದಲ್ಲಿ ಕಾಂಪೌಂಡ್ ಗೋಡೆ ನಿರ್ಮಾಣ ಮಾಡುವ ಕಾಮಗಾರಿ. ಅಂದಾಜು ವೆಚ್ಚ (ಜಿಎಸ್‌ಟಿ ಸಹಿತ): ರೂ.60.00 ಲಕ್ಷಗಳು.

ಸದರಿ ಟೆಂಡರ್‌ಗಳಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಕವಿಪ್ರನಿನಿ ವೆಬ್‌ಸೈಟ್ http://kptcl.karnataka.gov.in ಹೈಪರ್‌ಲಿಂಕ್ "E Procurement KPTCL" ಅಥವಾ https://kppp.karnataka.gov.in ನಲ್ಲಿ ದಿನಾಂಕ: 29.07.2024 ರಂದು ಅಥವಾ ನಂತರ ಪಡೆಯಬಹುದು.

ಸಹಿ/- ಮುಖ್ಯ ಇಂಜಿನಿಯರ್ (ವಿದ್ಯುತ್), ಪ್ರಸರಣ ವಲಯ, ಕವಿಪ್ರನಿನಿ, ಆನಂದ ರಾವ್ ವೃತ್ತ, ಬೆಂಗಳೂರು - 560 009. ಫೋನ್: 080-22356320.

ಎಫ್. ನಂ. 13/03/2024–ಇಸಿ

ವಿದ್ಯುತ್ ಸಚಿವಾಲಯ

ಶ್ರಮ ಶಕ್ತಿ ಭವನ, ರಫಿ ಮಾರ್ಗ, ನವದೆಹಲಿ – 110001

ಖಾಲಿಹುದ್ದೆ ಸುತ್ತೋಲೆ

ಬ್ಯೂರೋ ಆಫ್ ಎನರ್ಜಿ ಎಫಿಷಿಯನ್ಸಿ (ಬಿಇಇ) ಎಂಬ ಸಂಸ್ಥೆಯು ಭಾರತ ಸರ್ಕಾರದ ವಿದ್ಯುತ್ ಸಚಿವಾಲಯದ ಅಡಿಯಲ್ಲಿನ ಒಂದು ಶಾಸನಬದ್ಧ ಅಂಗಸಂಸ್ಥೆಯಾಗಿದ್ದು, ದೇಶಾದ್ಯಂತ ವಿದ್ಯುತ್ ಸಕ್ಷಮತೆಯನ್ನು ಉತ್ತೇಜಿಸುವ ಉದ್ದೇಶದಿಂದ ವಿದ್ಯುತ್ ಸಂರಕ್ಷಣಾ ಕಾಯ್ದೆ, 2001ರ ನಿಯಮಗಳನ್ನು ಇದನ್ನು ಸಂಸ್ಥಾಪಿಸಲಾಗಿರುತ್ತದೆ. ಸದರಿ ಸಂಸ್ಥೆಯ ಮಹಾ ನಿರ್ದೇಶಕರು, ಸಂಸ್ಥೆಯ ಉದ್ದೇಶಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಜವಾಬ್ದಾರರಾಗಿರುತ್ತಾರೆ ಮತ್ತು ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಪ್ರಾಧಿಕಾರ ಆಗಿರುತ್ತಾರೆ.

ಪ್ರಸ್ತುತ, ಸದರಿ ಬ್ಯೂರೋ ಆಫ್ ಎನರ್ಜಿ ಎಫಿಷಿಯನ್ಸಿ ಸಂಸ್ಥೆಯಲ್ಲಿನ ಮಹಾ ನಿರ್ದೇಶಕ ಎಂಬ ಒಂದು (01) ಖಾಲಿ ಹುದ್ದೆಯನ್ನು (ನಾನ್–ಸಿಎಸ್‌ಎಸ್ ಹುದ್ದೆ) ವೇತನ ಶ್ರೇಣಿ ಹಂತ–15 ರಲ್ಲಿ ಮತ್ತು ಡೆಪ್ಯುಟೇಶನ್ (ಅಲ್ಪಾವಧಿ ಗುತ್ತಿಗೆ ಸೇರಿದಂತೆ) ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಉದ್ದೇಶಿಸಲಾಗಿರುತ್ತದೆ. ಸಾಮಾನ್ಯ ಸೇವಾ ಷರತ್ತುಗಳು, ಅರ್ಹತಾ ಮಾನದಂಡ, ವಯೋಮಿತಿ, ಅರ್ಜಿ ನಮೂನೆ ಇತ್ಯಾದಿ ವಿವರಗಳು, ವಿದ್ಯುತ್ ಸಚಿವಾಲಯದ https://powermin.gov.in ಮತ್ತು ಬ್ಯೂರೋ ಆಫ್ ಎನರ್ಜಿ ಎಫಿಷಿಯನ್ಸಿ ಸಂಸ್ಥೆಯ https://beeindia.gov.in/en. ವೆಬ್‌ಸೈಟ್‌ಗಳಲ್ಲಿ ಲಭ್ಯವಿರುತ್ತದೆ. ಎಂಪ್ಲಾಯ್‌ಮೆಂಟ್ ನ್ಯೂಸ್‌ನಲ್ಲಿ ಈ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 45 ದಿನಗಳೊಳಗೆ, ಸಂಪೂರ್ಣ ಭರ್ತಿ ಮಾಡಿದ ಅರ್ಜಿಗಳನ್ನು (**ನಿರ್ದಿಷ್ಟ ನಮೂನೆಯಲ್ಲಿ ಮಾತ್ರ**) ವಯಸ್ಸು, ಶೈಕ್ಷಣಿಕ ವಿದ್ಯಾರ್ಹತೆ ಮತ್ತು ಅನುಭವಕ್ಕೆ ಸಂಬಂಧಿತ ಎಲ್ಲಾ ಅಗತ್ಯ ದಾಖಲಾತಿಗಳ ಸಮೇತ ನಿರ್ದೇಶಕರು (ಇಸಿ), ಕೊಠಡಿ ಸಂ. 201–ಎಫ್ ವಿಂಗ್, ಎರಡನೇ ಮಹಡಿ, ನಿರ್ಮಾಣ ಭವನ, ನವದೆಹಲಿ–110011 ವಿಳಾಸಕ್ಕೆ ತಲುಪುವಂತೆ, ತ್ವರಿತ ಅಂಚೆ/ನೋಂದಾಯಿತ ಅಂಚೆ ಮೂಲಕ ಮಾತ್ರ ರವಾನಿಸತಕ್ಕದ್ದು.

ಅಧೀನ ಕಾರ್ಯದರ್ಶಿ (ಇಸಿ, ಇಟಿ & ಇವಿ)

ವಿದ್ಯುತ್ ಸಚಿವಾಲಯ

CBC 34101/11/0004/2425

ಭಾರತ ಸರ್ಕಾರ

ಬಾಹ್ಯಾಕಾಶ ಇಲಾಖೆ

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ)

ಇಸ್ರೋ ಟೆಲಿಮೆಟ್ರಿ ಟ್ರ್ಯಾಕಿಂಗ್ ಅಂಡ್ ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಎಸಿ)

ನಿರ್ಮಾಣ ಮತ್ತು ನಿರ್ವಹಣೆ ಸಮೂಹ,

ಪೀಣ್ಯ ಕೈಗಾರಿಕಾ ವಸಾಹತು, ಬೆಂಗಳೂರು-58.

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಸಮೂಹ ಮುಖ್ಯಸ್ಥರು, ಐಎಸ್‌ಟಿಆರ್‌ಎಸಿ, ಇಸ್ರೋ, ಪೀಣ್ಯ, ಬೆಂಗಳೂರು–58 (ದೂರವಾಣಿ: 080–28094541, 28094186) ಇವರು ಕೆಳಕಂಡ ಕಾಮಗಾರಿಗಾಗಿ ಎನ್‌ಐಟಿ ಅನ್ವಯ ಸೂಕ್ತ ದರ್ಜೆ ಗುತ್ತಿಗೆದಾರರಿಂದ ಮೊಹರಾದ ಐಟಂ ದರದ ಇ–ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಆಹ್ವಾನಿಸಿದ್ದಾರೆ

1	ಕಾಮಗಾರಿ ಹೆಸರು	ಐಎಸ್‌ಟಿಆರ್‌ಎಸಿ ಜಿ/ಎಸ್ ಪೋರ್ಟ್ ಬ್ಲೈರ್ ಇಲ್ಲಿ ಯುಪಿಎಸ್ ವ್ಯವಸ್ಥೆಗಳು, ಐಸೋಲೇಷನ್ ಟ್ರಾನ್ಸ್‌ಫಾರ್ಮರ್‌ಗಳು ಮತ್ತು ಸಂಬಂಧಿತ ಪ್ಯಾನೆಲ್‌ಗಳ ಸರಬರಾಜು, ಅಳವಡಿಕೆ, ಪರೀಕ್ಷೆ ಮತ್ತು ಕಾರ್ಯಾಚರಣೆಗೊಳಿಸುವುದು.	ಐಎಸ್‌ಟಿಆರ್‌ಎಸಿ ಜಿ/ಎಸ್ ಪೋರ್ಟ್ ಬ್ಲೈರ್ ಇಲ್ಲಿ 500 ಕೆವಿಎ ಡಿಜಿ ಸೆಟ್‌ನ ಸರಬರಾಜು, ಅಳವಡಿಕೆ, ಪರೀಕ್ಷೆ ಮತ್ತು ಕಾರ್ಯಾಚರಣೆಗೊಳಿಸುವುದು.
2	ಎನ್‌ಐಟಿ ಸಂ.	ಐಎಸ್‌ಟಿಆರ್‌ಎಸಿ/ಸಿಎಂಜಿ/ಇ/ಸಿಓಎನ್/ಇ–ಟೆಂಡರ್–28/2024–2025 ದಿನಾಂಕ: 24.06.2024	ಐಎಸ್‌ಟಿಆರ್‌ಎಸಿ/ಸಿಎಂಜಿ/ಇ/ಸಿಓಎನ್/ಇ–ಟೆಂಡರ್–29/2024–2025 ದಿನಾಂಕ: 24.06.2024
3	ಟೆಂಡರ್‌ಗಿಟ್ಟ ಅಂದಾಜು ಮೊತ್ತ	ರೂ.88.67 ಲಕ್ಷಗಳು	ರೂ.67.18 ಲಕ್ಷಗಳು
4	ಟೆಂಡರ್ ದಸ್ತಾವೇಜು ವಿವರಗಳು	ಇ–ಟೆಂಡರ್	ಇ–ಟೆಂಡರ್
5	ಪೂರ್ಣಗೊಳಿಸಲು ಕಾಲಾವಧಿ (ತಿಂಗಳುಗಳಲ್ಲಿ) ಕಾಮಗಾರಿ ಆದೇಶ ನೀಡಿದ ದಿನಾಂಕದ 15ನೇ ದಿನದಿಂದ ಪರಿಗಣಿಸಲಾಗುತ್ತದೆ.	06 ತಿಂಗಳು	06 ತಿಂಗಳು
6	ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	25.06.2024, 16.00 ಗಂಟೆ ರಿಂದ 16.07.2024, 16.00 ಗಂಟೆ ವರೆಗೆ ಇರುವುದನ್ನು **06.08.2024, 16.00 ಗಂಟೆಯವರೆಗೆ ವಿಸ್ತರಿಸಲಾಗಿದೆ.**	
7	ಬಿಡ್ ಸ್ಪಷ್ಟೀಕರಣ	26.06.2024, 11.00 ಗಂಟೆ ರಿಂದ 17.07.2024, 16.00 ಗಂಟೆ ವರೆಗೆ ಇರುವುದನ್ನು **07.08.2024, 16.00 ಗಂಟೆಯವರೆಗೆ ವಿಸ್ತರಿಸಲಾಗಿದೆ.**	
8	ಬಿಡ್ ಸ್ಪಷ್ಟೀಕರಣಕ್ಕೆ ಪ್ರತ್ಯುತ್ತರ ನೀಡಲು ಕೊನೆಯ ದಿನಾಂಕ	18.07.2024, 16.00 ಗಂಟೆಯ ವರೆಗೆ ಇರುವುದನ್ನು **08.08.2024, 16.00 ಗಂಟೆಯವರೆಗೆ ವಿಸ್ತರಿಸಲಾಗಿದೆ.**	
9	ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	19.07.2024, 16.00 ಗಂಟೆಯ ವರೆಗೆ ಇರುವುದನ್ನು **09.08.2024, 16.00 ಗಂಟೆಯವರೆಗೆ ವಿಸ್ತರಿಸಲಾಗಿದೆ.**	
10	ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	22.07.2024, 11.00 ಗಂಟೆಯ ನಂತರ ಇರುವುದನ್ನು **12.08.2024, 11.00 ಗಂಟೆಯ ನಂತರದವರೆಗೆ ವಿಸ್ತರಿಸಲಾಗಿದೆ.**	
11	ಇಎಂಡಿ	ರೂ.1,77,340.00	ರೂ.1,34,360.00

ಆಸಕ್ತಿಯುಳ್ಳ ಟೆಂಡರುದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳನ್ನು ಒಳಗೊಂಡ ಟೆಂಡರ್ ಆಹ್ವಾನ ಪ್ರಕಟಣೆಯನ್ನು (ಎನ್‌ಐಟಿ) ವೆಬ್‌ಸೈಟ್: **www.isro.gov.in** ಇಲ್ಲಿ ನೋಡಬಹುದು ಮತ್ತು ಟೆಂಡರ್ ದಸ್ತಾವೇಜನ್ನು **www.tenderwizard.com/ISRO** ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಸಮೂಹ ಮುಖ್ಯಸ್ಥರು, ಸಿಎಂಜಿ

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Hospital & Medical Jobs

HEJJE
A Unit of MS Ramaiah Health Pvt Limited
NOW HIRING
- Neuro-physiotherapist (Adult and Pediatric)
- Consultants (Physiatrist (PMR), Pediatrician, Neurologist, Psychiatrist)
- Dietician
- Registered Nurse
- Human Resources

For more vacancies or enquiries please visit www.hejje.health
Call : +91 9008999906
or
Email : ops@hejje.health

Part-Time Jobs

RETIRED/ VRS Persons, Home Maker & Others Age Above 45 Years, Earn 50K To 60K, Here No Retirement: 6362220162/ 9886641282

mLAC Maharani Lakshmi Ammanni College for Women Autonomous
(Affiliated to Bengaluru City University)
18th Cross, Malleswaram, Bangalore – 560 012
Ph: 080 23349311, 23565727
IMMEDIATE FACULTY RECRUITMENT
Applications are invited for the post of **Assistant Professors** in the Department of Computer Science, Qualification M.Sc/MCA/M. Tech (Computer Science) (Preferably NET/SLET/Ph.D.)
Eligible candidates mail your resume to Email: **principal@mlacw.org**. on or before August 5th, 2024.

HRD & Admin

REQUIRED FACTORY IN-CHARGE
A manufacturing company at Bommasandra, B'lore requires **Retired Ex-Army** personnel to be responsible for the factory's activities.
The FIC will be given free Accommodation inside the Factory premises.
Must have 2 wheeler
Interested candidates can mail their resume with photograph to E-mail: hr.pihcl@gmail.com Phone: 9342206462

Manager

BENGALURU VIHARA KENDRA (R)
No-8, 9th Main, Banashankari 2nd Stage, Bangalore-560070
Mobile: 9739711081
Email: bangaloreviharakendra@gmail.com
We are a reputed social club seeks application from eligible candidates for appointment of **Full Time Manager,** (Male only) candidates should be graduate, have computer knowledge able to speak and write fluently both in English and kannada age less than 50 years salary negotiable Apply at the above address or by e-mail to the secretary with in 15 days.

Engg/ Production Technical

WE A small scale industry located in Peenya 3rd phase near TVS Cross is looking for fresh and one year experience ITI Electronics candidates for SOLDERING WORK. We need diploma holders of better than 60% average mark for testing. Phone number 080-28371315.

WANTED LEADING Constn. Co. wants Experienced Civil Engineers 5 years and above for immediate appointment for projects in and around Bangalore. Contact:- 080- 42212228/ 9845047577. Email: jayemengineering@gmail.com

Wanted

COUNSELLORS NEEDED for Students of CHITRAKOOTA CBSE SCHOOL in Nagarbhavi, KENGERI RING ROAD, Immediately. Females to apply. CONTACT: 7829647333.

Teachers/ Professors

HOLY ANGEL'S High School Hampinagar, Vijayanagar, Bengaluru-560104 Phone: 23404465/23202042 holyangels.highschoolr pclayout@gmail.com Requires Experienced Trained Teachers to handle Nursery, English & Computer Science for Primary & Mathematics for High-School. Only English Medium Candidates need to apply

WANTED TEACHERS to teach HIGH SCHOOL MATHEMATICS, SCIENCE, SOCIAL Near Coles Park, Frazer Town. 9353111888

HERITAGE PUBLIC SCHOOL, Konanakunte, Bengaluru-62. Requires: KINDERGARTEN COORDINATOR immediately, Attractive Salary. Call: 080- 26322111, 9901733776.

Marketing & Sales

THOD MARKETING, a leading company in textile industry based in Mauritius, is looking for a skilled Digital Marketing Officer to join our team remotely. Interested candidates should send their resume and a cover letter to thodmk@intnet.mu

WANTED FOR SALES & MARKETING Experience 2-3`Years. Precision Bright Steel Industry. Address: Janatha Colony Renuka`Home app, 1st.Floor, Bommasandra, Bangalore. 6379647337, 9448225483.

Security & Detectives

RAXA SECURITY Services is hiring Male and Female candidates for Security Guard positions. Location of Job will be Bangalore in a Reputed MNC. Good Opportunity for Male/Female candidates having Basic English speaking/writing skill, Kannada language will be an added advantage. Qualification required:10th class pass, Age:should be between 18-30 years, Salary best in Industry. Subject to passing Client interview.For Registration Contact:Santosh-9493419561 Y.S.Shahid-6281557937 N.K.Yadav-6300676517.

RENTAL PROPERTIES

Accommodation Available

Commercial

BUILDING AVAILABLE FOR EDUCATIONAL INSTITUTION
20000 square feet building with 2.0 acres campus, in Doddaballapur Road near Toll Gate. Suitable for running School / College is available for rent / lease.
Call: +91 8105520853
MES-24501

SPACE AVAILABLE FOR RENT
5000 Sqft., at Roof Top Suitable for Bar & Restaurant, and 3000 Sqft., Ground Floor Suitable for Veg Restaurant
at Hotel Golden Castle #3615/1 M28/1, Opp. Old RMC, Next to TVS Showroom, Sayyaji Rao Road, Mysuru-21 Mob: 9845293146, Email: gcmysuru@gmail.com

'11000 SQUARE feet warehouse available for rent near Tin Factory, Old Madras Road, Bangalore contact 9243109977'

REAL ESTATE SELLING

Sites

Kanakapura Road

EAST FACING 40X60 site for sale behind saint gobain KIADB industry area Harohalli Kanakapura main road 6362905595

Magadi Road

SALE, BMRDA Site 40X30, East facing, 40 feet road. 'Raynal Gardens' Thavarekere. 4200/- sqft. 9141326819

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUSINESS

Business to Business

Medical

RUNNING NEW Modern NABH Ready 50 Bed Hospital South Bangalore, Longterm Rental Partnership WhatsApp: 00447868727506

Business Offers

Distributors

DISTRIBUTORS WANTED for a Furniture Manufacturing Industry. for all over KARNATAKA. Please WhatsApp: 9019585095.

Finance

WEARE DOING Education/ Purchase/ Mortgage and Home loan, From financial Institutions, Contact Mrs. Jyothi 8971132289/ 9380509779.

General

REQUIRED TRADING FIRMS FOR TAKE OVERS. Interested Genuine Person Kindly Contact: WhatsApp 9019585095

PUBLIC NOTICE

ಸಾರ್ವಜನಿಕ ಪ್ರಕಟಣೆ
ಶ್ರೀಕಾಂತ್, ಮಾದನಾಯಕನಹಳ್ಳಿ, ದಾಸನಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಜಿಲ್ಲೆ ಇಲ್ಲಿಯ ನಿವಾಸಿಯಾಗಿದ್ದು, ಮಾದನಾಯಕಹಳ್ಳಿ ಗ್ರಾಮದ ಅಸೆಸ್‌ಮೆಂಟ್ ನಂ.58/1 & 58/2ರ ನಿವೇಶನ ಸಂಖ್ಯೆ 10ರ (30x40 ಅಡಿ ಅಳತೆಯ) ಮೂಲತಃ ಶ್ರೀಮತಿ ಕೆ.ಜಿ. ಹೇಮಾವತಿ ಕೋಂ ಶ್ರೀ ಜಯದೇವರುರವರ ಹೆಸರಿಗೆ ಆಶ್ರಯ ಯೋಜನೆಯಡಿ ಹಕ್ಕುಪತ್ರದ ಮೂಲಕ ಮಂಜೂರಾಗಿ ಬಂದ ಸ್ವತ್ತಾಗಿದ್ದು ಸದರಿ ನಿವೇಶನದ ಸ್ವತ್ತಿಗೆ ಹೇಮಾವತಿಯಿಂದ ನಾವು ಬರೆಸಿಕೊಂಡ ಮೂಲ ದಾಖಲಾತಿ ಪತ್ರ ಹಾಗೂ ಕ್ರಯಪತ್ರ ಮತ್ತು ಎಲ್ಲಾ ದಾಖಲೆಗಳು ನಾವು ಮನೆ ಖಾಲಿ ಮಾಡುವಾಗ ಕಳೆದುಹೋಗಿದೆ. ಯಾರಿಗಾದರು ಸಿಕ್ಕಲ್ಲಿ ಸಂಪರ್ಕಿಸಿ,
ಮೊ: 7411507708 / 9980515623

PERSONAL

Change of Name

CHANGE OF NAME
I, **DAYANANDA K. J,** R/at #752/2, 5th Cross, Air Wive Colony, Konena Agrahara, Bengaluru North, Bangalore-560017, have changed my minor son's name from **JAGANATH D.K.** to **JAGANNATH D.K.** vide affidavit dated 18.03.2024, before notary N.Kanchivaradarajau, Bangalore. Henceforth he shall be known as **JAGANNATH D.K.** only

CHANGE OF NAME
I, **Jagadish Singh V.H. S/o Late Hem Singh,** Residing at # 36, Lakshme Niwas V.H.S Building MGM Market, Old Kasai Road, Bengaluru-560002, have changed my name to **JAGADISH SINGH** vide affidavit dated 19-07-2024, sworn before notary Anitha Bai, Bengaluru. Henceforth I shall be known as **JAGADISH SINGH** only

I, AFREEN alias KASHVI THAKKAR, D/o Reena Thakkar, age 24 years, R/at No.304, Green Fields Apartment, Bellandur, Bengaluru-560043 have changed my name from AFREEN alias KASHVI THAKKAR to KASHVI THAKKAR, vide affidavit dated 05/05/2024, before Notary PUTTARAMAIAH, Bangalore.

I, ANWAR BHASHA Residing at Sira Tumkur-572137 have changed my name as ANWAR BASHA vide affidavit dated 22/7/2024 before Notary K.S.Bammappanavar Bangalore

DH Classifieds More value, more impact — ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
www.dhclassifieds.com
BOOK NOW
For more details contact:
+91 9901641752 | +91 9845114560 | +91 9886213331
*Conditions apply

ಸುಲಿಗೆ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸರ ಸೋಗಿನಲ್ಲಿ ಯುವತಿಯನ್ನು ಬೆದರಿಸಿ ₹1.50 ಲಕ್ಷ ಸುಲಿಗೆ ಮಾಡಿದ್ದ ಆರೋಪಿಯನ್ನು ರಾಮಮೂರ್ತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮಹೇಂದ್ರ ಕುಮಾರ್ ಅಲಿಯಾಸ್ ಕಾರ್ತಿಕ್ (33) ಬಂಧಿತ.

‘ಜುಲೈ 3ರಂದು ಸುರೇಶ್ ಎಂಬ ಹೆಸರಿನಲ್ಲಿ ಮಸಾಜ್‌ಗೆ ಸಮಯ ನಿಗದ ಮಾಡಿಕೊಂಡಿದ್ದ ಆರೋಪಿ, ನಟ ಎಂದು ಹೇಳಿಕೊಂಡಿದ್ದ. ರಾಮಮೂರ್ತಿ ನಗರದ ಅಪಾರ್ಟ್‌ಮೆಂಟ್‌ವೊಂದರ ವಿಳಾಸ ನೀಡಿದ್ದ. 25 ವರ್ಷದ ಮಹಿಳಾ ಥೆರಪಿಸ್ಟ್ ಒಬ್ಬರಿಂದ ಮಸಾಜ್‌ಗಾಗಿ ಮುಂಗಡ ಕಾಯ್ದಿರಿಸಿದ್ದ. ಮಹಿಳಾ ಥೆರಪಿಸ್ಟ್ ರಾತ್ರಿ 10.30ರ ಸುಮಾರಿಗೆ ಆತ ನೆಲೆಸಿದ್ದ ವಿಳಾಸಕ್ಕೆ ಬಂದಿದ್ದರು. ಬಳಿಕ ನೀವು ಅನೈತಿಕ ಚಟುವಟಿಕೆ ನಡೆಸುತ್ತಿದ್ದೀರಿ ಎಂದು ಸುಳ್ಳು ಪ್ರಕರಣ ದಾಖಲಿಸುತ್ತೇನೆ’ ಎಂದು ಬೆದರಿಸಿದ್ದ. ಅಲ್ಲದೇ ₹10 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ಹೆದರಿದ ಯುವತಿ ಆರೋಪಿ ಹೇಳಿದ್ದ ಖಾತೆಗೆ ₹1.50 ಲಕ್ಷ ವರ್ಗಾಯಿಸಿದ್ದರು. ನಂತರ ಯುವತಿಯನ್ನು ದೇವನಹಳ್ಳಿಯ ವಿಮಾನ ನಿಲ್ದಾಣದ ಬಳಿ ಕಾರಿನಿಂದ ಇಳಿಸಿ ತೆರಳಿದ್ದ’ ಎಂದು ಪೊಲೀಸರು ಹೇಳಿದರು.

ಜಾಲತಾಣದಲ್ಲಿ ಪರಿಚಯವಾಗಿ ಮದುವೆ • —ಬೇರೆ ಯುವತಿ ಜತೆ ನಿಶ್ಚಿತಾರ್ಥ • ಪತ್ನಿ ಮೇಲೆ ಹಲ್ಲೆ

ಕಿರುತೆರೆ ನಟನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿ ಮೇಲೆ ಹಲ್ಲೆ ನಡೆಸಿ, ಚಾಕುವಿನಿಂದ ಇರಿದ ಆರೋಪದ ಅಡಿ ಕಿರುತೆರೆ ನಟ ಸನ್ನಿ ಮಹಿಪಾಲ್ ವಿರುದ್ಧ ಎಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸನ್ನಿ ಮಹಿಪಾಲ್ ಮತ್ತು ಯುವತಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಸಾಮಾಜಿಕ ಜಾಲತಾಣದಲ್ಲಿ ಇಬ್ಬರಿಗೂ ಪರಿಚಯ ಆಗಿತ್ತು. ಬಳಿಕ, ಸ್ನೇಹ ಪ್ರೀತಿಗೆ ತಿರುಗಿ ಇಬ್ಬರೂ ಆತ್ಮೀಯವಾಗಿದ್ದರು. ಪರಸ್ಪರ ಒಪ್ಪಿಗೆ ಮೇರೆಗೆ ಜೂನ್ 15ರಂದು ದೇವಸ್ಥಾನವೊಂದರಲ್ಲಿ ಮದುವೆ ಆಗಿದ್ದರು ಎಂದು ಹೇಳಲಾಗಿದೆ. ‘ಮನೆಯವರಿಗೆ ಮದುವೆ ವಿಚಾರ ತಿಳಿಸಲು ಸಮಯ ಬೇಕಿದೆ. ಅದುವರೆಗೂ ಇಬ್ಬರು ಸ್ನೇಹಿತರಾಗಿಯೇ ಇರೋಣ’ ಎಂದು ಸನ್ನಿ ಮಹಿಪಾಲ್ ಅವರು ಮದುವೆಯಾದ ಯುವತಿಗೆ ಹೇಳಿದ್ದರು. ಅದರಂತೆ ಇಬ್ಬರೂ ಇದ್ದರು. ಈ ನಡುವೆ ಮಹಿಪಾಲ್ ಬೇರೊಂದು ಯುವತಿ ಜತೆಗೆ ನಿಶ್ಚಿತಾರ್ಥ ಮಾಡಿಕೊಂಡಿದ್ದರು ಎಂಬ ವಿಷಯ ತಿಳಿದು, ಯುವತಿ ವಿಜ್ಞಾನ ನಗರದ ಮಹಿಪಾಲ್ ಮನೆಗೆ ಬಂದಿದ್ದರು’ ಎಂದು ಪೊಲೀಸರು ಹೇಳಿದರು.

ಸೋಮವಾರ ರಾತ್ರಿ 11 ಗಂಟೆ ಸುಮಾರಿಗೆ ಇಬ್ಬರ ಮಧ್ಯೆ ಮಾತಿಗೆ ಮಾತು ಬೆಳೆದು ಜಗಳ ನಡೆದಿದೆ. ಈ ವೇಳೆ ಮಹಿಪಾಲ್, ಸಂತ್ರಸ್ತೆ ಮೇಲೆ ಹಲ್ಲೆ ಮಾಡಿದ್ದು, ಬಳಿಕ ಚಾಕುವಿನಿಂದ ಆಕೆಯ ಎಡಗೈ, ಎಡಭಾಗದ ಬೆನ್ನಿಗೆ ಇರಿಯಲಾಗಿದೆ. ಈ ವೇಳೆ ರಕ್ತಸ್ರಾವವಾಗಿ ಸಂತ್ರಸ್ತೆ ಕುಸಿದು ಬಿದ್ದಿದ್ದರು. ಬಳಿಕ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಪತಿ ಸನ್ನಿ ಮಹಿಪಾಲ್ ಹಲ್ಲೆಯಿಂದ ಸಂತ್ರಸ್ತೆಗೆ ಗರ್ಭಪಾತವಾಗಿದೆ ಎನ್ನಲಾಗಿದೆ. ಈ ಸಂಬಂಧ ಸಂತ್ರಸ್ತೆ ದೂರು ನೀಡಿದ್ದು, ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದರು.

ಕೋರ್ಟ್ ಬಳಿ ಮಹಿಳೆಗೆ ಚಾಕು ಇರಿತ

ಬೆಂಗಳೂರು: ಹಣಕಾಸು ವ್ಯವಹಾರದಲ್ಲಿ ಉಂಟಾದ ದ್ವೇಷದಿಂದ ಮಹಿಳೆಯೊಬ್ಬರಿಗೆ ನಗರದ ಮ್ಯಾಜಿಸ್ಟ್ರೇಟ್ ಕೋರ್ಟ್ ಸಮೀಪ ಚಾಕುವಿನಿಂದ ಇರಿಯಲಾಗಿದ್ದು, ಆರೋಪಿಯನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶೇಷಾದ್ರಿಪುರದ ನಿವಾಸಿ ಜೆ.ವಿ.ಜಯರಾಮ್‌ರೆಡ್ಡಿ ಬಂಧಿತ. ಮಲ್ಲೇಶ್ವರದ ವಿಮಲಾ ಅವರು ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗಾಯಗೊಂಡಿರುವ ಮಹಿಳೆ ಈ ಹಿಂದೆ ವಕೀಲರಾಗಿದ್ದು, ಇತ್ತೀಚೆಗೆ ವಕಾಲತ್ತು ನಡೆಸುವುದನ್ನು ನಿಲ್ಲಿಸಿದ್ದರು. ‘ಇರಿತಕ್ಕೊಳಗಾದ ವಿಮಲಾ ಹಾಗೂ ಆರೋಪಿ ಜಯರಾಮರೆಡ್ಡಿ ಅವರು ಒಂಬತ್ತು ವರ್ಷಗಳಿಂದ ಸ್ನೇಹಿತರು. ಪ್ರಕರಣವೊಂದರ ವಿಚಾರವಾಗಿ ವಿಮಲಾ ಅವರು ಶೇಷಾದ್ರಿಪುರ ಠಾಣೆಗೆ ದೂರು ನೀಡಿದ್ದರು. ಆ ಪ್ರಕರಣದ ವಿಚಾರಣೆಯು ಕೋರ್ಟ್‌ನಲ್ಲಿ ನಡೆಯುತ್ತಿತ್ತು. ಮಂಗಳವಾರ ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗಲು ಬರುತ್ತಿದ್ದ ವೇಳೆ ಅಡ್ಡಗಟ್ಟಿದ ಆರೋಪಿ ಚಾಕುವಿನಿಂದ ಇರಿದಿದ್ದಾನೆ. ಕೃತ್ಯ ಎಸಗಲು ಆರೋಪಿ ಚಾಕುವನ್ನು ಜತೆಗೆ ತಂದಿದ್ದ’ ಎಂದು ಪೊಲೀಸರು ಹೇಳಿದರು.

ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಮಹಿಳೆ ಅಪಾಯದಿಂದ ಪಾರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಾಹನ ಡಿಕ್ಕಿ: ಯುವಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಗ್ರೌಂಡ್ಸ್ ಪೊಲೀಸ್ ಠಾಣಾ ವ್ಯಾಪ್ತಿಯ ವಕ್ಫ್ ಬೋರ್ಡ್ ಕಚೇರಿ ಸಮೀಪ ಸೋಮವಾರ ರಾತ್ರಿ ನಡೆದ ಅಪಘಾತದಲ್ಲಿ ಯುವಕರೊಬ್ಬರು ಮೃತಪಟ್ಟಿದ್ದಾರೆ.

ಮಾರತ್ತಹಳ್ಳಿ ನಿವಾಸಿ ಆಯುಷ್ ಅಪ್ಪಯ್ಯ(21) ಮೃತಪಟ್ಟವರು.

ಕೊಡಗಿನ ಆಯುಷ್ ಅಪ್ಪಯ್ಯ ಅವರ ಕುಟುಂಬದ ಸದಸ್ಯರು ಮಾರತ್ತಹಳ್ಳಿಯಲ್ಲಿ ವಾಸವಿದ್ದರು. ಬಿ.ಕಾಂ ಪದವಿ ಪಡೆದುಕೊಂಡಿದ್ದ ಆಯುಷ್ ಅವರು ವಸಂತನಗರದ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಸೋಮವಾರ ರಾತ್ರಿ 10.30ರ ಸುಮಾರಿಗೆ ಕೆಲಸ ಮುಗಿಸಿಕೊಂಡು ಕಲ್ಪನಾ ಜಂಕ್ಷನ್ ಕಡೆಯಿಂದ ಚಂದ್ರಿಕಾ ಹೋಟೆಲ್ ಜಂಕ್ಷನ್ ಕಡೆಗೆ ಸಾಗುತ್ತಿದ್ದರು. ವಕ್ಫ್ ಬೋರ್ಡ್ ಕಚೇರಿ ಬಳಿ ಬರುತ್ತಿದ್ದಂತೆ ಆಯುಷ್ ಅವರ ಬೈಕ್‌ಗೆ ವಾಹನವೊಂದು ಡಿಕ್ಕಿ ಹೊಡೆಯಿತು. ಆಗ ಕೆಳಗೆ ಬಿದ್ದು, ತಲೆಗೆ ತೀವ್ರ ಪೆಟ್ಟಾಗಿತ್ತು. ಕೂಡಲೇ ಸ್ಥಳೀಯರು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ಪರೀಕ್ಷಿಸಿದ ವೈದ್ಯರು ಮಾರ್ಗಮಧ್ಯೆಯೇ ಮೃತಪಟ್ಟಿದ್ದಾರೆ ಎಂದು ದೃಢಪಡಿಸಿದ್ದಾರೆ. ಡಿಕ್ಕಿ ಹೊಡೆದು ಪರಾರಿಯಾಗಿರುವ ವಾಹನ ಚಾಲಕನ ಪತ್ತೆಗೆ ಶೋಧಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

ಗಾಂಜಾ ಮಾರಾಟ: ಬೀದರ್‌ನ ಎಂಜಿನಿಯರಿಂಗ್ ವಿದ್ಯಾರ್ಥಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರು ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಗಾಂಜಾ ಮಾರಾಟ ಮಾಡುತ್ತಿದ್ದ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಯೊಬ್ಬನನ್ನು ಕೊತ್ತನೂರು ಠಾಣೆ ಪೊಲೀಸರು ಬಂಧಿಸಿ, 2.5 ಕೆ.ಜಿ. ಗಾಂಜಾ ವಶಪಡಿಸಿಕೊಂಡಿದ್ದಾರೆ.

ಬೀದರ್ ಜಿಲ್ಲೆ ಬಾಲ್ಕಿ ತಾಲ್ಲೂಕಿನ ಈಶ್ವರ್ (20) ಥಣಿಸಂದ್ರ ಮುಖ್ಯರಸ್ತೆಯ ಹಜ್ ಭವನದ ಪಕ್ಕ ಸೋಮವಾರ ರಾತ್ರಿ ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಾದಕ ವಸ್ತು ಮಾರಾಟ ಮಾಡುತ್ತಿದ್ದ. ಆತನನ್ನು ಬಂಧಿಸಿ ₹1 ಲಕ್ಷ ಮೌಲ್ಯದ ಗಾಂಜಾ, ಕಾಲೇಜು ಬ್ಯಾಗ್ ಮತ್ತು ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ.

ಬಂಧಿತ ವಿದ್ಯಾರ್ಥಿಗೆ ಗಾಂಜಾ ಪೂರೈಸುತ್ತಿದ್ದವರ ಪತ್ತೆಗೂ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಾಲ್ವರ ವಿರುದ್ಧ ಪ್ರಕರಣ: 60 ಖಾತೆ ನಿಷ್ಕ್ರಿಯ

ಬೆಂಗಳೂರು: ರೌಡಿಪಟ್ಟಿಯಲ್ಲಿರುವ ವ್ಯಕ್ತಿಗಳ ಹೆಸರಿನಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಸೃಷ್ಟಿಸಿರುವ ‘ಫ್ಯಾನ್ ಪೇಜ್’ಗಳಿಗೆ ಕಡಿವಾಣ ಹಾಕಲು ವಿಶೇಷ ಕಾರ್ಯಾಚರಣೆ ನಡೆಸಿದ ಸಿಸಿಬಿ ಪೊಲೀಸರು, ಈ ಸಂಬಂಧ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ರೌಡಿ ಪಟ್ಟಿಯಲ್ಲಿರುವವರ ಪರ ಫ್ಯಾನ್ ಪೇಜ್ ಸೃಷ್ಟಿಸಿ ವಿಡಿಯೊಗಳನ್ನು ಅಪ್‌ಲೋಡ್ ಮಾಡುತ್ತಿದ್ದ ಇನ್‌ಸ್ಟಾಗ್ರಾಮ್, ಫೇಸ್‌ಬುಕ್, ಯೂಟ್ಯೂಬ್ ಸೇರಿದಂತೆ 60ಕ್ಕೂ ಅಧಿಕ ಖಾತೆಗಳನ್ನು ಪತ್ತೆಹಚ್ಚಿರುವ ಸಿಸಿಬಿ ಪೊಲೀಸರು, ಅವುಗಳನ್ನು ನಿರ್ವಹಣೆ ಮಾಡುತ್ತಿದ್ದವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ವಿಲ್ಸನ್ ಗಾರ್ಡನ್’ ನಾಗ, ‘ಸೈಲೆಂಟ್’ ಸುನೀಲ್, ‘ಸೈಕಲ್’ ರವಿ ಸೇರಿ ಅಪರಾಧ ಹಿನ್ನೆಲೆಯುಳ್ಳ ಹಲವು ರೌಡಿಗಳ ಹೆಸರಿನಲ್ಲಿ ‘ಸಿ’–ಬಾಸ್, ‘ಎನ್’–ಬಾಸ್, ‘ಎಸ್’– ಬಾಸ್... ಹೆಸರಿನ ಟ್ಯಾಗ್‌ಲೈನ್‌ನಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಫ್ಯಾನ್ ಪೇಜ್‌ಗಳನ್ನು ತೆರೆಯಲಾಗಿತ್ತು.

ಇಂತಹ ಪೇಜ್ ಅನ್ನು ಸಾವಿರಾರು ಯುವಕರು ಹಿಂಬಾಲಿಸುತ್ತಿದ್ದರು. ಸಿನಿಮಾಗಳ ಸಂಭಾಷಣೆ ಹಾಗೂ ಹಾಡುಗಳನ್ನು ಬಳಸಿ ಪ್ರಚೋದಿಸಲಾಗುತ್ತಿತ್ತು. ಈ ಬಗ್ಗೆ ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಕೇಳಿ ಬಂದಿದ್ದವು. ಇದೀಗ ವಿಶೇಷ ಕಾರ್ಯಾಚರಣೆ ನಡೆಸಿದ್ದಾರೆ.

ಇತ್ತೀಚೆಗಷ್ಟೇ ನಿವೃತ್ತರಾಗಿದ್ದ ಯೋಧ; ಸುಬ್ರಮಣ್ಯಪುರ ಠಾಣೆ ಪೊಲೀಸರ ಕಾರ್ಯಾಚರಣೆಯಲ್ಲಿ ಬಂಧನ

ಹೂಡಿಕೆಯಲ್ಲಿ ನಷ್ಟ: ಕಳ್ಳತನಕ್ಕೆ ಇಳಿದಿದ್ದ ಮಾಜಿ ಸೈನಿಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮ್ಯೂಚುವಲ್ ಫಂಡ್, ಷೇರು ಸೇರಿದಂತೆ ಹಲವೆಡೆ ಹೂಡಿಕೆ ಮಾಡಿ ₹79 ಲಕ್ಷ ಕಳೆದುಕೊಂಡಿದ್ದ ಮಾಜಿ ಸೈನಿಕರೊಬ್ಬರು ನಷ್ಟದ ಹಣವನ್ನು ಗಳಿಸಲು ಕಳ್ಳತನಕ್ಕೆ ಇಳಿದಿದ್ದು, ಅವರನ್ನು ಸುಬ್ರಮಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಚಿತ್ತೂರಿನ ಎನ್. ವಿನಯ್ ಬಂಧಿತ.

‘ಆರೋಪಿಯಿಂದ ₹5.50 ಲಕ್ಷ ಮೌಲ್ಯದ 73 ಗ್ರಾಂ ಚಿನ್ನದ ಮಾಂಗಲ್ಯ ಸರ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕಾಕತೀಯ ನಗರದಲ್ಲಿ ವಾಸವಿದ್ದ ವ್ಯಕ್ತಿಯೊಬ್ಬರು ಜುಲೈ 15ರಂದು ನೀಡಿದ್ದ ದೂರನ್ನು ಆಧರಿಸಿ, ಕಾರ್ಯಾಚರಣೆ ಆರೋಪಿ ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಪ್ಲಂಬರ್ ಕೆಲಸ ಮಾಡುವುದಾಗಿ ಹೇಳಿಕೊಂಡು ಮನೆಗೆ ನುಗ್ಗಿದ್ದ ಆರೋಪಿ, ಪಿಸ್ತೂಲ್‌ನಿಂದ ಮಹಿಳೆಯ ತಲೆಯ ಹಿಂಭಾಗಕ್ಕೆ ಹೊಡೆದು ಮಾಂಗಲ್ಯ ಸರ ಕಸಿದು ಪರಾರಿಯಾಗಿದ್ದರು. ಸರ ಕಳೆದುಕೊಂಡ ಮಹಿಳೆ ಹೊಯ್ಸಳ ಸಿಬ್ಬಂದಿಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದಿದ್ದ ಪೊಲೀಸ್ ಸಿಬ್ಬಂದಿ, ಸ್ಥಳೀಯರ ನೆರವು ಪಡೆದು ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ಬೆನ್ನುಹತ್ತಿ ಹಿಡಿದು ಬಂಧಿಸಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಸೇನೆಯ ವಿಭಾಗವೊಂದರಲ್ಲಿ ಕೆಲಸ ಮಾಡುತ್ತಿದ್ದ ಆರೋಪಿ ಇತ್ತೀಚೆಗಷ್ಟೇ ನಿವೃತ್ತರಾಗಿದ್ದರು. ನಿವೃತ್ತಯಾದ ಮೇಲೆ ₹31 ಲಕ್ಷ ಬಂದಿತ್ತು. ಆ ಹಣವನ್ನು ಹಲವು ಕಡೆ ಹೂಡಿಕೆ ಮಾಡಿದ್ದರು. ಆ ಹಣ ಕಳೆದುಕೊಂಡ ಮೇಲೆ ಸ್ವಂತ ಜಮೀನು ಮಾರಾಟ ಮಾಡಿ ಅದರಿಂದ ಬಂದ ₹30 ಲಕ್ಷವನ್ನೂ ಹೂಡಿಕೆ ಮಾಡಿದ್ದರು. ಹೀಗೆ ಒಟ್ಟು ₹79 ಲಕ್ಷವನ್ನು ಕಳೆದುಕೊಂಡಿದ್ದರು. ನಷ್ಟವಾದ ಮೇಲೆ ಕಳ್ಳತನಕ್ಕೆ ಮುಂದಾಗಿದ್ದರು’ ಎಂದು ಪೊಲೀಸರು ಮಾಹಿತಿ ನೀಡಿದರು.

ಬಸ್‌ನಲ್ಲಿ ಬರುತ್ತಿದ್ದ ಆರೋಪಿ: ‘ಆಂಧ್ರಪ್ರದೇಶದಿಂದ ಬಸ್‌ನಲ್ಲಿ ಬರುತ್ತಿದ್ದ ಆರೋಪಿ ನಗರದಲ್ಲಿ ಕಳ್ಳತನ ಮಾಡಿ ವಾಪಸ್ ತೆರಳುತ್ತಿದ್ದರು. ಸದ್ಯಕ್ಕೆ ಒಂದು ಪ್ರಕರಣ ಮಾತ್ರ ಪತ್ತೆಯಾಗಿದೆ’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಬುರ್ಖಾ ಧರಿಸಿ ಗ್ರಾಹಕರ ಸೋಗಿನಲ್ಲಿ ಚಿನ್ನಾಭರಣ ಕಳವು

ಬೆಂಗಳೂರು: ಚಿನ್ನಾಭರಣ ಅಂಗಡಿಗಳಲ್ಲಿ ಕೆಲಸಗಾರರ ಗಮನವನ್ನು ಬೇರೆಡೆಗೆ ಸೆಳೆದು, ಚಿನ್ನದ ಸರಗಳನ್ನು ಕಳ್ಳತನ ಮಾಡುತ್ತಿದ್ದ ಚಿತ್ರದುರ್ಗ ಜಿಲ್ಲೆಯ ಭರಮಸಾಗರದ ನಾಲ್ವರು ಆರೋಪಿಗಳನ್ನು ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶಹೀದಾ ಬಾನು (34), ಶಬೀನಾ ಬಾನು (20), ಶಫೀವುಲ್ಲಾ (41), ಅಮೀನಾಬಿ (62) ಬಂಧಿತರು.

‘ಠಾಣಾ ವ್ಯಾಪ್ತಿಯ ಚಿನ್ನಾಭರಣ ಮಳಿಗೆಯ ಮಾಲೀಕರೊಬ್ಬರು ನೀಡಿದ್ದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ನಾಲ್ವರನ್ನು ಬಂಧಿಸಲಾಯಿತು. ಬಂಧಿತರಿಂದ ₹4.75 ಲಕ್ಷ ಮೌಲ್ಯದ 78 ಗ್ರಾಂ ತೂಕದ ಚಿನ್ನದ ಸರವನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಚಿನ್ನ ಖರೀದಿಸುವ ನೆಪದಲ್ಲಿ ಇಬ್ಬರು ಮಹಿಳೆಯರು ಬುರ್ಖಾ ಧರಿಸಿ ಚಿನ್ನಾಭರಣ ಮಳಿಗೆಗೆ ಬಂದಿದ್ದರು. ಸಿಬ್ಬಂದಿಯೊಬ್ಬರು ಚಿನ್ನಾಭರಣ ತೋರಿಸುತ್ತಿದ್ದ ಸಂದರ್ಭದಲ್ಲಿ ಅವರ ಗಮನವನ್ನು ಬೇರೆಡೆಗೆ ಸೆಳೆದು 78 ಗ್ರಾಂ ತೂಕದ ಚಿನ್ನದ ಸರವನ್ನು ಕಳ್ಳತನ ಮಾಡಿದ್ದರು’ ಎಂದು ತಿಳಿಸಿದರು.

‘ಇಸ್ರೊ ಲೇಔಟ್‌ನ ದೇವರಕೆರೆ ಪಕ್ಕದ ಖಾಲಿ ನಿವೇಶನದಲ್ಲಿ ಕಾರು ನಿಲ್ಲಿಸಿಕೊಂಡು ಚರ್ಚಿಸುತ್ತಿದ್ದ ವೇಳೆ ಆರೋಪಿಗಳನ್ನು ಬಂಧಿಸಲಾಯಿತು. ಬಂಧಿತರನ್ನು 8 ದಿನಗಳ ಕಾಲ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕದ್ದ ಚಿನ್ನವನ್ನು ಭರಮಸಾಗರದ ಚಿನ್ನಾಭರಣ ಕೆಲಸಗಾರರೊಬ್ಬರಿಗೆ ಆರೋಪಿಗಳು ಮಾರಾಟ ಮಾಡಿದ್ದರು’ ಎಂದು ಪೊಲೀಸರು ಹೇಳಿದರು.

110 ಗ್ರಾಂ ಚಿನ್ನ, ಲ್ಯಾಪ್‌ಟಾಪ್ ವಶ

ಬೆಂಗಳೂರು: ನಗರದಲ್ಲಿ ಮನೆಗಳ ಬೀಗ ಒಡೆದು ಚಿನ್ನಾಭರಣ ಹಾಗೂ ಇತರೆ ವಸ್ತುಗಳನ್ನು ಕಳವು ಮಾಡಿದ್ದ ಕೆ.ಜಿ.ಎಫ್‌ನ ಇಬ್ಬರು ಆರೋಪಿಗಳನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿ, ₹14.47 ಲಕ್ಷ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಕೆ.ಜಿ.ಎಫ್ ನಿವಾಸಿ, ಆಟೊ ಚಾಲಕ ಸಿಮ್ ಸೇನ್ ಹಾಗೂ ಪೇಂಟರ್ ಶರತ್ ಬಂಧಿತರು. ಈ ಇಬ್ಬರ ವಿರುದ್ಧ ಮನೆ ಕಳ್ಳತನ, ದ್ವಿಚಕ್ರ ವಾಹನ ಹಾಗೂ ಸರ ಕಳ್ಳತನ ಪ್ರಕರಣಗಳು ದಾಖಲಾಗಿವೆ. ಆರೋಪಿಗಳಿಂದ 110 ಗ್ರಾಂ ಚಿನ್ನಾಭರಣ, ವಿವಿಧ ಕಂಪನಿಯ ನಾಲ್ಕು ದ್ವಿಚಕ್ರ ವಾಹನ, ಎರಡು ಲ್ಯಾಪ್‌ಟಾಪ್ ಹಾಗೂ ಏಳು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸಿಮ್‌ಸೇನ್ ಕಳವು ಮಾಡಿದ್ದ ವಸ್ತುಗಳನ್ನು ಸಂಬಂಧಿ, ರೌಡಿಶೀಟರ್ ಶರತ್ ಮೂಲಕ ಕೆ.ಜಿ.ಎಫ್ ಹಾಗೂ ಆಂಧ್ರಪ್ರದೇಶದ ಶಾಂತಿಪೇಟೆ, ಕೆಂಚನಬಲ್ಲದ ಆಭರಣ ಅಂಗಡಿಗಳಿಗೆ ಮಾರಾಟ ಮಾಡಿದ್ದ. ಆ ಸ್ವತ್ತುಗಳನ್ನು ವಶಕ್ಕೆ ಪಡೆಯಲಾಗಿದೆ.

ಪ್ರಕರಣವೊಂದರಲ್ಲಿ ಶರತ್ ಗೂಂಡಾ ಕಾಯ್ದೆಯಡಿ ಜೈಲಿನಲ್ಲಿದ್ದಾನೆ. ಆತನನ್ನು ಬಾಡಿ ವಾರಂಟ್ ಮೂಲಕ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಹಲವು ಪ್ರಕರಣಗಳಲ್ಲಿ ಭಾಗಿಯಾಗಿರುವುದಾಗಿ ಒಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದರು.

ಸರಗಳ್ಳರ ಬಂಧನ: ಮಹಿಳೆಯೊಬ್ಬರ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಬಂಧಿಸಿ, ₹2.40 ಲಕ್ಷ ಮೌಲ್ಯದ 27 ಗ್ರಾಂ ತೂಕದ ಆಭರಣ ವಶಪಡಿಸಿಕೊಂಡಿದ್ದಾರೆ.

ಜುಲೈ 12ರ ಬೆಳಗಿನ ಜಾವ 5.15ರಲ್ಲಿ ವಾಯುವಿಹಾರ ಮಾಡುತ್ತಿದ್ದ ಮಹಿಳೆಯ ಮಾಂಗಲ್ಯ ಸರವನ್ನು ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು ಕಿತ್ತುಕೊಂಡು ಪರಾರಿಯಾಗಿದ್ದರು. ಮಾಂಗಲ್ಯ ಸರದ ಅರ್ಧ ತುಂಡು ಮಹಿಳೆ ಬಳಿಯೇ ಉಳಿದಿತ್ತು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಪೊಲೀಸರು, ಆರೋಪಿಗಳನ್ನು ಎಲ್ ಆ್ಯಂಡ್ ಟಿ ಸೌತ್ ಸಿಟಿ ಅಪಾರ್ಟ್‌ಮೆಂಟ್ ಬಳಿ ಬಂಧಿಸಿದರು. ಆಭರಣ ಅಂಗಡಿಯಲ್ಲಿ ಅಡವಿಟ್ಟಿದ್ದ ಸರವನ್ನು ವಶಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಯುವಕನ ಮೃತದೇಹ ಪತ್ತೆ: ಆತ್ಮಹತ್ಯೆ ಶಂಕೆ

ಬೆಂಗಳೂರು: ಯಶವಂತಪುರ ಪೊಲೀಸ್ ಠಾಣಾ ವ್ಯಾಪ್ತಿಯ ಮೇಲ್ಸೇತುವೆ ಬಳಿ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ಯುವಕನ ಶವ ಮಂಗಳವಾರ ಪತ್ತೆಯಾಗಿದೆ.

ಉತ್ತರ ಪ್ರದೇಶದ ಗೋರಕ್‌ಪುರದ ಅಖಿಲೇಶ್ ಸಹಾನಿ ಅವರ ಮೃತದೇಹ ಅದು ಎಂದು ಗುರುತಿಸಲಾಗಿದ್ದು, ಯಶವಂತಪುರ ಠಾಣೆ ಪೊಲೀಸರು ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಶನಿವಾರ ಹೈದರಾಬಾದ್‌ನಿಂದ ನಗರಕ್ಕೆ ಬಂದಿದ್ದ ಅಖಿಲೇಶ್ ಸಹಾನಿ ಅವರು ಬಳಿಕ ದೊಡ್ಡಬಳ್ಳಾಪುರಕ್ಕೆ ತೆರಳಿದ್ದರು. ಅಲ್ಲಿಂದ ಸೋಮವಾರ ಮಧ್ಯಾಹ್ನ ನಗರಕ್ಕೆ ವಾಪಸ್ ಬಂದಿದ್ದರು. ಅದಕ್ಕೆ ಸಂಬಂಧಿಸಿದ ಬಸ್ ಪ್ರಯಾಣದ ಟಿಕೆಟ್‌ಗಳು ಅವರ ಜೇಬಿನಲ್ಲಿ ಇದ್ದವು. ಜೇಬಿನಲ್ಲಿ ಗುರುತಿನ ಚೀಟಿ ಸಹ ಪತ್ತೆಯಾಗಿದ್ದು, ಗೋರಕ್‌ಪುರದ ಪೊಲೀಸರಿಗೆ ಮಾಹಿತಿ ನೀಡಲಾಗಿದೆ. ಮರಣೋತ್ತರ ಪರೀಕ್ಷಾ ವರದಿ ಬಂದ ನಂತರ ಸಾವಿಗೆ ನಿಖರ ಕಾರಣ ತಿಳಿಯಲಿದೆ’ ಎಂದು ಉತ್ತರ ವಿಭಾಗದ ಡಿಸಿಪಿ ಸೈದುಲ್ಲಾ ಅದಾವತ್ ತಿಳಿಸಿದರು.

37 ದ್ವಿಚಕ್ರ ವಾಹನ ವಶ; 10 ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ದ್ವಿಚಕ್ರ ವಾಹನಗಳನ್ನು ಕಳವು ಮಾಡಿದ್ದ ಹತ್ತು ಆರೋಪಿಗಳನ್ನು ಬಂಧಿಸಿರುವ ಪೊಲೀಸರು, ₹37.74 ಲಕ್ಷ ಮೌಲ್ಯದ 37 ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜುಲೈ 2ರಂದು ವ್ಯಕ್ತಿಯೊಬ್ಬರ ವಾಹನ ಕಳವಾಗಿತ್ತು. ಪ್ರಕರಣ ದಾಖಲಿಸಿ ತನಿಖೆ ನಡೆಸಿದ ಪೊಲೀಸರು, ಶೆಟ್ಟಿಹಳ್ಳಿ ರೈಲ್ವೆ ಗೇಟ್ ಬಳಿ ದ್ವಿಚಕ್ರ ವಾಹನ ಸಮೇತ ಉತ್ತರಹಳ್ಳಿಯ ದರ್ಶನ್, ಮಂಡ್ಯದ ತೇಜಸ್ ಮತ್ತು ಎಲೆಕ್ಟ್ರಾನಿಕ್ ಸಿಟಿಯ ಭುವನ್ ಅವರನ್ನು ಬಂಧಿಸಿ, ವಿಚಾರಣೆ ನಡೆಸಿದರು. ಇವರಿಂದ ವಿವಿಧ ಕಂಪನಿಯ 16 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಗಿರಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇಬ್ಬರನ್ನು ಬಂಧಿಸಿ 8 ದ್ವಿಚಕ್ರ ವಾಹನ, ಚನ್ನಮನಕೆರೆ ಅಚ್ಚುಕಟ್ಟು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇಬ್ಬರನ್ನು ಬಂಧಿಸಿ, 9 ವಾಹನ, ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ಒಬ್ಬನನ್ನು ನಾಲ್ಕು ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ ಎಂದರು.

ಕನಕಪುರದ ಮಾಳಗಾಳು ಗ್ರಾಮದಲ್ಲಿ ನಡೆದ ಗುಂಪು ದಾಳಿಯಲ್ಲಿಎಡಗೈ ತುಂಡಾಗಿ ಬೆಂಗಳೂರಿನ ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಾಂಗ್ರೆಸ್ ಮುಖಂಡ ವೈರಮುಡಿ ಅವರ ಮಗ ಅನೀಶ್ ಅವರನ್ನು ಮಂಗಳವಾರ ಆಸ್ಪತ್ರೆಯಲ್ಲಿ ಭೇಟಿಮಾಡಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಆರೋಗ್ಯ ವಿಚಾರಿಸಿದರು

ದಲಿತರ ಮೇಲೆ ದೌರ್ಜನ್ಯ: ಹೋರಾಟದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮುಂಗೈ ಕತ್ತರಿಸಿದವರನ್ನು ಕೂಡಲೇ ಬಂಧಿಸಿ
- ಪರಿಶಿಷ್ಟ ಸಮುದಾಯ ದವರಿಗೆ ರಕ್ಷಣೆ ನೀಡಿ

ಬೆಂಗಳೂರು: ‘ಕನಕಪುರದಲ್ಲಿ ಪರಿಶಿಷ್ಟ ಜಾತಿ ಯುವಕನ ಮುಂಗೈ ಕತ್ತರಿಸಿ, ಏಳು ಜನರ ಮೇಲೆ ಹಲ್ಲೆ ನಡೆಸಿದ ಪ್ರಕರಣದ ಆರೋಪಿಗಳನ್ನು ಕೂಡಲೇ ಬಂಧಿಸಿ ಕಾನೂನು ಕ್ರಮ ಜರುಗಿಸಬೇಕು. ಇಲ್ಲವಾದರೆ ರಾಜ್ಯ ಸರ್ಕಾರದ ವಿರುದ್ಧ ಉಗ್ರ ಹೋರಾಟ ನಡೆಸಲಾಗುವುದು’ ಎಂದು ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಎಚ್ಚರಿಕೆ ನೀಡಿದ್ದಾರೆ.

‘ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ವಿಧಾನ ಪರಿಷತ್ ಸದಸ್ಯ ಎಸ್. ರವಿ ಅವರ ಸ್ವಗ್ರಾಮವಾದ ಕನಕಪುರ ತಾಲ್ಲೂಕಿನ ಮಾಳಗಾಳು ಗ್ರಾಮದ ದಲಿತರ ಕಾಲೊನಿಗೆ ನುಗ್ಗಿ, ಹಲ್ಲೆ ನಡೆಸಿರುವುದು ಖಂಡನೀಯ. ಹಲ್ಲೆಗೊಳಗಾದ ಕುಟುಂಬಸ್ಥರಿಗೆ ಮತ್ತು ಗ್ರಾಮದಲ್ಲಿನ ಪರಿಶಿಷ್ಟ ಸಮುದಾಯದವರಿಗೆ ಪೊಲೀಸ್ ರಕ್ಷಣೆಯನ್ನು ಸರ್ಕಾರ ನೀಡಬೇಕು. ಘಟನಾ ಸ್ಥಳಕ್ಕೆ ಗೃಹ ಸಚಿವ ಜಿ. ಪರಮೇಶ್ವರ್ ಅವರು ಭೇಟಿ ನೀಡಬೇಕು’ ಎಂದು ಆಗ್ರಹಿಸಿದ್ದಾರೆ.

ಜವಳಿ ನಿಗಮಗಳ ವಿಲೀನಕ್ಕೆ ಚಿಂತನೆ: ಶಿವಾನಂದ ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಜವಳಿ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಗಳನ್ನು ಒಂದುಗೂಡಿಸಿ, ನೇಕಾರರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲು ಸರ್ಕಾರ ಚಿಂತನೆ ನಡೆಸಿದೆ’ ಎಂದು ಜವಳಿ ಖಾತೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ವಿಧಾನಪರಿಷತ್‌ನಲ್ಲಿ ಮಂಗಳವಾರ ಅರ್ಧ ಗಂಟೆ ಚರ್ಚೆಯಲ್ಲಿ ಬಿಜೆಪಿಯ ಕೇಶವಪ್ರಸಾದ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಕೈಮಗ್ಗಗಳಿಗೆ ವಿದ್ಯುತ್ ನೀಡುವುದಲ್ಲದೆ, ಪವರ್‌ಲೂಂ ಸೇರಿದಂತೆ ಅತ್ಯಾಧುನಿಕ ತಂತ್ರಜ್ಞಾನದ ವ್ಯವಸ್ಥೆಯನ್ನು ಕಲ್ಪಿಸಿ, ನೇಕಾರರು ಬದುಕು ಕಟ್ಟಿಕೊಳ್ಳಲು ಅಗತ್ಯ ಇರುವ ಎಲ್ಲ ಸೌಕರ್ಯಗಳನ್ನು ಹಂತಹಂತವಾಗಿ ಒದಗಿಸಲು ಸರ್ಕಾರ ಬದ್ಧವಾಗಿದೆ’ ಎಂದರು.

‘ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳ ಮೂಲಕ ನೇಕಾರರಿಗೆ ಶೂನ್ಯಬಡ್ಡಿದರ ಮತ್ತು ರಿಯಾಯಿತಿ ಬಡ್ಡಿದರದಲ್ಲಿ ಒಟ್ಟು ಸುಮಾರು ₹40 ಕೋಟಿ ವಿತರಣೆ ಮಾಡಲಾಗಿದೆ. ನೇಕಾರರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿದ್ದು, ಉದ್ಯೋಗದಿಂದ ವಿಮುಖರಾಗುವುದನ್ನು ತಡೆಗಟ್ಟಲು ಸರ್ಕಾರ ಅಗತ್ಯ ನೆರವು ನೀಡಲಿದೆ’ ಎಂದು ಹೇಳಿದರು.

‘ಇಳಕಲ್ ಸೀರೆ ಸೇರಿದಂತೆ ಸ್ಥಳೀಯವಾಗಿ ಪ್ರಸಿದ್ಧವಾಗಿರುವ ಸೀರೆಗಳಿಗೂ ಸರ್ಕಾರದ ಶೋರೂಂಗಳಲ್ಲಿ ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಬೇಕು’ ಎಂದು ಕಾಂಗ್ರೆಸ್‌ನ ಉಮಾಶ್ರೀ ಆಗ್ರಹಿಸಿದರು.

ಬಜೆಟ್: ಪ್ರತಿಕ್ರಿಯೆಗಳು...

ತೆರಿಗೆ ಪಾಲಿನಲ್ಲಾದರೂ ನ್ಯಾಯ ಸಿಗಲಿ

ದೇಶದ ಕೈಗಾರಿಕಾ ಬೆಳವಣಿಗೆಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿದ್ದರೂ, ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಯಾವ ಕೊಡುಗೆಯನ್ನೂ ನೀಡಿಲ್ಲ. ಕರ್ನಾಟಕವು ಎಲೆಕ್ಟ್ರಿಕ್ ವಾಹನ, ಹಸಿರು ಇಂಧನ ಮತ್ತಿತರ ವಲಯಗಳಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ. ವಿದೇಶಿ ಹೂಡಿಕೆ ಆಕರ್ಷಿಸುತ್ತಿದೆ. ದೇಶದ ಜಿಡಿಪಿಗೆ, ಆ ಮೂಲಕ ಆರ್ಥಿಕ ಬೆಳವಣಿಗೆಗೆ ಅಧಿಕ ಕೊಡುಗೆ ನೀಡುತ್ತಿರುವ ರಾಜ್ಯದ ಕೈಗಾರಿಕಾ ಬೆಳವಣಿಗೆಗೆ ಪೂರಕವಾಗಿ ಪ್ರೋತ್ಸಾಹ ದೊರಕುತ್ತದೆ ಎನ್ನುವ ನಿರೀಕ್ಷೆ ಹುಸಿಯಾಗಿದೆ. ಮುಂಬರುವ ದಿನಗಳಲ್ಲಾದರೂ ತೆರಿಗೆ ಪಾಲು ನೀಡುವಾಗ ಹೆಚ್ಚಿನ ಭಾಗ ನಿಗದಿಗೊಳಿಸಿ, ರಾಜ್ಯಕ್ಕೆ ನ್ಯಾಯ ಸಿಗುವಂತೆ ಮಾಡಬೇಕು.

ಎಂ.ಬಿ. ಪಾಟೀಲ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ

ರಾಜ್ಯಕ್ಕೆ ಅನ್ಯಾಯ

ಕಳೆದ ಹತ್ತು ವರ್ಷದಲ್ಲಿ ಕೇಂದ್ರ ಸರ್ಕಾರ ಉದ್ಯೋಗ ಸೃಷ್ಟಿ ಬಗ್ಗೆ ಪ್ರಸ್ತಾಪಿಸಿಲ್ಲ, ಪೊಳ್ಳು ಭರವಸೆಗಳು ಮುಂದುವರಿದಿವೆ. ನಿರ್ಮಲಾ ಅವರು ಕೇವಲ ಬಜೆಟ್ ಮಂಡಿಸುವುದರಲ್ಲಷ್ಟೇ ಸಾಧನೆ ಮಾಡಿದ್ದಾರೆ. ಕರ್ನಾಟಕದಿಂದ 19 ಎನ್‌ಡಿಎ ಸಂಸದರನ್ನು ರಾಜ್ಯದ ಜನತೆ ಆಯ್ಕೆ ಮಾಡಿ ಕಳುಹಿಸಿದ್ದು ವ್ಯರ್ಥವಾಗಿದೆ. ರಾಜ್ಯಕ್ಕೆ ಒಂದೇ ಒಂದು ಯೋಜನೆಯನ್ನು ನೀಡದೇ ಕನ್ನಡಿಗರಿಗೆ ಅನ್ಯಾಯ ಮಾಡಿದೆ.

ಶಿವರಾಜ್ ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಸಚಿವ

ತಪ್ಪನ್ನು ಒಪ್ಪಿಕೊಂಡ ಕೇಂದ್ರ

ಬಿಜೆಪಿಯ ಕೆಟ್ಟ ನೀತಿಗಳಿಂದಾಗಿ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಸೃಷ್ಟಿಯಾಗಿತ್ತು. ಕಳೆದ 10 ವರ್ಷ ನಿರುದ್ಯೋಗ ಸಮಸ್ಯೆ ಬಗ್ಗೆ ಗಮನವನ್ನೇ ಹರಿಸದಿದ್ದ ಕೇಂದ್ರ ಸರ್ಕಾರ ಈ ಬಜೆಟ್ ಮೂಲಕ ತನ್ನ ತಪ್ಪನ್ನು ಒಪ್ಪಿಕೊಂಡಿದೆ.

ಈಶ್ವರ ಖಂಡ್ರೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ

ನಾಲ್ಕು ಕೋಟಿ ಉದ್ಯೋಗ ಸೃಷ್ಟಿ

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಪ್ರಧಾನಿ ಮೋದಿ ಅವರ ವಿಕಸಿತ ಭಾರತ ನಿರ್ಮಾಣಕ್ಕೆ ಶಕ್ತಿ ತುಂಬುವ ಕೆಲಸ ಮಾಡಿದ್ದಾರೆ. ಮಹಿಳೆಯರಿಗೆ ಹೆಚ್ಚು ಅನುಕೂಲ ಮಾಡಿಕೊಡುವ ನಾರಿಶಕ್ತಿ ಬಜೆಟ್ ನೀಡಿದ್ದಾರೆ. ಒಂಬತ್ತು ಆದ್ಯತಾ ವಲಯಗಳನ್ನು ಗುರುತಿಸಲಾಗಿದೆ. ಶಿಕ್ಷಣ, ಉದ್ಯೋಗ ಮತ್ತು ಕೌಶಲಕ್ಕೆ ₹1.48 ಲಕ್ಷ ಕೋಟಿ ಅನುದಾನ ನೀಡಿ ನಾಲ್ಕು ಕೋಟಿ ಉದ್ಯೋಗ ಸೃಷ್ಟಿಸುವ ಗುರಿ ಹೊಂದಲಾಗಿದೆ. ಉದ್ಯೋಗ ಸೃಷ್ಟಿಯಲ್ಲಿ ನಿರ್ಣಾಯಕ ಪಾತ್ರ ವಹಿಸುವ ಸಣ್ಣ, ಮಧ್ಯಮ ಗಾತ್ರದ ಕೈಗಾರಿಗಳಿಗೆ ಆರ್ಥಿಕವಾಗಿ ಶಕ್ತಿ ತುಂಬುವ ಉಪಕ್ರಮ ಶ್ಲಾಘನೀಯ.

ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಕೈಗಾರಿಕಾ ಸಚಿವ

ಒಕ್ಕೂಟದ ಆಶಯ ಮರೆತ ಬಜೆಟ್

ಅತಿ ಹೆಚ್ಚು ತೆರಿಗೆ ಪಾವತಿಸುವ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗಿದೆ. ಸುಮಾರು ₹11 ಸಾವಿರ ಕೋಟಿಗಳಷ್ಟು ಅಗತ್ಯವಿದ್ದಾಗಲೂ ಪ್ರಸ್ತಾವ ಮಾಡದ ಕೇಂದ್ರ ಸರ್ಕಾರ ಒಕ್ಕೂಟ ವ್ಯವಸ್ಥೆಯ ಆಶಯವನ್ನೇ ಮರೆತಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಏಳಿಗೆಗಾಗಿ ಬಾಕಿ ಉಳಿಸಿಕೊಂಡ ಅನುದಾನದ ಜೊತೆಗೆ ಹೊಸ ಅನುದಾನವನ್ನು ಮಂಜೂರು ಮಾಡಬೇಕಾಗಿತ್ತು. ಆದರೆ, ಈ ಕುರಿತು ಎಲ್ಲಿಯೂ ಪ್ರಸ್ತಾಪ ಇಲ್ಲ. ಜನಪರ ಯೋಜನೆ ಇಲ್ಲದ, ತೆರಿಗೆ ವಿಧಿಸುವುದೇ ತನ್ನ ಕಾಯಕ ಎನ್ನುವಂತಿದೆ. ಹಿಂದಿನ ಯಾವ ಬಜೆಟ್‌ಗಳೂ ಸರಿಯಾಗಿ ಅನುಷ್ಠಾನವಾಗಿಲ್ಲ, ಈ ಬಜೆಟ್ ಅದೇ ದಾರಿಯಲ್ಲಿ ಸಾಗಲಿದೆ.

ಎಚ್.ಸಿ. ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ

ಚಿನ್ನ, ಬೆಳ್ಳಿ ಉದ್ಯಮದ ಚೇತರಿಕೆ

ಚಿನ್ನದ ಮೇಲೆ ಅಬಕಾರಿ ಸುಂಕವನ್ನು ಶೇಕಡಾ 6ರಷ್ಟು ಕಡಿತ ಗೊಳಿಸಿರುವ ಕ್ರಮ ಅತ್ಯಂತ ಮಹತ್ವದ ನಿರ್ಧಾರ. ಚಿನ್ನ, ಬೆಳ್ಳಿ ಉದ್ಯಮ ದೇಶದ ಆರ್ಥಿಕ ಶಕ್ತಿಯ ಭಾಗವಾಗಲಿದೆ. ನಿರುದ್ಯೋಗ ನಿವಾರಣೆ, ಲಕ್ಷಾಂತರ ಹುದ್ದೆ ಸೃಷ್ಟಿಗೆ ಅವಕಾಶ ಒದಗಿಸಲಾಗಿದೆ. ರೈತರ ಪಾಲಿಗೆ ನೆಮ್ಮದಿ ತಂದಿದೆ.

ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಉದ್ಯಮಿಗಳಿಗೆ ದೊಡ್ಡಮಟ್ಟದಲ್ಲಿ ಅವಕಾಶ ಕಲ್ಪಿಸುವ ವಿಕಸಿತ ಭಾರತದ ಕನಸನ್ನು ನನಸು ಮಾಡುವ ದೂರದೃಷ್ಟಿ, ಉಚಿತ ಆಹಾರ ಧಾನ್ಯವನ್ನು ಬರುವ ಐದು ವರ್ಷಕ್ಕೆ ವಿಸ್ತರಿರುವುದು ಶ್ಲಾಘನೀಯ.

ಟಿ.ಎ. ಶರವಣ, ವಿಧಾನ ಪರಿಷತ್ ಜೆಡಿಎಸ್ ಸದಸ್ಯ

ಪಿಂಚಣಿ ಅದಾಲತ್ ಇದೇ 31ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಬಾಹ್ಯಾಕಾಶ ಇಲಾಖೆಯ ಲಿಕ್ವಿಡ್ ಪ್ರೊಪಲ್ಷನ್ ಸಿಸ್ಟಮ್ಸ್ ಸೆಂಟರ್‌ನಿಂದ (ಎಲ್‌ಪಿಎಸ್‌ಸಿ) ಜುಲೈ 31ಕ್ಕೆ ಎಲ್‌ಪಿಎಸ್‌ಸಿಯ ನೇತ್ರಾವತಿ ಸಮ್ಮೇಳನ ಸಭಾಂಗಣದಲ್ಲಿ ಪಿಂಚಣಿ ಅದಾಲತ್ ನಡೆಯಲಿದೆ. ಬೆಂಗಳೂರು ಎಲ್‌ಪಿಎಸ್‌ಸಿ ಪಿಂಚಣಿದಾರರು, ಕುಟುಂಬ ಪಿಂಚಣಿದಾರರು ಯಾವುದೇ ದೂರು ಅಥವಾ ಮನವಿಗಳನ್ನು ಜುಲೈ 25ರೊಳಗೆ ಅಂಚೆ ಅಥವಾ sado@lpscb.gov.in ಮೂಲಕ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಹಿಂಸಾತ್ಮಕ ರೂಪ ತಾಳಿದ ರೈತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ತಾಲ್ಲೂಕಿನ ಚನ್ನರಾಯಪಟ್ಟಣ ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿಯು ಮಂಗಳವಾರ ಪಟ್ಟಣದ ಸಂತೆ ಮೈದಾನದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆ ಪೊಲೀಸರ ಅತಿಕ್ರಮದ ಫಲವಾಗಿ ಹಿಂಸಾತ್ಮಕ ರೂಪಕ್ಕೆ ತಿರುಗಿತು.

ಕಳೆದ 843 ದಿನಗಳಿಂದ ಚನ್ನರಾಯಪಟ್ಟಣದ 13 ಹಳ್ಳಿಗಳ 1,777 ಎಕರೆ ಕೃಷಿ ಭೂಮಿಯನ್ನು ಕೈಗಾರಿಕಾ ಉದ್ದೇಶಕ್ಕೆ ಸ್ವಾಧೀನ ಪಡಿಸಿಕೊಳ್ಳುವುದನ್ನು ವಿರೋಧಿಸಿ ಇಲ್ಲಿನ ರೈತರು ನಡೆಸುತ್ತಿರುವ ಹೋರಾಟದ ಭಾಗವಾಗಿ ಪಟ್ಟಣದಲ್ಲಿ ಪ್ರತಿಭಟನಾ ಸಭೆ ನಂತರ ಮುಖ್ಯಮಂತ್ರಿ ಮನೆಗೆ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿತ್ತು.

ರಾಜ್ಯ ಮಟ್ಟದ ವಿವಿಧ ಹೋರಾಟಗಾರರು ಭಾಗಿಯಾಗಿದ್ದ ಸಭೆ ನಂತರ ಬೆಂಗಳೂರು ಮಾರ್ಗವಾಗಿ ರೈತರು ಕಾಲ್ನಡಿಗೆ ಜಾಥಾ ಪ್ರಾರಂಭಿಸಲು ಹೊರಟಾಗ ಪೊಲೀಸರು ನಾಕಾಬಂದಿ ಹಾಕಿ, ರೈತರನ್ನು ಬಂಧಿಸಿದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ರೈತ ಹೋರಾಟಗಾರ್ತಿ ಚುಕ್ಕಿ ನಂಜುಂಡಸ್ವಾಮಿ, ‘ದೀರ್ಘ ಕಾಲದಿಂದ ಚನ್ನರಾಯಪಟ್ಟಣ ಹೋಬಳಿ ರೈತರು ಧರಣಿ ನಡೆಸುತ್ತಿದ್ದಾರೆ. ಯಾವುದೇ ಸರ್ಕಾರ ಅವರ ಬೆಂಬಲಕ್ಕೆ ಬಾರದೆ ಬಂಡವಾಳಶಾಹಿಗಳ ಪರವಹಿಸಿ ರೈತರನ್ನು ಕಡೆಗಣಿಸುತ್ತಿರುವುದು ಪ್ರಜಾಪ್ರಭುತ್ವದ ಅಧಃಪತನದಂತಿದೆ‘ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಆಂಜನೇಯ ರೆಡ್ಡಿ, ದಸಂಸ ಮುಖಂಡ ಮಾವಳ್ಳಿ ಶಂಕರ್, ಸಿರಿಮನೆ ನಾಗರಾಜ್, ಪ್ರಾಂತ್ಯ ರೈತ ಸಂಘದ ಯಶವಂತ್, ಜಿ.ಜಿ.ಹಳ್ಳಿ ನಾರಾಯಣಸ್ವಾಮಿ, ಕೆ.ಟಿ.ಗಂಗಾಧರ್, ನಲ್ಲಪ್ಪನಹಳ್ಳಿ ನಂಜಪ್ಪ, ಪ್ರಮೋದ್, ರಮೇಶ್, ನಂಜೇಗೌಡ ಇದ್ದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-72/878/2024-25 ದಿನಾಂಕ: 23.07.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ (ಶೈಕ್ಷಣಿಕ) ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮಾತಾ ವಿದ್ಯಾ ಕೇಂದ್ರ ಟ್ರಸ್ಟ್ (ರಿ) ರವರ ಪರವಾಗಿ ಅಧ್ಯಕ್ಷರು, ಶ್ರೀ ಬಿ.ಎಸ್. ಪುಟ್ಟರಾಜು	ಬೆಂಗಳೂರು ಉತ್ತರ	ದಾಸನ ಪುರ	ಮಾಚೋಹಳ್ಳಿ	191 (ಹಳೇ ಸ.ನಂ. 84)	3-30	ವ್ಯವಸಾಯ	ವಾಣಿಜ್ಯ (ಶೈಕ್ಷಣಿಕ)
	ಒಟ್ಟು					3-30		

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ಶೈಕ್ಷಣಿಕ ಸಂಸ್ಥೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಆಧುನಿಕ ಶೈಕ್ಷಣಿಕ ಸೌಲಭ್ಯವುಳ್ಳ ಉತ್ತಮ ಶೈಕ್ಷಣಿಕ ಸಂಸ್ಥೆ ದೊರೆತಂತಾಗುತ್ತದೆ. ಈ ಜಮೀನಿನಲ್ಲಿ ಶೈಕ್ಷಣಿಕ ಸಂಸ್ಥೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಶಿಕ್ಷಕರಿಗೆ ಉತ್ತಮ ಉದ್ಯೋಗ ದೊರಕುತ್ತದೆ. ಈ ಜಮೀನಿನಲ್ಲಿ ಶೈಕ್ಷಣಿಕ ಸಂಸ್ಥೆ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ ಮತ್ತು ಈ ಸ್ಥಳದಲ್ಲಿ ಜಮೀನಿನಲ್ಲಿ ಶೈಕ್ಷಣಿಕ ಸಂಸ್ಥೆ ತೆರೆಯುವುದರಿಂದ ಕಛೇರಿಯಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳು ಉತ್ತಮ ಇತರರಿಗೆ ಉತ್ತಮ ಕೌಶಲ್ಯ ಉದ್ಯೋಗಗಳು ದೊರೆತಂತಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನುಗಳನ್ನು ‘ವ್ಯವಸಾಯ ವಲಯ’ ದಿಂದ ‘ವಾಣಿಜ್ಯ (ಶೈಕ್ಷಣಿಕ) ಉಪಯೋಗಕ್ಕೆ’ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

DIAGEO India

ನೋಂದಾಯಿತ ಕಛೇರಿ: ‘ಯುಬಿ ಟವರ್’, # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001.
ಫೋನ್: +91 80 2221 0705; ಫ್ಯಾಕ್ಸ್: +91 80 3985 6862
ಇಮೇಲ್: contactus.India@diageo.com ವೆಬ್‌ಸೈಟ್: www.diageoindia.com
ಕಾರ್ಪೊರೇಟ್ ಐಡೆಂಟಿಟಿ ನಂಬರ್: L01551KA1999PLC024991

ಜೂನ್ 30, 2024ಕ್ಕೆ ಅಂತ್ಯವಾದ ತ್ರೈಮಾಸಿಕ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶಗಳ ವಿವರಣೆ

(ರೂ. ಕೋಟಿಗಳಲ್ಲಿ ಪ್ರತಿ ಷೇರಿನ ಡೇಟಾದ ಆದಾಯವನ್ನು ಹೊರತುಪಡಿಸಿ)

ಕ್ರ. ಸಂಖ್ಯೆ	ವಿವರಗಳು	ಪ್ರತ್ಯೇಕಿತ			ಕ್ರೋಢೀಕೃತ		
		ಜೂನ್ 30, 2024 ಕೊನೆಗೊಂಡ ತ್ರೈಮಾಸಿಕ	ಜೂನ್ 30, 2023 ಕೊನೆಗೊಂಡ ತ್ರೈಮಾಸಿಕ	ಮಾರ್ಚ್ 31, 2024 ವರ್ಷಕ್ಕೆ ಕೊನೆಗೊಂಡ	ಜೂನ್ 30, 2024 ಕೊನೆಗೊಂಡ ತ್ರೈಮಾಸಿಕ	ಜೂನ್ 30, 2023 ಕೊನೆಗೊಂಡ ತ್ರೈಮಾಸಿಕ	ಮಾರ್ಚ್ 31, 2024 ವರ್ಷಕ್ಕೆ ಕೊನೆಗೊಂಡ
		ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸಿದ	ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸಿದ
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	5,829	5,313	25,389	6,238	5,808	26,018
2.	ಅವಧಿಗೆ ನಿವ್ವಳ ಲಾಭ (ಅಸಾಧಾರಣ ವಸ್ತುಗಳು ಮತ್ತು ತೆರಿಗೆಯ ಮೊದಲು)	403	337	1,703	653	656	1,874
3.	ತೆರಿಗೆಗೆ ಮುಂಚಿನ ಅವಧಿಯ ನಿವ್ವಳ ಲಾಭ (ಅಸಾಧಾರಣ ವಸ್ತುಗಳ ನಂತರ)	403	320	1,686	653	639	1,857
4.	ತೆರಿಗೆಯ ನಂತರದ ಅವಧಿಗೆ ನಿವ್ವಳ ಲಾಭ (ಅಸಾಧಾರಣ ವಸ್ತುಗಳ ನಂತರ)	299	238	1,312	485	477	1,408
5.	ಅವಧಿಯ ಒಟ್ಟು ಸಮಗ್ರ ಆದಾಯ	299	238	1,310	484	476	1,405
6.	ಈಕ್ವಿಟಿ ಷೇರು ಬಂಡವಾಳ	145	145	145	145	145	145
7.	ಇತರ ಈಕ್ವಿಟಿ			6,818			6,976
8.	ಗಳಿಕೆ/ (ನಷ್ಟ) ಪ್ರತಿ ಷೇರಿಗೆ (INR 2/- ಪ್ರತಿ) [ಕೆಳಗೆ ಟಿಪ್ಪಣಿ (ಬಿ) ಗಮನಿಸಿ] ಮೂಲ ಮತ್ತು ದುರ್ಬಲ (INR ಗಳಲ್ಲಿ)	4.11	3.27	18.04	6.83	6.71	19.83

ಟಿಪ್ಪಣಿಗಳು

ಎ) ಮೇಲಿನದು 2015ರ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ನಿಯಂತ್ರಣಗಳ (ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳನ್ನು ಪಟ್ಟಿ ಮಾಡುವುದು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಫೈಲ್ ಮಾಡಿರುವ ಫಲಿತಾಂಶಗಳ ವಿವರವಾದ ನಮೂನೆಯ ಸಾರಂಶವಾಗಿದೆ. ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.bseindia.com ಮತ್ತು www.nseindia.com ಮತ್ತು ಕಂಪನಿಯ ವೆಬ್‌ಸೈಟ್ www.diageoindia.com ನಲ್ಲಿ ಲಭ್ಯವಿರುತ್ತದೆ.

ಬಿ) ಏಕೀಕೃತ ಹಣಕಾಸು ಅಡಿಯಲ್ಲಿ ವರ್ಷದ ಬಾಕಿ ಇರುವ ಈಕ್ವಿಟಿ ಷೇರುಗಳ ಸರಾಸರಿ ಸಂಖ್ಯೆಯನ್ನು ಲೆಕ್ಕಹಾಕುವಲ್ಲಿ, ಕಂಪನಿಯು ಯುಎಸ್‌ಎಲ್ ಬೆನಿಫಿಟ್ ಟ್ರಸ್ಟ್‌ನಲ್ಲಿ ಹೊಂದಿರುವ (ಕಂಪೆನಿಯ ಏಕೈಕ ಫಲಾನುಭವಿಯಾಗಿರುವ) ಸ್ವಂತ ಷೇರುಗಳನ್ನು ಕಡಿಮೆ ಮಾಡಿದೆ.

ನಿರ್ದೇಶಕರ ಮಂಡಳಿಯ ನಿಮಿತ್ತ ಮತ್ತು ಅವರ ಪರವಾಗಿ
ಸಹಿ/-
ಹಿನಾ ನಾಗರಾಜನ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ಸ್ಥಳ : ಲಂಡನ್
ದಿನಾಂಕ : ಜುಲೈ 23, 2024

ಬಜೆಟ್: ಪ್ರತಿಕ್ರಿಯೆಗಳು....

ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಸರ್ಕಾರ ಮಹತ್ವಾಕಾಂಕ್ಷೆಗಳನ್ನು ಹೊಂದಿದೆ. ಕೇಂದ್ರ ಬಜೆಟ್ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಮಿಶ್ರ ದೃಷ್ಟಿಕೋನವನ್ನು ನೀಡುತ್ತದೆ. ನಮ್ಮ ಉದ್ಯಮದ ಪ್ರಮುಖ ಸವಾಲುಗಳನ್ನು ಎದುರಿಸಲು ಬಜೆಟ್‌ನಲ್ಲಿ ಪರಿಹಾರಗಳಿಲ್ಲ. ನಮ್ಮ ಕ್ಷೇತ್ರಕ್ಕೆ ಹೆಚ್ಚಿನ ಬೆಂಬಲ ನೀಡಬೇಕಾಗಿತ್ತು.

ಅಮರ್ ಮೈಸೂರು, ಅಧ್ಯಕ್ಷ, ಕ್ರೆಡೈ ಬೆಂಗಳೂರು

ಕೇಂದ್ರದ ಬಜೆಟ್‌ನಲ್ಲಿ ಶಿಕ್ಷಣ, ಉದ್ಯೋಗ ಮತ್ತು ಕೌಶಲಕ್ಕಾಗಿ ₹1.48 ಲಕ್ಷ ಕೋಟಿ ಘೋಷಿಸುವ ಮೂಲಕ ಈ ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಅಮೂಲ್ಯವಾದ ಪ್ರಾಯೋಗಿಕ ಕೆಲಸದ ಅನುಭವ ಮತ್ತು ಕೌಶಲ ಅಭಿವೃದ್ಧಿಯ ಅವಕಾಶಗಳೊಂದಿಗೆ ಒಂದು ಕೋಟಿ ಯುವಜನರಿಗೆ 'ಇಂಟರ್ನ್‌ಶಿಪ್' ಒದಗಿಸುವ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಈ ಬಜೆಟ್ ಆರ್ಥಿಕ ಬೆಳವಣಿಗೆ ಮತ್ತು ಸಾಮಾಜಿಕ ಪ್ರಗತಿಯನ್ನು ಖಾತ್ರಿಪಡಿಸುತ್ತದೆ.

ಪಿ. ಶ್ಯಾಮರಾಜು, ಕುಲಪತಿ, ರೇವಾ ವಿಶ್ವವಿದ್ಯಾಲಯ

ಮಹಿಳೆಯರು ಸ್ವ-ಉದ್ಯೋಗಿಗಳಾಗಿ ಹೊರಹೊಮ್ಮಲು ಮತ್ತಷ್ಟು ಸದಾವಕಾಶಗಳನ್ನು 2024-25ನೇ ಸಾಲಿನ ಕೇಂದ್ರ ಬಜೆಟ್ ಒದಗಿಸಲಿದೆ. ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಅನುಕೂಲವಾಗುವ ಯೋಜನೆಗಳಿಗೆ ₹3 ಲಕ್ಷ ಕೋಟಿ ಅನುದಾನ ಮೀಸಲಿಡಲಾಗಿದೆ.

ನಂದಿನಿ ಎಸ್.ವಿ., ಗೃಹಿಣಿ, ಹೆಸರಘಟ್ಟ

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ ಬಜೆಟ್ ಮತ್ತೊಮ್ಮೆ ಮಧ್ಯಮ ವರ್ಗದವರಿಗೆ ನಿರಾಸೆ ತಂದಿದೆ. ಬಜೆಟ್‌ನಲ್ಲಿ ಕೆಲವು ಪ್ರಯೋಜನಗಳಿದ್ದರೂ, ಆಯ್ದ ರಾಜ್ಯಗಳಿಗೆ ಮಾತ್ರ (ಆಂಧ್ರಪ್ರದೇಶ, ಬಿಹಾರ) ಹೆಚ್ಚು ಒಲವು ತೋರಿದಂತೆ ಕಾಣುತ್ತಿದೆ. ಹಾಗೂ ಇತರೆ ರಾಜ್ಯಗಳನ್ನು ನಿರ್ಲಕ್ಷಿಸಲಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೀಗೆ ಮಾಡುವುದು ಸರಿಯೇ?

ರಾಶಿ ಶೆಟ್ಟಿ, ಅಂಧ್ರಹಳ್ಳಿ

ಹೆಚ್ಚು ಸಂಬಳ ಪಡೆಯುವ ಉದ್ಯೋಗಿಗಳಿಗೆ 2024-25ರ ಕೇಂದ್ರ ಬಜೆಟ್‌ನಲ್ಲಿ ತೆರಿಗೆ ನೀತಿಯನ್ನು ಪರಿಷ್ಕರಿಸಿರುವುದು ಸಂತಸ ತಂದಿದೆ. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ (ಎಂಎಸ್‌ಎಂಇ) ಉದ್ಯೋಗ ಮತ್ತು ಬೆಂಬಲ ನೀಡಿರುವುದು ಆಶಾದಾಯಕವಾಗಿದೆ.

ಎ.ಎ. ವೈಷ್ಣವಿ, ವಿದ್ಯಾರ್ಥಿನಿ, ನೆಲಗದರನಹಳ್ಳಿ



ಕೃಷಿ, ಉದ್ಯೋಗ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳ ಮೇಲೆ ಬಜೆಟ್ ಗಮನಹರಿಸಿದೆ. ಮೂಲಸೌಕರ್ಯ ಹಾಗೂ ಸಹಜ ಕೃಷಿಗೆ ಬೆಂಬಲ ನೀಡಿರುವುದೇ ಇದಕ್ಕೆ ಸಾಕ್ಷಿ. ಇದರಿಂದ, ಉತ್ಪಾದಕತೆ ಹೆಚ್ಚಲಿದೆ. ತೆರಿಗೆ ನೀತಿಯಲ್ಲಿನ ಬದಲಾವಣೆ ಹೂಡಿಕೆದಾರರಲ್ಲಿ ಕಳವಳ ಉಂಟು ಮಾಡಿದರೂ, ಇದರಿಂದ, ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿಯಾಗುವ ಸಾಧ್ಯತೆ ಇದೆ.

ಜೆನಿ ಸುಸಾನ್, ಯಶವಂತಪುರ

ಮಹಿಳೆಯರಿಗೆ ಅತಿ ಹೆಚ್ಚು ಅನುಕೂಲ ಮಾಡಿಕೊಡುವ 'ನಾರಿಶಕ್ತಿ' ಬಜೆಟ್ ಇದು. ಪ್ರಮುಖ ಆದ್ಯತಾ ವಲಯಗಳಾದ ಶಿಕ್ಷಣ, ಉದ್ಯೋಗ ಮತ್ತು ಕೌಶಲಕ್ಕೆ ಆದ್ಯತೆ ನೀಡಲಾಗಿದೆ. ಜೊತೆಗೆ, ಸಂಶೋಧನೆ, ಆವಿಷ್ಕಾರ ಕ್ಷೇತ್ರಗಳಿಗೆ ಒತ್ತು ನೀಡಲಾಗಿದೆ.

ಹೇಮಾ, ಉಪನ್ಯಾಸಕಿ, ವಿಜಯನಗರ

'ಆರ್‌ಎಸ್‌ಎಸ್ ಸೇರ್ಪಡೆಗೆ ಅವಕಾಶ ಸಲ್ಲ'

ಪ್ರಜಾವಾಣಿ ವಾರ್ತೆ

ಎಚ್‌. ಸಿ. ಮಹದೇವಪ್ಪ

ಬೆಂಗಳೂರು: 'ಯಾರೋ ಕೆಲವು ಮನುವಾದಿಗಳನ್ನು ಮೆಚ್ಚಿಸಲು ಸರ್ಕಾರಿ ನೌಕರರಿಗೆ ಆರ್‌ಎಸ್‌ಎಸ್ (ರಾಷ್ಟ್ರೀಯ ಸ್ವಯಂ ಸೇವಕ ಸಂಘ) ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಿರುವ ಕೇಂದ್ರ ಸರ್ಕಾರದ ನಿಲುವು ಅತ್ಯಂತ ಅಪಾಯಕಾರಿ' ಎಂದು ಸಚಿವ ಡಾ. ಎಚ್‌.ಸಿ.ಮಹದೇವಪ್ಪ ಹೇಳಿದರು.

'ಸರ್ಕಾರ ಎಂಬುದು ಸದಾ ನ್ಯಾಯ ಪ್ರಜ್ಞೆಯನ್ನು ಇಟ್ಟುಕೊಂಡು ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿ ಪ್ರಜಾಪ್ರಭುತ್ವದ ಆಶಯಕ್ಕೆ ಅನುಸಾರವಾಗಿ ಕೆಲಸ ಮಾಡಬೇಕು. ಸರ್ಕಾರದ ಭಾಗವಾಗಿ ಕೆಲಸ ಮಾಡುವ ಸರ್ಕಾರಿ ನೌಕರರೂ ಪ್ರಜಾಪ್ರಭುತ್ವದ ಪ್ರಕ್ರಿಯೆಯ ಭಾಗವಾಗಿರುತ್ತಾರೆ. ಹೀಗಿರುವಾಗ ನೀವು ಇಂಥದ್ದೇ ತಿನ್ನಬೇಕು, ಇಂತಹದ್ದೇ ಉಡುಪು ಧರಿಸಬೇಕು, ಹೀಗೇ ಬದುಕಬೇಕು ಮತ್ತು ಹೇಳುವ ರೀತಿಯಲ್ಲೇ ಬದುಕಬೇಕು ಎನ್ನುವ ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಸರ್ಕಾರಿ ನೌಕರರು ಭಾಗವಹಿಸುವುದು ಯಾವ ರೀತಿಯಲ್ಲೂ ಸರಿಯಲ್ಲ' ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಎಲ್ಲರನ್ನೂ ಕಾಪಾಡುವ ಸಂವಿಧಾನದ ರೀತಿ ನೀತಿಗಳನ್ನು ಗಾಳಿಗೆ ತೂರಿ ಜೀವಿಸಲು ಆರ್‌ಎಸ್‌ಎಸ್ ಇಚ್ಛಿಸುತ್ತದೆ. ಅಂತಹ ಸಂಸ್ಥೆಯ ಚಟುವಟಿಕೆಗಳಲ್ಲಿ ನೌಕರರು ಭಾಗವಹಿಸಲು ಅವಕಾಶ ಕಲ್ಪಿಸುವ ಆದೇಶವನ್ನು ಕೇಂದ್ರ ಸರ್ಕಾರ ಕೂಡಲೇ ರದ್ದುಪಡಿಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಆ.31ರಿಂದ ಸಂಗೀತ ಸ್ಪರ್ಧೆ

ಬೆಂಗಳೂರು: ಬೆಂಗಳೂರು ಗಾಯನ ಸಮಾಜವು ಆಗಸ್ಟ್ 31ರಿಂದ ಸೆಪ್ಟೆಂಬರ್ 3ರವರೆಗೆ ವಾರ್ಷಿಕ ಸಂಗೀತ ಸ್ಪರ್ಧೆ ಹಮ್ಮಿಕೊಂಡಿದೆ.

8ರಿಂದ 21 ವರ್ಷದೊಳಗಿನವರು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ವಿವಿಧ ವಿಭಾಗಗಳಲ್ಲಿ ನಡೆಯುವ ಈ ಸ್ಪರ್ಧೆಗೆ ಆಸಕ್ತರು ಆ.18ರೊಳಗೆ ಹೆಸರು ನೋಂದಾಯಿಸಬೇಕು ಎಂದು ಸಮಾಜದ ಅಧ್ಯಕ್ಷ ಎಂ.ಆರ್.ವಿ. ಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವರಕ್ಕೆ: www.gayanasamaja.org

ತುಮಕೂರಿನ ನ್ಯಾಯಾಲಯದಿಂದ ಆದೇಶ • ಡಿಫಾಲ್ಟ್ ಜಾಮೀನು ಕೋರಿದ್ದ ಆರೋಪಿ

ಶ್ರೀಕಿ, ಖಂಡೇಲ್ ವಾಲಾಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹುಕೋಟಿ ಮೌಲ್ಯದ ಬಿಟ್ ಕಾಯಿನ್ ಕಳವು ಪ್ರಕರಣದ ಆರೋಪಿಗಳಾಗಿ ನ್ಯಾಯಾಂಗ ಬಂಧನದಲ್ಲಿರುವ ಶ್ರೀಕಿ ಅಲಿಯಾಸ್ ಶ್ರೀಕೃಷ್ಣ ರಮೇಶ್ ಹಾಗೂ ರಾಬಿನ್ ಖಂಡೇಲ್ ವಾಲಾಗೆ ತುಮಕೂರು ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಶ್ರೀಕಿ ಮತ್ತು ರಾಬಿನ್ ಖಂಡೇಲ್ ವಾಲಾ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ತುಮಕೂರಿನ 1ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ಎನ್. ಸುಬ್ರಹ್ಮಣ್ಯ ಪ್ರಕಟಿಸಿದ್ದು, ಷರತ್ತುಬದ್ಧ ಜಾಮೀನು ಮಂಜೂರು ಮಾಡಿ ಆದೇಶಿಸಿದ್ದಾರೆ.

'ಪ್ರಕರಣದ 1ನೇ ಆರೋಪಿ ಶ್ರೀಕಿ ₹50 ಸಾವಿರ ಮೊತ್ತದ ಬಾಂಡ್ ಹಾಗೂ ಒಬ್ಬರ ಶ್ಯೂರಿಟಿ ನೀಡಬೇಕು ಮತ್ತು 2ನೇ ಆರೋಪಿ ರಾಬಿನ್ ಖಂಡೇಲ್ ವಾಲಾ ₹25 ಸಾವಿರ ಮೊತ್ತದ ನಗದು ಶ್ಯೂರಿಟಿ ನೀಡಬೇಕು' ಎಂಬುದೂ ಸೇರಿದಂತೆ ಇತರೆ ಷರತ್ತುಗಳನ್ನು ವಿಧಿಸಲಾಗಿದೆ.

ಶ್ರೀಕಿ

ಕೋರಿಕೆ ಏನಿತ್ತು?: 'ಸರ್ಕಾರ ನಮ್ಮ ವಿರುದ್ಧ ಕೋಕಾ (ಕರ್ನಾಟಕ ಸಂಘಟಿತ ಅಪರಾಧ ತಡೆ) ಕಾಯ್ದೆ-2000 ಅನ್ನು ಅನ್ವಯಿಸಿತ್ತು. ಇತ್ತೀಚೆಗಷ್ಟೇ ಹೈಕೋರ್ಟ್, ಕೋಕಾ ಕಾಯ್ದೆ ಹೇರಿ ಹೊರಡಿಸಲಾಗಿದ್ದ ಆದೇಶವನ್ನು ರದ್ದುಪಡಿಸಿದೆ. ಅಂತೆಯೇ, ಪ್ರಕರಣದ ತನಿಖೆ ನಡೆಸಿರುವ, ವಿಶೇಷ ತನಿಖಾ ತಂಡವು (ಎಸ್‌ಐಟಿ) 60 ದಿನಗಳ ಒಳಗಾಗಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಬೇಕಿತ್ತು. ಆದರೆ, 60 ದಿನ ಕಳೆದರೂ ಯಾವುದೇ (ಪ್ರಾಥಮಿಕ ಅಥವಾ ಅಂತಿಮ ವರದಿ) ದೋಷಾರೋಪ ಪಟ್ಟಿಯನ್ನು ಸಲ್ಲಿಸಿಲ್ಲ. ಹೀಗಾಗಿ, ಸುಪ್ರೀಂ ಕೋರ್ಟ್ ತೀರ್ಪುಗಳ ಪ್ರಕಾರ ನಾವು ಕಾನೂನುಬದ್ಧ (ಡಿಫಾಲ್ಟ್) ಜಾಮೀನು ಪಡೆಯಲು ಅರ್ಹರಾಗಿದ್ದು, ನಮಗೆ ಜಾಮೀನು ಮಂಜೂರು ಮಾಡಬೇಕು' ಎಂದು ಅರ್ಜಿದಾರರು ಕೋರಿದ್ದರು.

ಬಹುಕೋಟಿ ಮೌಲ್ಯದ ಬಿಟ್ ಕಾಯಿನ್ ಕಳವು ಮಾಡಿ ಅವುಗಳನ್ನು ಪಶ್ಚಿಮ ಬಂಗಾಳದ ತನ್ನ ಸಹಚರ ರಾಬಿನ್ ಖಂಡೇಲ್ ವಾಲಾಗೆ ವರ್ಗಾವಣೆ ಮಾಡಿದ ಆರೋಪವನ್ನು ಶ್ರೀಕಿ ಎದುರಿಸುತ್ತಿದ್ದಾರೆ.

ಶ್ರೀಕಿ ಮತ್ತು ರಾಬಿನ್ ಇಬ್ಬರೂ ಸದ್ಯ ಬೆಂಗಳೂರಿನ ಪರಪ್ಪನ ಅಗ್ರಹಾರದ ಜೈಲಿನಲ್ಲಿ ವಿಚಾರಣಾಧೀನ ಕೈದಿಗಳಾಗಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ಶ್ರೀಕಿ ಪರವಾಗಿ ಹೈಕೋರ್ಟ್‌ನ ಹಿರಿಯ ವಕೀಲ ಎಂ. ಅರುಣ್ ಶ್ಯಾಮ್ ಹಾಗೂ ರಾಬಿನ್ ಖಂಡೇಲ್ ವಾಲಾ ಪರವಾಗಿ ವಕೀಲ ಎಸ್.ಸುನಿಲ್ ಕುಮಾರ್ ವಾದ ಮಂಡಿಸಿದ್ದರು.

ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷೆಯನ್ನು ಶೀಘ್ರವೇ ನಡೆಸಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದ್ದಾರೆ.

ಅಧಿಕಾರಿಗಳೊಂದಿಗೆ ಮಂಗಳವಾರ ಸಭೆ ನಡೆಸಿದ ಮುಖ್ಯ ಆಯುಕ್ತರು, 'ಶಿಕ್ಷಣದಿಂದ ಯಾವ ಹಂತದಲ್ಲಿ ಮಕ್ಕಳು ದೂರ ಉಳಿದಿದ್ದಾರೆ, ಕಾರಣಗಳೇನು ಎಂಬ ಮಾಹಿತಿಗಳುಳ್ಳ ಸಮೀಕ್ಷೆ ನಡೆಸಿ, ಆದಷ್ಟು ಬೇಗ ವರದಿ ಸಲ್ಲಿಸಬೇಕು' ಎಂದರು.

ನಗರದ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚಲು ಕೂಡಲೇ ಕ್ರಮ ಕೈಗೊಳ್ಳಬೇಕು. ಜೊತೆಗೆ ನಗರದಲ್ಲಿ ಪರಿಣಾಮಕಾರಿಯಾಗಿ ರಸ್ತೆ ಗುಂಡಿಗಳನ್ನು ಮುಚ್ಚುವ ಸಲುವಾಗಿ ಅಭಿವೃದ್ಧಿಪಡಿಸುತ್ತಿರುವ ತಂತ್ರಾಂಶವನ್ನು ಅನಾವರಣ ಮಾಡಬೇಕು ಎಂದು ಸೂಚಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಸಂಗ್ರಹದ ವಿಚಾರದಲ್ಲಿ ವಲಯ ಆಯುಕ್ತರು, ವಲಯ ಜಂಟಿ ಆಯುಕ್ತರು ಹೆಚ್ಚು ಆಸ್ತಿ ತೆರಿಗೆಯನ್ನು ಸಂಗ್ರಹಿಸಬೇಕು. ಒಟಿಎಸ್ ಯೋಜನೆಯ ಅಡಿ ಬರುವ ಬಾಕಿ ಆಸ್ತಿ ಸುಸ್ತಿದಾರರಿಗೆ ಕೂಡಲೆ ತೆರಿಗೆ ಪಾವತಿಸಲು ಸೂಚಿಸಬೇಕು. ನ್ಯಾಯಾಲಯದಲ್ಲಿ ಇರುವ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡು ಆಸ್ತಿ ತೆರಿಗೆಯನ್ನು ಪಾವತಿಸಿಕೊಳ್ಳಬೇಕು ಎಂದರು.

ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಸುರಳ್ಕರ್ ವಿಕಾಸ್ ಕಿಶೋರ್, ಶಿವಾನಂದ್ ಕಲ್ಕೆರೆ, ಅವಿನಾಶ್ ಮೆನನ್ ರಾಜೇಂದ್ರನ್, ವಲಯ ಆಯುಕ್ತರಾದ ವಿನೋತ್ ಪ್ರಿಯಾ, ಡಾ. ಆರ್.ಎಲ್ ದೀಪಕ್, ಸ್ನೇಹಲ್, ಕರೀಗೌಡ, ಪ್ರೀತಿ ಗೆಹ್ಲೋಟ್, ಶಿವಾನಂದ್ ಕಾಪಶಿ, ರಮೇಶ್, ರಮ್ಯಾ ಉಪಸ್ಥಿತರಿದ್ದರು.

ಸಾಂದರ್ಭಿಕ ಚಿತ್ರ

ಡೆಂಗಿ ನಿಯಂತ್ರಣಕ್ಕೆ ಕ್ರಮ: ನಗರದಲ್ಲಿ ಪ್ರತಿನಿತ್ಯ ಸರಾಸರಿ 150 ಡೆಂಗಿ ಪ್ರಕರಣಗಳು ಕಂಡುಬರುತ್ತಿದ್ದು, ಜುಲೈ 1ರಿಂದ 22ರವರೆಗೆ 3,304 ಪ್ರಕರಣಗಳು ವರದಿಯಾಗಿವೆ.

ಡೆಂಗಿ ನಿಯಂತ್ರಣಕ್ಕಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ತುಷಾರ್ ಗಿರಿನಾಥ್ ಸೂಚಿಸಿದರು.

ವಲಯ ಆಯುಕ್ತರು ಡೆಂಗಿ ನಿಯಂತ್ರಿಸಲು ಆರೋಗ್ಯ ವಿಭಾಗದ ಅಧಿಕಾರಿಗಳ ಜೊತೆ ಪ್ರತಿನಿತ್ಯ ಸಭೆ ನಡೆಸಿ ಮೇಲ್ವಿಚಾರಣೆ ಮಾಡಬೇಕು. ಹೆಚ್ಚು ಪ್ರಕರಣಗಳು ಕಂಡುಬರುವಲ್ಲಿ ನಾಗರಿಕರಿಗೆ ಡೀಟ್ ಕ್ರೀಮ್ ಹಾಗೂ ನೀಮ್ ಆಯಿಲ್ ವಿತರಿಸಬೇಕು. ಜೊತೆಗೆ ಸೊಳ್ಳೆ ಉತ್ಪತ್ತಿ ತಾಣಗಳನ್ನು ನಾಶಪಡಿಸಲು ಫಾಗಿಂಗ್ ಹಾಗೂ ಔಷಧ ಸಿಂಪಡಣೆ ಮಾಡಬೇಕು ಎಂದರು.

ಆಯಾ ವಲಯದ ಹಿರಿಯ ಅಧಿಕಾರಿಗಳು ಆಸ್ಪತ್ರೆಗಳಿಗೆ ಭೇಟಿ ನೀಡಿ ಪರೀಕ್ಷೆ, ಚಿಕಿತ್ಸೆಗೆ ವಿಧಿಸುತ್ತಿರುವ ದರ ಮತ್ತು ಡೆಂಗಿ ದೃಢಪಟ್ಟ ಪ್ರಕರಣಗಳ ಸಂಖ್ಯೆ ಕುರಿತು ಪರಿಶೀಲಿಸಬೇಕು. ಸರ್ಕಾರಿ ಆದೇಶವನ್ನು ಉಲ್ಲಂಘಿಸಿ ಹೆಚ್ಚು ದರ ವಿಧಿಸುವ ಆಸ್ಪತ್ರೆಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಐಸ್‌ಕ್ರೀಂ ಆಸೆ ತೋರಿಸಿ ಮಗು ಮೇಲೆ ಅತ್ಯಾಚಾರ, ಕೊಲೆ

ಪ್ರಜಾವಾಣಿ ವಾರ್ತೆ

ಮಾಗಡಿ (ರಾಮನಗರ): ನಾಲ್ಕು ದಿನದ ಹಿಂದೆ ಕಾಣೆಯಾಗಿದ್ದ ಪಟ್ಟಣದ ನಾಲ್ಕು ವರ್ಷದ ಹೆಣ್ಣು ಮಗು ತಾಲ್ಲೂಕಿನ ತಿಪ್ಪಗೊಂಡನಹಳ್ಳಿ ಬಳಿ ಸೋಮವಾರ ರಾತ್ರಿ ಶವವಾಗಿ ಪತ್ತೆಯಾಗಿದೆ.

ಆರೋಪಿ ಬೆಂಗಳೂರಿನ ಕೆಂಗೇರಿಯ ಇರ್ಫಾನ್ ಖಾನ್ (34) ಎಂಬಾತನನ್ನು ಮಾಗಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆತನ ವಿರುದ್ಧ ಅಪಹರಣ, ಕೊಲೆ ಹಾಗೂ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಆರೋಪಿಯು ಐಸ್‌ಕ್ರೀಂ ಕೊಡಿಸುವ ನೆಪದಲ್ಲಿ ಮಗುವನ್ನು ಅಪಹರಿಸಿ ಅತ್ಯಾಚಾರ ವೆಸಗಿ ಕೊಲೆ ಮಾಡಿರುವುದು ಗೊತ್ತಾಗಿದೆ.

'ಕೆರೆ ಸಂರಕ್ಷಣೆಗೆ ಅಗತ್ಯ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿಪ್ಪಗೊಂಡನಹಳ್ಳಿ ಮತ್ತು ಹೆಸರಘಟ್ಟ ಕೆರೆಗಳನ್ನು ಸಂರಕ್ಷಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಎಸ್.ಆರ್.ವಿಶ್ವನಾಥ್ ಅವರ ಪ್ರಶ್ನೆಗೆ ಉತ್ತರಿಸಿ ಈ ವಿಷಯ ತಿಳಿಸಿದರು.

'ವಿಧಾನಮಂಡಲ ಅಧಿವೇಶನ ಮುಗಿದ ಬಳಿಕ ಈ ಎರಡೂ ಕೆರೆಗಳಿಗೆ ಭೇಟಿ ನೀಡೋಣ. ಬಹಳ ವರ್ಷಗಳ ಹಿಂದೆ ಈ ಕೆರೆಗಳಿಗೆ ಭೇಟಿ ನೀಡಿದ್ದೆ. ಈ ಕೆರೆಗಳ ಒತ್ತುವರಿ ಬಹಳ ಕಡಿಮೆ ಇದೆ ಎಂಬ ವರದಿ ಇದೆ. ಅದನ್ನು ಎಲ್ಲರೂ ಸೇರಿ ರಕ್ಷಿಸೋಣ' ಎಂದು ಶಿವಕುಮಾರ್ ತಿಳಿಸಿದರು.

'ಎಲ್ಲೆಲ್ಲಿ ನೀರನ್ನು ಸಂಸ್ಕರಿಸಲು ಅವಕಾಶ ಇದೆಯೋ ಅಲ್ಲೆಲ್ಲಾ ನೀರನ್ನು ಸಂಸ್ಕರಿಸಿ ಕೆರೆಗೆ ಹರಿಸಲಾಗುವುದು. ಕೆರೆಯಲ್ಲಿ ನೀರಿಲ್ಲದಿದ್ದರೆ ಒತ್ತುವರಿ ಮಾಡಿಕೊಳ್ಳುತ್ತಾರೆ. ಇದೇ ತಿಂಗಳ 27ರ ಸಭೆಯಲ್ಲಿ ಕೆರೆ ಸಂರಕ್ಷಣೆ ಬಗ್ಗೆ ಚರ್ಚೆ ಮಾಡಿ, ನಿಮ್ಮ ಅಭಿಪ್ರಾಯ ತಿಳಿಸಿ. ಯಾರೇ ಒತ್ತುವರಿ ಮಾಡಿದ್ದರೂ ನಿರ್ದಾಕ್ಷಿಣ್ಯವಾಗಿ ತೆರವು ಮಾಡೋಣ. ನಾವೆಲ್ಲ ಒಟ್ಟಿಗೆ ಸೇರಿ ಈ ಕೆಲಸ ಮಾಡೋಣ' ಎಂದರು.

ಹೆಸರಘಟ್ಟ ಕೆರೆಗೆ ನೀರು ಹರಿಸುವ ಕಾಮಗಾರಿ 2025ರ ಅಕ್ಟೋಬರ್ ವೇಳೆಗೆ ಮುಗಿಸುವ ಗುರಿ ಹೊಂದಲಾಗಿದೆ. ದೊಡ್ಡಬಳ್ಳಾಪುರ ತಾಲ್ಲೂಕಿನ ಮಾಡೇಶ್ವರ ಗ್ರಾಮದ ಬಳಿ ನಿರ್ಮಾಣ ಮಾಡಿರುವ ವಿತರಣಾ ತೊಟ್ಟಿಯಿಂದ ಕೆರೆಗೆ ನೀರು ಹರಿಸಲಾಗುವುದು ಎಂದು ಶಿವಕುಮಾರ್ ತಿಳಿಸಿದರು.

ನೀವು ಒಬ್ಬ ಜವಾಬ್ದಾರಿಯುತ ತೆರಿಗೆದಾತ ಆಗಿರುವುದಕ್ಕೆ ಧನ್ಯವಾದಗಳು

ನಿಮ್ಮ ರಿಫಂಡ್ ಇನ್ನೂ ಬಾಕಿ ಇದೆಯೆ?

ಹಾಗಿದ್ದರೆ ದಯವಿಟ್ಟು ಗಮನಿಸಿ:
- ರಿಫಂಡ್ ಕ್ಲೇಮ್‌ಗಳು ಪರಿಶೀಲನಾ ತಪಾಸಣೆಗಳ ನಿಬಂಧನೆಗೊಳಪಡುತ್ತವೆ, ಆದ್ದರಿಂದ ವಿಳಂಬವಾಗಿರಬಹುದು.
- ನಿಖರವಾಗಿ ಐಟಿಆರ್ ಫೈಲ್ ಮಾಡುವುದರಿಂದ ರಿಫಂಡ್‌ಗಳು ತ್ವರಿತವಾಗಿ ಆಗುತ್ತವೆ.
- ಸಲ್ಲಿಸಿರುವ ಕ್ಲೇಮ್‌ಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ, ಪರಿಷ್ಕೃತ ರಿಟರ್ನ್ ಸಲ್ಲಿಸಬೇಕಾಗುತ್ತದೆ.

ಮಾಡಬೇಕಾದವು
- ನಿಯಮಿತವಾಗಿ ಇ-ಫೈಲಿಂಗ್ ಪೋರ್ಟಲ್‌ಗೆ ಭೇಟಿ ನೀಡಿ.
- ನಿಮ್ಮ ಐಟಿಆರ್ ಸಂಸ್ಕರಣೆಗೆ ಸಂಬಂಧಿತ ಮಾಹಿತಿಗಳನ್ನು ಪರಿಶೀಲಿಸುತ್ತಿರಿ.
- ಮಾಹಿತಿಯ ಆಧಾರದಲ್ಲಿ ಪ್ರಾಮಾಣಿಕವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಿರಿ.
- ನೀವು ಸಲ್ಲಿಸುವ ಎಲ್ಲಾ ಕ್ಲೇಮ್‌ಗಳು ಸರಿಯಾಗಿವೆ ಮತ್ತು ನಿಖರವಾಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳಿ.

ಮಾಡಬಾರದವು
- ದೋಷಪೂರಿತ ಟಿಡಿಎಸ್ ಮೊತ್ತ ಕ್ಲೇಮ್ ಮಾಡದಿರಿ.
- ನಿಮ್ಮ ಆದಾಯವನ್ನು ಅಂಡರ್ ರಿಪೋರ್ಟ್ ಮಾಡದಿರಿ.
- ಹೆಚ್ಚುವರಿ ಕಡಿತಗಳನ್ನು ತೋರಿಸದಿರಿ.
- ಬೋಗಸ್ ವೆಚ್ಚಗಳಿಗೆ ಕ್ಲೇಮ್ ಸಲ್ಲಿಸದಿರಿ.

ದಯವಿಟ್ಟು https://www.incometax.gov.in/iec/foportal/ ಲಿಂಕ್ ಬಳಸಿಕೊಂಡು ಇ-ಫೈಲಿಂಗ್ ಪೋರ್ಟಲ್‌ಗೆ ಲಾಗಾನ್ ಮಾಡಿರಿ ಮತ್ತು ಪ್ರಾಸೆಸಿಂಗ್ ಸ್ಟೇಟಸ್‌ಗಾಗಿ 'ಡ್ಯಾಶ್‌ಬೋರ್ಡ್'ಗೆ ಭೇಟಿ ಕೊಡಿ ಹಾಗೂ ಕ್ಲೋಸರ್‌ಗೆ ಸಂಬಂಧಿತ ಯಾವುದೇ ಕ್ರಮ ಬಾಕಿ ಇದೆಯೆ ಎಂಬುದನ್ನು ತಿಳಿಯಲು Pendig Action>> Worklist section ಗೆ ಭೇಟಿ ಕೊಡಿ.

cbc 15401/13/0003/2425

ಸುಳ್ಳು ಅಥವಾ ಬೋಗಸ್ ಕ್ಲೇಮ್ ಫೈಲ್ ಮಾಡುವುದು ಶಿಕ್ಷಾರ್ಹ ಅಪರಾಧವಾಗಿದೆ.

Income Tax Department
Central Board of Director Taxes

For more information, Scan QR Code

For further assistance, please visit the website of the Income tax Department: www.incometax.gov.in

@IncomeTaxIndia | incometaxindia.official | Income Tax India Official | @incometaxindiaofficial | incometaxindia.gov.in

On the Occasion of Varamahalakshmi Presenting

ಸಿಲ್ಕ್ ಇಂಡಿಯಾ
New Crafts Silk India®
2024
Exhibition & Sale

An opulent show of Ethnic & Traditional Silk, Cotton Handloom Products made by master 100 Weavers from all over India

Silk Saree | Suits | Dress Material | Stoles | Dupattas | Kurtas
Kurties | Pure & Probable Silk | Tussar Silk | Shanthipur Silk

SINDHOOR CONVENTION CENTER
15th Cross, Sarakki, 1st Phase, J.P. Nagar Ring Road, Bengaluru
From : 19th to 28th Jul. 2024
Full A/c

Products on Display - Orissa : Sambhalpuri Ikkat Silk Saree, Bihar : Oragnic Tassar Silk Sarees, Suit & Stoles, Assam : Muga & Eri Silk Sarees, Karnataka : Creap Silk, Georgette Silk, Arini Silk & Printed Sarees, Tamilnadu : Kanjeevaram Silk Sarees & Designer Fancy Sarees, Andra Pradesh : Dharmavara, Uppada, Gadwal, Mangalagiri & Pochampalli Sarees, Uttar Pradesh : Mulbari Silk, Jamdani, Jamawar Silk Sarees & Chiffon Silk, Maharashtra : Designer Dress materials, Chhatisgarh : Exclusive Raw Silk Sarees, Kosa Silk, Tassar Suit & Duppatta, Madhya Pradesh : Maheswari, Chanderi Silk Sarees & Suit, West Bengal : Baluchari, Dhaka Masli, Gicha Sarees, Boutique Sarees, Kantha Sarees, Zordoshi, Jammu & Kashmir : Chinon Silk, Tady Silk Printed Sarees, Pashmina Shawls & Suit, Rajasthan : Kota Silk, Hand Block Print Dress & Sarees, Punjab : Fulkari Dress and many more...

DISCOUNT UP TO 50%
5 Days Only
Don't miss it...

Time : 10.30 am - 8.30 pm Call: 08850902824
All Credit & Debit Cards Accepted
Entry & Parking Free



ಮನೋರೋಗಗಳ ಚಿಕಿತ್ಸೆಯಲ್ಲಿ 'ವಿ ಆರ್'

ಡಾ. ಶಿವಾನಂದ ಬಿ. ಹಿರೇಮಠ

ಇತ್ತೀಚಿಗೆ 'ವರ್ಚುವಲ್ ರಿಯಾಲಿಟಿ' (Virtual Reality) ಎಂಬ ಪದ ಎಲ್ಲರಲ್ಲೂ ಆಸಕ್ತಿಯನ್ನು ಕೆರಳಿಸುತ್ತಿದೆ. ರಕ್ಷಣೆ, ಬಾಹ್ಯಾಕಾಶ, ವಿಜ್ಞಾನ, ಶಿಕ್ಷಣ, ಆರೋಗ್ಯ, ಕಲೆ, ಮನೋರಂಜನೆ – ಹೀಗೆ 'ವರ್ಚುವಲ್ ರಿಯಾಲಿಟಿ'ಯನ್ನು (ವಿಆರ್) ಅಳವಡಿಕೆ ಮಾಡಿಕೊಳ್ಳದ ಕ್ಷೇತ್ರಗಳೇ ಇಲ್ಲ.

ವರ್ಚುವಲ್ ರಿಯಾಲಿಟಿ ಎಂದರೇನು?

ಸರಳವಾಗಿ ಇದರ ಅರ್ಥ 'ವಾಸ್ತವಕ್ಕೆ ಸನಿಹ'ವಾದದ್ದು. 3ಡಿ ಕ್ಯಾಮೆರಾ ಅಥವಾ ಅನಿಮೇಶನ್‌ಗಳ ಮೂಲಕ ಅನೇಕ ಸಾಫ್ಟ್‌ವೇರ್‌ಗಳ ಸಹಾಯದಿಂದ ನಿಜಜೀವನದ ಪರಿಸರ, ಸನ್ನಿವೇಶಗಳನ್ನು ವಾಸ್ತವಕ್ಕೆ ಸನಿಹವಾಗುವಷ್ಟು ನೈಜ ಎನ್ನಿಸುವಂತೆ ಸೃಷ್ಟಿಸಲಾಗುತ್ತದೆ. ಈ ಸನ್ನಿವೇಶಗಳನ್ನು 'ವಿಆರ್' ಹೆಡ್ ಸೆಟ್ ಇಲ್ಲವೇ ವಿಶೇಷವಾದ ಕನ್ನಡಕದಿಂದ ವೀಕ್ಷಿಸಬಹುದು. ಜೊತೆಗೆ ಆ ಸನ್ನಿವೇಶದೊಂದಿಗೆ ವ್ಯವಹರಿಸಬಹುದು (interact). ಇಂಥ ವೀಕ್ಷಣೆಯಲ್ಲಿ ನಾವು ನಿಜಜೀವನದ ಆ ಪರಿಸರದಲ್ಲಿಯೇ ಮುಳುಗಿದಂತಾಗುತ್ತದೆ.

1987ರಲ್ಲಿ ಮೊದಲಿಗೆ 'ವರ್ಚುವಲ್ ರಿಯಾಲಿಟಿ' ಎಂಬ ಪದದ ಬಳಕೆ ಮಾಡಿದ್ದು ಜರೋನ್ ಲ್ಯಾನಿಯರ್. ಆದರೆ 1957ರಲ್ಲಿಯೇ ಮಾರ್ಟಿನ್ ಹೇಲಿಗ್ ಎಂಬ ಛಾಯಾಚಿತ್ರಗ್ರಾಹಕ, ಮನುಷ್ಯನ ಎಲ್ಲ ಇಂದ್ರಿಯಗಳನ್ನು ಉತ್ತೇಜಿಸಿದರೆ ಮಾತ್ರ ಚಿತ್ರಕಥೆಗಳನ್ನು ಪರಿಣಾಮಕಾರಿಯಾಗಿ ಬಿತ್ತರಿಸಬಹುದೆಂದು ಪ್ರತಿಪಾದಿಸಿದ್ದರು. ಈ ಸಿದ್ಧಾಂತದ ಆಧಾರದ ಮೇಲೆಯೇ ಇಂದಿನ 'ವಿಆರ್'ನ ಆವಿಷ್ಕಾರವಾದದ್ದು. ಕಳೆದ 5-6 ದಶಕಗಳಿಂದ ಆವಿಷ್ಕಾರಗಳು ನಡೆಯುತ್ತಿದ್ದು, 'ವಿಆರ್' ಎಂಬುದು ಅತ್ಯಾಧುನಿಕ ಹಾಗೂ ಪ್ರಬಲ ಸಾಧನವಾಗಿ ಹೊರಹೊಮ್ಮುತ್ತಿದೆ.

ವೈದ್ಯಕೀಯ ಕ್ಷೇತ್ರದಲ್ಲಿ

ವೈದ್ಯಕೀಯ ಕ್ಷೇತ್ರದಲ್ಲಿ ವಿಆರ್ ತಂತ್ರಜ್ಞಾನವನ್ನು ತ್ವರಿತವಾಗಿ ಅಳವಡಿಸಿಕೊಳ್ಳಲಾಗುತ್ತಿದೆ. ವೈದ್ಯಕೀಯ ಶಿಕ್ಷಣದಲ್ಲಿ ಅನೇಕ ಕ್ಲಿಷ್ಟಕರ ವಿಷಯಗಳ ಬಗ್ಗೆ ಸುಲಭವಾಗಿ ತರಬೇತಿ ನೀಡಲು, ಅನೇಕ ಶಸ್ತ್ರಚಿಕಿತ್ಸೆ, ಅನೇಕ ಚಿಕಿತ್ಸಾ ವಿಧಾನಗಳನ್ನು ವಿಆರ್ ಉಪಯೋಗಿಸಿ ಮನದಟ್ಟಾಗುವಂತೆ ಕಲಿಸಬಹುದು. ನವೀನ ಚಿಕಿತ್ಸಾ ಪದ್ಧತಿಗಳ ಬಗ್ಗೆ ನಿಖರವಾಗದ ತರಬೇತಿ ನೀಡಲು ಬಳಸಲಾಗುತ್ತಿದೆ. ಇತ್ತೀಚಿಗೆ, ಮಾನಸಿಕ ಆರೋಗ್ಯ ಚಿಕಿತ್ಸೆಯಲ್ಲಿ ವಿಆರ್ ಕ್ರಾಂತಿಯನ್ನು ಉಂಟುಮಾಡುತ್ತಿದೆ. ಪರಿಣತ ಮಾನವಸಂಪನ್ಮೂಲದ ಕೊರತೆಯಿರುವ ನಮ್ಮ ದೇಶದಲ್ಲಿ, ಮನೋರೋಗಗಳ ಚಿಕಿತ್ಸೆಯನ್ನು ಅವಶ್ಯಕತೆಯಿರುವವರಿಗೆ ತಲಿಪಿಸುವಲ್ಲಿ ವಿಆರ್ ಅತ್ಯಂತ ಸಹಾಯಕಾರಿಯಾಗಿದೆ.

ವಿಆರ್ ಸಹಾಯದ ಚಿಕಿತ್ಸೆಯನ್ನು ಅನೇಕ ಮನೋವ್ಯಾಧಿಗಳನ್ನು ನಿವಾರಿಸಲು ಉಪಯೋಗಿಸಬಹುದು. ಆತಂಕದ ಕಾಯಿಲೆ (Anxiety), ಫೋಬಿಯ (Phobia), ಗೀಳುರೋಗ (OCD), ಪಿಟಿಎಸ್‌ಡಿ (PTSD), ವ್ಯಸನಗಳು, ಒತ್ತಡ, ಸ್ಕಿಜೋಫ್ರೇನಿಯಾ ಮುಂತಾದ ಕಾಯಿಲೆಗಳ ಚಿಕಿತ್ಸೆಯಲ್ಲಿ ವಿಆರ್ ಸಹಕಾರಿಯಾಗಿದೆ.

ವಿಆರ್‌ನಿಂದ ಕೃತಕ ಚಿಕಿತ್ಸಾ ಸನ್ನಿವೇಶಗಳನ್ನು ಸೃಷ್ಟಿಸುವುದರಿಂದ, ಚಿಕಿತ್ಸೆಯನ್ನು ಪರಿಣಾಮಕಾರಿಯಾಗಿ ಮಾಡಬಹುದು. ಮನೋವೈಜ್ಞಾನಿಕ ಚಿಕಿತ್ಸೆಯನ್ನು ಪರಿಣತ ಮನಃಶಾಸ್ತ್ರಜ್ಞರು ನೀಡುತ್ತಾರೆ. ಆದರೆ ಭಾರತದಂಥ ವಿಶಾಲ ಹಾಗೂ ಜನಸಂದಣಿಯಿರುವ ದೇಶದಲ್ಲಿ, ಅಂಥ ಪರಿಣತರು ತುಂಬ ಕಡಿಮೆಯಿರುವುದರಿಂದ, ಅವಶ್ಯಕತೆಯಿರುವ ಪ್ರತಿಯೊಬ್ಬರಿಗೂ ವೈಯಕ್ತಿಕವಾಗಿ ಮನೋಚಿಕಿತ್ಸೆಯನ್ನು ತಲುಪಿಸುವುದು ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ, ವಿಆರ್ ತಂತ್ರಜ್ಞಾನ ಬಳಕೆಯಿಂದ ದೂರದ ಸ್ಥಳದಲ್ಲಿರುವವರಿಗೂ ಚಿಕಿತ್ಸೆಯನ್ನು ತಲುಪಿಸಬಹುದು.

'ಆಕ್ರೋಫೋಬಿಯ' (Acrophobia) ಅಥವಾ ಎತ್ತರದ ವಿಪರೀತ ಭಯಕ್ಕೆ 'ಸಿಸ್ಟೆಮ್ಯಾಟಿಕ್ ಡಿಸೆನ್ಸಿಟೈಸೆಶನ್' (Systematic Desensitization) ಎಂಬ ಚಿಕಿತ್ಸಾ ಪದ್ಧತಿಯನ್ನು ನೀಡಲಾಗುತ್ತದೆ. ಈ ಚಿಕಿತ್ಸೆಯಲ್ಲಿ ವ್ಯಕ್ತಿಯನ್ನು ಪದೇ ಪದೇ ಎತ್ತರದಲ್ಲಿ ನಿಲ್ಲಿಸಿ ಅಥವಾ ಅಂತಹ ಸನ್ನಿವೇಶವನ್ನು ಕಲ್ಪನೆ ಮಾಡಿಕೊಂಡು, ಎತ್ತರದ ಭಯವನ್ನು ನಿಯಂತ್ರಿಸುವ ಚಿಕಿತ್ಸೆಯನ್ನು ನೀಡಲಾಗುತ್ತದೆ. ಆದರೆ ವ್ಯಾಸ್ತವವಾಗಿ ಎತ್ತರದ ಸನ್ನಿವೇಶವನ್ನು ಸೃಜಿಸುವುದು ಅಥವಾ ಪ್ರತಿ ಸಲ ಕಲ್ಪಿಸಿಕೊಳ್ಳುವುದು ಎಲ್ಲರಿಗೂ ಸಾಧ್ಯವಾಗಲಿಕ್ಕಿಲ್ಲ. ಹೀಗಾಗಿ, ಇಂತಹ ಸಂದರ್ಭದಲ್ಲಿ ವಿಆರ್ ತಂತ್ರಜ್ಞಾನವು ಸಹಾಯಕ್ಕೆ ಬರುತ್ತದೆ. ಅದೇ ರೀತಿ ಹಾವು, ಹಲ್ಲಿ ಇನ್ನೂ ಅನೇಕ ಸರಿಸೃಪಗಳ ಫೋಬಿಯದಲ್ಲೂ ವಿಆರ್ ಅನ್ನು ಬಳಸಬಹುದು.

ಇದೇ ರೀತಿಯಾಗಿ ಗೀಳು ರೋಗವಿದ್ದವರಲ್ಲಿ ಅತಿಯಾದ ಸ್ವಚ್ಛತೆಯ ಗೀಳು ಇದ್ದರೆ, ವಿಆರ್ ಸಹಾಯದಿಂದ ಕೊಳೆಯಾಗಿರುವ ಪರಿಸ್ಥಿತಿಯನ್ನು ಸೃಜಿಸಿ, 'ಎಕ್ಸ್‌ಪೋಷರ್ ಆ್ಯಂಡ್ ರೆಸ್ಪಾನ್ಸ್ ಪ್ರಿವೆನ್‌ಶನ್' (ERP) ಎಂಬ ಚಿಕಿತ್ಸೆಯನ್ನು ನೀಡಲಾಗುತ್ತದೆ.

ಯುದ್ಧ, ಅಪಘಾತ ಅಥವಾ ಆಘಾತಕಾರಿಯಾಗುವಂತಹ ಸನ್ನಿವೇಶಗಳನ್ನು ಎದುರಿಸುವುದರಿಂದ, 'ಪಿಟಿಎಸ್‌ಡಿ' ಎಂಬ ಬೇನೆ ಉಂಟಾಗುತ್ತದೆ. ಈ ಕಾಯಿಲೆಯಲ್ಲಿ ಆಘಾತಕಾರಿ ಪರಿಸ್ಥಿತಿಯನ್ನು ವಿಆರ್ ಸಹಾಯದಿಂದ ಮರುಸೃಷ್ಟಿಸಿ, ಸಿಬಿಟಿ, ಈಆರ್‌ಪಿ ಇಲ್ಲವೇ ಈಎಮ್‌ಡಿಆರ್ (EMDR) ಅನ್ನು ನೀಡಲಾಗುತ್ತದೆ. ಇದೇ ರೀತಿ ದುಶ್ಚಟಗಳ ನಿವಾರಣೆಗೆ, ಸ್ಕಿಜೋಫ್ರೇನಿಯಾದ ಕೆಲವು ಲಕ್ಷಣಗಳು (Hallucinations), ಖಿನ್ನತೆಗಳ ಚಿಕಿತ್ಸೆಯಲ್ಲಿ ವಿಆರ್ ಸಹಕಾರಿಯಾಗಿದೆ.

ಮಾನಸಿಕ ಆರೋಗ್ಯದ ವೃದ್ಧಿಗಾಗಿಯೂ ಸಹ ವಿಆರ್ ಅನ್ನು ಉಪಯೋಗಿಸಬಹುದು. ದೈನಂದಿನ ಒತ್ತಡ ನಿವಾರಣೆಗೆ, ಅನೇಕ ಉಸಿರಾಟದ ವ್ಯಾಯಾಮಗಳು, ಧ್ಯಾನ, ಯೋಗ, ಪ್ರಾಣಾಯಾಮ ಮುಂತಾದ ವಿಶ್ರಾಂತಿದಾಯಕ ಪ್ರಕ್ರಿಯೆಗಳನ್ನು ವಿಆರ್‌ನ ಸಹಾಯದಿಂದ ಅಳವಡಿಸಿಕೊಂಡು ಒತ್ತಡ ನಿರ್ವಹಣೆಯನ್ನು ಮಾಡಿಕೊಳ್ಳಬಹುದು.

ತಂತ್ರಜ್ಞಾನವನ್ನು ಬಳಸಿ, ಅವಶ್ಯಕತೆಯಿರುವ ಪ್ರತಿಯೊಬ್ಬರಿಗೂ ಆರೋಗ್ಯದ ಚಿಕಿತ್ಸಾವಿಧಾನಗಳನ್ನು ತಲುಪಿಸುವ ಪ್ರಯತ್ನ ನಡೆಯಬೇಕಿದೆ. ಹೊರದೇಶಗಳಲ್ಲಿ ಈಗಾಗಲೇ ಸಂಶೋಧನೆಗಳು ನಡೆದು, ವಿಆರ್ ಆಧಾರಿತ ಚಿಕಿತ್ಸಾ ತಂತ್ರಜ್ಞಾನವು ಮಾರುಕಟ್ಟೆಗೆ ಬಂದಿವೆ. ಆದರೆ ನಮ್ಮ ದೇಶದಲ್ಲಿ, ಸ್ವನಿರ್ಮಿತ ತಂತ್ರಜ್ಞಾನವು ಇನ್ನೂ ಅಂಬೆಗಾಲಿಡುತ್ತಿದೆ. ಅವಶ್ಯಕತೆ ಗಣನೀಯವಾಗಿರುವುದರಿಂದ ಹೆಚ್ಚು ಹೆಚ್ಚು ಸ್ಟಾರ್ಟ್ ಆ್ಯಪ್‌ಗಳು ಈ ನಿಟ್ಟಿನಲ್ಲಿ ಶ್ರಮಿಸಬೇಕಿದೆ. ಇತ್ತೀಚಿಗೆ 'ಅವಿಕಾ' (Avika) ಎಂಬ ಸಂಸ್ಥೆಯು, ವಿಆರ್ ಆಧಾರಿತ ಚಿಕಿತ್ಸಾಪದ್ಧತಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ❖

ಇದು ಬುದ್ಧಿವಂತ ಮಣ್ಣು!

ನೇಸರ ಕಾಡನಕುಪ್ಪೆ

ಕೃಷಿಯಲ್ಲಿ ಮಣ್ಣಿನ ಬಳಕೆ ಮತ್ತು ಮಹತ್ವ ಬಹಳ ಹಿರಿದು. ಫಲವತ್ತಾದ ಮಣ್ಣು ಸಿಗುವುದು ಕೃಷಿಗೆ ಬೇಕಿರುವ ಪ್ರಾಥಮಿಕ ಅಗತ್ಯ. ಬಳಿಕ ಅಗತ್ಯ ನೀರು, ಗೊಬ್ಬರ, ತಳಿ, ಆರೈಕೆ ಮುಂತಾದವು ಯಶಸ್ವಿ ಕೃಷಿಗೆ ಕಾರಣವಾಗುತ್ತವೆ. ಆದರೆ, ವಿಜ್ಞಾನಿಗಳು ಈ ಪ್ರಾಥಮಿಕ ಅಗತ್ಯಗಳಿಗೆ ಸೆಡ್ಡು ಹೊಡೆಯುವಂತೆ 'ಬುದ್ಧಿವಂತ ಮಣ್ಣ'ನ್ನು ಶೋಧಿಸಿದ್ದಾರೆ. ಈ ಮಣ್ಣು ತನಗೆ ತಾನೇ ಯೋಚಿಸುತ್ತ, ಫಲವತ್ತಾದ ಉತ್ಪನ್ನವನ್ನು ನೀಡುವತ್ತ ಕಾರ್ಯನಿರ್ವಹಿಸುತ್ತದೆ!

ಹೌದು, ಇದು ಬುದ್ಧಿವಂತ ಮಣ್ಣು. ಈ ಮಣ್ಣು ಬುದ್ಧಿವಂತ ಮಾತ್ರವೇ ಅಲ್ಲ, ಹಣದ ಮಿತವ್ಯಯಿಯೂ ಆಗಿದೆ. ಹೇಗೆಂದರೆ, ಸಸಿಗಳ ಪೋಷಣೆಗೆ ಬೇಕಿರುವ ಗಾಳಿಯಲ್ಲಿ ವಿಪುಲವಾಗಿ ಸಿಗುವ ನೀರನ್ನು ಹೀರಿಕೊಂಡು ಅದನ್ನು ಸಸಿಗೆ ತಲುಪಿಸುವ ಕೆಲಸವನ್ನೂ ಈ ಮಣ್ಣು ಮಾಡುತ್ತದೆ. ಜೊತೆಗೆ, ಗೊಬ್ಬರನ್ನು ಇಂತಿಷ್ಟೇ ಪ್ರಮಾಣದಲ್ಲಿ ಸಸಿಗೆ ಒದಗಿಸಿ ಸಸಿಯ ಬೆಳವಣಿಗೆಯನ್ನು ವೈಜ್ಞಾನಿಕವಾಗಿ ಆಗುವಂತೆ ನೋಡಿಕೊಳ್ಳುವ ಜಾಣ್ಮೆಯೂ ಈ ಮಣ್ಣಿಗೆ ಇದೆ.

ವಿಶ್ವಪ್ರಸಿದ್ಧ 'ಎಸಿಎಸ್ ಮಟೀರಿಯಲ್ಸ್ ಲೆಟರ್ಸ್' ವೈಜ್ಞಾನಿಕ ನಿಯತಕಾಲಿಕೆಯಲ್ಲಿ ಈ ಸಂಶೋಧನೆ ಪ್ರಕಟವಾಗಿದೆ. ಅಮೆರಿಕದ ಟೆಕ್ಸಾಸ್ 'ಮಟೀರಿಯಲ್ಸ್ ಇನ್‌ಸ್ಟಿಟ್ಯೂಟ್ ಮತ್ತು ಕಾಕ್ರೆಸ್ ಸ್ಕೂಲ್ ಆಫ್ ಎಂಜಿನಿಯರಿಂಗ್'ನ ವಾಕರ್ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ವಿಜ್ಞಾನಿಗಳಾದ ಪ್ರೊ. ಯೂ, ಜುಂಗ್‌ಜೂನ್ ಪಾರ್ಕ್, ವೀಕ್ಸಿನ್ ಗಾನ್ ಹಾಗೂ ಶೂಕ್ಸಿನ್ ಲೀ ಜಂಟಿಯಾಗಿ ಈ ಬುದ್ಧಿವಂತ ಮಣ್ಣನ್ನು ಆವಿಷ್ಕರಿಸಿದ್ದಾರೆ.

ಏನಿದು ಸಂಶೋಧನೆ?

ಪ್ರಪಂಚದಲ್ಲಿ ಕೃಷಿಗೆ ಶೇ 70ರಷ್ಟು ಶುದ್ಧನೀರನ್ನು ಬಳಸಿಕೊಳ್ಳಲಾಗುತ್ತಿದೆ. ಅಲ್ಲದೇ, ಶೇ 95ರಷ್ಟು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕೃಷಿ ಉತ್ಪನ್ನಗಳ ಬೇಡಿಕೆ ದಿನೇ ದಿನೇ ಹೆಚ್ಚುತ್ತಲೇ ಇದೆ. ಇದಕ್ಕೆ ಹೆಚ್ಚುತ್ತಿರುವ ಜನಸಂಖ್ಯೆ ಮುಖ್ಯ ಕಾರಣ. ಇದರ ಪರಿಣಾಮವಾಗಿ ಶುದ್ಧನೀರಿನ ಬೇಡಿಕೆ ಹೆಚ್ಚುತ್ತಿದ್ದು, ಪೂರೈಕೆ ಕಷ್ಟವಾಗುತ್ತಿದೆ. ಇದಕ್ಕೆ ಪರಿಹಾರವೆಂದರೆ ಪರ್ಯಾಯ ತಂತ್ರಜ್ಞಾನವೊಂದನ್ನು ಕಂಡುಕೊಳ್ಳುವುದು. ಸ್ವಾಭಾವಿಕವಾಗಿಯೇ ಮಣ್ಣಿಗೆ ಗಾಳಿಯಲ್ಲಿನ ನೀರನ್ನು ಹೀರಿಕೊಳ್ಳುವ ಗುಣ ಇರುತ್ತದೆ. ಈ ಗುಣವನ್ನೇ ಸುಧಾರಿಸಿ ಕೃಷಿಗೆ ಬೇಕಿರುವ ಶೇ 90ರಷ್ಟು ನೀರನ್ನು ಗಾಳಿಯಿಂದಲೇ ಹೀರಿಕೊಳ್ಳುವಂತೆ ಈ ಸಂಶೋಧನೆ ನಡೆದಿದೆ.

ಕೆಲವು ಸಸ್ಯತಳಿಗಳು ಹೆಚ್ಚು ನೀರನ್ನು ಬಯಸುತ್ತವೆ. ಉದಾಹರಣೆಗೆ ಭತ್ತ, ಗೋಧಿ, ಕಬ್ಬು ಮುಂತಾದವು. ಇವುಗಳಿಗೆ ಗದ್ದೆಗಳನ್ನು ರಚಿಸಿ ವಿಪುಲವಾಗಿ ನೀರನ್ನು ಒದಗಿಸಬೇಕಾಗುತ್ತದೆ. ರಾಗಿ ಮಾದರಿಯ ಏಕದಳ ಧಾನ್ಯಗಳು, ಬೇಳೆ ಮಾದರಿಯ ದ್ವಿದಳ ಧಾನ್ಯಗಳಿಗೆ ಕಡಿಮೆ ನೀರು ಇದ್ದರೂ ಸಾಕಾದೀತು. ಆದರೆ, ದೊಡ್ಡ ಜನಸಂಖ್ಯೆಗೆ ಎದುರಾಗುವ ಹಸಿವಿನ ಸಮಸ್ಯೆಯನ್ನು ನೀಗಿಸಬೇಕಾದರೆ ಹೆಚ್ಚು ನೀರು ಬಯಸುವ ತಳಿಗಳಿಗೂ ಅಗತ್ಯ ನೀರನ್ನು ಕೊಡಲೇಬೇಕು. ಇದನ್ನು ಮುಖ್ಯವಾಗಿ ಮನಸಿನಲ್ಲಿ ಇರಿಸಿಕೊಂಡು ಈ ಸಂಶೋಧನೆಯನ್ನು ಮಾಡಲಾಗಿದೆ ಎಂದು ವಿಜ್ಞಾನಿ ಪ್ರೊ. ಯೂ ಹೇಳಿದ್ದಾರೆ.

ಇದಕ್ಕಾಗಿ 'ಹೈಡ್ರೋಜೆಲ್' ಎಂಬ ಕೃತಕ ಉತ್ಪನ್ನವೊಂದನ್ನು ಶೋಧಿಸಿದ್ದು, ಅದನ್ನು ಮಣ್ಣಿಗೆ ಬೆರೆಸಲಾಗಿದೆ. ಹೆಸರೇ ಹೇಳುವಂತೆ ಈ ವಸ್ತುವಿನಲ್ಲಿ ನೀರಿನ ಅಂಶ ಇರುತ್ತದೆ. ಅಂದರೆ, ವಾತಾವರಣದಲ್ಲಿನ ನೀರಿನ ಆವಿಯನ್ನು ಇದು ಹೀರಿಕೊಂಡು ತನ್ನಲ್ಲಿ ಶೇಖರಿಸಿಕೊಳ್ಳುತ್ತದೆ. ಜೊತೆಗೆ, ತಾನು ಇರುವ ಮಣ್ಣಿನಲ್ಲಿ ನಿಧಾನವಾಗಿ ತನ್ನಲ್ಲಿ ಶೇಖರವಾಗಿರುವ ನೀರನ್ನು ನಿಧಾನವಾಗಿ ಹೊರ ಸೂಸುತ್ತದೆ. ಇದರಿಂದ ಮಣ್ಣು ಒದ್ದೆಯಾಗಿರುತ್ತದೆ ಎಂದು ತಮ್ಮ ಸಂಶೋಧನೆಯ ಕಾರ್ಯವೈಖರಿಯನ್ನು ಪ್ರೊ. ಯೂ ವಿವರಿಸಿದ್ದಾರೆ.

ಇದಿಷ್ಟೇ ಈ ಮಣ್ಣಿನ ಗುಣವಲ್ಲ. ಈ 'ಹೈಡ್ರೋಜೆಲ್'ಗಳಲ್ಲಿ 'ನ್ಯಾನೋ ರೋಬೋಟ್'ಗಳನ್ನು ಇರಿಸಲಾಗಿರುತ್ತದೆ. ಇವು ಕೇವಲ ನೀರು ಮಾತ್ರವೇ ಅಲ್ಲದೇ, ಮಣ್ಣಿನಲ್ಲಿ ಬೆರೆಸುವ ರಾಸಾಯನಿಕಗಳನ್ನು ಎಷ್ಟು ಪ್ರಮಾಣದಲ್ಲಿ, ಎಷ್ಟು ಅವಧಿಯಲ್ಲಿ ಸಸಿಗಳಿಗೆ ತಲುಪಿಸಬೇಕು ಎಂಬುದನ್ನು ನಿರ್ಧರಿಸುತ್ತವೆ. ಜೊತೆಗೆ, ಸಸಿಯ ಬೆಳವಣಿಗೆಯ ಮೇಲೆ ನಿಗಾ ವಹಿಸಿ ಅಗತ್ಯವುಳ್ಳ ಪೋಷಕಾಂಶಗಳನ್ನು ತಲುಪಿಸುತ್ತವೆ. ಸಸಿಯ ಬೇರುಗಳೊಂದಿಗೆ ನೇರವಾಗಿ ಸಂಪರ್ಕ ಹೊಂದುವ ಈ ನ್ಯಾನೋ ರೋಬೋಟ್‌ಗಳು ಸಸಿಯ ಸಂಪೂರ್ಣ ಆರೋಗ್ಯವನ್ನು ಸದಾ ಕಾಲ ಪರೀಕ್ಷಿಸುತ್ತಿರುತ್ತವೆ.

ಹಾಗಾಗಿ, ರೈತರು ನೀಡುವ ರಾಸಾಯನಿಕ ಅಥವಾ ಸಾವಯವ ಕೀಟನಾಶಕಗಳನ್ನೂ ಇವು ಜಾಣ್ಮೆಯಿಂದ ಬಳಸುವ ಕೆಲಸವನ್ನು ಮಾಡುತ್ತವೆ. ರೈತನ ಕಣ್ತಪ್ಪು ಅಥವಾ ಕೈತಪ್ಪಿನಿಂದ ಅಗತ್ಯಕ್ಕಿಂತ ಹೆಚ್ಚು ಕೀಟನಾಶಕ ಅಥವಾ ಗೊಬ್ಬರ ಮಣ್ಣಿಗೆ ಸೇರಿದರೂ ಸಸಿಗೆ ಬೇಕಾಗುವಷ್ಟು ಮಾತ್ರ ತಲುಪಿಸುವ ಕೆಲಸವನ್ನು ಈ ಬುದ್ಧಿವಂತ ಮಣ್ಣು ತನ್ನಲ್ಲಿನ ನ್ಯಾನೋ ರೋಬೋಟ್‌ಗಳ ಸಹಾಯದಿಂದ ಮಾಡುತ್ತದೆ.

ಜೊತೆಗೆ, 'ಹೈಡ್ರೋಜೆಲ್'ಗಳನ್ನು ಮಣ್ಣಿಗೆ ಬೆರೆಸುವ ಪ್ರಮಾಣವನ್ನು ಸಸಿಯ ತಳಿಯ ಆಧಾರದ ಮೇಲೆ ಬೆರೆಸಬಹುದಾಗಿದೆ. ಹೆಚ್ಚು ನೀರು ಬಯಸುವ ತಳಿಗಳಿಗೆ ಹೆಚ್ಚು 'ಹೈಡ್ರೋಜೆಲ್' ಬಳಸಬಹುದು. ಈ 'ಹೈಡ್ರೋಜೆಲ್' ಸಂಪೂರ್ಣ ಸಾವಯವ ಎನ್ನುವುದು ಒಳ್ಳೆಯ ವಿಚಾರವಾಗಿದೆ. ಈ 'ಹೈಡ್ರೋಜೆಲ್' ಮಣ್ಣಿನ ಜೊತೆಗೆ ಬೆರೆಯುವುದಿಲ್ಲ. ಹಾಗಾಗಿ, ಮಣ್ಣಿಗೆ ಬೆರೆಸುವ ಈ ವಸ್ತುವು ಅಡ್ಡಪರಿಣಾಮ ಬೀರುತ್ತದೆ ಎನ್ನುವ ಭಯವೂ ಇಲ್ಲ. ಅಲ್ಲದೇ, ಈ 'ಹೈಡ್ರೋಜೆಲ್' ಸಂಪೂರ್ಣವಾಗಿ ಕೊಳೆಯುವ ಗುಣವನ್ನು ಹೊಂದಿದೆ. ಅಂದರೆ, ತನ್ನ ಸಾಮರ್ಥ್ಯ ಕ್ಷೀಣಿಸಿದ ಮೇಲೆ ಅದು ಮಣ್ಣಿನಲ್ಲೇ ಕೊಳೆತುಹೋಗಿ, ಗೊಬ್ಬರವಾಗುತ್ತದೆ. ಆದ್ದರಿಂದ ಇದರ ಕೆಲಸ ಮುಗಿದಮೇಲೂ ಗೊಬ್ಬರವಾಗಿ ರೈತರಿಗೆ ನೆರವಾಗುತ್ತದೆ.

ರೈತರ ಹಲವು ಸಮಸ್ಯೆಗಳನ್ನು ಈ ಬುದ್ಧಿವಂತ ಮಣ್ಣು ನೀಗಿಸಲಿದೆ ಎಂದು ವಿಜ್ಞಾನಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಬೇಕಾದ ನೀರನ್ನು ಉಚಿತವಾಗಿ ಪಡೆಯುವುದು, ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳುವುದು, ಫಸಲಿನ ಪ್ರಮಾಣವನ್ನು ಹೆಚ್ಚಿಸುವುದು ಪ್ರಮುಖ ಅನುಕೂಲಗಳಾಗಿವೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ನಿಯಂತ್ರಣ ಮತ್ತು ಸಹಭಾಗಿತ್ವ

3) ಮಿದುಳಿನ ಯಾವ ಭಾಗವು ದೇಹದ ಭಂಗಿ ಮತ್ತು ಸಮತೋಲನವನ್ನು ನಿರ್ವಹಿಸುತ್ತದೆ?

ಉತ್ತರ:– ಹಿಮ್ಮೆದುಳಿನ ಅನುಮಸ್ತಿಷ್ಕ ಭಾಗವು ದೇಹದ ಭಂಗಿ ಮತ್ತು ಸಮತೋಲನ ಕಾಪಾಡುವುದು.

4) ಪರಿವರ್ತಿತ ಚಾಪ ಕುರಿತ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–



5) ಮಿದುಳಿನ ಮೂರು ಪ್ರಮುಖ ಭಾಗಗಳ(ಪ್ರದೇಶಗಳ)ನ್ನು ಹೆಸರಿಸಿ

ಉತ್ತರ:– ಮಿದುಳಿನ ಮೂರು ಪ್ರಮುಖ ಭಾಗಗಳು ಅಥವಾ ಪ್ರದೇಶಗಳೆಂದರೆ, ಮುಮ್ಮೆದುಳು, ಮಧ್ಯಮಿದುಳು ಮತ್ತು ಹಿಮ್ಮೆದುಳು.

6) ಮುಮ್ಮೆದುಳಿನ ಕುರಿತು ಬರೆಯಿರಿ

ಉತ್ತರ:– ಮುಮ್ಮೆದುಳು (fore brain) ಮಿದುಳಿನ ಪ್ರಮುಖ ಆಲೋಚನೆಯ ಭಾಗವಾಗಿದೆ. ಇದು ವಿವಿಧ ಗ್ರಾಹಕ ಜೀವಕೋಶಗಳಿಂದ ಸಂವೇದನಾ ಆವೇಗಗಳನ್ನು ಸ್ವೀಕರಿಸುವ ಪ್ರದೇಶಗಳನ್ನು ಹೊಂದಿದೆ. ಮುಮ್ಮೆದುಳಿನ ಬೇರೆ ಬೇರೆ ಪ್ರದೇಶಗಳು ಶ್ರವಣ, ವಾಸನೆ, ದೃಷ್ಟಿ ಮತ್ತಿತರ ಕಾರ್ಯಗಳನ್ನು ನಿರ್ವಹಿಸಲು ವೈಶಿಷ್ಟ್ಯತೆಯನ್ನು ಪಡೆದಿವೆ. ಮುಮ್ಮೆದುಳಿನಲ್ಲಿ ಕೆಲವು ಸಾಂಘಿಕ ಪ್ರದೇಶಗಳಿದ್ದು ಅಲ್ಲಿ ಈ ಸಂವೇದನಾ ಮಾಹಿತಿಯನ್ನು ಇತರ ಗ್ರಾಹಕಗಳಿಂದ ಪಡೆದ ಮಾಹಿತಿಯೊಂದಿಗೆ ಹಾಗೂ ಈಗಾಗಲೇ ಮಿದುಳಿನಲ್ಲಿ ಸಂಗ್ರಹವಾಗಿರುವ ಮಾಹಿತಿಯೊಂದಿಗೆ ಜೊತೆಯಾಗಿರಿಸಿ ಅರ್ಥೈಸಲಾಗುತ್ತದೆ. ಇವೆಲ್ಲವುಗಳ ಆಧಾರದ ಮೇಲೆ ಹೇಗೆ ಪ್ರತಿಕ್ರಿಯಿಸಬೇಕು ಎಂಬುದನ್ನು ನಿರ್ಣಯಿಸಲಾಗುತ್ತದೆ ಮತ್ತು ಮಾಹಿತಿಯನ್ನು ಕಾರ್ಯನಿರ್ವಾಹಕ ಪ್ರದೇಶಗಳಿಗೆ ರವಾನಿಸಲಾಗುತ್ತದೆ, ಅವು ನಮ್ಮ ಕಾಲಿನ ಸ್ನಾಯುಗಳಂಥ ಐಚ್ಛಿಕ ಸ್ನಾಯುಗಳ ಚಲನೆಯನ್ನು ನಿಯಂತ್ರಿಸುತ್ತವೆ. ಆದಾಗ್ಯೂ ಕೆಲವು ಸಂವೇದನೆಗಳು ದೃಷ್ಟಿ ಹಾಗೂ ಶ್ರವಣಗಳಿಗಿಂತ ವಿಶಿಷ್ಟವಾಗಿವೆ. ಉದಾಹರಣೆಗೆ, ನಾವು ಸಾಕಷ್ಟು ಆಹಾರ ಸೇವಿಸಿದ್ದೇವೆ ಹಾಗೂ ಹೊಟ್ಟೆ ತುಂಬಿದೆ ಎಂಬ ಭಾವನೆಯ ಸಂವೇದನೆಯು ಹಸಿವಿನೊಂದಿಗೆ ಸಂಬಂಧಿಸಿದ ಕೇಂದ್ರದ ಕಾರಣದಿಂದ ತಿಳಿಯುತ್ತದೆ ಅದು ಮುಮ್ಮೆದುಳಿನ ಪ್ರತ್ಯೇಕ ಭಾಗದಲ್ಲಿದೆ.

6) ಮಾನವ ಹಲವು ಆಲೋಚನೆಗಳನ್ನು ಮಾಡುತ್ತಾನೆ, ಈ ಕಾರ್ಯದಲ್ಲಿ ಮೆದುಳು ಬಳ್ಳಿಯ ಪಾತ್ರ ಹೇಗಿದೆ ಎಂಬುದನ್ನು ವಿವರಿಸಿ

ಅಥವಾ

'ನಾವು ಮಾಡುವ ಆಲೋಚನೆ ಮತ್ತು ಕೇಂದ್ರ ನರವ್ಯೂಹ' ಈ ಕುರಿತು ಬರೆಯಿರಿ

ಉತ್ತರ:– ಮಿದುಳು ಬಳ್ಳಿಯು ಆಲೋಚನೆ ಮಾಡಲು ಮಾಹಿತಿಯನ್ನು ಪೂರೈಸುವ ನರಗಳಿಂದ ಮಾಡಲ್ಪಟ್ಟಿದೆ. ಆಲೋಚನಾ ಪ್ರಕ್ರಿಯೆಯು ಹೆಚ್ಚು ಸಂಕೀರ್ಣವಾದ ಯಾಂತ್ರಿಕ ವ್ಯವಸ್ಥೆ ಮತ್ತು ನರವ್ಯೂಹ ಜೋಡಣೆಗಳನ್ನು ಒಳಗೊಂಡಿದೆ. ಇವು ದೇಹದ ಸಮನ್ವಯತೆಯ ಮುಖ್ಯ ಕೇಂದ್ರವಾದ ಮಿದುಳಿನಲ್ಲಿ ಕೇಂದ್ರೀಕೃತವಾಗಿವೆ. ಮಿದುಳು ಮತ್ತು ಮಿದುಳುಬಳ್ಳಿ ಒಟ್ಟಾಗಿ ಕೇಂದ್ರ ನರವ್ಯೂಹ ವ್ಯವಸ್ಥೆಯನ್ನು (central nervous system) ರೂಪಿಸುತ್ತವೆ. ಅವು ದೇಹದ ಎಲ್ಲಾ ಭಾಗಗಳಿಂದ ಮಾಹಿತಿಯನ್ನು ಸ್ವೀಕರಿಸುತ್ತವೆ ಮತ್ತು ಅದನ್ನು ಸಂಯೋಜಿಸುತ್ತವೆ. ನಾವು ನಮ್ಮ ಕ್ರಿಯೆಗಳ ಬಗ್ಗೆ ಕೂಡಾ ಆಲೋಚಿಸುತ್ತೇವೆ. ಬರೆಯುವುದು, ಮಾತನಾಡುವುದು, ಒಂದು ಕುರ್ಚಿಯನ್ನು ಜರುಗಿಸುವುದು, ಒಂದು ಕಾರ್ಯಕ್ರಮದ ಕೊನೆಯಲ್ಲಿ ಚಪ್ಪಾಳೆ ತಟ್ಟುವುದು ಇವೆಲ್ಲ ಐಚ್ಛಿಕ ಕ್ರಿಯೆಗಳಿಗೆ ಉದಾಹರಣೆಗಳಾಗಿವೆ. ಈ ಕ್ರಿಯೆಗಳು ಮುಂದೇನು ಮಾಡಬೇಕೆಂಬ ನಿರ್ಧಾರವನ್ನು ಆಧರಿಸಿವೆ. ಅದೇ ರೀತಿ ಮಿದುಳೂ ಕೂಡಾ ಸ್ನಾಯುಗಳಿಗೆ ಸಂದೇಶಗಳನ್ನು ಕಳಿಸಬೇಕಾಗುತ್ತದೆ. ಇದು ನರವ್ಯೂಹವು ಸ್ನಾಯುಗಳೊಂದಿಗೆ ಸಂವಹನ ನಡೆಸುವ ದ್ವಿತೀಯ ವಿಧಾನವಾಗಿದೆ. ಕೇಂದ್ರ ನರವ್ಯೂಹ ಮತ್ತು ದೇಹದ ಇತರ ಭಾಗಗಳ ನಡುವಿನ ಸಂವಹನವನ್ನು ಮಿದುಳಿನಿಂದ ಹೊರಡುವ ಮಿದುಳು ನರಗಳು ಮತ್ತು ಮಿದುಳುಬಳ್ಳಿಯಿಂದ ಹೊರಡುವ ಮಿದುಳುಬಳ್ಳಿ ನರಗಳನ್ನು ಒಳಗೊಂಡ ಪರಿಧಿ ನರವ್ಯೂಹ (peripheral nervous system) ಅನುಕೂಲಿಸುತ್ತವೆ.

7) ರಕ್ತದ ಒತ್ತಡ, ಬಾಯಲ್ಲಿ ನೀರೂರುವಿಕೆ ಮತ್ತು ವಾಂತಿಯಾಗುವಿಕೆಗಳಂಥ ಎಲ್ಲಾ ಅನೈಚ್ಛಿಕ ಕ್ರಿಯೆಗಳನ್ನು ಯಾವುದು ನಿಯಂತ್ರಿಸುತ್ತದೆ?

ಉತ್ತರ:– ಹಿಮ್ಮೆದುಳಿನ ಮೆಡುಲ್ಲ

8) ನೇರ ರೇಖೆಯಲ್ಲಿ ನಡೆಯುವುದು, ಬೈಸಿಕಲ್ ಸವಾರಿ, ಒಂದು ಪೆನ್ಸಿಲ್‌ಅನ್ನು ಎತ್ತಿಕೊಳ್ಳುವುದು ಮುಂತಾದ ಚಟುವಟಿಕೆಗಳನ್ನು ಮಾಡಲು ಯಾರ ಅವಶ್ಯಕತೆ ಇದೆ?

ಉತ್ತರ:– ಹಿಮ್ಮೆದುಳಿನ ಭಾಗವಾದ ಅನುಮಸಿ

9) ಸಸ್ಯಗಳು ತೋರುವ ಎರಡು ವಿಭಿನ್ನ ರೀತಿಯ ಚಲನೆಗಳ ಬಗ್ಗೆ ಬರೆಯಿರಿ

ಉತ್ತರ:– ಸಸ್ಯಗಳು ಎರಡು ಬಗೆಯ ಚಲನೆಗಳನ್ನು ತೋರಿಸುತ್ತವೆ ಅವುಗಳೆಂದರೆ (1) ಬೆಳವಣಿಗೆಯನ್ನು ಆಧರಿಸಿದ ಚಲನೆ
(2) ಸ್ವತಂತ್ರ ಚಲನೆ

10) ಸಸ್ಯ ಹಾರ್ಮೋನ್‌ಗಳು ಎಂದರೇನು?

ಉತ್ತರ:– ಸಸ್ಯಗಳಲ್ಲಿ ಸಹಭಾಗಿತ್ವ ಮತ್ತು ನಿಯಂತ್ರಣಕ್ಕೆ ಕಾರಣವಾಗುವ ವಿಶೇಷ ರಸಾಯನಿಕಗಳನ್ನು ಸಸ್ಯ ಹಾರ್ಮೋನ್‌ಗಳು ಎನ್ನುವರು.

11) ಮುಟ್ಟಿದರೆ ಮುನಿ ಎಂಬ ಸಸ್ಯದ ಎಲೆಗಳ ಚಲನೆಯು ಯಾವ ರೀತಿ ಇರುತ್ತದೆ? ಬೆಳಕಿನ ಕಡೆಗೆ ಚಲಿಸುವ ಕಾಂಡದ ಚಲನೆಗಿಂತ ಹೇಗೆ ಭಿನ್ನವಾಗಿದೆ?

ಉತ್ತರ:– ಮುಟ್ಟಿದರೆ ಮುನಿ ಸಸ್ಯದ ಎಲೆಗಳ ಚಲನೆಯು ಸ್ಪರ್ಶದಿಂದ ಉಂಟಾಗುವುದು. ಇದರಲ್ಲಿ ಸಸ್ಯ ಕೋಶಗಳು ತಮ್ಮೊಳಗಿನ ನೀರಿನ ಪ್ರಮಾಣವನ್ನು ಬದಲಾಯಿಸಿ ತಮ್ಮ ಆಕಾರವನ್ನು ಬದಲಿಸುತ್ತದೆ. *(ಮುಂದುವರಿಯುವುದು..........)*

II PUC BIOLOGY

MOLECULAR BASIS OF INHERITANCE

21. Give some reasons which explain that haemophilia is – (......Contd)

be carrier. Usually haemophilic females die at the time of birth.

22. The given figure of a human hand shows a pedigree analysis. Answer the following questions based on the figure.

a) In the pedigree which character is represented?

b) What is represented by circles and squares?

c) Which one is heterozygous, male or female? Give reason.

d) Give reasons, whether the above character is sex linked or not.

e) What is the probability of the disorder occurring in fifth child?



Ans:- a) Polydactyly, an autosomal dominant trait.

b) Circles represent females.
Squares represent males.

c) The trait is present in male (father) because the square symbol is darkened. It is heterozygous.
In homozygous state all the children would have polydactyly. It is not so.

d) It is not sex-linked because sex-linked trait can be transferred by father to daughter only.

e) The chance of fifth child becoming polydactylous is 50% as father is heterozygous.

23. Study the given pedigree chart and answer the questions that follow:



a) Is the trait recessive or dominant?

b) Is the trait sex-linked or autosomal?

c) Give the genotypes of the parents shown in generation I and their third child shown in generation II and first grand child shown in generation III.

Ans:- (a) Dominant

(b) Autosomal

(c) (i) aa (mother), Aa (father) (ii) Aa (iii) Aa

24. Study the given pedigree chart and answer the questions that follow:



a) Is the trait recessive or dominant?

b) Is the trait sex-linked or autosomal?

c) Give the genotype of the parents in generation I and their and fourth child in generation II.

Ans:- a) Recessive b) Autosomal

c) Aa, Aa, aa, Aa

MOLECULAR BASIS OF INHERITANCE

1. Who proposed the Double helix model of DNA?

Ans:- James D. Watson & F.H.C. Crick proposed the Double helix model of DNA in 1953.

2. What is a gene?

Ans:- A gene is a segment of DNA that has complete information to synthesise a polypeptide or even a specific DNA.

3. What is the function of a regulator gene?

Ans:- The function of a regulator gene is to code for a protein that controls the expression of other genes usually at the level of transcription.

4. What is the chemical composition of DNA?

Ans:- DNA is made up of deoxyribose sugars, phosphoric acid molecules and nitrogenous bases which are purines and pyramidines.

5. Who found out the presence of the phosphoric acid and deoxyribose sugar in DNA?

Ans:- Levene found out the presence of the phosphoric acid and deoxyribose sugar in DNA.

6. Mention the purine bases present in DNA?

Ans:- The purine bases present in DNA are - adenine (A) and guanine (G).

7. Mention the pyramidine bases present in DNA?

Ans:-The pyramidine bases present in DNA arecytosine (C) and thymine (T).

8. Who noticed that purines are always equal to the pyramidines?

Ans:- Erwin Chargaff measured the quantity of the bases in DNA and noticed that A = T, and so concluded that purines are always equal to the pyramidines

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

2ಎ ಮೀಸಲಾತಿ: ಲಿಂಗಾಯತ ಪಂಚಮಸಾಲಿ ವಕೀಲರ ಸಭೆ

ಕಾನೂನು ತಜ್ಞರ ಸಭೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ಮಂಗಳವಾರ ನಡೆದ ಲಿಂಗಾಯತ ಪಂಚಮಸಾಲಿ ವಕೀಲರ ಸಂಘದ ಸಭೆಯಲ್ಲಿ ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಮಾತನಾಡಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಶೀಘ್ರವೇ ಕಾನೂನು ತಜ್ಞರ ಸಭೆ ಕರೆದು, ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಹಾಗೂ ಎಲ್ಲ ಲಿಂಗಾಯತ ಒಳ ಪಂಗಡಗಳಿಗೆ ಒಬಿಸಿ ಮೀಸಲಾತಿ ನೀಡುವಂತೆ ಶಿಫಾರಸು ಮಾಡಬೇಕು ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಸರ್ಕಾರವನ್ನು ಆಗ್ರಹಿಸಿದರು.

ಶಾಸಕರ ಭವನದಲ್ಲಿ ಮಂಗಳವಾರ ನಡೆದ ಲಿಂಗಾಯತ ಪಂಚಮಸಾಲಿ ವಕೀಲರ ಸಂಘದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಮಾಜಕ್ಕೆ 2ಎ ಮೀಸಲಾತಿ ನೀಡುವಂತೆ ಎರಡು ವರ್ಷಗಳಿಂದ ಹೋರಾಟ ಮಾಡಿದರೂ ನ್ಯಾಯ ಸಿಕ್ಕಿಲ್ಲ. ಹಲವರು ಸಲಹೆ ನೀಡಿದ್ದಾರೆ. ಸಮುದಾಯದ ಶಾಸಕರು ಅಧಿವೇಶನದಲ್ಲಿ ವಿಷಯ ಪ್ರಸ್ತಾಪಿಸಿಲ್ಲ. ಹಾಗಾಗಿ ಕಾನೂನಾತ್ಮಕವಾಗಿ ವಕೀಲರ ಮೂಲಕ ಹೋರಾಟ ರೂಪಿಸಲು ಸಭೆ ನಡೆಸಲಾಗಿದೆ ಎಂದು ಹೇಳಿದರು.

ಸಭೆಯಲ್ಲಿ ಐದು ನಿರ್ಣಯ ಕೈಗೊಳ್ಳಲಾಗಿದೆ. ಕಾನೂನು ಅಡೆತಡೆಗಳನ್ನು ನಿವಾರಣೆ ಮಾಡಿಕೊಂಡು ಮೀಸಲಾತಿ ಬಗ್ಗೆ ಸರ್ಕಾರದ ನಿಲುವು ಸ್ಪಷ್ಟಪಡಿಸಬೇಕು. ನಿರ್ಲಕ್ಷ್ಯ ಮಾಡಿದಲ್ಲಿ ಬೆಳಗಾವಿ ಸುವರ್ಣಸೌಧದ ಅಧಿವೇಶನದಲ್ಲಿ ಹೋರಾಟ ಮಾಡಲಾಗುವುದು ಎಂದರು.

ರಾಜ್ಯ, ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ಲಿಂಗಾಯತ ಪಂಚಮಸಾಲಿ ವಕೀಲರ ಪರಿಷತ್ ಎಂಬ ಸಂಘಟನೆ ರಚಿಸಲು ನಿರ್ಧರಿಸಲಾಗಿದೆ ಹಾಗೂ ಕಾನೂನು ತಜ್ಞ ಸದಸ್ಯರ ಸಮಿತಿಯನ್ನು ರಚನೆ ಮಾಡಿ ಅವರ ಮಾರ್ಗದರ್ಶನ ಪಡೆಯಲು ನಿರ್ಧರಿಸಲಾಗಿದೆ ಎಂದು ಅವರು ತಿಳಿಸಿದರು.

ಸಭೆಯಲ್ಲಿ ವಕೀಲರಾದ ವ್ಹಿ.ಪಿ.ಮುದಿಗೌಡ, ಸಿ.ಪಿ.ಹೊಂಬಾಳ್, ಪ್ರಶಾಂತ ಭಾವಿಕಟ್ಟಿ, ಲಿಂಗಾಯತ ಪಂಚಮಸಾಲಿ ಮಹಾಸಭಾದ ಬೆಂಗಳೂರು ಜಿಲ್ಲಾ ಘಟಕದ ಅಧ್ಯಕ್ಷ ಆನಂದ ಬಿರಾದಾರ, ಪ್ರಧಾನ ಕಾರ್ಯದರ್ಶಿ ಪುಟ್ಟರಾಜು, ಐಟಿಬಿಟಿ ವಿಭಾಗದ ಕಾಂತೇಶ್ ಪಾಲ್ಗೊಂಡಿದ್ದರು.

ಬಳಿಕ ಸ್ವಾಮೀಜಿ ನೇತೃತ್ವದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಲಾಯಿತು.

ಸೂರಜ್ ರೇವಣ್ಣ ಜೈಲಿನಿಂದ ಬಿಡುಗಡೆ

ಪ್ರಜಾವಾಣಿ ವಾರ್ತೆ

ಸೂರಜ್ ರೇವಣ್ಣ

ಬೆಂಗಳೂರು: ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಸೂರಜ್ ರೇವಣ್ಣ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಮಂಗಳವಾರ ಮಧ್ಯಾಹ್ನ ಬಿಡುಗಡೆಯಾದರು.

ತಮ್ಮ ಪಕ್ಷದ ಕಾರ್ಯಕರ್ತರೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪದಡಿ ಅವರನ್ನು ಬಂಧಿಸಲಾಗಿತ್ತು. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸೋಮವಾರ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು.

ಜಾಮೀನಿನ ಪ್ರತಿಯನ್ನು ಮಂಗಳವಾರ ಬೆಳಿಗ್ಗೆ ವಕೀಲರು ಜೈಲಿನ ಅಧಿಕಾರಿಗಳಿಗೆ ಹಸ್ತಾಂತರಿಸಿದರು. ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಮಧ್ಯಾಹ್ನದ ವೇಳೆಗೆ ಸೂರಜ್ ಅವರು ಬಿಡುಗಡೆಯಾದರು.

ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಸೂರಜ್, 'ನಮ್ಮ ಕುಟುಂಬದವರ ವಿರುದ್ಧ ಷಡ್ಯಂತ್ರ ನಡೆಸಿ ತೇಜೋವಧೆ ಮಾಡಲಾಗಿದೆ. ದುರುದ್ದೇಶದಿಂದ ಪ್ರಕರಣ ದಾಖಲಿಸಿದ್ದಾರೆ. ನಾವು ಎಲ್ಲಿಗೂ ಓಡಿ ಹೋಗುವುದಿಲ್ಲ. ಧೈರ್ಯದಿಂದ ಎದುರಿಸುತ್ತೇವೆ' ಎಂದರು.

'ತನಿಖಾಧಿಕಾರಿಗಳಿಗೆ ಸಹಕಾರ ನೀಡಿದ್ದೇನೆ. ಕಾನೂನು ಮೇಲೆ ಸಂಪೂರ್ಣ ನಂಬಿಕೆಯಿದ್ದು, ಸಂಕಷ್ಟದಿಂದ ಹೊರಬರುತ್ತೇವೆ' ಎಂದು ಹೇಳಿದರು.

ವಾಲ್ಮೀಕಿ ನಿಗಮ: ಸಿಬಿಐಗೆ ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಬಹುಕೋಟಿ ಮೊತ್ತದ ಹಗರಣವನ್ನು ಸಿಬಿಐ ತನಿಖೆಗೆ ವರ್ಗಾಯಿಸುವಂತೆ ಕೋರಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಸಿಬಿಐಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಪ್ರಾದೇಶಿಕ ಅಧಿಕಾರಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಯೂನಿಯನ್ ಬ್ಯಾಂಕ್ ಪರ ಹಾಜರಾಗಿದ್ದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ, 'ಯಾವುದೇ ಪ್ರಕರಣದಲ್ಲಿ ₹50 ಕೋಟಿಗಿಂತಲೂ ಹೆಚ್ಚಿನ ಮೊತ್ತದ ಹಗರಣ ಕಂಡುಬಂದರೆ ಅದನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕಾಗುತ್ತದೆ. ಆದರೆ, ಈ ಪ್ರಕರಣದಲ್ಲಿ ಸ್ಥಳೀಯ ಪೊಲೀಸರೇ ತನಿಖೆ ನಡೆಸುತ್ತಿದ್ದಾರೆ' ಎಂದು ಆಕ್ಷೇಪಿಸಿದರು.

'ರಾಜ್ಯ ಸರ್ಕಾರ ಇಂತಹ ಹಗರಣಗಳ ತನಿಖೆ ನಡೆಸಬಾರದು. ಬ್ಯಾಂಕ್ ಹಗರಣಗಳ ತನಿಖೆಗೆ ಅಂತರ ರಾಷ್ಟ್ರೀಯ ಪ್ರಾಮುಖ್ಯ ಇದೆ. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ–1949ರ ಅನುಸಾರ ಈ ಪ್ರಕರಣದ ತನಿಖೆಯನ್ನು ಬ್ಯಾಂಕ್ ಈಗಾಗಲೇ ಸಿಬಿಐ ವಶಕ್ಕೆ ನೀಡಿದೆ. ಹೀಗಾಗಿ, ಬ್ಯಾಂಕ್ ರಾಜ್ಯದ ತನಿಖಾ ಸಂಸ್ಥೆಯ ಮುಂದೆ ಹಾಜರಾಗಲು ಸಾಧ್ಯವಿಲ್ಲ. ಆದ್ದರಿಂದ, ಇದನ್ನು ಸಿಬಿಐಗೆ ವಹಿಸಬೇಕು' ಎಂದು ಕೋರಿದರು.

ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ಸಿಬಿಐ ನಿರ್ದೇಶಕರು, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಆ. 7ಕ್ಕೆ ಮುಂದೂಡಿತು. ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಸಿಬಿಐ ಪರ ಪಿ.ಪ್ರಸನ್ನ ಕುಮಾರ್ ಹಾಜರಿದ್ದರು.

ಕಲಬುರ್ಗಿ, ಗೌರಿ ಹತ್ಯೆ ಆರೋಪಿಗಳಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಶೋಧಕ ಎಂ.ಎಂ. ಕಲಬುರ್ಗಿ ಹಾಗೂ ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದ ಆರೋಪಿಗಳಾದ ವಾಸುದೇವ ಭಗವಾನ್ ಮತ್ತು ಅಮಿತ್ ಬದ್ದಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಕುರಿತಂತೆ ವಾಸುದೇವ ಭಗವಾನ್, ಅಮಿತ್ ಬದ್ದಿ ಸಲ್ಲಿಸಿದ್ದ ಜಾಮೀನುಅರ್ಜಿಯನ್ನುನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ ಷರತ್ತುಬದ್ಧ ಜಾಮೀನು ಮಂಜೂರು ಮಾಡಿ ಆದೇಶಿಸಿತು.

ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, 'ಎರಡೂ ಹತ್ಯೆ ಪ್ರಕರಣಗಳಲ್ಲಿ ಅರ್ಜಿದಾರರ ವಿರುದ್ಧ ಬೈಕ್ ಕಳವು ಮಾಡಿ ಅದನ್ನು ಹತ್ಯೆಯ ಕೃತ್ಯಕ್ಕೆ ಬಳಸಿದವರಿಗೆ ನೀಡಿದ್ದಾರೆ ಎಂಬ ಆರೋಪ ಹೊರಿಸಲಾಗಿದೆ. ಆದರೆ, ಇವರ ವಿರುದ್ಧದ ಬೈಕ್ ಕಳವು ಪ್ರಕರಣ ಈಗಾಗಲೇ ಲೋಕ ಅದಾಲತ್‌ನಲ್ಲಿ ರಾಜಿ ಸಂಧಾನದ ಮೂಲಕ ಇತ್ಯರ್ಥಗೊಂಡಿದ್ದು ಇಬ್ಬರೂ ಖುಲಾಸೆಯಾಗಿದ್ದಾರೆ' ಎಂದು ವಿವರಿಸಿದರು.

'ಕಳೆದ ಆರೂವರೆ ವರ್ಷಗಳಿಂದ ಈ ಅರ್ಜಿದಾರರ ವಿಚಾರಣೆ ನಡೆದಿಲ್ಲ. ಒಟ್ಟು 138 ಸಾಕ್ಷಿಗಳಲ್ಲಿ ಈ ತನಕ ಕೇವಲ 10 ಸಾಕ್ಷಿಗಳನ್ನು ಮಾತ್ರವೇ ವಿಚಾರಣೆ ನಡೆಸಲಾಗಿದ್ದು, ಸಾಕಷ್ಟು ವಿಳಂಬವಾಗಿದೆ. ಈ ಹಿನ್ನೆಲೆಯಲ್ಲಿ ಜಾಮೀನು ಮಂಜೂರು ಮಾಡಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಜಾಮೀನು ಮಂಜೂರು ಮಾಡಿತು. ಪ್ರಾಸಿಕ್ಯೂಷನ್ ಪರ ಅಶೋಕ್ ಎನ್.ನಾಯಕ್ ವಾದ ಮಂಡಿಸಿದರು.

ಡೆಂಗಿ: 15 ಸಾವಿರ ದಾಟಿದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ 469 ಡೆಂಗಿ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಈ ಮೂಲಕ ಒಟ್ಟು ಪ್ರಕರಣಗಳ ಸಂಖ್ಯೆ 15 ಸಾವಿರದ ಗಡಿ(15,101) ದಾಟಿದೆ.

ಕಳೆದ ಹತ್ತು ದಿನಗಳಲ್ಲಿಯೇ ಐದು ಸಾವಿರಕ್ಕೂ ಅಧಿಕ ಪ್ರಕರಣಗಳು ದೃಢಪಟ್ಟಿವೆ. 24 ಗಂಟೆಗಳ ಅವಧಿಯಲ್ಲಿ 3,371 ಪರೀಕ್ಷೆಗಳನ್ನು ನಡೆಸಲಾಗಿದ್ದು, 27 ಜಿಲ್ಲೆಗಳಲ್ಲಿ ಹೊಸದಾಗಿ ಡೆಂಗಿ ಪ್ರಕರಣಗಳು ವರದಿಯಾಗಿವೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 1,681 ಪರೀಕ್ಷೆಗಳನ್ನು ನಡೆಸಲಾಗಿದ್ದು, 229 ಪ್ರಕರಣಗಳು ದೃಢಪಟ್ಟಿವೆ. ಹಾಸನದಲ್ಲಿ 28, ವಿಜಯಪುರದಲ್ಲಿ 23, ಬೆಳಗಾವಿಯಲ್ಲಿ 21 ಹಾಗೂ ಚಿತ್ರದುರ್ಗದಲ್ಲಿ 20 ಪ್ರಕರಣಗಳು ವರದಿಯಾಗಿವೆ. ಉಳಿದೆಡೆ ಇದಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗಿವೆ.

ರಾಜ್ಯದಲ್ಲಿ ಸದ್ಯ 3,384 ಡೆಂಗಿ ಸಕ್ರಿಯ ಪ್ರಕರಣಗಳಿದ್ದು, ಡೆಂಗಿ ಪೀಡಿತರಲ್ಲಿ ಸದ್ಯ 2,744 ಮಂದಿ ಮನೆ ಆರೈಕೆಗೆ ಒಳಗಾಗಿದ್ದಾರೆ. 14 ಮಂದಿ ತೀವ್ರ ನಿಗಾ ಘಟಕದಲ್ಲಿರುವುದೂ (ಐಸಿಯು) ಸೇರಿದಂತೆ 640 ಮಂದಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದಾರೆ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ: ಕಾಮಗಾರಿ ವಿಭಾಗ ಬಳ್ಳಾರಿ.

ಸಂಖ್ಯೆ:ಕಕರಸಾನಿ/ಕಾನಿಅ/ಕಾವಿಬ/ತಾಂತ್ರಿಕ/387,388,389,390,391,392,393,394,395&396/2024–25 ದಿನಾಂಕ:19.07.2024

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ. 24 25 26 27 28 29 30 31 32 & 33// 2024–25

ಈ ಕೆಳಗೆ ಕಾಣಿಸಿದ ಕಾಮಗಾರಿ ಕೆಲಸಕ್ಕೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಅಂತರ್ಜಾಲದ ಮೂಲಕ ವೆಬ್‌ಸೈಟ್ (https://kppp.karnataka.gov.in)ನಲ್ಲಿ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು ಹಾಗೂ ಈ ಪ್ರಕಟಣೆಗೆ ಸಂಭಂದಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. **ಹೆಚ್ಚಿನ ವಿವರಗಳಿಗಾಗಿ ಸಹಾಯವಾಣಿ ದೂರವಾಣಿ ಸಂಖ್ಯೆ:** +91 80 46010000, +91 80 68948777, 080–22230960, 080–22234115 ಅಥವಾ **08392–294828, 9972039797 ಮುಖಾಂತರ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.**

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ ಮೊತ್ತ (ರೂ.ಗಳಲ್ಲಿ)
1	ತಳಕಲ್‌ನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮತ್ತು ವಿಶ್ವೇಶ್ವರಯ್ಯಾ ತಾಂತ್ರಿಕ ವಿಶ್ವವಿದ್ಯಾಲಯ ಕೌಶಲ್ಯ ಅಭಿವೃದ್ಧಿ ಕೇಂದ್ರದ ಹತ್ತಿರ ಬಸ್ ನಿಲ್ದಾಣ ಮಾಡುವ ಕಾಮಗಾರಿ.(2ನೇ ಕರೆ)	600–00 (ಜಿ.ಎಸ್.ಟಿ. ಹಾಗೂ ಎಲ್ಲಾ ತೆರಿಗೆ ಸೇರಿ)	9,00,000–00
2	ಯಲಬುರ್ಗಾ ತಾಲೂಕಿನ ಸಂಕನೂರ ಕ್ರಾಸ್‌ನಲ್ಲಿ ನೂತನ ಮಾದರಿಯ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿ. (2ನೇ ಕರೆ)	320–24 (ಜಿ.ಎಸ್.ಟಿ. ಹಾಗೂ ಎಲ್ಲಾ ತೆರಿಗೆ ಸೇರಿ)	4,81,000–00
3	ಯಲಬುರ್ಗಾ ತಾಲೂಕಿನ ಬೇವೂರು ಗ್ರಾಮದಲ್ಲಿ ನೂತನ ಮಾದರಿಯ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿ. 2ನೇ ಕರೆ)	450–00 (ಜಿ.ಎಸ್.ಟಿ. ಹಾಗೂ ಎಲ್ಲಾ ತೆರಿಗೆ ಸೇರಿ)	6,75,000–00
4	ಕುಕನೂರು ತಾಲೂಕಿನ ಇಟಗಿ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಕಾಮಗಾರಿ. (2ನೇ ಕರೆ)	400–00 (ಜಿ.ಎಸ್.ಟಿ. ಹಾಗೂ ಎಲ್ಲಾ ತೆರಿಗೆ ಸೇರಿ)	6,00,000–00
5	ಕೊಟ್ಟೂರನಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸುವುದು (ವಿಜಯನಗರ ಜಿಲ್ಲೆ) (4ನೇ ಕರೆ)	350–00 (ಜಿ.ಎಸ್.ಟಿ. ಹಾಗೂ ಎಲ್ಲಾ ತೆರಿಗೆ ಸೇರಿ)	5,25,000–00
6	ರಾಯಚೂರು ಜಿಲ್ಲೆಯ ಮಾನವಿ ಪಟ್ಟಣದಲ್ಲಿ ವೇಗಧೂತ (ಎಕ್ಸ್‌ಪ್ರೆಸ್) ನೂತನ ಬಸ್ ನಿಲ್ದಾಣವನ್ನು ನಿರ್ಮಿಸುವುದು (2ನೇ ಕರೆ)	950–00 (ಜಿ.ಎಸ್.ಟಿ. ಹಾಗೂ ಎಲ್ಲಾ ತೆರಿಗೆ ಸೇರಿ)	14,25,000–00
7	ಯಲಬುರ್ಗಾ ತಾಲೂಕಿನ ಬಂಡಿ ಗ್ರಾಮದಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸುವುದು. (3ನೇ ಕರೆ)	300–00 (ಜಿ.ಎಸ್.ಟಿ. ಹಾಗೂ ಎಲ್ಲಾ ತೆರಿಗೆ ಸೇರಿ)	4,50,000–00
8	ಯಲಬುರ್ಗಾ ತಾಲೂಕಿನ ಹಿರೆವಂಕಲಕುಂಟಾ ಗ್ರಾದಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸುವುದು. (3ನೇ ಕರೆ)	300–00 (ಜಿ.ಎಸ್.ಟಿ. ಹಾಗೂ ಎಲ್ಲಾ ತೆರಿಗೆ ಸೇರಿ)	4,50,000–00
9	ಕುಕನೂರು ತಾಲೂಕಿನ ಕುದರಿ ಮೋತಿ ಗ್ರಾಮದಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸುವುದು. (3ನೇ ಕರೆ)	300–00 (ಜಿ.ಎಸ್.ಟಿ. ಹಾಗೂ ಎಲ್ಲಾ ತೆರಿಗೆ ಸೇರಿ)	4,50,000–00
10	ಕುಕನೂರು ತಾಲೂಕಿನ ರಾಜೂರು ಆಡುರು ಗ್ರಾಮದಲ್ಲಿ ಬಸ್ ಗ್ರಾಮದಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸುವುದು. (3ನೇ ಕರೆ)	300–00 (ಜಿ.ಎಸ್.ಟಿ. ಹಾಗೂ ಎಲ್ಲಾ ತೆರಿಗೆ ಸೇರಿ)	4,50,000–00

ಡಿಐಪಿಆರ್/ಬಳ್ಳಾರಿ/266/ಕೆಎಸ್‌ಎಂಸಿಎ/2024–25

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕ.ಕ.ರ.ಸಾ.ನಿಗಮ, ಕಾಮಗಾರಿ ವಿಭಾಗ, ಬಳ್ಳಾರಿ

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ

ಐ.ಎಫ್.ಟಿ.ಸಂಖ್ಯೆ:07/2024–25
ದಿನಾಂಕ:22–07–2024

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ–2,3 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪಿ–ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಜಿಲ್ಲೆಯ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಅಂದಾಜು ಕನಿಷ್ಟ ಮೊತ್ತ ರೂ.46.00 ಲಕ್ಷಗಳು ಮತ್ತು ಗರಿಷ್ಟ ಮೊತ್ತ ರೂ.91.00 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 31–07–2024 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರಾಕ್ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು. ಸೂಚನೆ:ಬಿಡ್ಡುದಾರರು ಜಿ.ಎಸ್.ಟಿ ಸೇರಿದಂತೆ ದರಗಳನ್ನು ನಮೂದಿಸತಕ್ಕದ್ದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/220/ಕೆಎಸ್‌ಎಂಸಿಎ/2024–25

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)

ಇ–ಮೇಲ್ : contracts@bmrc.co.in ವೆಬ್‌ಸೈಟ್ : www.bmrc.co.in

ಸಂಖ್ಯೆ: ಬಿಎಂಆರ್‌ಸಿಎಲ್/ಹಂತ–2/ರೀಚ್–5(ಪಿ3)/
ಆರ್‌ಸಿಸಿ ಚರಂಡಿ/2024/111 ದಿನಾಂಕ:24.07.2024

ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್ ಇವರ ಪರವಾಗಿ, ಪ್ರಧಾನ ವ್ಯವಸ್ಥಾಪಕರು (ಗುತ್ತಿಗೆಗಳು) ಇವರು ಅರ್ಹತಾ ಮಾನದಂಡಗಳನ್ನು (EQC) ಪೂರೈಸುವ ಅರ್ಹ ಅರ್ಜಿದಾರರಿಂದ **'ಬೆಂಗಳೂರು ಮೆಟ್ರೋ ರೈಲು ಯೋಜನೆ, ಹಂತ–2ರ ರೀಚ್–5 (ಪಿ3)ರಲ್ಲಿ ರೂಪೇನಾಅಗ್ರಹಾರ ಬಸ್ ನಿಲ್ದಾಣದಿಂದ ಸಿಎಸ್‌ಬಿ ಜಂಕ್ಷನ್ (ಆರ್‌ಪಿ222 ರಿಂದ ಆರ್‌ಪಿ198) ವರೆಗಿನ ರಾಷ್ಟ್ರೀಯ ಹೆದ್ದಾರಿಯ 4ನೇ ಲೇನ್‌ನಲ್ಲಿ 410m (ಅಂದಾಜು.) ಉದ್ದದ ಆರ್‌ಸಿಸಿ ಚರಂಡಿ (ಅಡ್ಡ ಚರಂಡಿಯನ್ನು ಒಳಗೊಂಡಂತೆ) ನಿರ್ಮಾಣ ಮತ್ತು ಪ್ರಸ್ತುತ ಸರ್ವೀಸ್ ರಸ್ತೆಯಲ್ಲಿನ 450m (ಅಂದಾಜು.) ಉದ್ದದ ಚರಂಡಿಯ ಅಗಲೀಕರಣ ಹಾಗೂ ರಸ್ತೆ ಕಾಮಗಾರಿ ಮತ್ತು ಇತರ ಪೂರಕ ಕೆಲಸಗಳನ್ನು ಒಳಗೊಂಡ ಕಾಮಗಾರಿಗಳಿಗಾಗಿ** ಮುಕ್ತ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಕಾಮಗಾರಿಯ ಅಂದಾಜು ಮೊತ್ತ: **ರೂ. 4.13 ಕೋಟಿಗಳು.** ಟೆಂಡರ್ ದಸ್ತಾವೇಜಿನ ಬೆಲೆ: **ರೂ. 11,800/-**. ಟೆಂಡರ್ ಭದ್ರತಾ ಮೊತ್ತ: **ರೂ. 6.20 ಲಕ್ಷಗಳು.** ಟೆಂಡರ್ ದಸ್ತಾವೇಜುಗಳ ಮಾರಾಟ/ಡೌನ್‌ಲೋಡ್: **24.07.2024 ರಿಂದ 02.09.2024 (ಮಧ್ಯಾಹ್ನ 3.00 ಗಂಟೆವರೆಗೆ).** ಇ–ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ ಮತ್ತು ಸಮಯ: **26.08.2024 ರಿಂದ 02.09.2024 ರವರೆಗೆ (ಮಧ್ಯಾಹ್ನ 3.00 ಗಂಟೆವರೆಗೆ).** ಇ–ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **03.09.2024 ರಂದು ಮಧ್ಯಾಹ್ನ 3.00 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ, ಇ–ಟೆಂಡರಿಂಗ್ ವೆಬ್‌ಸೈಟ್ **https://etenders.gov.in/eprocure/app**ರಲ್ಲಿ ದಿನಾಂಕ: **24.07.2024** ರಿಂದ ಪರಿವೀಕ್ಷಿಸಬಹುದು. ಟೆಂಡರ್ ಪ್ರಕಟಣೆ ಅಧಿಸೂಚನೆ (NIT) ನಮ್ಮ ವೆಬ್‌ಸೈಟ್ **www.bmrc.co.in** ನಲ್ಲಿಯೂ ಲಭ್ಯವಿರುತ್ತದೆ.

ಸಹಿ/- ಪ್ರಧಾನ ವ್ಯವಸ್ಥಾಪಕರು (ಗುತ್ತಿಗೆಗಳು)

ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560 001.

ಸಂಖ್ಯೆ: ಪಿ.ಎಸ್.ಸಿ. 123 ಆರ್‌ಟಿಬಿ(2)/2024-25/661 ದಿನಾಂಕ: 22-07-2024

ತಿದ್ದುಪಡಿ ಅಧಿಸೂಚನೆ

ಆಯೋಗದ ಅಧಿಸೂಚನೆ ಸಂ: ಪಿ. ಎಸ್. ಸಿ 505 ಆರ್. ಟಿ. ಬಿ-2/2023-24/3496 ಮತ್ತು ಪಿ. ಎಸ್. ಸಿ 506 ಆರ್. ಟಿ. ಬಿ-2/2023-24/3497 ರಡಿ ದಿ: 15-03-2024 ರಂದು ಪದವಿ ಮಟ್ಟದ ವಿದ್ಯಾರ್ಹತೆಯನ್ನು ಹೊಂದಿರುವ ವಿವಿಧ ಇಲಾಖೆಗಳಲ್ಲಿನ ವಿವಿಧ ಗ್ರೂಪ್ 'ಸಿ' 60+16 (ಹೈಕ) ಹುದ್ದೆಗಳನ್ನು ವೃಂದವಾರು ಪ್ರತ್ಯೇಕವಾಗಿ ಅಧಿಸೂಚಿಸಿ ಆನ್ಲೈನ್ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸದರಿ ಅಧಿಸೂಚನೆಗಳಲ್ಲಿನ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯಲ್ಲಿನ ಕೈಗಾರಿಕಾ ವಿಸ್ತರಣಾಧಿಕಾರಿ 50+13(ಹೈಕ) ಹುದ್ದೆಗಳಿಗೆ ಇಲಾಖೆಯ ಪ್ರಸ್ತಾವನೆಯಂತೆ ನಿಗದಿಪಡಿಸಲಾಗಿದ್ದ ವಿದ್ಯಾರ್ಹತೆಯ ಕೋರ್ಸ್‌ಗಳಲ್ಲಿ B.Com, B.Sc., BBA, BE ಪದವಿಗಳನ್ನು ಮಾತ್ರ ಪರಿಗಣಿಸಿ, ಅರ್ಜಿ ಸಲ್ಲಿಸಲು ದಿ: 29-04-2024 ರಿಂದ 10-06-2024 ರವರೆಗೆ ಅವಕಾಶ ನೀಡಲಾಗಿತ್ತು. ಪ್ರಸ್ತುತ ಸರ್ಕಾರದ ಪತ್ರ ದಿನಾಂಕ: 20-06-2024 ರಲ್ಲಿ ಸದರಿ ಹುದ್ದೆಗಳಿಗೆ BBM ಮತ್ತು B.Tech ಪದವಿಗಳನ್ನು ಸಹ ಪರಿಗಣಿಸಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವಂತೆ ಕೋರಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮೇಲ್ಕಂಡ ಅಧಿಸೂಚನೆಗಳಲ್ಲಿನ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯಲ್ಲಿನ ಕೈಗಾರಿಕಾ ವಿಸ್ತರಣಾಧಿಕಾರಿ 50+13 (ಹೈಕ) ಹುದ್ದೆಗಳಿಗೆ BBM ಮತ್ತು B.Tech ಪದವಿಗಳನ್ನು ಪರಿಗಣಿಸಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿ ಅರ್ಜಿ ಸಲ್ಲಿಸಲು ಈ ಕೆಳಗಿನಂತೆ ದಿನಾಂಕವನ್ನು ವಿಸ್ತರಿಸಿದೆ.

ಅರ್ಜಿ ಸಲ್ಲಿಸಲು ವಿಸ್ತರಿಸಿದ ಪ್ರಾರಂಭಿಕ ದಿನಾಂಕ:	23–07–2024
ಅರ್ಜಿ ಸಲ್ಲಿಸಲು ವಿಸ್ತರಿಸಿದ ಕೊನೆಯ ದಿನಾಂಕ:	01–08–2024
ಶುಲ್ಕ ಪಾವತಿಸಲು ವಿಸ್ತರಿಸಿದ ಕೊನೆಯ ದಿನಾಂಕ:	01–08–2024

ಮುಂದುವರೆದು, ಮೇಲ್ಕಂಡ ಅಧಿಸೂಚನೆಗಳಲ್ಲಿನ ಇತರೆ ಇಲಾಖೆಗಳ ಎಲ್ಲಾ ಗ್ರೂಪ್ ಸಿ ವೃಂದದ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಉಳಿದಂತೆ ದಿನಾಂಕ: 15-03-2024ರ ಅಧಿಸೂಚನೆಗಳಲ್ಲಿನ ಇತರೆ ಷರತ್ತು/ಸೂಚನೆಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಸಹಿ/-
(ಡಾ. ರಾಕೇಶ್ ಕುಮಾರ್.ಕೆ)
ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ.

DIPR/CP/RO1053/24-25

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ.

ದೂರವಾಣಿ: 08182–271101/221010/221100. ಫ್ಯಾಕ್ಸ್: 277082.
ಇ–ಮೇಲ್: deo.shimoga@gmail.com

SMGDC-MAG3/ADV/4-5/2024(397336/397504) ದಿ: 22.07.2024

ಪ್ರಕಟಣೆ

ಶಿವಮೊಗ್ಗ ಜಿಲ್ಲೆಯ ಸಾಗರ ಮತ್ತು ಸೊರಬ ತಾಲ್ಲೂಕಿನ ಹಿರಿಯ ಶ್ರೇಣಿ ನ್ಯಾಯಾಲಯದ ಅಪರ ಸರ್ಕಾರಿ ವಕೀಲರ ನೇಮಕ ಮಾಡಲು ಸರ್ಕಾರ ಪ್ರಧಾನ ಕಾರ್ಯದರ್ಶಿಗಳು, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಬೆಂಗಳೂರುರವರ ಪತ್ರದಲ್ಲಿ ಸೂಚನೆ ಬಂದಿರುವ ಮೇರೆಗೆ, ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 1977 ರ ನಿಯಮ 5 ಮತ್ತು 26 (2) ಹಾಗೂ 12(ಎ)(ಬಿ) ಮತ್ತು (ಸಿ) ರನ್ವಯ ಸ್ಥಳೀಯ ಜಾಹೀರಾತು ನೀಡಿ, ಆ ಮೂಲಕ ಸ್ವೀಕೃತವಾದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, 7 ವರ್ಷಗಳ ಕಾಲ ವಕೀಲ ವೃತ್ತಿಯನ್ನು ಪೂರೈಸಿದ ಅರ್ಹ ವಕೀಲರ ಪಟ್ಟಿಯನ್ನೊಳಗೊಂಡ ಪ್ರಸ್ತಾವನೆಯನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಶಿವಮೊಗ್ಗ ಜಿಲ್ಲೆ ಇವರ ಅಭಿಪ್ರಾಯದೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ದೇಶಿಸಿರುತ್ತಾರೆ. ಪ್ರಯುಕ್ತ ಸದರಿ ಹುದ್ದೆಗೆ ನೇಮಕ ಮಾಡಲು ಅರ್ಹ ನ್ಯಾಯವಾದಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಪತ್ರಿಕ ಪ್ರಕಟಣೆಯನ್ನು ಹೊರಡಿಸಲಾಗಿದೆ.

1) ಶಿವಮೊಗ್ಗ ಜಿಲ್ಲೆಯ ಸಾಗರ ಮತ್ತು ಸೊರಬ ತಾಲ್ಲೂಕಿನ ಹಿರಿಯ ಶ್ರೇಣಿ ನ್ಯಾಯಾಲಯದ ಅಪರ ಸರ್ಕಾರಿ ವಕೀಲರ ಹುದ್ದೆಗೆ ಆಯ್ಕೆ ಬಯಸುವವರು, 07 (ಏಳು) ವರ್ಷಗಳ ಕಾಲ ವಕೀಲ ವೃತ್ತಿಯನ್ನು ಪೂರೈಸಿದ ಅನುಭವ ಹೊಂದಿರಬೇಕು.

2) ಆಯ್ಕೆ ಬಯಸುವ ಅರ್ಹ ನ್ಯಾಯವಾದಿಗಳು ವೈಯಕ್ತಿಕ ಮಾಹಿತಿಯೊಂದಿಗೆ ಅರ್ಜಿ ಸಿದ್ಧಪಡಿಸಿ ದಿನಾಂಕ:02.08.2024 ರ ಸಂಜೆ 5–00 ಗಂಟೆಯೊಳಗಾಗಿ ಜಿಲ್ಲಾಧಿಕಾರಿಗಳ ನ್ಯಾಯಾಂಗ ಶಾಖೆಯಲ್ಲಿ ಅರ್ಜಿ ಸಲ್ಲಿಸತಕ್ಕದ್ದು (ಹೆಸರು, ವಯಸ್ಸು, ಹುಟ್ಟಿದ ದಿನಾಂಕ, ವಿದ್ಯಾರ್ಹತೆ, ನ್ಯಾಯಾವಾದಿಯಾಗಿ ನೊಂದಣಿ ಆಗಿರುವ ಬಗ್ಗೆ ನೋಂದಣಿ ಸಂಖ್ಯೆಯೊಂದಿಗೆ ವಿವರ, ಇತ್ಯಾದಿ). ಹೆಚ್ಚಿನ ಮಾಹಿತಿಯನ್ನು ಕಛೇರಿ ಸಮಯದಲ್ಲಿ ನ್ಯಾಯಾಂಗ ಶಾಖೆಯಲ್ಲಿ ಪಡೆಯಬಹುದು. Phone: 08182–221100 / 221010/9110642146.

ಸಹಿ/– ಅಪರ ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/138/07/24–25/315

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಅಲ್ಪಸಂಖ್ಯಾತರ ನಿರ್ದೇಶನಾಲಯ,
ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ, ಮಿಲ್ಲರ್ ಟ್ಯಾಂಕ್ ರಸ್ತೆ, ವಸಂತನಗರ, ಬೆಂಗಳೂರು–560052.

Website: https://dom.karnataka.gov.in

ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ

2024–25ನೇ ಸಾಲಿನಲ್ಲಿ ಕರ್ನಾಟಕ ಹಜ್ ಭವನ, ಬೆಂಗಳೂರು, ಇಲ್ಲಿ ನಡೆಯಲಿರುವ ಐಎಎಸ್ /ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಸತಿ ಸಹಿತ ತರಬೇತಿ ಪಡೆಯಲು ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ ಪ್ರಕಟಣೆ.

ಆನ್‌ಲೈನ್ ಅರ್ಜಿ

2024–25ನೇ ಸಾಲಿಗೆ ಅಲ್ಪಸಂಖ್ಯಾತರ ನಿರ್ದೇಶನಾಲಯದ ವತಿಯಿಂದ ಹಜ್ ಭವನ, ಬೆಂಗಳೂರು ಇಲ್ಲಿ ಐಎಎಸ್/ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಸತಿ ಸಹಿತ ಪರೀಕ್ಷಾ ಪೂರ್ವ ತರಬೇತಿಯನ್ನು ನೀಡಲಾಗುತ್ತಿದ್ದು, ಸದರಿ ತರಬೇತಿಗೆ ಅರ್ಹ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕೊನೆಯ ದಿನಾಂಕ

ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ: 24.07.2024.
ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 31.08.2024.

ಅರ್ಹತೆ

- ಅಭ್ಯರ್ಥಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದವರಾಗಿರಬೇಕು.(ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ)
- ಅಭ್ಯರ್ಥಿಯು ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಪದವಿ ಹೊಂದಿರಬೇಕು.
- ಅಭ್ಯರ್ಥಿಯ ವಯೋಮಿತಿ ಕನಿಷ್ಠ 21 ಹಾಗೂ ಗರಿಷ್ಠ 35 ವರ್ಷಗಳು ಮೀರಿರಬಾರದು. (ಅರ್ಜಿ ಸಲ್ಲಿಸುವ ಅಂತಿಮ ದಿನಾಂಕದೊಳಗೆ)
- ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರಿಯಲ್ಲಿರುವ ಅಭ್ಯರ್ಥಿಗಳು ಅರ್ಹರಿರುವುದಿಲ್ಲ.

ಅರ್ಜಿದಾರರಿಗೆ ಸೂಚನೆಗಳು

- ಅರ್ಜಿದಾರರು https://sevasindhu.karnataka.gov.in/Sevasindhu/DepartmentServices ಈ ಲಿಂಕ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.
- ಆನ್‌ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡಲು ವಿವರವಾದ ಸೂಚನೆಗಳು/ವಿಧಾನಗಳು https://dom.karnataka.gov.in ಇಲ್ಲಿ ಲಭ್ಯವಿದೆ.
- ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಜಿಲ್ಲಾ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಸಹಾಯವಾಣಿ ಸಂಖ್ಯೆ: **8277799990** ಇವರನ್ನು ಸಂಪರ್ಕಿಸಬಹುದು.

ದಿನಾಂಕ : 24.07.2024
ಸ್ಥಳ : ಬೆಂಗಳೂರು

ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ,
ಬೆಂಗಳೂರು

ವಾಸಾಸಂಇ/ವಾಪ್ರ/1051/ಎಂಎಎ/24–25

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು - 560 064
ವೆಬ್‌ಸೈಟ್: www.rwf.indianrailways.gov.in

ಇ–ಟೆಂಡರ್ ಪ್ರಕಟಣೆ ಸಂಖ್ಯೆ:
ಆರ್‌ಡಬ್ಲ್ಯೂಎಫ್/ಎಂ/ಒಟಿ/ಎಎಂಎಸ್/2024–25/19
ದಿನಾಂಕ: 22/07/2024

ಭಾರತದ ರಾಷ್ಟ್ರಪತಿಗಳ ಪರವಾಗಿ ಪ್ರಧಾನ ಮುಖ್ಯ ಮೆಕಾನಿಕಲ್ ಇಂಜಿನಿಯರ್ ಈ ಕೆಳಕಂಡ ಕೆಲಸಗಳಿಗಾಗಿ ಆನ್‌ಲೈನ್ ವೆಬ್‌ಸೈಟ್ http://www.ireps.gov.in (works) ಮೂಲಕ ಇ ಟೆಂಡರ್ ಗಳನ್ನು ಆಹ್ವಾನಿಸಿದ್ದಾರೆ

ಟೆಂಡರ್ ನಂ.:ಆರ್‌ಡಬ್ಲ್ಯೂಎಫ್/ಎಂ/ಒಟಿ/ಎಎಂಎಸ್/ 2024–25/19 ದಿನಾಂಕ: 22/07/2024

ಕೆಲಸದ ವಿವರ: 6000 WAG– 9 ಆಕ್ಸೆಲ್ ಮಿಷಿನಿಂಗ್‌ನ ಹೊರಗುತ್ತಿಗೆ. **ಅಂದಾಜು ಮೌಲ್ಯ :** ರೂ. 7,52,04,000/– **ಇಎಂಡಿ:** 5,26,000/– **ಕೊನೆಯ ದಿನಾಂಕ & ಸಮಯ:** 13.08.2024, 10.30 ಗಂಟೆಯವರೆಗೆ. **ಮುಕ್ತಾಯದ ಅವಧಿ:** 07 ತಿಂಗಳು.

ಡೆಪ್ಯೂಟಿ ಸಿಎಂಇ/ಎಪಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಇನ್‌ಫ್ರಾ ವಿಭಾಗ–ಆರ್‌ಐ, ಎನ್.ಆರ್. ಚೌಕ, ಬೆಂಗಳೂರು–560 002.

ಸಂಖ್ಯೆ: ಕಾಪಾಅ/ಆರ್‌ಐ/ಟೆಂಡರ್/09/2024-25 ದಿನಾಂಕ: 23-07-2024

ಟೆಂಡರ್ ಪ್ರಕಟಣೆ (ಐಎಫ್‌ಟಿ)

ಟರ್ನ್‌ಕೀ, ಒಟ್ಟು ಮೊತ್ತ, ನಿಗದಿತ ಬೆಲೆ, ಯಾವುದೇ ವ್ಯತ್ಯಾಸ ಮತ್ತು ಯಾವುದೇ ಏರಿಕೆ ಆಧಾರದಲ್ಲಿ (ದ್ವಿ ಲಕೋಟೆ ಪದ್ಧತಿ) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ವೆಬ್‌ಸೈಟ್ **https://kppp.karnataka.gov.in**

ಕಾರ್ಯಪಾಲಕ ಅಭಿಯಂತರರು, ಇನ್‌ಫ್ರಾ ವಿಭಾಗ-ಆರ್‌ಐ, ಬೃಬೆಂಮಪಾ ರವರು ಕೆಳಕಂಡ ಕಾಮಗಾರಿಗಳಿಗೆ ಟರ್ನ್‌ಕೀ, ಒಟ್ಟು ಮೊತ್ತ, ನಿಗದಿತ ಬೆಲೆ, ಯಾವುದೇ ವ್ಯತ್ಯಾಸ ಮತ್ತು ಯಾವುದೇ ಏರಿಕೆ ಆಧಾರದಲ್ಲಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1)	ಕುಂದಹಳ್ಳಿ ಜಂಕ್ಷನ್, ಮಹದೇವಪುರ, ಓಆರ್‌ಆರ್ ಎಂಬೆಸಿ ಟೆಕ್ ಗ್ರಾಮ, ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಇಬ್ಲೂರು ಕೆರೆಯ ಪಕ್ಕದಲ್ಲಿರುವ ಸರ್ಜಾಪುರ ಸಿಗ್ನಲ್, ಮಹದೇವಪುರ ವಲಯದ ಬಾಗ್‌ಮಾನೆ ಟೆಕ್ ಪಾರ್ಕ್ ಜಂಕ್ಷನ್‌ನಲ್ಲಿ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳಲ್ಲಿ ಸುರಕ್ಷಾ–75 ರ ಅಡಿಯಲ್ಲಿ ಜಂಕ್ಷನ್ ಸುಧಾರಣೆ ಕಾಮಗಾರಿಗಳನ್ನು ಒದಗಿಸುವುದು. ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ).: 931.77 (ಜಿಎಸ್‌ಟಿ ಸೇರಿ). ಇಎಂಡಿ ಮೊತ್ತ (ಲಕ್ಷ ಗಳಲ್ಲಿ): 14.00.
2)	ದಾಸರಹಳ್ಳಿ ವಲಯದ 8ನೇ ಮೈನ್ ವೃತ್ತ, ನಾಗಸಂದ್ರ ಎಂಎಸ್ ಜಂಕ್ಷನ್, ಜಾಲಹಳ್ಳಿ ಕ್ರಾಸ್ ರಸ್ತೆ, ದಾಸರಹಳ್ಳಿ ಎಂಎಸ್ ಜಂಕ್ಷನ್‌ನಲ್ಲಿ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳಲ್ಲಿ ಸುರಕ್ಷಾ–75ರ ಅಡಿಯಲ್ಲಿ ಜಂಕ್ಷನ್ ಸುಧಾರಣೆ ಕಾಮಗಾರಿಗಳನ್ನು ಒದಗಿಸುವುದು. ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ).: 584.95 (ಜಿಎಸ್‌ಟಿ ಸೇರಿ). ಇಎಂಡಿ ಮೊತ್ತ (ಲಕ್ಷ ಗಳಲ್ಲಿ): 8.80.

ಟೆಂಡರ್‌ನ ಕಾರ್ಯಸೂಚಿ: ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟ್‌ಲ್‌ನಿಂದ **ದಿನಾಂಕ: 25–07–2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.** 2) ವಿಚಾರಣೆಗಳನ್ನು ಸ್ವೀಕರಿಸುವ **ಕೊನೆಯ ದಿನಾಂಕ: 03.08.2024 ಸಂಜೆ 4:00 ಗಂಟೆಯವರೆಗೆ.** 3) ಪೂರ್ವ ಬಿಡ್ ಸಭೆಯನ್ನು **ದಿನಾಂಕ: 03.08.2024 ರಂದು ಸಂಜೆ 4:00 ಗಂಟೆಗೆ ಪ್ರಧಾನ ಮುಖ್ಯ ಅಭಿಯಂತರರವರ ಕಛೇರಿ, ಬೃಬೆಂಮಪಾ, 1ನೇ ಮಹಡಿ ಅನೆಕ್ಸ್–2 ಕಟ್ಟಡ, ಎನ್.ಆರ್. ಚೌಕ, ಬೆಂಗಳೂರು–560002** ಇಲ್ಲಿ ನಡಸಲಾಗುವುದು. 4) ಟೆಂಡರ್ ಸಲ್ಲಿಸುವ **ಕೊನೆಯ ದಿನಾಂಕ: 14–08–2024 ಸಂಜೆ 4.00 ಗಂಟೆಯವರೆಗೆ 5)** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 16–08–2024 ಬೆಳಿಗ್ಗೆ 11.00 ಗಂಟೆಗೆ 6)** ಆರ್ಥಿಕ ಬಿಡ್ ತೆರೆಯುವ ದಿನಾಂಕ: ಅರ್ಹ ಟೆಂಡರ್‌ದಾರರಿಗೆ ತಿಳಿಸಲಾಗುವದು. 7) ಈ ಟೆಂಡರ್ ಸೂಚನೆಯನ್ನು ಬೃಬೆಂಮಪಾಲಿಕೆಯ ವೆಬ್‌ಸೈಟ್: **www.bbmp.gov.in** ನಲ್ಲಿಯೂ ನೋಡಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಇನ್‌ಫ್ರಾ ವಿಭಾಗ-ಆರ್‌ಐ, ಬೃಬೆಂಮಪಾ.

रजिस्ट्री सं. डी.एल. 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.- 20072024-255604
CG-DL-E-20072024-255604
असाधारण
EXTRAORDINARY
भाग- II - खण्ड- 3 - उप खण्ड- (ii)
PART II - Section -3 - Sub section (ii)
प्राधिकार से प्रकाशित
PUBLISHED BY AUTHORITY

सं. - 2685] नई दिल्ली, बृहस्पतिवार, जुलाई 18, 2024 / आषाढ 27, 1946
No. 2685] NEW DELHI, THURSDAY, JULY 18, 2024 / ASHADHA 27, 1946

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 18ನೇ ಜುಲೈ, 2024

ಎಸ್.ಓ. ನಂ. 2822(ಇ)., ದಿನಾಂಕ: 18.07.2024 – ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಸೂಚಿಯಲ್ಲಿನ ವಿವರಿಸಿರುವ ಜಮೀನುಗಳನ್ನು **ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ** ನಂ. 275ರಲ್ಲಿ **Re-construction of Major Bridge at Km. 173.600 across Lakshmanathirtha River along with approaches land in the stretch from Km. 171.30 to Km. 176.40 Hunsur Town Limits** **(ಬಂಟ್ವಾಳ – ಮೈಸೂರು ಸೆಕ್ಷನ್) ರವರೆಗೆ ರಸ್ತೆ ನಿರ್ಮಾಣ, (ಅಗಲೀಕರಣ, ದ್ವಿಪಥ/ನಾಲ್ಕು ಪಥ ಇತ್ಯಾದಿ),** ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆಂದು ಇಚ್ಛಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48)ರ 3ಎ (1)ರ ಪ್ರಕಾರ (ಇನ್ನು ಮುಂದೆ ಈ ಉಲ್ಲೇಖಿಸಲ್ಪಟ್ಟ ಕಾಯಿದೆ) ವಿಶೇಷ ಗೆಜೆಟ್‌ನ ಭಾಗ 2, ಸೆಕ್ಷನ್ 3 ಸಬ್ ಸೆಕ್ಷನ್ (1) ರಂತೆ ಭಾರತ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಘೋಷಿಸಲಾಗಿದೆ.

ಸದರಿ ಜಮೀನುಗಳ ಬಗ್ಗೆ ಯಾವುದೇ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಿಸಲಾದಂತೆ ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ಉಲ್ಲೇಖಿತ ಭೂಸ್ವಾಧೀನ ಅಧಿನಿಯಮದ ಕಲಂ 3ಸಿ ಉಪಕಲಂ(1)ರ ಅನ್ವಯ ಉದ್ದೇಶಿತ ಭೂಸ್ವಾಧೀನಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು **ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು–275, ಪಿ.ಡಬ್ಲ್ಯುಡಿ ಆವರಣ, ಕೆ.ಆರ್. ವೃತ್ತ, ಬೆಂಗಳೂರು–01,** ರವರಿಗೆ ಲಿಖಿತವಾಗಿ ಸಕಾರಣಗಳೊಂದಿಗೆ ನೋಂದಾಯಿತ ಅಂಚೆ ಮೂಲಕ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ, ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ, ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕ್ಷೆಗಳು ಮತ್ತು ಜಮೀನುಗಳ ಇತರೆ ವಿವರಗಳನ್ನು ಮೇಲ್ಕಂಡ ಸಕ್ಷಮ ಪ್ರಾಧಿಕಾರರವರ ಕಚೇರಿಯಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳ ಪರಿಶೀಲನೆಗಾಗಿ ಇರಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ನಂ.275ರಲ್ಲಿ structures falling within the stretch Re-construction of Major Bridge at Km. 173.600 across Lakshmanathirtha River along with approaches land in the stretch from Km. 171.30 to Km. 176.40 Hunsur Town Limits (ಬಂಟ್ವಾಳ – **ಮೈಸೂರು ಸೆಕ್ಷನ್) ರವರೆಗೆ ರಸ್ತೆ ನಿರ್ಮಾಣ** ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ **ಜಿಲ್ಲೆಯ ಹೆಸರು : ಮೈಸೂರು**

ಕ್ರ. ಸಂ.	ಸರ್ವೆ / ಪ್ಲಾಟ್ ನಂಬರ್	ಜಮೀನಿನ ತಹರೆ	ಜಮೀನಿನ ಸ್ವರೂಪ	ವಿಸ್ತೀರ್ಣ (ಸ್ಥಳೀಯ ಮಾಪನದಲ್ಲಿ) (ಚ.ಮೀ.ಗಳಲ್ಲಿ)	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	2	3	4	5	6
ತಾಲ್ಲೂಕು: ಹುಣಸೂರು					
ಗ್ರಾಮ : ದೊಡ್ಡಹುಣಸೂರು					
1	30/4	ಸರ್ಕಾರಿ	ಸ್ಮಶಾನ	1136	0.1136
2	31	ಖಾಸಗಿ	ಗಾರ್ಡನ್	508	0.0508
3	33	ಖಾಸಗಿ	ಗಾರ್ಡನ್	130	0.013
ಗ್ರಾಮ : ಕಲ್ಕುಣಿಕೆ					
4	82/2	ಖಾಸಗಿ	ಖುಷ್ಕಿ	657	0.0657
5	96/5ಬಿ1	ಖಾಸಗಿ	ಖುಷ್ಕಿ	651	0.0651
			ಒಟ್ಟು		**0.3082**

[F.No.RW/BNG/NH-275/Km.171to176/2023-24/3A]

ಅಭಯ್ ಜೈನ್, ಉಪ ಕಾರ್ಯದರ್ಶಿಗಳು

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್ *	124.80	123.25	33,241	11,852
ಹಾರಂಗಿ	2,859	2,856.64	16,340	8,700
ಕಬಿನಿ	2,284.00	2,282.82	17,877	25,000
ಹೇಮಾವತಿ	2,922	2,920.95	25,521	15,965
ಲಿಂಗನಮಕ್ಕಿ	1,819	1,799.00	42,269	2,400.4
ಸೂಪಾ (ಮೀ)	564	545.25	35,298	00
ಮಾಣಿ	595	582.56	3,525	00
ತುಂಗಭದ್ರಾ	1,633	1,629.84	85,148	15,159
ಮಲಪ್ರಭಾ	2,079.5	2,064.50	11,675	194
ಘಟಪ್ರಭಾ	2175	2,161.63	27,754	2,534
ಭದ್ರಾ	186	168.2	20,045	196
ಆಲಮಟ್ಟಿ (ಮೀ)	519.60	517.58	1,50,000	1,70,000
ನಾರಾಯಣಪುರ (ಮೀ)	492.25	491.02	1,50,000	1,43,500

* ನೆಲಮಟ್ಟದಿಂದ



ಹಂಪಿಯ ತುಂಗಭದ್ರಾ ನದಿಯ ನೀರನಲ್ಲಿ ಪುರಂದರ ಮಂಟಪ ಅರ್ಧದಷ್ಟು ಮುಳುಗಿದೆ (ಎಡ ಚಿತ್ರ), ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶಿರೂರು ಬಳಿ ಗಂಗಾವಳಿ ನದಿಯಲ್ಲಿ ಗುಡ್ಡ ಕುಸಿತದಿಂದ ಕಾಣೆಯಾದ ಜನರು ಮತ್ತು ಲಾರಿಗಾಗಿ ಮಂಗಳವಾರ ಶೋಧ ನಡೆಯಿತು —ಪ್ರಜಾವಾಣಿ ಚಿತ್ರ

ಲಿಂಗಸುಗೂರು ತಾಲ್ಲೂಕಿನಲ್ಲಿ ಕೃಷ್ಣಾ ನದಿಗೆ ಪ್ರವಾಹ • ಬೆಳಗಾವಿ ಜಿಲ್ಲೆಯ ಕೆಲವೆಡೆ ಶಾಲಾ– ಕಾಲೇಜುಗಳಿಗೆ ರಜೆ

ನಡುಗಡ್ಡೆಗಳಲ್ಲಿ ಸಿಲುಕಿದ ಜನ, ಜಾನುವಾರು

ಪ್ರಜಾವಾಣಿ ವಾರ್ತೆ

ಲಿಂಗಸುಗೂರು (ರಾಯಚೂರು ಜಿಲ್ಲೆ)/ ಹೊಸಪೇಟೆ (ವಿಜಯನಗರ): ರಾಜ್ಯದ ವಿವಿಧೆಡೆ ಮಂಗಳವಾರವೂ ಮಳೆ ಮುಂದುವರಿದಿದೆ. ಕೆಲವೆಡೆ ಬಿರುಸು ಕಡಿಮೆಯಾಗಿದೆ. ಕೆಲ ದಿನಗಳಿಂದ ಸುರಿದ ಸತತ ಮಳೆ ಕಾರಣ ಕೃಷ್ಣಾ ನದಿಯಲ್ಲಿ ಪ್ರವಾಹ ಕಾಣಿಸಿಕೊಂಡಿದೆ.

‘ವ್ಯಾಪಕ ಮಳೆ ಹಿನ್ನೆಲೆಯಲ್ಲಿ ಬೆಳಗಾವಿ, ಖಾನಾಪುರ, ಬೈಲಹೊಂಗಲ ಮತ್ತು ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಅಂಗನವಾಡಿ ಕೇಂದ್ರಗಳು, ಸರ್ಕಾರಿ, ಅನುದಾನಿತ, ಅನುದಾನರಹಿತ ಪ್ರಾಥಮಿಕ, ಪ್ರೌಢಶಾಲೆಗಳಿಗೆ ಜುಲೈ 24ರಂದು ರಜೆ ನೀಡಲಾಗಿದೆ. ಬೆಳಗಾವಿ ಮತ್ತು ಖಾನಾಪುರ ತಾಲ್ಲೂಕಿನ ಪದವಿಪೂರ್ವ ಕಾಲೇಜುಗಳಿಗೂ ರಜೆ ಇರುತ್ತದೆ’ ಎಂದು ಬೆಳಗಾವಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದ್ದಾರೆ.

ಲಿಂಗಸುಗೂರು ತಾಲ್ಲೂಕಿನಲ್ಲಿ ಕೃಷ್ಣಾ ನದಿಯ ಪ್ರವಾಹ ಹೆಚ್ಚಾಗಿದ್ದು, ಮೂರು ನಡುಗಡ್ಡೆ ಪ್ರದೇಶಗಳಲ್ಲಿ 24 ಜನರು ಸಿಲುಕಿಕೊಂಡಿದ್ದಾರೆ.

ನಾರಾಯಣಪುರದ ಬಸವಸಾಗರ ಜಲಾಶಯದಿಂದ 1.43 ಲಕ್ಷ ಕ್ಯುಸೆಕ್ ನೀರು ಹರಿಸಲಾಗುತ್ತಿದೆ. ಇದರಿಂದಾಗಿ ಕರಕಲಗಡ್ಡಿ, ಮ್ಯಾದರಗಡ್ಡಿ, ವಂಕಮ್ಮನ ಗಡ್ಡಿ ಪ್ರದೇಶಗಳು ಭಾಗಶಃ ಜಲಾವೃತಗೊಂಡು, ಬಾಹ್ಯ ಸಂಪರ್ಕ ಕಳೆದುಕೊಂಡಿವೆ.

ಕರಕಲಗಡ್ಡಿಯಲ್ಲಿ 5, ಮ್ಯಾದರ ಗಡ್ಡಿಯಲ್ಲಿ 15, ವಂಕಮ್ಮನಗಡ್ಡಿ 4 ಜಾನುವಾರುಗಳು ಸಿಲುಕಿವೆ. ನದಿಯಲ್ಲಿ ನೀರು ಬರಲು ಆರಂಭಿಸುತ್ತಿದ್ದಂತೆಯೇ ಕೆಲವರು ಮುನ್ನೆಚ್ಚರಿಕಾ ಕ್ರಮವಾಗಿ ನಡುಗಡ್ಡೆ ತೊರೆದು ಸುರಕ್ಷಿತ ಸ್ಥಳಕ್ಕೆ ಬಂದಿದ್ದಾರೆ. ಪರ್ಯಾಯ ಆಸರೆ ಇಲ್ಲದವರು ನಡುಗಡ್ಡೆಯಲ್ಲೇ ಉಳಿದುಕೊಂಡಿದ್ದಾರೆ.

‘ಸಂತ್ರಸ್ತರ ಸ್ಥಳಾಂತರಕ್ಕೆ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ. ಹೀಗಾಗಿ ಕೆಲ ಕುಟುಂಬಗಳು ನಡುಗಡ್ಡೆಗಳಲ್ಲೇ ಉಳಿದುಕೊಂಡಿವೆ’ ಎಂದು ಗ್ರಾಮಸ್ಥರು ದೂರಿದ್ದಾರೆ.

‘ನಡುಗಡ್ಡೆಯಲ್ಲಿ ಸಿಲುಕಿರುವ ಜನರನ್ನು ಸುರಕ್ಷಿತ ಸ್ಥಳಕ್ಕೆ ಕರೆತರಲು ಸಾಧ್ಯವಿರುವ ಕ್ರಮ ಕೈಗೊಳ್ಳಲಾಗುವುದು’ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಶಿವಪ್ಪ ಭಜಂತ್ರಿ ತಿಳಿಸಿದ್ದಾರೆ.

ತುಂಗಭದ್ರಾ ಅಣೆಕಟ್ಟೆಯಿಂದ ಮೂರು ಕ್ರಸ್ಟ್‌ಗೇಟ್‌ಗಳ ಮೂಲಕ ನೀರು ನದಿಗೆ ಹರಿಯುತ್ತಿರುವ ಕಾರಣ ಹಂಪಿ ಸಮೀಪ ತುಂಗಭದ್ರಾ ನದಿಯ ನೀರಿನ ಮಟ್ಟ ಏರಿಕೆ ಆಗಿದೆ. ಪುರಂದರ ಮಂಟಪ ಅರ್ಧ ಮುಳುಗಿದೆ. ವಿರೂಪಾಕ್ಷ ದೇವಸ್ಥಾನ ಬಳಿ ತುಂಗಭದ್ರಾ ಸ್ನಾನಘಟ್ಟದಲ್ಲಿರುವ ಯಜ್ಞೋಪವೀತ ಮಂಟಪ ಬಹುತೇಕ ಮುಳುಗಿದೆ. ಕಳೆದ ವರ್ಷ ಅಣೆಕಟ್ಟೆ ತುಂಬದೆ ಇದ್ದ ಕಾರಣ ನೀರು ನದಿಗೆ ಹರಿದಿರಲಿಲ್ಲ.

ಸೇತುವೆಗಳು ಮುಳುಗಡೆ (ಬೆಳಗಾವಿ ವರದಿ): ಮಹಾರಾಷ್ಟ್ರದ ಘಟ್ಟ ಪ್ರದೇಶ ಹಾಗೂ ಜಿಲ್ಲೆಯಲ್ಲಿ ಮಳೆ ಮುಂದುವರಿದಿದ್ದು, ಮುಳುಗಡೆಯಾದ ಸೇತುವೆಗಳ ಸಂಖ್ಯೆ 25ಕ್ಕೆ ಏರಿಕೆಯಾಗಿದೆ.

ಕುಡಚಿ ಸೇತುವೆ, ಢವಳೇಶ್ವರ ಸೇತುವೆ ಮತ್ತು ಸದಲಗಾ–ಬೋರಗಾಂವ ಸೇತುವೆ ಮಂಗಳವಾರ ಮುಳುಗಿವೆ. ಢವಳೇಶ್ವರ ಸೇತುವೆ ಮುಳುಗಿದ್ದರಿಂದ ಅವರಾದಿ, ಯರಗುದ್ರಿ, ವೆಂಕಟಾಪುರ, ಅರಳಿಮಟ್ಟಿ, ತಿಮ್ಮಾಪುರ ಗ್ರಾಮಗಳ ಜನರಿಗೆ ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರಕ್ಕೆ ಸಂಚಾರ ಪೂರ್ಣ ಸ್ಥಗಿತಗೊಂಡಿದೆ. 7 ಕಿ.ಮೀ. ಅಂತರದಲ್ಲಿರುವ ಮಹಾಲಿಂಗಪುರಕ್ಕೆ ಈಗ 50 ಕಿ.ಮೀ. ಸುತ್ತು ಬಳಸಿ ಸಂಚರಿಸಬೇಕಿದೆ.

ಒಳಹರಿವು ಹೆಚ್ಚಳ: ಮಹಾರಾಷ್ಟ್ರದಿಂದ ಕೃಷ್ಣಾ ನದಿಗೆ ಹರಿದುಬರುವ ನೀರಿನ ಪ್ರಮಾಣ ಹೆಚ್ಚಳವಾಗಿದೆ. ‘ಕೃಷ್ಣಾ ಮತ್ತು ಅದರ ಉಪನದಿಗಳ ಪ್ರವಾಹ ನಿರ್ವಹಣೆಗೆ ಮುನ್ನೆಚ್ಚರಿಕೆ ವಹಿಸಬೇಕಿದೆ. ನಿಪ್ಪಾಣಿ ತಾಲ್ಲೂಕಿನ ಭಾರವಾಡದ 25 ಮನೆಗಳನ್ನು ಖಾಲಿ ಮಾಡಿಸಿ, ಎತ್ತರದ ಸ್ಥಳಗಳಿಗೆ ಸ್ಥಳಾಂತರಿಸಿದ್ದೇವೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ‘ಪ್ರಜಾವಾಣಿ’ಗೆ ತಿಳಿಸಿದರು.

(ಮಡಿಕೇರಿ/ಮಂಗಳೂರು ವರದಿ): ಕೊಡಗು ಜಿಲ್ಲೆಯ ಸೋಮವಾರಪೇಟೆ ಭಾಗದಲ್ಲಿ ಬಿರುಸಿನ ಮಳೆ ಮುಂದುವರಿದಿದೆ. ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಮಂಗಳವಾರ ಸಾಧಾರಣ ಮಳೆಯಾಗಿದೆ. ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣವಿತ್ತು. ದಿನವಿಡೀ ಬಿಟ್ಟು ಬಿಟ್ಟು ಮಳೆ ಸುರಿಯಿತು.

ಹಾವೇರಿ ಜಿಲ್ಲೆಯಲ್ಲಿ ವರದಾ ನದಿ ತುಂಬಿ ಹರಿಯುತ್ತಿದ್ದು, ಅಚ್ಚುಕಟ್ಟು ಪ್ರದೇಶಕ್ಕೆ ನೀರು ನುಗ್ಗುತ್ತಿದೆ. ಸುಮಾರು 992 ಹೆಕ್ಟೇರ್ ವ್ಯಾಪ್ತಿಯಲ್ಲಿ ಬೆಳೆ ಜಲಾವೃತವಾಗಿದೆ. ಬಾಗಲಕೋಟೆಯಲ್ಲಿ ಘಟಪ್ರಭಾ ನದಿಯಲ್ಲಿ ನೀರಿನ ಹರಿವು ಹೆಚ್ಚಿರುವುದರಿಂದ ಜಿಲ್ಲೆಯ ಮುಧೋಳ ತಾಲ್ಲೂಕಿನ ಆರು ಬ್ರಿಡ್ಜ್ ಕಂ ಬ್ಯಾರೇಜ್ ಮುಳುಗಡೆಯಾಗಿವೆ.

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಕುಡಚಿ ಸೇತುವೆ ಮುಳುಗಡೆ ಆಗಿದೆ

ದೂಧಗಂಗಾ ನದಿ ತೀರದ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಜನವಾಡದ ಕೆಲ ತೋಟಗಳಿಗೆ ನೀರು ನುಗ್ಗಿದ್ದರಿಂದ ಸ್ಥಳೀಯರು ಜಾನುವಾರುಗಳನ್ನು ಬೇರೆಡೆ ಒಯ್ದರು ಪ್ರಜಾವಾಣಿ ಚಿತ್ರ: ಚಂದ್ರಶೇಖರ ಎಸ್ ಚಿನಕೇಕರ

ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಮ್ಯಾದರಗಡ್ಡಿಯನ್ನು ಸುತ್ತುವರಿದು ತುಂಬಿ ಹರಿಯುತ್ತಿರುವ ಕೃಷ್ಣಾ ನದಿ

ನೀರಿನಲ್ಲಿ ಶೋಧ: ಸೇನೆಗೆ ಸವಾಲು

ಕಾರವಾರ: ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಗುಡ್ಡ ಕುಸಿತ ಅವಘಡದಲ್ಲಿ ಕಾಣೆಯಾದ ಜನರು ಮತ್ತು ಲಾರಿಗಾಗಿ ಸುತ್ತಮುತ್ತಲ ಸ್ಥಳದಲ್ಲಿ ಕಾರ್ಯಾಚರಣೆ ನಡೆಸಿದ ಸೇನಾ ಸಿಬ್ಬಂದಿ ಮಂಗಳವಾರ ನೀರಿನೊಳಗೆ ಶೋಧ ಆರಂಭಿಸಿದರು.

ಘಟ್ಟದ ಮೇಲೆ ವ್ಯಾಪಕ ಮಳೆ ಸುರಿದಿರುವ ಕಾರಣ ಗಂಗಾವಳಿ ನದಿಯಲ್ಲಿ ನೀರಿನ ಹರಿವು ರಭಸವಾಗಿದೆ. ನೀರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಣ್ಣು ಬಿದ್ದಿದ್ದು, ಶೋಧ ಕಾರ್ಯಕ್ಕೆ ಅಡ್ಡಿಯಾಗಿದೆ. ನೌಕಾದಳದ ವಿಶೇಷ ಮುಳುಗುತಜ್ಞರು ಕಾರ್ಯಾಚರಣೆ ನಡೆಸಿದರೂ ಕೆಸರಿನಿಂದ ಹುಡುಕಾಟ ಕಷ್ಟವಾಗಿದೆ. ‘ರಬ್ಬರ್ ಬೋಟು ಬಳಸಿ ದಿನವಿಡೀ ನದಿಯಲ್ಲಿ ಅಲ್ಲದೇ ಮಣ್ಣಿನ ರಾಶಿ ಸುತ್ತಮುತ್ತ ಹುಡುಕಾಡಿದರೂ ಲಾರಿ ಮತ್ತು ಕಾಣೆಯಾದ ವ್ಯಕ್ತಿಗಳ ಬಗ್ಗೆ ಸುಳಿವು ಸಿಗಲಿಲ್ಲ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಗುಡ್ಡದಿಂದ ಬಿದ್ದ ಮಣ್ಣಿನ ರಾಶಿಯ ಬಹುಪಾಲು ನದಿಗೆ ಬಿದ್ದಿದೆ. ದೊಡ್ಡ ಕಲ್ಲುಗಳ ರಾಶಿಯೂ ಇದೆ. ಅವುಗಳಡಿ ಲಾರಿ ಸಿಲುಕಿರಬಹುದು. ಇದಕ್ಕಾಗಿ 30 ಅಡಿ ಆಳ ಶೋಧಿಸುವ ರೆಡಾರ್ ಅಗತ್ಯವಿದೆ ಎಂದು ಸೇನೆ ತಿಳಿಸಿದೆ. ಸದ್ಯ ಇಲ್ಲಿ ಗರಿಷ್ಠ 10 ಅಡಿ ಆಳ ಶೋಧಿಸಬಲ್ಲ ರೆಡಾರ್ ಇದೆ’ ಎಂದು ಅವರು ತಿಳಿಸಿದರು.

ಮರಾಠಾ ರೆಜಿಮೆಂಟ್ ಮತ್ತು ನೌಕಾದಳದ 60, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) 29, ರಾಜ್ಯ ವಿಪತ್ತು ನಿರ್ವಹಣಾ ಪಡೆಯ (ಎಸ್‌ಡಿಆರ್‌ಎಫ್) 44 ಸಿಬ್ಬಂದಿ 150ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಕಾರ್ಯಾಚಣೆಯಲ್ಲಿ ಭಾಗಿಯಾಗಿದ್ದಾರೆ.

8ಕ್ಕೆ ಏರಿದ ಸಾವಿನ ಸಂಖ್ಯೆ

ಗಂಗಾವಳಿ ನದಿಯ ಅಳಿವೆ ಪ್ರದೇಶವಾದ ಗೋಕರ್ಣ ಸಮೀಪದ ಗಂಗೆಕೊಳ್ಳದಲ್ಲಿ ಮಂಗಳವಾರ ನಸುಕಿನ ಜಾವ ಮಹಿಳೆಯೊಬ್ಬರ ಮೃತದೇಹ ಪತ್ತೆಯಾಗಿದೆ. ಶಿರೂರು ಗುಡ್ಡ ಕುಸಿತದಿಂದ ಗಂಗಾವಳಿ ನದಿಯಲ್ಲಿ ಉಂಟಾದ ಪ್ರವಾಹದಿಂದ ಕಾಣೆಯಾಗಿದ್ದ ಉಳುವರೆ ಗ್ರಾಮದ ಸಣ್ಣಿ ಹನುಮಂತಗೌಡ ಅವರ ಮೃತದೇಹ ಎಂದು ಗುರುತಿಸಲಾಗಿದೆ.

‘ಬಳೆ ಗುರುತು ಆಧರಿಸಿ ಸಣ್ಣಿ ಅವರದ್ದೇ ಮೃತದೇಹ ಎಂದು ಗುರುತಿಸಲಾಗಿದೆ. ಇದರೊಂದಿಗೆ ದುರಂತದಲ್ಲಿ ಸಾವಿಗೀಡಾದವರ ಸಂಖ್ಯೆ ಎಂಟಕ್ಕೆ ಏರಿಕೆಯಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರವಾಹ ಭೀತಿ: ಉತ್ತರ ಕನ್ನಡ ಜಿಲ್ಲೆಯ ಬಹುತೇಕ ಕಡೆ ಬಿರುಸಿನ ಮಳೆಯಾಗಿದ್ದು, ಹೊನ್ನಾವರ ತಾಲ್ಲೂಕಿನ ಗುಂಡಬಾಳ ನದಿ ದಂಡೆ ಪ್ರದೇಶದಲ್ಲಿ ಪ್ರವಾಹ ಭೀತಿ ಎದುರಾಗಿದೆ.

ಕರಾವಳಿ ಪ್ರದೇಶದಲ್ಲಿ ಆಗಾಗ ಬಿರುಸಿನ ಮಳೆಯಾದರೂ ಘಟ್ಟದ ಮೇಲಿನ ಭಾಗದಲ್ಲಿ ವ್ಯಾಪಕ ಮಳೆ ಸುರಿದಿದ್ದರಿಂದ ಅಘನಾಶಿನಿ, ಗಂಗಾವಳಿ ನದಿಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ಜೊಯಿಡಾದಲ್ಲಿ ಗಾಳಿ ಸಹಿತ ಅಬ್ಬರದ ಮಳೆ ಸುರಿದಿದ್ದು, ಗ್ರಾಮೀಣ ಭಾಗದ ಕೆಲವೆಡೆ ರಸ್ತೆ ಸಂಪರ್ಕ ಕಡಿತವಾಗಿದೆ.

ನೀರು ಪಾಲಾದ ಕುರಿಗಾಹಿ

ನಾಲತವಾಡ (ವಿಜಯಪುರ ಜಿಲ್ಲೆ): ಕಾಲುವೆಯಲ್ಲಿ ಬಿದ್ದ ಕುರಿ ಮರಿ ರಕ್ಷಿಸಲು ಯತ್ನಿಸಿ ನಾಗಬೇನಾಳ ಗ್ರಾಮದ ಮಂಜುನಾಥ ಮಾದರ (28) ಎಂಬ ಕುರಿಗಾಹಿ ನಾಲತವಾಡ ಸಮೀಪದ ನಾರಾಯಣಪುರ ಎಡದಂಡೆ ಕಾಲುವೆಯಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ.

‘ನಾರಾಯಣಪುರ ಚೆಕ್ ಪೋಸ್ಟ್ ಬಳಿ ನೀರು ಕುಡಿಯಲು ಕಾಲುವೆಗೆ ಇಳಿದಿದ್ದ ಕುರಿಮರಿಯು ಕೊಚ್ಚಿಕೊಂಡು ಹೋಗುತ್ತಿರುವುದು ಕಂಡು ಮಂಜುನಾಥ ರಕ್ಷಣೆ ಮಾಡಿದರು. ಆದರೆ, ಅವರಿಗೆ ಈಜಾಡಿಕೊಂಡು ಹೊರಬರಲು ಸಾಧ್ಯವಾಗಲಿಲ್ಲ. ನೀರಿನ ರಭಸದಲ್ಲಿ ಕೊಚ್ಚಿಕೊಂಡು ಹೋದರು. ಅವರಿಗಾಗಿ ಶೋಧ ಮುಂದುವರೆದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರವಾಹ ಇಳಿಮುಖ: ರಂಗನತಿಟ್ಟು ಪ್ರವೇಶ ಇಂದಿನಿಂದ ಪುನರಾರಂಭ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ಕಾವೇರಿ ನದಿಯಲ್ಲಿ ಪ್ರವಾಹ ಇಳಿಮುಖವಾಗಿರುವುದರಿಂದ, ಇಲ್ಲಿನ ರಂಗನತಿಟ್ಟು ಪಕ್ಷಿಧಾಮಕ್ಕೆ ಜುಲೈ 24 (ಬುಧವಾರ) ರಿಂದ ಮತ್ತೆ ಪ್ರವೇಶ ಅವಕಾಶ ಕಲ್ಪಿಸಲಾಗಿದೆ.

‘ನದಿಯಲ್ಲಿ ಪ್ರವಾಹ ಪರಿಸ್ಥಿತಿ ಇದ್ದುದರಿಂದ, ಪಕ್ಷಿಧಾಮದಲ್ಲಿ ದೋಣಿ ವಿಹಾರ ಮತ್ತು ಪ್ರವಾಸಿಗರ ಪ್ರವೇಶವನ್ನು ಮೂರು ದಿನಗಳ ಹಿಂದೆ ನಿರ್ಬಂಧಿಸಲಾಗಿತ್ತು. ಸದ್ಯ ಬುಧವಾರದಿಂದ ಪಕ್ಷಿ ವೀಕ್ಷಣೆಗೆ ಮಾತ್ರ ಅವಕಾಶ ಇರುತ್ತದೆ.

ನದಿಯ ನೀರಿನ ಮಟ್ಟ ಸಂಪೂರ್ಣ ಕಡಿಮೆಯಾದ ನಂತರ ದೋಣಿ ವಿಹಾರ ಪುನರಾರಂಭವಾಗಲಿದೆ’ ಎಂದು ಪಕ್ಷಿಧಾಮದ ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ ರವಿ ಎಚ್‌.ವಿ. ತಿಳಿಸಿದ್ದಾರೆ.

ಭೋವಿ ನಿಗಮದಲ್ಲೂ ಅಕ್ರಮ

ಒಂದನೇ ಪುಟದಿಂದ...

ಭೋವಿ ಅಭಿವೃದ್ಧಿ ನಿಗಮದಲ್ಲಿನ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಕಲಬುರಗಿ ಜಿಲ್ಲೆಯ ಕಾಳಗಿ ಪೊಲೀಸ್ ಠಾಣೆ (2022), ಬೆಂಗಳೂರಿನ ಸಿದ್ದಾಪುರ ಹಾಗೂ ಮಹಾಲಕ್ಷ್ಮಿಪುರ ಪೊಲೀಸ್ ಠಾಣೆ(2023), ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ನಗರ ಠಾಣೆಯಲ್ಲಿ(2023) ದಾಖಲಾಗಿದ್ದ ಪ್ರಕರಣಗಳನ್ನು ಸಿಐಡಿಗೆ ವರ್ಗಾವಣೆ ಮಾಡಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ.

‘ಬಂಧಿತ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ತನಿಖೆಗೆ ಕಸ್ಟಡಿಗೆ ಪಡೆದುಕೊಳ್ಳಲಾಗುವುದು’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಮಧ್ಯವರ್ತಿಗಳ ಮೂಲಕವೇ ಅಕ್ರಮ: ‘ಅಧಿಕಾರಿಗಳು, ಮಧ್ಯವರ್ತಿಗಳ ಮೂಲಕವೇ ಅಕ್ರಮ ನಡೆಸುತ್ತಿದ್ದರು. ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಕೆ.ಎನ್.ಸೂರ್ಯಕಲಾವತಿ ಸೇರಿದಂತೆ 46 ಮಹಿಳೆಯರನ್ನು ಭೇಟಿ ಮಾಡಿದ್ದ ಮಧ್ಯವರ್ತಿಗಳು, ನಿಗಮದಿಂದ ಸಾಲ ಕೊಡಿಸುವುದಾಗಿ ಆಮಿಷವೊಡ್ಡಿದ್ದರು. ನಂತರ, ಬ್ಯಾಂಕ್ ಅಧಿಕಾರಿಗಳ ಸೋಗಿನಲ್ಲಿ ಆರು ಮಂದಿ ಬಂದು ಫಲಾನುಭವಿಗಳ ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಭಾವಚಿತ್ರ, ಜಾತಿ ಮತ್ತು ಆದಾಯ ಧೃಢೀಕರಣ ಪತ್ರ ಪಡೆದುಕೊಂಡಿದ್ದರು. ಖಾಲಿ ಕಾಗದದ ಮೇಲೆ ಫಲಾನುಭವಿಗಳ ಸಹಿ ಪಡೆದು, ಸಾಲ ಮಂಜೂರಾತಿ ಆಶ್ವಾಸನೆ ನೀಡಿದ್ದರು. ಅಲ್ಲದೇ, ₹25 ಸಾವಿರ ಕಮಿಷನ್ ನೀಡುವಂತೆ ಸೂಚಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ಕಮಿಷನ್ ಕಡಿತ ಮಾಡಿಕೊಂಡು ನಿಮ್ಮ ಬ್ಯಾಂಕ್ ಖಾತೆಗೆ ₹25 ಸಾವಿರ ವರ್ಗಾಯಿಸಲಾಗಿದೆ ಎಂದು ಮಧ್ಯವರ್ತಿಗಳ ಮೂಲಕ ಅಧಿಕಾರಿಗಳು, ಪದ್ಮಾ ಎಂಬ ಫಲಾನುಭವಿಗೆ ಮಾಹಿತಿ ನೀಡಿದ್ದರು. ಅದಾದ ಮೇಲೆ ಪದ್ಮಾ ಸೇರಿದಂತೆ ಹಲವರಿಂದ ಪಡೆದಿದ್ದ ದಾಖಲೆಗಳನ್ನು ಮಲ್ಲೇಶ್ವರದ ಐಡಿಬಿಐ ಬ್ಯಾಂಕ್ ಶಾಖೆಗೆ ನೀಡಿ ಖಾತೆ ತೆರೆದಿದ್ದರು. ಪ್ರತಿ ಖಾತೆಗೆ ನಿಗಮದ ₹5 ಲಕ್ಷವನ್ನು ವರ್ಗಾವಣೆ ಮಾಡಿಕೊಂಡಿದ್ದರು. ಅಲ್ಲಿಂದ ನ್ಯೂ ಡ್ರೀಮ್ಸ್ ಎಂಟರ್‌ಪ್ರೈಸಸ್ ಎಂಬ ಖಾತೆಗೆ ಹಣ ವರ್ಗಾವಣೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಮೂವರ ಪಾತ್ರವಿರುವುದು ಸಾಬೀತಾಗಿದೆ’ ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದ 20ಕ್ಕೂ ಹೆಚ್ಚು ಮಂದಿಗೆ ₹10 ಲಕ್ಷ ಸಾಲ ಕೊಡಿಸುವುದಾಗಿ ದಾಖಲೆ ಪಡೆದುಕೊಂಡಿದ್ದರು. ರಾಜಾಜಿನಗರದ ಬ್ಯಾಂಕ್ ಶಾಖೆಯಲ್ಲಿ ಖಾತೆ ತೆರೆದು, 18 ಫಲಾನುಭವಿಗಳ ಹೆಸರಿನಲ್ಲಿ ಹಣ ಬಿಡುಗಡೆ ಮಾಡಿಕೊಂಡಿದ್ದರು’ ಎಂದು ಮೂಲಗಳು ತಿಳಿಸಿವೆ.

ಇ.ಡಿ ವಿರುದ್ಧದ ಎಫ್‌ಐಆರ್‌ಗೆ ತಡೆ

ಒಂದನೇ ಪುಟದಿಂದ...

‘ತನಿಖಾಧಿಕಾರಿ ಸಾಕ್ಷಿಯನ್ನು ಬೆದರಿಸಲು ಸಾಧ್ಯವಿಲ್ಲ. ವಾಲ್ಮೀಕಿ ನಿಗಮದಲ್ಲಿನ ಅಕ್ರಮ ಕುರಿತಂತೆ ರಾಜ್ಯ ಪೊಲೀಸರು ಶೇ 90ರಷ್ಟು ತನಿಖೆ ಪೂರ್ಣಗೊಳಿಸಿದ್ದಾರೆ. ಮಾಜಿ ಸಚಿವರೊಬ್ಬರನ್ನು ಬಂಧಿಸಲಾಗಿದೆ. ಇ.ಡಿ ಅಧಿಕಾರಿಗಳು ಮುಖ್ಯಮಂತ್ರಿ ಹೆಸರು ಹೇಳುವಂತೆ ಒತ್ತಡ ಹೇರಿದ್ದಾರೆ. ಈ ಮೂಲಕ ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸುವ ಸಂಚು ರೂಪಿಸಲಾಗಿದೆ’ ಎಂಬ ಗಂಭೀರ ಆರೋಪ ಮಾಡಿದರು.

ಇದಕ್ಕೂ ಮುನ್ನ ಅರ್ಜಿದಾರರ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್, ‘ನಿಗಮದಲ್ಲಿ ನಡೆದ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ನಿರ್ದೇಶಕ ಕಲ್ಲೇಶ್ ಅವರನ್ನು ಜುಲೈ 16ರಂದು ವಿಚಾರಣೆಗೆ ಕರೆದಿದ್ದ ಇ.ಡಿ ಅಧಿಕಾರಿಗಳು ಅವರಿಂದ ಹಲವು ಮಾಹಿತಿ ಪಡೆದು ಕಳುಹಿಸಿದ್ದರು. ವಿಚಾರಣೆ ವೇಳೆ 17 ಪ್ರಶ್ನೆ ಕೇಳಿದ್ದರು. ಇದಕ್ಕೆ ಕಲ್ಲೇಶ್, ಮೂರು ಪ್ರಶ್ನೆಗಳಿಗೆ ಉತ್ತರಿಸಲು ಕಡತದ ಅವಶ್ಯವಿದೆ ಹಾಗೂ ಕೆಳ ಹಂತದ ಅಧಿಕಾರಿಗಳಿಂದ ಮಾಹಿತಿ ಪಡೆಯಬೇಕಾಗಿದೆ ಎಂದು ತಿಳಿಸಿದ್ದರು. ತದನಂತರ ಆರು ದಿನಗಳಾದ ಮೇಲೆ ಇ.ಡಿ ಅಧಿಕಾರಿಗಳ ವಿರುದ್ಧ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ’ ಎಂದು ವಿವರಿಸಿದರು.

‘ಕಲ್ಲೇಶ್ ನೀಡಿದ ದೂರು ಆಧರಿಸಿ ಪೊಲೀಸರು ಇ.ಡಿ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಇ.ಡಿ ಅಧಿಕಾರಿಗಳು ನಿಯಮಾನುಸಾರ ತನಿಖೆ ನಡೆಸುವುದಕ್ಕೆ ರಾಜ್ಯ ಸರ್ಕಾರ ಈ ಮೂಲಕ ಬೆದರಿಕೆ ಹಾಕುತ್ತಿದೆ. ಇವೆಲ್ಲವನ್ನೂ ಗಮನಿಸಿದರೆ ಇದು ದುರುದ್ದೇಶದ ಯೋಜನೆ. ಆದ್ದರಿಂದ, ಅಧಿಕಾರಿಗಳ ವಿರುದ್ಧದ ಎಫ್‌ಐಆರ್‌ಗೆ ತಡೆ ನೀಡಬೇಕು’ ಎಂದು ಕೋರಿದರು.

ವಸ್ತುಸ್ಥಿತಿ ವರದಿ ಸಲ್ಲಿಕೆಗೆ ಸೂಚನೆ

ಬೆಂಗಳೂರು: ‘ಶಿರೂರು ಗುಡ್ಡ ಕುಸಿತದ ಪ್ರಕರಣದಲ್ಲಿ ಮಣ್ಣಿನಡಿ ಸಿಲುಕಿರುವ ಅಥವಾ ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ ಎಂದು ಅಂದಾಜಿಸಲಾಗಿರುವ ವ್ಯಕ್ತಿಗಳ ರಕ್ಷಣೆ ಹಾಗೂ ತೆರವು ಕಾರ್ಯಚರಣೆಗೆ ಸಂಬಂಧಿಸಿದ ವಸ್ತುಸ್ಥಿತಿ ವರದಿಯನ್ನು ಸಲ್ಲಿಸಿ’ ಎಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಸೂಚಿಸಿದೆ. ವಿಚಾರಣೆಯನ್ನು ಬುಧವಾರಕ್ಕೆ (ಜುಲೈ 24) ಮುಂದೂಡಿತು.

ಹೈಕೋರ್ಟ್ ವಕೀಲ ಶಿಜಿ ಮಲಯಾಳಿ ಹಾಗೂ ನವದೆಹಲಿಯ ಕೆ.ಆರ್.ಸುಭಾಷ್ ಚಂದ್ರನ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ಹಾಗೂ ನ್ಯಾಯಮೂರ್ತಿ ಸಿ.ಎಂ.ಜೋಶಿ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

‘ಮುಡಾಕ್ಕೆ ಪ್ರತಾಪ ಸಿಂಹ ವಂಚನೆ’

ಮೈಸೂರು: ‘ಎರಡು ಬಾರಿ ಮೈಸೂರು–ಕೊಡಗು ಸಂಸದರಾಗಿದ್ದ ಪ್ರತಾಪ ಸಿಂಹ ತಮ್ಮ ಪತ್ನಿ ಹೆಸರಿನಲ್ಲಿ ಮುಡಾದಿಂದ ಪಡೆದ ನಿವೇಶನದಲ್ಲಿ ನಿಯಮಾನುಸಾರ ಮನೆ ನಿರ್ಮಿಸದೇ, ಮುಡಾಕ್ಕೆ ಶೇ 25ರಷ್ಟು ದಂಡ ಶುಲ್ಕವನ್ನೂ ಪಾವತಿಸದೇ ವಂಚಿಸಿದ್ದಾರೆ’ ಎಂದು ಮುಡಾ ಅಧ್ಯಕ್ಷ ಕೆ. ಮರಿಗೌಡ ಆರೋಪಿಸಿದ್ದಾರೆ.

‘ಪ್ರತಾಪ ಸಿಂಹರ ಪತ್ನಿ ಜೆ.ಎಸ್. ಅರ್ಪಿತಾ ಅವರಿಗೆ ಸರ್ಕಾರದ ‘ಜಿ’ ಪ್ರವರ್ಗದಡಿ ವಿಜಯನಗರ ನಾಲ್ಕನೇ ಹಂತದಲ್ಲಿ 40X60 ಅಳತೆಯ ನಿವೇಶನ ಮಂಜೂರಾಗಿತ್ತು. ಅಲ್ಲಿ ಮನೆ ನಿರ್ಮಿಸಲು 2021ರಲ್ಲಿ ನಕ್ಷೆ ಮಂಜೂರಾತಿ ಪಡೆದು ನಿವೇಶನದಲ್ಲಿ ಕೇವಲ ಒಂದು ಜಂಕ್ ಶೀಟಿನ ಕೋಣೆಯನ್ನು ಮಾತ್ರ ಕಟ್ಟಿದ್ದರು. ನಂತರ ಅದನ್ನೇ ಮನೆ ಎಂದು ಬಿಂಬಿಸಿ ಪ್ರಾಧಿಕಾರದಿಂದ 2021ರ ಅಕ್ಟೋಬರ್‌ನಲ್ಲಿ ಕಟ್ಟಡ ಪೂರ್ಣಗೊಂಡ ವರದಿಯನ್ನೂ ಪಡೆದಿದ್ದಾರೆ. ಆ ಕಟ್ಟಡಕ್ಕೆ ಮನೆ ಕಂದಾಯವನ್ನು ನಿಗದಿಪಡಿಸಿ, ಅದೇ ವರ್ಷ ನವೆಂಬರ್‌ನಲ್ಲಿ ಕ್ರಯಪತ್ರ ಪಡೆದಿದ್ದಾರೆ. ಆ ನಂತರ ದೂರು ದಾಖಲಾಗಿದ್ದು, ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಕಟ್ಟಡ ಪೂರ್ಣಗೊಂಡ ವರದಿಯನ್ನು ರದ್ದುಪಡಿಸಿದ್ದಾರೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಸರ್ಕಾರದಿಂದ ಪಡೆದ ನಿವೇಶನದಲ್ಲಿ ಮನೆ ನಿರ್ಮಿಸದಿದ್ದರೆ, ನಿವೇಶನದಾರರು ನಿವೇಶನದ ಮಾರುಕಟ್ಟೆ ಮೌಲ್ಯದ ಶೇ 25ರಷ್ಟನ್ನು ದಂಡದ ರೂಪದಲ್ಲಿ ಪಾವತಿಸಬೇಕು. ಅದನ್ನು ತಪ್ಪಿಸಿಕೊಳ್ಳಲು ವಾಮ ಮಾರ್ಗ ಅನುಸರಿಸಿ ನಿವೇಶನಕ್ಕೆ ಕ್ರಯಪತ್ರ ಪಡೆದಿರುವ ಪ್ರತಾಪ ಸಿಂಹ, ಸಿದ್ದರಾಮಯ್ಯ ಕುಟುಂಬದವರನ್ನು ಟೀಕಿಸುವುದು ಎಷ್ಟರಮಟ್ಟಿಗೆ ಸರಿ?’ ಎಂದು ಅವರು ಪ್ರಶ್ನಿಸಿದ್ದಾರೆ.

ಗ್ರಾಮ ಪಂಚಾಯಿತಿ ನೌಕರರಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಪ್ರಾರಂಭ

ಕನಿಷ್ಠ ₹31 ಸಾವಿರ ವೇತನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕರವಸೂಲಿಗಾರ, ಕ್ಲರ್ಕ್, ಡಾಟಾ ಎಂಟ್ರಿ ಆಪರೇಟರ್, ನೀರುಗಂಟಿ, ಜವಾನ, ಸ್ವಚ್ಛತಾಗಾರರನ್ನು ಏಕಕಾಲಕ್ಕೆ ನೌಕರರೆಂದು ಘೋಷಿಸಿ, ₹31 ಸಾವಿರ ಕನಿಷ್ಠ ವೇತನ ನಿಗದಿಪಡಿಸಬೇಕು’ ಎಂದು ಆಗ್ರಹಿಸಿ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದರು.

‘ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುವ ನೌಕರರಿಗೆ ನಿವೃತ್ತಿ ಅಥವಾ ಮರಣ ಹೊಂದಿದವರಿಗೆ ಪ್ರತಿ ತಿಂಗಳು ಕನಿಷ್ಠ ₹6 ಸಾವಿರ ಪಿಂಚಣಿ ನೀಡಬೇಕು. ಇಲ್ಲಿನ ಸಿಬ್ಬಂದಿಗೆ ವರ್ಗಾವಣೆಗೆ ಅವಕಾಶ ಕಲ್ಪಿಸಬೇಕು. ನೀರುಗಂಟಿಗಳಿಗೆ ನಿರ್ದಿಷ್ಟ ಕೆಲಸಗಳನ್ನು ಮಾತ್ರ ನಿಗದಿಗೊಳಿಸಬೇಕು. ಆದಾಯಕ್ಕೆ ಅನುಗುಣವಾಗಿ ಕರವಸೂಲಿಗಾರರ ಹುದ್ದೆಗಳನ್ನು ನಿಗದಿಪಡಿಸಬೇಕು. ಎಲ್ಲ ಗ್ರಾಮ ಪಂಚಾಯಿತಿಗಳಿಗೆ ಲೆಕ್ಕ ಸಹಾಯಕರ ಹುದ್ದೆ ಸೃಷ್ಟಿಸಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ಗ್ರೇಡ್–1 ಕಾರ್ಯದರ್ಶಿ ಹುದ್ದೆಗಳಿಗೆ ಶೇಕಡ 100ರಷ್ಟು ಸ್ಥಾನಗಳನ್ನು, ಗ್ರೇಡ್–2 ಕಾರ್ಯದರ್ಶಿಗಳಿಗೆ ಶೇ 50ರಷ್ಟು, ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗೆ ಶೇ 50ರಷ್ಟು ಸ್ಥಾನಗಳಿಗೆ ಬಡ್ತಿ ನೀಡಬೇಕು. ಜನಸಂಖ್ಯೆ ಆಧರಿಸಿ ಗ್ರಾಮ ಪಂಚಾಯಿತಿಗಳನ್ನು ಮೇಲ್ದರ್ಜೆಗೆ ಏರಿಸಬೇಕು. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಹುದ್ದೆಗೆ ಶೇ 60ರಷ್ಟು ಸ್ಥಾನಗಳನ್ನು ಗ್ರೇಡ್–1 ಕಾರ್ಯದರ್ಶಿಗಳಿಗೆ ಮೀಸಲಿಡಬೇಕು. ಐಪಿಡಿ ಸಾಲಪ್ಪ ವರದಿಯಂತೆ ಪೌರ ಕಾರ್ಮಿಕರನ್ನು ನೇಮಿಸಿಕೊಳ್ಳಬೇಕು’ ಎಂದು ಒತ್ತಾಯಿಸಿದರು.

‘ಸೇವಾ ಹಿರಿತನದ ಆಧಾರದ ಮೇಲೆ ವೇತನ ಹೆಚ್ಚಳ ಮಾಡಬೇಕು. ನೌಕರರು ಅನಾರೋಗ್ಯದ ಸಂದರ್ಭದಲ್ಲಿ ಆಸ್ಪತ್ರೆ ವೆಚ್ಚವನ್ನು ಭರಿಸಬೇಕು. ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಎಲ್ಲ ವಿಭಾಗದ ಹುದ್ದೆಗಳನ್ನು ಭರ್ತಿ ಮಾಡಬೇಕು’ ಎಂದರು.

ಸಂಘದ ಅಧ್ಯಕ್ಷ ಎಂ.ಬಿ. ನಾಡಗೌಡ, ಪ್ರಧಾನ ಕಾರ್ಯದರ್ಶಿ ಜಿ. ರಾಮಕೃಷ್ಣ ಸೇರಿದಂತೆ ರಾಜ್ಯ ವಿವಿಧ ಜಿಲ್ಲೆಗಳಿಂದ ನೂರಾರು ಪಂಚಾಯಿತಿ ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆದ ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ಸದಸ್ಯರು ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ/ರಂಜು ಪಿ

ಆರ್‌ಎಫ್‌ಒ ಲೋಕಾಯುಕ್ತ ಬಲೆಗೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಅರಣ್ಯಭೂಮಿಯಲ್ಲಿ ಜಲ್ಲಿ ಕ್ರಷರ್ ಘಟಕ ಸ್ಥಾಪಿಸುವ ಸಲುವಾಗಿ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಕೊಡಲು ಮಂಗಳವಾರ ಪಟ್ಟಣದ ಹೋಟೆಲ್ ಒಂದರಲ್ಲಿ ₹1 ಲಕ್ಷ ಲಂಚ ಪಡೆಯುತ್ತಿದ್ದಾಗ ವಲಯ ಅರಣ್ಯಾಧಿಕಾರಿ ಪುಟ್ಟಸ್ವಾಮಿ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದರು.

ಮಂಡ್ಯ ಲೋಕಾಯುಕ್ತ ಎಸ್ಪಿ ಸುರೇಶಬಾಬು, ಡಿವೈಎಸ್ಪಿ ಸುನಿಲ್ ಕುಮಾರ್, ಇನ್‌ಸ್ಪೆಕ್ಟರ್ ಮೋಹನ್‌ರೆಡ್ಡಿ ಅವರಿದ್ದ ತಂಡ ಲಂಚದ ಹಣದ ಸಹಿತ ಆರೋಪಿಯನ್ನು ಹಿಡಿಯಿತು.

ಮಂಡ್ಯ ನಗರದ ಸಂತೋಷ ಕುಮಾರ್ ಎಂಬವರು ತಾಲ್ಲೂಕಿನ ಟಿ.ಎಂ. ಹೊಸೂರು ಬಳಿ ಜಲ್ಲಿ ಕ್ರಷರ್ ಘಟಕ ಸ್ಥಾಪಿಸಲು ಅರ್ಜಿ ಸಲ್ಲಿಸಿದ್ದರು. ಅದು ಅರಣ್ಯ ಇಲಾಖೆಯ ಜಾಗವಾಗಿದ್ದು ₹10 ಲಕ್ಷ ಲಂಚ ಕೊಡಬೇಕು ಎಂದು ಆರೋಪಿ ಅಧಿಕಾರಿ ಕೇಳಿದ್ದರು. ಮೊದಲ ಕಂತಾಗಿ ₹ 1 ಲಕ್ಷವನ್ನು ಪಡೆದ ಕೂಡಲೇ ಲೋಕಾಯುಕ್ತ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ಬಂಧಿಸಿದರು.

ಕಾಲೇಜಿನಲ್ಲೇ ಉಪನ್ಯಾಸಕರ ಡಿಶುಂ, ಡಿಶುಂ

ಪ್ರಜಾವಾಣಿ ವಾರ್ತೆ

ಕೋಲಾರ: ನಗರದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಿಬ್ಬರು ಮಂಗಳವಾರ ಬೆಳಗ್ಗೆ ಕಾಲೇಜಿನಲ್ಲಿ ಹೊಡೆದಾಡಿಕೊಂಡಿದ್ದು, ಗಾಯಗೊಂಡು ಆಸ್ಪತ್ರೆ ಸೇರಿದ್ದಾರೆ.

ವಿದ್ಯಾರ್ಥಿನಿಯರು ಪ್ರಾರ್ಥನೆ ಮುಗಿಸಿ ತರಗತಿಗೆ ತೆರಳುತ್ತಿದ್ದ ವೇಳೆ ಕಾಲೇಜಿನ ಕಾರಿಡಾರ್‌ನಲ್ಲಿ ನಾಗಾನಂದ ಕೆಂಪರಾಜು ಹಾಗೂ ಜೆ.ಜಿ. ನಾಗರಾಜ್ ಎಂಬ ಉಪನ್ಯಾಸಕರು ಹೊಡೆದಾಡಿಕೊಂಡಿದ್ದಾರೆ.

2021ರಲ್ಲಿ ನಡೆದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಚುನಾವಣೆ ವೇಳೆ ಇಬ್ಬರ ನಡುವೆ ಉಂಟಾದ ಮನಸ್ತಾಪ ಜಗಳಕ್ಕೆ ಕಾರಣ ಎನ್ನಲಾಗಿದೆ. ಬಹಳ ದಿನಗಳಿಂದ ಸಾಮಾಜಿಕ ಜಾಲತಾಣದಲ್ಲಿ ಇಬ್ಬರ ನಡುವೆ ಚಕಮಕಿ ನಡೆಯುತ್ತಿತ್ತು. ಮಂಗಳವಾರ ಅದು ಅತಿರೇಕಕ್ಕೆ ಹೋಗಿದೆ.

ಹೊಡೆದಾಟದಲ್ಲಿ ನಾಗರಾಜ್ ಕನ್ನಡಕ ಒಡೆದು, ಮುಖ ಊದಿಕೊಂಡಿದೆ. ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನಾಗಾನಂದ ಕೂಡ ಕೈಗೆ ಗಾಯವಾಗಿದೆ ಎಂದು ಆಸ್ಪತ್ರೆ ಸೇರಿದ್ದಾರೆ. ಈ ನಡುವೆ ಇಬ್ಬರ ಬೆಂಬಲಿಗರು ರಾಜಿ ಸಂಧಾನದಲ್ಲಿ ತೊಡಗಿದ್ದಾರೆ.

‘ನನ್ನ ವರ್ಗಾವಣೆ ಮಾಡಿ ಇಲ್ಲವೇ ಆ ಇಬ್ಬರೂ ಉಪನ್ಯಾಸಕರನ್ನು ವರ್ಗಾವಣೆ ಮಾಡಿ ಎಂದು ಡಿಡಿಪಿಯು ಹಾಗೂ ಶಾಸಕರಿಗೆ ಮನವಿ ಮಾಡಿಕೊಂಡಿದ್ದೇನೆ’ ಎಂದು ಪ್ರಾಂಶುಪಾಲ ಎಂ.ಬಾಲಕೃಷ್ಣ ತಿಳಿಸಿದರು.

ಸರ್ಕಾರಿ ಪಿಯು ಕಾಲೇಜಿನಲ್ಲಿ ಸುಮಾರು ಸಾವಿರ ಹೆಣ್ಣು ಮಕ್ಕಳು ಓದುತ್ತಿದ್ದಾರೆ. ಮಾದರಿ ಆಗಿರಬೇಕಿದ್ದ ಉಪನ್ಯಾಸಕರು ಕಿತ್ತಾಡಿಕೊಂಡಿರುವುದು ನಾಚಿಕೆಗೇಡಿನ ಸಂಗತಿ. ವಿದ್ಯಾರ್ಥಿಗಳಿಗೆ ಇವರು ಯಾವ ಸಂದೇಶ ನೀಡುತ್ತಾರೆ? ಇದು ಅಸಹ್ಯಕರ ವರ್ತನೆ ಎಂದು ಡಿಡಿಪಿಯು ರಾಮಚಂದ್ರಪ್ಪ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ್ದಾರೆ.

‘ದೇವರಾಜ ಅರಸು ನಿಗಮದಲ್ಲಿ ಅವ್ಯವಹಾರ’

ಪ್ರಜಾವಾಣಿ ವಾರ್ತೆ

ಹಾಸನ: ‘ಇಲ್ಲಿನ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಅವ್ಯವಹಾರ ನಡೆದಿದ್ದು, ಸರ್ಕಾರದ ಅನುಮತಿ ಇಲ್ಲದೆ, ಖಾಸಗಿ ಜಾಗದಲ್ಲಿ ರಾತ್ರಿ ವೇಳೆ ಕಡತ ನಾಶ ಮಾಡಲಾಗಿದೆ’ ಎಂದು ಕುರುವಂಕ ಗ್ರಾಮ ಪಂಚಾಯಿತಿ ಸದಸ್ಯ, ಜೆಡಿಎಸ್ ಮುಖಂಡ ಉಮೇಶ್ ಜಿಲ್ಲಾಧಿಕಾರಿಗೆ ದೂರು ನೀಡಿದ್ದಾರೆ.

ನಿಗಮದ್ದು ಎನ್ನಲಾದ ದಾಖಲೆಗಳನ್ನು ಸುಡುತ್ತಿರುವ ವಿಡಿಯೊಗಳ ಸಹಿತ ದೂರು ನೀಡಿರುವ ಅವರು, ‘ಮಧ್ಯವರ್ತಿಗಳ ಜೊತೆಗೆ ಸೇರಿ ಸರ್ಕಾರಿ ಯೋಜನೆಗಳನ್ನು ನಿಗಮದ ಜಿಲ್ಲಾ ವ್ಯವಸ್ಥಾಪಕ ನಾಗೇಂದ್ರ ದುರ್ಬಳಕೆ ಮಾಡಿಕೊಂಡಿದ್ದು, ತನಿಖೆ ನಡೆಸಬೇಕು ಒತ್ತಾಯಿಸಿದ್ದಾರೆ

‘ನಾಗೇಂದ್ರ ಅವರು ಮಧ್ಯವರ್ತಿ ಶಿವರಾಜ್ ಎಂಬುವರೊಂದಿಗೆ ಸೇರಿ, ಅವರ ತಾಯಿಯ ಹೆಸರಿನಲ್ಲಿರುವ ಅರಸೀಕೆರೆ ತಾಲ್ಲೂಕಿನ ಹೆಬ್ಬನಘಟ್ಟ ಗ್ರಾಮದ ಜಮೀನಿನಲ್ಲಿ ಜುಲೈ 7ರಿಂದ 10ರವರೆಗೆ ನಿಗಮಕ್ಕೆ ಸೇರಿದ ಹಿಂದಿನ ದಾಖಲೆಗಳನ್ನು ಸುಟ್ಟು ಹಾಕಿದ್ದಾರೆ’ ಎಂದು ದೂರಿದ್ದಾರೆ.

ನಾಗೇಂದ್ರ ಅವರನ್ನು ‘ಪ್ರಜಾವಾಣಿ’ ಸಂಪರ್ಕಿಸಲು ಪ್ರಯತ್ನಿಸಿದರೂ, ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

ಅನುದಾನದ ದುರ್ಬಳಕೆ: ಸಿಎಜಿ ವರದಿಯಲ್ಲಿ ಬಹಿರಂಗ

25 ವರ್ಷಗಳಾದರೂ ಕ್ರಮವಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಅನುದಾನದ ದುರ್ಬಳಕೆ ಮತ್ತು ಸರ್ಕಾರಿ ಸಾಮಗ್ರಿಗಳ ಕಳ್ಳತನ ಮಾಡಿದ್ದ ಆರೋಪಿಗಳ ವಿರುದ್ಧ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ಸಂಸ್ಥೆಗಳು 25 ವರ್ಷಗಳಾದರೂ ಕ್ರಮ ಜರುಗಿಸಿಲ್ಲ ಎಂದು ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ.

2022-23ನೇ ಆರ್ಥಿಕ ವರ್ಷದಲ್ಲಿನ ರಾಜ್ಯ ಸರ್ಕಾರದ ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದ ಸಿಎಜಿ ವರದಿಯನ್ನು ವಿಧಾನಮಂಡಲದಲ್ಲಿ ಮಂಗಳವಾರ ಮಂಡಿಸಲಾಯಿತು. ₹42.88 ಕೋಟಿ ಮೊತ್ತದ ನಷ್ಟ ಉಂಟಾಗಿರುವ 61 ಪ್ರಕರಣಗಳಲ್ಲಿ ತಪ್ಪಿತಸ್ಥರ ವಿರುದ್ಧ ದೀರ್ಘ ಕಾಲದಿಂದಲೂ ಕ್ರಮ ಕೈಗೊಂಡಿಲ್ಲ ಎಂಬ ಉಲ್ಲೇಖ ವರದಿಯಲ್ಲಿದೆ.

39 ಪ್ರಕರಣಗಳಲ್ಲಿ ಇಲಾಖಾ ಶಿಸ್ತು ಕ್ರಮ ಮತ್ತು ಕ್ರಿಮಿನಲ್ ಪ್ರಕರಣ ದಾಖಲಿಸಿ ತನಿಖೆ ನಡೆಸುವ ಕ್ರಮಗಳು ಆರಂಭವೇ ಆಗಿಲ್ಲ. 19 ಪ್ರಕರಣಗಳಲ್ಲಿ ಇಲಾಖಾ ವಿಚಾರಣೆ ಆರಂಭವಾಗಿದ್ದರೂ, ಅಂತಿಮಗೊಂಡಿಲ್ಲ. ಮೂರು ಕ್ರಿಮಿನಲ್ ಪ್ರಕರಣಗಳ ವಿಚಾರಣೆ ಮುಗಿದಿದ್ದರೂ, ನಷ್ಟದ ಮೊತ್ತವನ್ನು ವಸೂಲಿ ಮಾಡಿಲ್ಲ ಎಂದು ಸಿಎಜಿ ಹೇಳಿದೆ.

ಆರೋಗ್ಯ ಇಲಾಖೆಯಲ್ಲಿ 25 ವರ್ಷಗಳಿಗಿಂತ ಹಳೆಯದಾದ ಹತ್ತು ಪ್ರಕರಣಗಳು ಬಾಕಿ ಇವೆ. ವೈದ್ಯಕೀಯ ಶಿಕ್ಷಣ ಮತ್ತು ಅರಣ್ಯ ಇಲಾಖೆಗಳಲ್ಲಿ ತಲಾ ಎರಡು ಪ್ರಕರಣಗಳಿದ್ದರೆ, ವಸತಿ ಇಲಾಖೆಯಲ್ಲಿ ಒಂದು ಪ್ರಕರಣ ಬಾಕಿ ಇದೆ.

ಪಿ.ಡಿ. ಖಾತೆಗಳಲ್ಲಿನ ಮೊತ್ತ ₹29,510 ಕೋಟಿಗೆ ಏರಿಕೆ

2020-21ನೇ ಹಣಕಾಸು ವರ್ಷದ ಅಂತ್ಯದಲ್ಲಿ ವೈಯಕ್ತಿಕ ಠೇವಣಿ ಖಾತೆಗಳಲ್ಲಿ ₹3,989 ಕೋಟಿ ಠೇವಣಿ ಇತ್ತು. 2022-23ರ ಅಂತ್ಯದಲ್ಲಿ ಈ ಮೊತ್ತವು ₹29,510 ಕೋಟಿಗೆ ಏರಿಕೆಯಾಗಿತ್ತು ಎಂಬುದನ್ನು ಸಿಎಜಿ ವರದಿ ಹೊರಗೆಡವಿದೆ.

ವಾಸ್ತವದಲ್ಲಿ 395 ವೈಯಕ್ತಿಕ ಠೇವಣಿ ಖಾತೆಗಳಿದ್ದವು. ಆದರೆ 85 ಖಾತೆಗಳ ವಿವರಗಳನ್ನಷ್ಟೇ ಮಹಾಲೇಖಪಾಲರ ಲೆಕ್ಕದ ಪುಸ್ತಕಗಳಲ್ಲಿ ನಿರ್ವಹಣೆ ಮಾಡಲಾಗಿತ್ತು ಎಂದೂ ವರದಿ ಹೇಳಿದೆ.

2022-23ನೇ ಹಣಕಾಸು ವರ್ಷದಲ್ಲಿ ಅಧಿಕಾರಿಗಳ 18 ವೈಯಕ್ತಿಕ ಠೇವಣಿ (ಪಿ.ಡಿ) ಖಾತೆಗಳಲ್ಲಿ ₹ 562.18 ಕೋಟಿಯನ್ನು ಠೇವಣಿ ಇರಿಸಲಾಗಿತ್ತು. ₹5,963.79 ಕೋಟಿ ಋಣಾತ್ಮಕ ಶಿಲ್ಕಿನ 12 ಪಿ.ಡಿ ಖಾತೆಗಳಿದ್ದವು. 21 ಪಿ.ಡಿ ಖಾತೆಗಳು 2011-12ರಿಂದಲೇ ನಿಷ್ಕ್ರಿಯವಾಗಿದ್ದು, ಅವುಗಳನ್ನು ಮುಚ್ಚಲು ಪದೇ ಪದೇ ಆದೇಶ ನೀಡಲಾಗಿತ್ತು. ಆದರೂ, ಮುಕ್ತಾಯಗೊಳಿಸಿರಲಿಲ್ಲ ಎಂಬುದೂ ವರದಿಯಲ್ಲಿದೆ.

ಅಂಗವಿಕಲರ ಹಕ್ಕುಗಳ ರಕ್ಷಣೆ ಕಡೆಗಣನೆ

ಅಂಗವಿಕಲರ ಹಕ್ಕುಗಳ ರಕ್ಷಣೆಯನ್ನು ಕರ್ನಾಟಕ ರಾಜ್ಯ ಸರ್ಕಾರವು ಕಡೆಗಣಿಸಿದೆ. ಅಂಗವಿಕಲರ ಹಕ್ಕುಗಳ ನಿಯಮಗಳ ಅಡಿ ವಿವಿಧ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವಲ್ಲಿ ವಿಫಲವಾಗಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ.

2016-17ನೇ ಆರ್ಥಿಕ ವರ್ಷದಿಂದ 2022-23ನೇ ಆರ್ಥಿಕ ವರ್ಷದ ಅವಧಿಯಲ್ಲಿ ರಾಜ್ಯ ಸರ್ಕಾರದ ಕಾರ್ಯವೈಖರಿಯ ಲೆಕ್ಕಪರಿಶೋಧನೆ ನಡೆಸಲಾಗಿತ್ತು.

ಅಂಗವಿಕಲ ವ್ಯಕ್ತಿಗಳ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಜೀವನವನ್ನು ಉತ್ತಮಗೊಳಿಸುವ ಉದ್ದೇಶದಿಂದ 2016ರಲ್ಲಿ ಅಂಗವಿಕಲರ ಹಕ್ಕುಗಳ ರಕ್ಷಣಾ ಕಾಯ್ದೆಯನ್ನು ಜಾರಿಗೆ ತರಲಾಗಿತ್ತು. ಈ ಕಾಯ್ದೆಯ ಅಡಿಯಲ್ಲಿ ಅಂಗವಿಕಲರ ಬದುಕನ್ನು ಸುಲಭವಾಗಿಸುವ ವಿವಿಧ ಸವಲತ್ತುಗಳು ಮತ್ತು ನೆರವುಗಳನ್ನು ಒದಗಿಸಬೇಕಿತ್ತು. ಆದರೆ ಈ ಕೆಲಸ ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಆಗಿಲ್ಲ ಎಂದು ವರದಿ ಉಲ್ಲೇಖಿಸಿದೆ.

'ಲೆಕ್ಕಪರಿಶೋಧನೆಗೆ ಅಗತ್ಯ ಮಾಹಿತಿ ಒದಗಿಸದ ಸಂಸ್ಥೆಗಳ ಸಂಖ್ಯೆ ಹೆಚ್ಚುತ್ತಿದೆ. ಲೆಕ್ಕಪರಿಶೋಧನೆಗೆ ಅಗತ್ಯವಿರುವ ಮಾಹಿತಿ ಒದಗಿಸುವಂತೆ ಸರ್ಕಾರದಿಂದ ಗಣನೀಯ ಪ್ರಮಾಣದ ಅನುದಾನ ಪಡೆದ ಸಂಸ್ಥೆಗಳಿಗೆ ಹಣಕಾಸು ಇಲಾಖೆ ಸೂಚನೆ ನೀಡಿದ್ದರೂ ಪಾಲಿಸುತ್ತಿಲ್ಲ. ಇದು ರಾಜ್ಯ ಸರ್ಕಾರದಲ್ಲಿ ಆಂತರಿಕ ನಿಯಂತ್ರಣ ಸಮರ್ಪಕವಾಗಿ ಇಲ್ಲದಿರುವುದು ಮತ್ತು ಮೇಲ್ವಿಚಾರಣಾ ಕಾರ್ಯವಿಧಾನದ ಕೊರತೆಯನ್ನು ಸೂಚಿಸುತ್ತದೆ' ಎಂದು ಮಹಾಲೇಖಪಾಲರ ವರದಿ ತಿಳಿಸಿದೆ.

ಬಾರದ ಲಾಭ: 2023ರ ಮಾರ್ಚ್‌ವರೆಗೆ ರಾಜ್ಯ ಸರ್ಕಾರವು ₹72,799.77 ಕೋಟಿಗಳನ್ನು 92 ಸರ್ಕಾರಿ ಕಂಪನಿಗಳು, ನಿಗಮಗಳು, ಕೂಡು ಬಂಡವಾಳ ಕಂಪನಿಗಳು, ಸಹಕಾರ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡಿತ್ತು. ಅದರಿಂದ ಕೇವಲ ₹25.23 ಕೋಟಿ ಲಾಭ ಗಳಿಕೆಯಾಗಿದೆ.

'ಪ್ರತಿ ಹೂಡಿಕೆಗೂ ಲಾಭವನ್ನು ನಿರೀಕ್ಷಿಸುವುದಿಲ್ಲ. ರಾಜ್ಯದ ಜನರಿಗೆ ಮೂಲಸೌಕರ್ಯ ಒದಗಿಸುವುದು, ಉದ್ಯೋಗ ಸೃಷ್ಟಿ, ಸೇವೆ ಒದಗಿಸಲು ಸಾಮಾಜಿಕ ಉದ್ದೇಶಗಳನ್ನು ಪೂರೈಸಲು ಮತ್ತು ಸಾರ್ವಜನಿಕ ಹಿತಾಸಕ್ತಿಯಿಂದ ಹೂಡಿಕೆ ಮಾಡಲಾಗುತ್ತದೆ' ಎಂದು ಸರ್ಕಾರವು ಸಮರ್ಥಿಸಿಕೊಂಡಿದೆ.

ಈ ಅವಧಿಯವರೆಗೆ ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆ, ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಕೃಷ್ಣಾ ಭಾಗ್ಯ ಜಲ ನಿಗಮ ಸೇರಿದಂತೆ ನಷ್ಟದಲ್ಲಿರುವ ಸಂಸ್ಥೆಗಳಲ್ಲಿ ರಾಜ್ಯ ಸರ್ಕಾರವು ₹43,211 ಕೋಟಿ ಹೂಡಿಕೆ ಮಾಡಿದೆ ಎಂಬುದು ವರದಿಯಲ್ಲಿದೆ.

ಕೇಂದ್ರದಿಂದ ವಾಮಮಾರ್ಗ: ಸಿ.ಎಂ

ವಾಲ್ಮೀಕಿ ನಿಗಮದ ಹಗರಣ: ಇ.ಡಿ ನಡೆ ಖಂಡಿಸಿ ಕಾಂಗ್ರೆಸ್‌ನಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸಲು ಕೇಂದ್ರ ಸರ್ಕಾರ ವಾಮ ಮಾರ್ಗ ಅನುಸರಿಸುತ್ತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ವಾಲ್ಮೀಕಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಮಾಜಿ ಸಚಿವ ಬಿ.ನಾಗೇಂದ್ರ ಅವರ ಹೆಸರು ಹೇಳುವಂತೆ ನಿಗಮದ ಪದನಿಮಿತ್ತ ನಿರ್ದೇಶಕರಾಗಿದ್ದ ಬಿ. ಕಲ್ಲೇಶ್ ಅವರಿಗೆ ಇ.ಡಿ ಅಧಿಕಾರಿಗಳು ಒತ್ತಾಯಿಸಿದ್ದಾರೆ ಎಂದು ದೂರಿ ವಿಧಾನಸೌಧದ ಆವರಣದಲ್ಲಿರುವ ಗಾಂಧಿ ಪ್ರತಿಮೆ ಮುಂಭಾಗದಲ್ಲಿ ಮಂಗಳವಾರ ನಡೆದ ಪ್ರತಿಭಟನೆಯ ಬಳಿಕ ಸುದ್ದಿಗಾರರ ಜೊತೆ ಅವರು ಮಾತನಾಡಿದರು.

'ಈ ಹಗರಣಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ. ಆದರೂ ನನ್ನ ಮತ್ತು ಸರ್ಕಾರದ ವರ್ಚಸ್ಸು ಹಾಳು ಮಾಡಲು ಯತ್ನ ನಡೆಯುತ್ತಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಇರಬಾರದು, ದುರ್ಬಲಗೊಳಿಸಬೇಕೆಂದು ಕೇಂದ್ರ ಹುನ್ನಾರ ನಡೆಸುತ್ತಿದೆ' ಎಂದು ದೂರಿದ ಮುಖ್ಯಮಂತ್ರಿ, 'ನಿಗಮದಲ್ಲಿ ಅಕ್ರಮ ನಡೆದಿದೆ ಎಂಬ ಕಾರಣಕ್ಕೆ ನಾವು ವಿಶೇಷ ತನಿಖಾ ತಂಡದಿಂದ ತನಿಖೆ ಮಾಡಿಸುತ್ತಿದ್ದೇವೆ. ಆದರೆ, ಕೇಂದ್ರ ಸರ್ಕಾರದ ರಾಜಕೀಯ ಸೇಡು, ದ್ವೇಷದ ನಡೆಯನ್ನು ನಾವು ಖಂಡಿಸುತ್ತೇವೆ' ಎಂದರು.

'ಈ ವಿಚಾರವನ್ನು ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನಲ್ಲಿ ಪ್ರಸ್ತಾಪಿಸುತ್ತೇವೆ. ಲೋಕಸಭೆಯಲ್ಲಿಯೂ ಪ್ರಸ್ತಾಪಿಸುವಂತೆ ಹೈಕಮಾಂಡ್ ನಾಯಕರ ಜೊತೆ ಚರ್ಚೆ ನಡೆಸಿದ್ದೇವೆ' ಎಂದರು.

'ಇ.ಡಿ ಅಧಿಕಾರಿಗಳು ಕಲ್ಲೇಶ್ ಅವರನ್ನು ಬೆದರಿಸಿ, ಜೀವಭಯ ಉಂಟು ಮಾಡಿ ಅನಗತ್ಯವಾಗಿ ನನ್ನ ಹೆಸರು ಹೇಳುವಂತೆ ಒತ್ತಡ ಹೇರಿದ್ದಾರೆ. ಪ್ರಕರಣದಲ್ಲಿ ಕಾನೂನಿನ ಪ್ರಕಾರ ನನ್ನ ಮೇಲೆ ಆರೋಪ ಬರುವಂತೆ ಮಾಡಲು ಒತ್ತಾಯಿಸಿದ್ದಾರೆ. ಈ ಬಗ್ಗೆ ಕಲ್ಲೇಶ್ ಅವರು ಪೊಲೀಸರಿಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ' ಎಂದರು.

ವಿಧಾನಸೌಧದ ಆವರಣದಲ್ಲಿರುವ ಗಾಂಧಿ ಪ್ರತಿಮೆ ಮುಂಭಾಗದಲ್ಲಿ ಮಂಗಳವಾರ ನಡೆದ ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರು, ಕಾಂಗ್ರೆಸ್ ಶಾಸಕರು ಭಾಗಿಯಾಗಿದ್ದರು – ಪ್ರಜಾವಾಣಿ ಚಿತ್ರ

ಇ.ಡಿ ಅಧಿಕಾರಿಗಳಿಂದ ಬೆದರಿಕೆ: ಡಿ.ಕೆ. ಶಿವಕುಮಾರ್

'ಇ.ಡಿ ಅಧಿಕಾರಿಗಳು ಬಲವಂತವಾಗಿ ಮುಖ್ಯಮಂತ್ರಿ ಮತ್ತು ಸಚಿವರ ಹೆಸರು ಹೇಳುವಂತೆ ನಿಗಮದ ಅಧಿಕಾರಿಗೆ ಬೆದರಿಕೆ ಹಾಕುತ್ತಿದ್ದಾರೆ. ಆ ಮೂಲಕ, ಮುಖ್ಯಮಂತ್ರಿಯ ಹೆಸರಿಗೆ ಮಸಿ ಬಳಿದು, ಸರ್ಕಾರ ಅಸ್ಥಿರಗೊಳಿಸುವ ಪ್ರಯತ್ನವನ್ನು ನಡೆಯುತ್ತಿದ್ದು, ಇದನ್ನು ಖಂಡಿಸುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಕರ್ನಾಟಕ ರಾಜ್ಯದಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಯನ್ನು ಗುರಿಯಾಗಿಸಿ ನೇರವಾಗಿ ದಾಳಿ ಮಾಡುವ ಸಂಚು ನಡೆಯುತ್ತಿದೆ. ಈ ಹಿಂದೆ ಬೇರೆ ರಾಜ್ಯಗಳಲ್ಲಿ ಇಂತಹ ಘಟನೆಗಳು ನಡೆದಿದ್ದವು' ಎಂದರು.

'ಮುಖ್ಯಮಂತ್ರಿ, ಸಚಿವರ ಹೆಸರು ಹೇಳಲು ಇ.ಡಿ ಅಧಿಕಾರಿಗಳು ಒತ್ತಾಯಿಸುತ್ತಿರುವುದು ಪ್ರಜಾಪ್ರಭುತ್ವಕ್ಕೆ ಮಾರಕವಾದ ನಡೆ. ಪ್ರಜಾಪ್ರಭುತ್ವದಲ್ಲಿ ಯಾವುದೇ ತನಿಖೆಯನ್ನು ಕಾನೂನುಬಾಹಿರವಾಗಿ ಮಾಡುವಂತಿಲ್ಲ. ನಾವು ಕಾನೂನಿನ ಪ್ರಕಾರ ಹೋರಾಟ ಮಾಡಲು ಸಿದ್ಧರಿದ್ದೇವೆ. ಸದನದಿಂದ ಹೊರಗೆ ಹೋರಾಟ ಮಾಡುವ ಬಗ್ಗೆ ಪಕ್ಷದಲ್ಲಿ ಚರ್ಚಿಸಿ ತೀರ್ಮಾನಿಸುತ್ತೇವೆ' ಎಂದರು.

ಸಚಿವರು, ಕಾಂಗ್ರೆಸ್ ಶಾಸಕರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಕಲಾಪ ವಿಧಾನಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಜಿ. ಪರಮೇಶ್ವರ ಮತ್ತು ಇತರ ಸಚಿವರಿದ್ದರು

ದೇಗುಲಗಳಿಗೆ ₹85 ಕೋಟಿ, ಸಮುದಾಯಗಳಿಗೆ ₹70 ಕೋಟಿ

ಬೆಂಗಳೂರು: ವಿಧಾನಸಭಾ ಕ್ಷೇತ್ರಗಳಲ್ಲಿನ ವಿವಿಧ ಮತಗಳ ಅಭಿವೃದ್ಧಿ ಮತ್ತು ದೇವಾಲಯಗಳ ಜೀರ್ಣೋದ್ಧಾರಕ್ಕೆ ಮುಖ್ಯಮಂತ್ರಿ ವಿಶೇಷ ಅನುದಾನದಡಿ ₹85 ಕೋಟಿ ಹಾಗೂ ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ಹೆಚ್ಚುವರಿಯಾಗಿ ₹70 ಕೋಟಿ ನೀಡಿದೆ.

ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಿದ ಈ ಸಾಲಿನ ಮೊದಲ ಪೂರಕ ಅಂದಾಜಿನಲ್ಲಿ ಒಟ್ಟು ₹8,573.72 ಕೋಟಿ ಒದಗಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಪೂರಕ ಅಂದಾಜು ಮಂಡಿಸಿದರು.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲು ₹52.05 ಕೋಟಿ ಹಾಗೂ ಕರ್ನಾಟಕ ರಾಜ್ಯ ಹಜ್ ಸಮಿತಿಯ ಆಡಳಿತಾತ್ಮಕ ವೆಚ್ಚ ಮತ್ತು ಹಜ್ ಭವನದ ನಿರ್ವಹಣೆಗಾಗಿ ₹1.50 ಕೋಟಿ ಹೆಚ್ಚುವರಿಯಾಗಿ ನೀಡಲಾಗಿದೆ

ಗ್ರಾಮೀಣ ರಸ್ತೆಗಳು ಯೋಜನೆಯಡಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ₹450 ಕೋಟಿ ಅನುದಾನವನ್ನು ಹೆಚ್ಚುವರಿಯಾಗಿ ಒದಗಿಸಲಾಗುವುದು.

ಪ್ರಮುಖ ವಲಯಗಳಲ್ಲಿ ಖಾಸಗಿ ಸಹಭಾಗಿತ್ವವನ್ನು(ಪಿಪಿಸಿ) ಪ್ರೋತ್ಸಾಹಿಸುವ ಉದ್ದೇಶದಿಂದ ವಿಶ್ಲೇಷಣಾತ್ಮಕ ಅಧ್ಯಯನ ಕೈಗೊಳ್ಳಲಾಗುತ್ತಿದ್ದು, ಅದರ ವೆಚ್ಚಕ್ಕಾಗಿ ₹9.75 ಕೋಟಿ ಹೆಚ್ಚುವರಿ ಮೊತ್ತ ಒದಗಿಸಲಾಗುವುದು. ಸಚಿವಾಲಯ ಮತ್ತು ಸರ್ಕಾರಿ ವಾಹನ ಖರೀದಿಗೆ ₹5 ಕೋಟಿ, ವಿಧಾನಸಭಾ ಸದಸ್ಯರಿಗೆ ಮೋಟಾರು ವಾಹನಗಳ ಖರೀದಿಗೆ ಹೆಚ್ಚುವರಿಯಾಗಿ ₹1 ಕೋಟಿ, ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರ ಉಪಯೋಗಕ್ಕಾಗಿ ವಾಹನ ಖರೀದಿಸಲು ₹40 ಲಕ್ಷ, ರಾಜ್ಯಪಾಲರ ಸಚಿವಾಲಯಕ್ಕೆ ವಾಹನ ಖರೀದಿಸಲು ₹79.24 ಲಕ್ಷ ಒದಗಿಸುವುದಾಗಿ ಪೂರಕ ಅಂದಾಜಿನಲ್ಲಿ ಉಲ್ಲೇಖಿಸಲಾಗಿದೆ.

ಆಡಳಿತ– ವಿಪಕ್ಷ ನಡುವೆ ವಾಗ್ವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇ.ಡಿ ಅಧಿಕಾರಿಗಳ ವಿರುದ್ಧ ವಾಲ್ಮೀಕಿ ನಿಗಮದ ಪದನಿಮಿತ್ತ ನಿರ್ದೇಶಕರಾಗಿದ್ದ ಬಿ. ಕಲ್ಲೇಶ್ ಅವರು ಪೊಲೀಸರಿಗೆ ನೀಡಿರುವ ದೂರನ್ನು ಪ್ರಸ್ತಾಪಿಸಿ ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಕೆ.ಎಂ ಶಿವಲಿಂಗೇಗೌಡ ನಿಲುವಳಿ ಮಂಡಿಸಲು ಮುಂದಾದಾಗ ಬಿಜೆಪಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಇದರಿಂದಾಗಿ ಕೆಲಹೊತ್ತು ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ವಾಗ್ವಾದ ನಡೆಯಿತು.

ವಿಷಯ ಪ್ರಸ್ತಾಪಿಸಿದ ಶಿವಲಿಂಗೇಗೌಡ, 'ನಿಗಮದ ಹಗರಣದಲ್ಲಿ ಮುಖ್ಯಮಂತ್ರಿಯ ಹೆಸರು ಹೇಳುವಂತೆ ಒತ್ತಾಯಿಸಿ ಇ.ಡಿ ಅಧಿಕಾರಿಗಳು ಕಲ್ಲೇಶ್ ಅವರಿಗೆ ಚಿತ್ರಹಿಂಸೆ ನೀಡಿದ್ದಾರೆ. ಆ ಅಧಿಕಾರಿಗಳು ಸರ್ಕಾರವನ್ನು ಧ್ವಂಸಗೊಳಿಸಲು ಯತ್ನಿಸುತ್ತಿದ್ದಾರೆ. ಇ.ಡಿ ವಿರುದ್ಧವೂ ತನಿಖೆ ಆಗಬೇಕು. ಇ.ಡಿ ಏನು ಇವರಪ್ಪನ ಮನೆಯದ್ದೇ' ಎಂದು ಜೋರು ಧ್ವನಿಯಲ್ಲಿ ಪ್ರಶ್ನಿಸಿದರು.

ಆಗ ಕೆರಳಿದ ಬಿಜೆಪಿ ಸದಸ್ಯರು, 'ಅಕ್ರಮದ ತನಿಖೆ ಇ.ಡಿ ಮಾಡಬಾರದೆಂದರೆ ಹೇಗೆ? ಈಗಾಗಲೇ ಈ ಪ್ರಕರಣ ಕೋರ್ಟ್‌ನಲ್ಲಿ ಇರುವುದರಿಂದ ನಿಲುವಳಿ ಮಂಡಿಸಲು ಅವಕಾಶ ನೀಡಬಾರದು' ಎಂದು ಸಭಾಧ್ಯಕ್ಷರನ್ನು ಆಗ್ರಹಿಸಿದರು.

ಚರ್ಚೆಗೆ ಕಾಂಗ್ರೆಸ್ ಪಟ್ಟು

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ₹94.73 ಕೋಟಿ ಅಕ್ರಮ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆರೋಪಿಯನ್ನಾಗಿಸಲು ಜಾರಿ ನಿರ್ದೇಶನಾಲಯ ಒತ್ತಡ ಹೇರುತ್ತಿದೆ ಎಂಬ ಕಾಂಗ್ರೆಸ್ ಆರೋಪ ಮಂಗಳವಾರ ವಿಧಾನ ಪರಿಷತ್‌ನಲ್ಲೂ ಪ್ರತಿಧ್ವನಿಸಿತು.

ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್, 'ಹಣ ವರ್ಗಾವಣೆಗೆ ಮುಖ್ಯಮಂತ್ರಿ (ಸಿದ್ದರಾಮಯ್ಯ), ಮಾಜಿ ಸಚಿವ ಬಿ.ನಾಗೇಂದ್ರ ಹಾಗೂ ಹಣಕಾಸು ಇಲಾಖೆ (ಎಫ್.ಡಿ) ಸೂಚನೆ ಇತ್ತು ಎಂಬುದಾಗಿ ಒಪ್ಪಿಕೊಳ್ಳಬೇಕು. ಆಗ ನಿಮಗೆ ಸಹಾಯ ಮಾಡುತ್ತೇವೆ. ಇಲ್ಲದಿದ್ದರೆ ಬಂಧಿಸುತ್ತೇವೆ ಎಂದು ಇ.ಡಿ ಅಧಿಕಾರಿಗಳು ಒತ್ತಡ ಹಾಕುತ್ತಿದ್ದಾರೆ' ಎಂದು ನಿಗಮದ ಹಿಂದಿನ ನಿರ್ದೇಶಕ ಕಲ್ಲೇಶ್ ಬಿ. ಅವರು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ವಿರುದ್ಧ ನಗರದ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಇದೊಂದು ಗಂಭೀರ ಆರೋಪ. ರಾಜ್ಯದ ಜನರಿಂದ ಚುನಾಯಿತವಾದ ಸರ್ಕಾರ ಕೆಡವಲು ಇ.ಡಿ ಬಳಸಿಕೊಂಡು ಮಾಡಿರುವ ಸಂಚು. ಹಾಗಾಗಿ, ಸದನದಲ್ಲಿ ಈ ಕುರಿತು ಚರ್ಚಿಸಲು ಅವಕಾಶ ಮಾಡಿಕೊಡಬೇಕು. ಇ.ಡಿ ಬಹಿಷ್ಕರಿಸುವ ಕುರಿತು ನಿರ್ಣಯ ಅಂಗೀಕರಿಸುವಂತೆ ಪಟ್ಟು ಹಿಡಿದರು.

ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ಕಾಂಗ್ರೆಸ್‌ನ ಅಬ್ದುಲ್ ಜಬ್ಬಾರ್, ಪ್ರಕಾಶ್ ರಾಥೋಡ್, ಎಂ.ಆರ್. ಸೀತಾರಾಮ್ ಮತ್ತಿತರರು ದ್ವನಿಗೂಡಿಸಿದರು. ಪರ-ವಿರುದ್ಧ ವಾಗ್ವಾದ ನಡೆದ ಕಾರಣ ಸಭಾಪತಿ ಕಲಾಪವನ್ನು ಎರಡು ಬಾರಿ ಮುಂದೂಡಬೇಕಾಯಿತು.

ಕೆಬಿಜೆಎನ್‌ಎಲ್: ಸಮಗ್ರ ತನಿಖೆ– ಡಿ.ಕೆ.ಶಿವಕುಮಾರ್

ಪರಿಹಾರ ನೆಪದಲ್ಲಿ ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷ್ಣಾ ಭಾಗ್ಯ ಜಲ ನಿಗಮದಲ್ಲಿ ಪರಿಹಾರ ಕೊಡಿಸುವ ನೆಪದಲ್ಲಿ ಅಕ್ರಮ ನಡೆದಿದ್ದು, ಇದರ ಕುರಿತು ಸಮಗ್ರ ತನಿಖೆ ನಡೆಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ವಿಧಾನಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಅವರ ಪ್ರಶ್ನೆಗೆ ಉತ್ತರಿಸಿದ ಅವರು ಈ ವಿಷಯ ತಿಳಿಸಿದರು.

'ನ್ಯಾಯಾಲಯಗಳಲ್ಲಿ ಭೂಸ್ವಾಧೀನದ ಕುರಿತು ಪ್ರಕರಣಗಳು ನಡೆಯುತ್ತಿವೆ. ವಿಜಯಪುರ, ಬಾಗಲಕೋಟೆ, ರಾಯಚೂರು ಭಾಗದಲ್ಲಿ ನ್ಯಾಯಾಲಯದ ಮೂಲಕ ಎಕರೆಗೆ ₹74 ಲಕ್ಷ ಹಾಗೂ ನಗರಕ್ಕೆ ಹೊಂದಿಕೊಂಡ ಜಮೀನಿಗಳಲ್ಲಿ ಎಕರೆಗೆ ₹1.26 ಕೋಟಿ ಪರಿಹಾರ ಪಡೆಯುತ್ತಿದ್ದಾರೆ. ಸುಮಾರು 285 ಪ್ರಕರಣಗಳಲ್ಲಿ ಈ ರೀತಿಯಾಗಿದೆ. 367 ಪ್ರಕರಣಗಳಿಗೆ ಪುನರ್ ವಸತಿ ಕಲ್ಪಿಸುವ ವಿಚಾರವಾಗಿ ಒಂದು ಎಕರೆಗೆ ₹5.18 ಕೋಟಿ ಪರಿಹಾರ ನೀಡಬೇಕು ಎಂದು ಕೋರ್ಟ್ ಆದೇಶ ಮಾಡಿದೆ. ಪೆರಿಫೆರಲ್ ರಿಂಗ್ ರಸ್ತೆಗೆ ಬೆಂಗಳೂರಿನಲ್ಲೇ ಇಷ್ಟು ದೊಡ್ಡ ಮೊತ್ತ ಪರಿಹಾರ ನೀಡಲು ಆಗುತ್ತಿಲ್ಲ' ಎಂದರು.

ಕೃಷ್ಣಾ ಭಾಗ್ಯ ಜಲ ನಿಗಮ

'ಭೂಸ್ವಾಧೀನ ಪ್ರಕರಣಗಳನ್ನು ನಡೆಸುತ್ತಿರುವ ಎಲ್ಲಾ ಸರ್ಕಾರಿ ವಕೀಲರನ್ನು ಹಿಂದಕ್ಕೆ ಪಡೆಯಲಾಗುವುದು. ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು. ಇದರ ಬಗ್ಗೆ ಕಾನೂನು ಸಚಿವರ ಜತೆ ಚರ್ಚೆ ನಡೆಸಲಾಗುವುದು' ಎಂದು ಶಿವಕುಮಾರ್ ಹೇಳಿದರು.

'ಬಸವರಾಜ ಬೊಮ್ಮಾಯಿ ಅವರ ಕಾಲದಲ್ಲಿ ಸಚಿವ ಸಂಪುಟ ಉಪಸಮಿತಿ ಮಾಡಿ ಎಕರೆಗೆ ₹25 ಲಕ್ಷ ಪರಿಹಾರ ನೀಡಬೇಕು ಎಂದು ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಈಗ ದುಪ್ಪಟ್ಟು ಪರಿಹಾರ ನೀಡಬೇಕು ಎಂದು ನ್ಯಾಯಾಲಯ ಹೇಳಿದೆ. ಇದಕ್ಕೆ ಎಲ್ಲಿಂದ ಹಣ ತರುವುದು' ಎಂದು ಪ್ರಶ್ನಿಸಿದರು.

'ಕೃಷ್ಣಾ ಭಾಗ್ಯ ಜಲ ನಿಗಮದ ಅಡಿ ಕೈಗೊಂಡಿರುವ ಕಾರ್ಯಕ್ರಮಗಳು ಮುಗಿಯಲು ಹೆಚ್ಚಿನ ಅನುದಾನದ ಅವಶ್ಯಕತೆಯಿದೆ. ನಮ್ಮ ಸರ್ಕಾರ ಆದ್ಯತೆ ಮೇರೆಗೆ ಕೆಲಸ ಮಾಡುತ್ತಿದೆ. ಈ ಯೋಜನೆಯ ಬಗ್ಗೆ ಪುನರ್ ಪರಿಶೀಲನೆ ನಡೆಸಿದಾಗ ಗಾಬರಿ ಹುಟ್ಟಿಸುವ ಸಂಗತಿಗಳು ಬೆಳಕಿಗೆ ಬಂದಿವೆ' ಎಂದರು.

ಲಾಲ್‌ಬಹದ್ದೂರ್ ಶಾಸ್ತ್ರಿ ಅವರ ಕಾಲದಲ್ಲಿ ಈ ಅಣೆಕಟ್ಟನ್ನು ನಿರ್ಮಾಣ ಮಾಡುವ ವೇಳೆ ಅನೇಕ ಜನರು ₹1 ಸಾವಿರ, ₹2 ಸಾವಿರಕ್ಕೆ ಜಮೀನು ಬಿಟ್ಟುಕೊಟ್ಟಿದ್ದಾರೆ. ಐದು ವರ್ಷದ ಹಿಂದೆಯೂ ರೈತರು ಎಕರೆಗೆ ₹5 ಸಾವಿರ ಪಡೆದು ಜಮೀನು ನೀಡಿದ್ದಾರೆ ಎಂದು ಶಿವಕುಮಾರ್ ಹೇಳಿದರು.

'ಸೆಮಿಕಂಡಕ್ಟರ್'ಗೆ 901 ಎಕರೆ ಜಾಗ: ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಪ್ರಿಯಾಂಕ್ ಖರ್ಗೆ

ಬೆಂಗಳೂರು: ಸೆಮಿಕಂಡಕ್ಟರ್ ಚಿಪ್ ತಯಾರಿಕಾ ಕಂಪನಿಗಳನ್ನು ಆಕರ್ಷಿಸಿ, ಕಾರ್ಖಾನೆಗಳನ್ನು ಸ್ಥಾಪಿಸಲು 901 ಎಕರೆ ಒಳಗೊಂಡ ನಾಲ್ಕು ಕ್ಲಸ್ಟರ್‌ಗಳನ್ನು ಸಿದ್ಧಗೊಳಿಸಲಾಗುತ್ತಿದೆ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಮಂಗಳವಾರ ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಪ್ರಶ್ನೆಗೆ ಉತ್ತರಿಸಿದ ಅವರು, ಹುಬ್ಬಳ್ಳಿ ಸಮೀಪದ ಕೋಟೂರ್–ಬೇಲೂರು ಬಳಿ 224.5 ಎಕರೆ, ಮೈಸೂರಿನ ಕೋಚನಹಳ್ಳಿ ಬಳಿ 245.67 ಎಕರೆ, ತುಮಕೂರು ಜಿಲ್ಲೆಯ ವಸಂತನರಸಾಪುರ ಕೈಗಾರಿಕಾ ಪ್ರದೇಶದಲ್ಲಿ 218.20 ಎಕರೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆದಿನಾರಾಯಣ ಹೊಸಹಳ್ಳಿ ಸಮೀಪ 213.14 ಎಕರೆ ಪ್ರದೇಶವನ್ನು ಸಜ್ಜುಗೊಳಿಸಲಾಗಿದೆ. ಅದಕ್ಕಾಗಿ ₹714.49 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದರು.

ಫಿಸಿಕ್ಸ್ ಮೋಟಾರ್ಸ್, ಕಾರ್ಬನ್ ಎಲೆಕ್ಟ್ರಾನಿಕ್ಸ್, ರವಿಸ್ಮಾಕ್, ಆಸ್ತ್ರ ಡಿಫೆನ್ಸ್, ನ್ಯಾನೊಫಿಕ್ಸ್, ನ್ಯೂರಿಗಾಮಿ, ವೈಡ್ ಮೊಬಿಲಿಟಿ, ಕೆಮಿಯೋಪ್ಟಿಕ್ಸ್ ಹೆಲ್ತ್‌ಕೇರ್, ಗೋಪಾಲನ್ ಏರೋಸ್ಪೇಸ್, ಕ್ರಿಪ್ಟನ್ ಸಲ್ಯೂಷನ್ಸ್ ಮತ್ತಿತರ ಕಂಪನಿಗಳು ಆಸಕ್ತಿ ತೋರಿವೆ. ಎರಡು ಕ್ಲಸ್ಟರ್‌ಗಳ ಅಭಿವೃದ್ಧಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಶೇ 50ರಷ್ಟು ವೆಚ್ಚ ಭರಿಸುತ್ತಿದೆ ಎಂದು ಹೇಳಿದರು.

ಉತ್ತರಕ್ಕೆ ಸೆಳೆಯುವುದನ್ನು ತಪ್ಪಿಸಿ: ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮಾತನಾಡಿ, ಭಾರತಕ್ಕೆ ಬರುವ ಕಂಪನಿಗಳು ಸಹಾಯಧನಕ್ಕೆ ಅರ್ಜಿ ಸಲ್ಲಿಸಿದ ತಕ್ಷಣ ಅವುಗಳನ್ನು ಉತ್ತರ ರಾಜ್ಯಗಳತ್ತ ಕೇಂದ್ರ ಸರ್ಕಾರವೇ ಸೆಳೆಯುತ್ತದೆ. ಹಾಗಾಗಿ, ಬಿಜೆಪಿ–ಜೆಡಿಎಸ್‌ನ ಸಂಸದರು ಕೇಂದ್ರದ ಮನವೊಲಿಸಿ, ಶೇ 50ರಷ್ಟು ಪ್ರೋತ್ಸಾಹಧನ ಕೊಡಿಸಬೇಕು. ರಾಜ್ಯದತ್ತಲೂ ಸೆಮಿಕಂಡಕ್ಟರ್ ಕಂಪನಿಗಳನ್ನು ಕರೆತರಬೇಕು ಎಂದು ಹೇಳಿದರು.

ಗುಜರಾತ್ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ನೆಲೆಗೊಳ್ಳುತ್ತಿರುವ ಸೆಮಿಕಂಡಕ್ಟರ್ ಕಂಪನಿಗಳಿಗೆ ಒಟ್ಟು ಹೂಡಿಕೆಯಲ್ಲಿ ಕೇಂದ್ರ ಸರ್ಕಾರ ಶೇ 50 ಹಾಗೂ ಅಲ್ಲಿನ ರಾಜ್ಯ ಸರ್ಕಾರಗಳು ಶೇ 30ರಷ್ಟು ಪ್ರೋತ್ಸಾಹಧನ ನೀಡುತ್ತಿವೆ. ಕರ್ನಾಟಕವೂ ಶೇ 30ರಷ್ಟು ಪ್ರೋತ್ಸಾಹಧನ ನೀಡಲು ಸಿದ್ಧವಿದೆ ಎಂದರು.

ಭೂಕುಸಿತ: ಕ್ರಮಕ್ಕೆ ₹100 ಕೋಟಿ

ಬೆಂಗಳೂರು: ರಾಜ್ಯದ ಪಶ್ಚಿಮ ಘಟ್ಟಗಳ ವ್ಯಾಪ್ತಿಯ ಏಳು ಜಿಲ್ಲೆಗಳಲ್ಲಿ ಭೂಕುಸಿತ ಉಂಟಾಗ ಬಹುದಾದ 1,351 ಗ್ರಾಮಗಳನ್ನು ಗುರುತಿಸಿದ್ದು, ಉಪಶಮನ ಕ್ರಮಕ್ಕಾಗಿ ₹100 ಕೋಟಿ ಮೀಸಲಿಡಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಸಿ.ಟಿ. ರವಿ, ಎನ್. ರವಿಕುಮಾರ್, ಛಲವಾದಿ ಟಿ. ನಾರಾಯಣಸ್ವಾಮಿ, ಪ್ರತಾಪ್‌ಸಿಂಹ ನಾಯಕ್, ಭಾರತಿ ಶೆಟ್ಟಿ, ಕೇಶವಪ್ರಸಾದ್, ಪಿ.ಎಚ್. ಪೂಜಾರ್ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಅವರು, 250 ಗ್ರಾಮ ಪಂಚಾಯಿತಿಗಳಲ್ಲಿ ಭೂಕುಸಿತ ಉಂಟಾಗುವ ಪ್ರದೇಶಗಳನ್ನು ಗುರುತಿಸಲಾಗಿದೆ ಎಂದರು.

ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಕೊಡಗು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಭೂಕುಸಿತವಾಗುವ ಗ್ರಾಮಗಳನ್ನು ಗುರುತಿಸಲಾಗಿದೆ. ಭಾರತ ಸರ್ಕಾರದ ಭೂವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆ ಹಾಗೂ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ರಾಕ್ ಮೆಕ್ಯಾನಿಕ್ಸ್ (ಎನ್‌ಐಆರ್‌ಎಂ) ಸಹಯೋಗದಲ್ಲಿ ಅವರ ಮಾರ್ಗಸೂಚಿಯಂತೆ ಕ್ರಮ ಕೈಗೊಳ್ಳಲಾಗುತ್ತದೆ. ಈ ವರ್ಷ ₹100 ಕೋಟಿ ವೆಚ್ಚ ಮಾಡಲು ನಿರ್ಧರಿಸಲಾಗಿದ್ದು, ಅಗತ್ಯಬಿದ್ದರೆ ಇನ್ನಷ್ಟು ಅನುದಾನ ಒದಗಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ರೈತರ ಸಾಲ ಮನ್ನಾ ಇಲ್ಲ: ಸಚಿವ ರಾಜಣ್ಣ

ಬೆಂಗಳೂರು: ರೈತರ ಸಾಲ ಮನ್ನಾ ಮಾಡುವ ಪ್ರಸ್ತಾವ ಸರ್ಕಾರದ ಮುಂದಿಲ್ಲ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ವಿಧಾನ ಪರಿಷತ್ತಿನಲ್ಲಿ ಬಿಜೆಪಿಯ ಸಿ.ಟಿ. ರವಿ ಪ್ರಶ್ನೆಗೆ ಉತ್ತರಿಸಿದ ಅವರು, ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ, ಬರ-ನೆರೆ ಮತ್ತಿತರ ಸಂಕಷ್ಟದ ಸಮಯದಲ್ಲಿ ರೈತರ ಬೆಳೆ ಸಾಲ ಮನ್ನಾ ಮಾಡಿದೆ. ಆದರೆ, ಒಂದು ದಶಕದಿಂದ ಬಿಜೆಪಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದರೂ ಸಾಲ ಮನ್ನಾ ಮಾಡಲು ಸಿದ್ಧವಿಲ್ಲ. ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲ ಮನ್ನಾ ಮಾಡಿಸಲು ಸಾಧ್ಯವಾಗದ ಬಿಜೆಪಿ ಸದಸ್ಯರು, ರೈತರನ್ನು ಪ್ರಚೋದಿಸುವ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದರು.

ರಾಜ್ಯದಲ್ಲಿ ಭೂಮಿ ಹೊಂದಿರುವ 63 ಲಕ್ಷ ರೈತರಲ್ಲಿ 35 ಲಕ್ಷ ರೈತರಿಗೆ ಸಹಕಾರ ಸಂಘಗಳ ಮೂಲಕ ಸಾಲ ವಿತರಿಸಲಾಗಿದೆ. ಸಂಘದ ಸದಸ್ಯರಾದವರಿಗಷ್ಟೇ ಸೌಲಭ್ಯ ಸಿಗುತ್ತದೆ. ಉಳಿದ ರೈತರು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಸಾಲ ಪಡೆದಿದ್ದಾರೆ. ಸಿ.ಟಿ. ರವಿ ಆರೋಪಿಸಿದಂತೆ ಕಿಟಕಿಯಿಂದ ವ್ಯವಹಾರ ನಡೆಯುತ್ತಿಲ್ಲ. ಅಂತಹ ವ್ಯವಹಾರ ಅವರಿಗಷ್ಟೇ ಗೊತ್ತು ಎಂದರು.

ಶೀಘ್ರವೇ ಹೊಸ ಪ್ರವಾಸೋದ್ಯಮ ನೀತಿ

ಬೆಂಗಳೂರು: ರಾಜ್ಯದಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಸದ್ಯವೇ ಹೊಸ ಪ್ರವಾಸೋದ್ಯಮ (2024-29) ನೀತಿಯನ್ನು ಪ್ರಕಟಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ವಿಧಾನಸಭೆಗೆ ತಿಳಿಸಿದರು.

ಈ ನೀತಿಯಲ್ಲಿ ಧಾರ್ಮಿಕ ಪ್ರವಾಸೋದ್ಯಮ ಸೇರಿ ಎಲ್ಲ ರೀತಿಯ ಪ್ರವಾಸೋದ್ಯಮಗಳಿಗೂ ಉತ್ತೇಜನ ನೀಡಲಾಗುವುದು ಎಂದು ಅವರು ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಡಾ.ಭರತ್ ಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದರು.

ಶೈಕ್ಷಣಿಕ, ಕೃಷಿ, ಪರಿಸರ ಕ್ಷೇತ್ರಗಳ ಪ್ರವಾಸೋದ್ಯಮಕ್ಕೂ ಆದ್ಯತೆ ನೀಡಲಾಗುವುದು. ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಧಾರ್ಮಿಕ ಪ್ರವಾಸೋದ್ಯಮಕ್ಕೆ ಉತ್ತಮ ವಾತಾವರಣವನ್ನು ಅಲ್ಲಿ ಜನರೇ ಸೃಷ್ಟಿಸಿದ್ದಾರೆ. ಬೆಳಗಿನ ಉಪಾಹಾರ, ಭೋಜನ, ವಾಸ್ತವ್ಯಕ್ಕೆ ವ್ಯವಸ್ಥೆಯನ್ನೂ ಮಾಡಿದ್ದಾರೆ. ಇದು ಶ್ಲಾಘನಾರ್ಹ ಎಂದರು.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
[ICAR, NAAC accredited and UGC u/s 12(B) & 2(f) approved]
ಸರಕು ಖರೀದಿ ಅಧಿಕಾರಿಗಳ ಕಾರ್ಯಾಲಯ, ಕೃವಿವಿ, ರಾಯಚೂರು
ಮಿಂಚಂಚೆ: spo@uasraichur.edu.in
ದೂರವಾಣಿ ಸಂಖ್ಯೆ: 08532 220165
ಇ-ಟೆಂಡರ್ ಪ್ರಕಟಣೆ ಸಂಖ್ಯೆ: SPO/UASR/E-Proc-02/2024-25, Dt:23-07-2024

ಟೆಂಡರ ಪ್ರಕಟಣೆ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರಯೋಗಾಲಯಗಳಿಗೆ ವಿವಿಧ ಉಪಕರಗಳ ಖರೀದಿಗಾಗಿ ಟೆಂಡರನ್ನು ಕರೆಯಲಾಗಿದ್ದು, ಆಸಕ್ತ ಸರಬರಾಜುದಾರರು ಆನ್‌ಲೈನ್ ಮುಖಾಂತರ ಅಂದರೆ www.kppp.karnataka.gov.in ಜಾಲತಾಣದಲ್ಲಿ (ಬೇಡಿಕೆ ಸಂಖ್ಯೆ: UASRCR/2024-25/ IND0020) ಭಾಗವಹಿಸಬಹುದು. ಈ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಭರ್ತಿಮಾಡಿ ಸಲ್ಲಿಸುವ ಕಡೆ ದಿನಾಂಕ: 18-08-2024 ಆಗಿರುತ್ತದೆ

ಸಹಿ/- ಸರಕು ಖರೀದಿ ಅಧಿಕಾರಿಗಳು, ಕೃವಿವಿ, ರಾಯಚೂರು.
DIP/RCR/137/KSMCA/136/2024-25

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರವರ ಕಛೇರಿ, ಕನನೀಸ ಮತ್ತು ಒಚ ಮಂಡಳಿ, ಜಲಭವನ, ನಂ.ಪಿ-4, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ ಸರಸ್ವತಿ ಪುರಂ, ಮೈಸೂರು- 570 009
ದೂರವಾಣಿ: 0821-2545894, Email: kwbcemys2014@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ(2ನೇ ಕರೆ) (ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ)

IFT ಸಂಖ್ಯೆ: 478 ದಿನಾಂಕ: 19-07-2024
ಕಾಮಗಾರಿಯ ವಿವರ: 'ಮೈಸೂರು ನಗರ, ಮುಡಾ ಪ್ರದೇಶ ಮತ್ತು ಸ್ಥಳೀಯ ಯೋಜನಾ ಪ್ರದೇಶದ ಸುತ್ತಮುತ್ತಲಿನ ಗ್ರಾಮಗಳಿಗೆ ಹಳೇಉಂಡವಾಡಿ ಬಳಿ ಕಾವೇರಿ ನದಿ ಮೂಲದಿಂದ ನೀರು ಸರಬರಾಜು ಯೋಜನೆಯಡಿ ನಿರ್ಮಿಸಿರುವ ಮೂಲಸ್ಥಾವರ ಮತ್ತು ಜಲ ಶುದ್ಧೀಕರಣ ಘಟಕಕ್ಕೆ ಕ್ರಮವಾಗಿ 3100 ಕೆವಿಎ ಮತ್ತು 2800 ಕೆವಿಎ ಲೋಡ್ ವಿದ್ಯುತ್ ಪೂರೈಕೆಯನ್ನು ಹಾಲಿ ಮೈಸೂರು ತಾಲೂಕಿನ ಮೇಗಳಾಪುರ ಬಳಿ ಇರುವ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಿಂದ ಒದಗಿಸಿ ಅಳವಡಿಸುವುದು ಹಾಗೂ ಸಂಬಂಧಿತ ಕಾಮಗಾರಿಗಳ **ರೂ.4427.70 ಲಕ್ಷಗಳಿಗೆ** (ಜಿ.ಎಸ್.ಟಿ ಒಳಗೊಂಡಂತೆ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಇಂಡೆಂಟ್ ಸಂಖ್ಯೆ : KUWSDB/2024-25/SS/WORK_INDENT228 ರಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ.
ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in .

DIPR/DDMYS-303/KSMCA-204/2024-25 ಸಹಿ/-ಮುಖ್ಯ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ಮೈಸೂರು

ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್
ನೋಂದಾಯಿತ ಕಛೇರಿ: 1ನೇ ಮಹಡಿ, ಬುಡಾ ಕಛೇರಿ, ಅಶೋಕ ನಗರ, ಬೆಳಗಾವಿ-590016. ದೂರವಾಣಿ ಸಂಖ್ಯೆ: 0831-2461352
ಇ-ಮೇಲ್: bscltd16@gmail.com, ವೆಬ್‌ಸೈಟ್: www.belagavismartcity.in
ಸಂಖ್ಯೆ: ಬಿ.ಎಸ್.ಸಿ.ಎಲ್/ಟೆಂಡರ್/2024-25/364 ದಿನಾಂಕ: 23-07-2024

ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಬೆಳಗಾವಿ ಸ್ಮಾರ್ಟ್ ಸಿಟಿ ನಿಯಮಿತ ಬೆಳಗಾವಿ ಇವರ ಪರವಾಗಿ ಉಪಪ್ರಧಾನ ವ್ಯವಸ್ಥಾಪಕರು, (ಪ್ರೋಕ್ಯೂರ್‌ಮೆಂಟ್) ಇವರಿಂದ ಈ ಕೆಳಗಿನ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ. ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರ್‌ಮೆಂಟ್ (https://kppp.karnataka.gov.in) ಪೋರ್ಟಲ್‌ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದುತ್ತದೆ. ವಿವರಗಳು ಈ ಕೆಳಕಂಡಂತಿವೆ.
ಕಾಮಗಾರಿಗಳ ಹೆಸರು: 1) ಮಾಸಿಕ ಬಾಡಿಗೆ ಶುಲ್ಕದ ಆಧಾರದ ಮೇಲೆ ಬೆಳಗಾವಿ ಸ್ಮಾರ್ಟ್ ಸಿಟಿ, ಬೆಳಗಾವಿ ಕಛೇರಿಗೆ (ಹಳದಿ ಬೋರ್ಡ್) ಎಸಿ/ನಾನ್ ಎಸಿ (ಹವಾನಿಯಂತ್ರಣ / ಹವಾನಿಯಂತ್ರಣವಲ್ಲದ) ವಾಹನದ ಪೂರೈಕೆ ಇಎಮ್‌ಡಿ: **ರೂ. 0.66 ಲಕ್ಷ (ಅಂದಾಜು).** 2) ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್, ಬೆಳಗಾವಿಯ ದಾಖಲೆ ಮತ್ತು ರಕ್ಷಣೆ, ಪ್ರಮುಖ ದಾಖಲೆಗಳ ಸಂರಕ್ಷಣೆ. ಇಎಮ್‌ಡಿ ರೂ. 1.18 ಲಕ್ಷ (ಅಂದಾಜು).
1) ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು ದಿನಾಂಕ: **25-07-2024 ರಿಂದ 09-08-2024 ಸಂಜೆ 5.00 ಗಂಟೆಯವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.** 2) ಟೆಂಡರ್ ಸಲ್ಲಿಸುವ ಕೊನೆಯ **09-08-2024 ರಂದು ಸಂಜೆ 5.30 ಗಂಟೆಯವರೆಗೆ,** 3) ತಾಂತ್ರಿಕ ಕ್ವಾರೀಸ್ ಸಲ್ಲಿಸುವ ಕೊನೆಯ ದಿನಾಂಕ: **01-08-2024 ರಂದು ಸಂಜೆ 5.00 ಗಂಟೆಯವರೆಗೆ.** 4) ಪೂರ್ವ ಬಿಡ್ ಸಭೆಯ ದಿನಾಂಕ: **05-08-2024 ರಂದು ಬೆಳಿಗ್ಗೆ 11.30 ಗಂಟೆಗೆ ಬೆಸ್ಮಾಸಿಲಿ ಕಛೇರಿಯಲ್ಲಿ.** 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **12-08-2024 ರಂದು ಬೆಳಿಗ್ಗೆ 11.00 ಗಂಟೆಗೆ.** 6) ಆರ್ಥಿಕ ಬಿಡ್ ತೆರೆಯುವ ದಿನಾಂಕ: **22-08-2024 ರಂದು ಬೆಳಿಗ್ಗೆ 11.00 ಗಂಟೆಗೆ.**

ಸಹಿ/- ಉಪಪ್ರಧಾನ ವ್ಯವಸ್ಥಾಪಕರು (ಪ್ರೋಕ್ಯೂರ್‌ಮೆಂಟ್) ಬೆಳಗಾವಿ ಸ್ಮಾರ್ಟ್ ಸಿಟಿ ನಿಯಮಿತ, ಬೆಳಗಾವಿ
ವಾಸಾಸಂಇ/ಬೆಳಗಾವಿ/432/ಅಡ್ವರ್ಟೋ/2024-25

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೀದರ.
ನಂ: ಇಇ/ಎಂಐಡಿ/ಬೀದರ/ತಾ.ಶಾ-1,2&3/ಟೆಂಡರ್/2024-25/871 ದಿನಾಂಕ: 20-07-2024

ಕೆಪಿಪಿ-ಪ್ರೋಕ್ಯೂರಮೆಂಟ ಟೆಂಡರ್ ಪ್ರಕಟಣೆ

1) ಕಾಮಗಾರಿಗಳ ವಿವರ. : KPP -Portalನಲ್ಲಿ ನಮೂದಿಸಿದಂತೆ. 2) ಕಾಮಗಾರಿಗಳ ಅಂದಾಜು ಮೊತ್ತ : KPP -Portalನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ. : KPP -Portalನಲ್ಲಿ ನಮೂದಿಸಿದಂತೆ, 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. : KPP -Portalನಲ್ಲಿ ನಮೂದಿಸಿದಂತೆ, 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ.: KPP -Portalನಲ್ಲಿ ನಮೂದಿಸಿದಂತೆ. 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: ಕೆ.ಡಬ್ಲೂ -3 ಮಾತ್ರ : 26-07-2024 ರಂದು 17.00 ಗಂಟೆವರೆಗೆ 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲೂ -3 ಮಾತ್ರ : 30-07-2024 ರಂದು 16.00 ಗಂಟೆ ವರೆಗೆ 8) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ -3 ಮಾತ್ರ: 01-08-2024 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ, 9) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ -3 ಮಾತ್ರ: 03-08-2024 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ : ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ: 08482 232080, 11) ಅಂತರ್ಜಾಲ ತಾಣದ ವಿಳಾಸ. : KPP portal https://kppp.kamataka.gov.in

ಸಹಿ/- ಕಾರ್ಯ ನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೀದರ.
ವಾ.ಸಾ.ಸಂ.ಇ/ಬೀದರ/80/ಕೆ.ಎಸ್.ಎಂ.ಸಿ.&ಎ/2024-25

ಸುಭಾಷಿತ

ಸಿದ್ಧತೆ ನಡೆಸುವಲ್ಲಿ ಯಾರು ಸೋಲುತ್ತಾರೋ ಅವರು ಸೋಲಲು ಸಿದ್ಧರಾಗಿರುತ್ತಾರೆ.

-ಕನ್‌ಫ್ಯೂಷಿಯಸ್

ಯುವಸಮೂಹಕ್ಕೆ ಕೌಶಲದ ‘ಬಲ’ ಆಂಧ್ರ– ಬಿಹಾರಕ್ಕೆ ಅಗ್ರತಾಂಬೂಲ

ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಬಹುವಾಗಿ ಕಾಡಿದ ನಿರುದ್ಯೋಗದ ವಿಷಯ ಹಾಗೂ ಚುನಾವಣೆ ಹೊರಹೊಮ್ಮಿಸಿದ ಫಲಿತಾಂಶ– ಈ ಎರಡೂ ಸಂಗತಿಗಳು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಗಳವಾರ ಮಂಡಿಸಿದ 2024–25ನೇ ಸಾಲಿನ ಬಜೆಟ್ ಮೇಲೆ ಗಾಢ ಪರಿಣಾಮ ಬೀರಿದಂತಿವೆ. ಲೋಕಸಭೆ ಚುನಾವಣಾ ಪ್ರಚಾರದ ಉದ್ದಕ್ಕೂ ನಿರುದ್ಯೋಗದ ಸಮಸ್ಯೆ ಬಹು ಆಯಾಮದಲ್ಲಿ ಚರ್ಚೆಗೆ ಒಳಪಟ್ಟಿತ್ತು. ಈಗಿನ ಎನ್‌ಡಿಎ ನೇತೃತ್ವದ ಸರ್ಕಾರವನ್ನು ಮುನ್ನಡೆಸುತ್ತಿರುವ ಬಿಜೆಪಿ ನೇತಾರರು, ದೇಶದಲ್ಲಿ ನಿರುದ್ಯೋಗದ ಸಮಸ್ಯೆಯೇ ಇಲ್ಲ ಎಂದು ಆಗ ಬಲವಾಗಿ ಪ್ರತಿಪಾದಿಸಿದ್ದರು. ಈಗ ಉದ್ಯೋಗ ಸೃಷ್ಟಿಗೆ ಬಜೆಟ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ ಉತ್ತೇಜಕ ಕ್ರಮಗಳನ್ನು ಘೋಷಿಸುವಂತೆ ನೋಡಿಕೊಳ್ಳುವ ಮೂಲಕ ದೇಶದಲ್ಲಿ ನಿರುದ್ಯೋಗ ಸಮಸ್ಯೆ ವ್ಯಾಪಕವಾಗಿದೆ ಎಂಬುದನ್ನು ಅವರು ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ. ಚುನಾವಣೆಯಲ್ಲಿ ತಮ್ಮ ಪಕ್ಷ ಅನುಭವಿಸಿದ ಹಿನ್ನಡೆಗೆ ಕಾರಣ ಹುಡುಕುವ ಪ್ರಯತ್ನವನ್ನೂ ವಿತ್ತ ಸಚಿವರು ಮಾಡಿದ್ದಾರೆ. ಯುವಸಮೂಹವು ಬಿಜೆಪಿಯಿಂದ ದೂರ ಸರಿಯುತ್ತಿರುವುದನ್ನು ತಡೆಯುವ ಭಾಗವಾಗಿಯೇ ಕೌಶಲ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿಯಂತಹ ಯೋಜನೆಗಳಿಗೆ ಅವರು ಮಣೆ ಹಾಕಿದ್ದಾರೆ. ಲೋಕಸಭೆಯಲ್ಲಿ ಬದಲಾದ ರಾಜಕೀಯ ಚಿತ್ರಣದ ಪ್ರಭಾವ ಕೂಡ ಬಜೆಟ್‌ನಲ್ಲಿ ದಟ್ಟವಾಗಿದೆ. ಎನ್‌ಡಿಎ ನೇತೃತ್ವದ ಈಗಿನ ಸರ್ಕಾರವು ಟಿಡಿಪಿ ಹಾಗೂ ಜೆಡಿಯು ಮರ್ಜಿಗೆ ಒಳಪಟ್ಟಿದೆ. ಹೀಗಾಗಿ, ಈ ಎರಡೂ ಪಕ್ಷಗಳ ತವರು ರಾಜ್ಯಗಳಾದ ಆಂಧ್ರಪ್ರದೇಶ ಹಾಗೂ ಬಿಹಾರಕ್ಕೆ ಅಗ್ರತಾಂಬೂಲ ದೊರೆತಿದೆ. ‘ಇದೊಂದು ಕುರ್ಚಿ ಉಳಿಸಿಕೊಳ್ಳುವ ಬಜೆಟ್’ ಎಂಬ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಟೀಕೆ ಸಕಾರಣದಿಂದ ಕೂಡಿದೆ ಎಂಬ ಅಭಿಪ್ರಾಯ ಮೂಡಿಸುವಂತಿದೆ ಈ ಎರಡೂ ರಾಜ್ಯಗಳಿಗೆ ಸಿಕ್ಕಿರುವ ಪ್ರಾಧಾನ್ಯ. ನಿರ್ಮಲಾ ಅವರು ಬಜೆಟ್‌ನ 165 ಪ್ಯಾರಾಗಳ ಪೈಕಿ 12 ಪ್ಯಾರಾಗಳನ್ನು ಆಂಧ್ರಪ್ರದೇಶ ಮತ್ತು ಬಿಹಾರಕ್ಕೆ ನೀಡಿರುವ ಕೊಡುಗೆಗಳ ಕುರಿತು ವಿವರಿಸಲು ಮೀಸಲಿಟ್ಟಿದ್ದಾರೆ. ಈ ಎರಡೂ ರಾಜ್ಯಗಳಲ್ಲದೆ ಜಾರ್ಖಂಡ್, ಪಶ್ಚಿಮ ಬಂಗಾಳ ಮತ್ತು ಒಡಿಶಾ ಒಳಗೊಂಡ ದೇಶದ ಪೂರ್ವಭಾಗದ ಸಮಗ್ರ ಅಭಿವೃದ್ಧಿ ಕಡೆಗೆ ಸರ್ಕಾರದ ಚಿತ್ತ ಹರಿದಿದೆ. ಆಂಧ್ರ ಪ್ರದೇಶವನ್ನು ಹೊರತುಪಡಿಸಿ ಕರ್ನಾಟಕ ಸೇರಿದಂತೆ ದಕ್ಷಿಣದ ಬೇರೆ ಯಾವ ರಾಜ್ಯವೂ ವಿತ್ತ ಸಚಿವರ ಕಣ್ಣಿಗೆ ಬಿದ್ದಿಲ್ಲ. ಇನ್ನೇನು ಚುನಾವಣೆಗೆ ಹೋಗಲಿರುವ ಮಹಾರಾಷ್ಟ್ರ ಮತ್ತು ಹರಿಯಾಣ ರಾಜ್ಯಗಳೂ ಕಡೆಗಣನೆಗೆ ಒಳಗಾಗಿರುವುದು ಆಶ್ಚರ್ಯದ ಸಂಗತಿ. ಮಹಾರಾಷ್ಟ್ರದ ಕಡೆಗಿನ ಕೇಂದ್ರದ ಈ ಉದಾಸೀನ ನಿಗೂಢವಾಗಿದೆ. ಅಲ್ಲಿನ ವಿಧಾನಸಭೆಯ ಚುನಾವಣಾ ಗಾಳಿ ಎತ್ತ ಬೀಸುತ್ತಿದೆ ಎಂಬುದನ್ನು ಗ್ರಹಿಸಿಯೇ ಈ ಅಲಕ್ಷ್ಯ ಮಾಡಿರಬಹುದು ಎಂಬ ಶಂಕೆ ಮೂಡದಿರದು. ಮಹಾರಾಷ್ಟ್ರ ಮತ್ತು ಉತ್ತರಪ್ರದೇಶದಲ್ಲಿ ಕಳೆದುಕೊಂಡ ನೆಲೆಯನ್ನು ಪೂರ್ವದ ರಾಜ್ಯಗಳಲ್ಲಿ ಹೊಸ ನೆಲೆ ಸೃಷ್ಟಿಸುವ ಮೂಲಕ ಸರಿದೂಗಿಸುವ ರಾಜಕೀಯ ದೂರಾಲೋಚನೆ ಇಲ್ಲಿ ಕೆಲಸ ಮಾಡಿದಂತಿದೆ.

ರಾಜಕೀಯ ಒತ್ತಡಗಳಿಗೆ ಬಾಗಿದ ಬಜೆಟ್ ಇದು ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ

ಬಡವರು, ಮಹಿಳೆಯರು, ಯುವಜನ ಮತ್ತು ರೈತರ ಜಪ ಮಾಡುತ್ತಲೇ ಸಣ್ಣ ಹಾಗೂ ಅತಿ ಸಣ್ಣ ಕೈಗಾರಿಕೆಗಳಿಗೆ ಶಕ್ತಿ ತುಂಬುವ ಮಾತುಗಳನ್ನೂ ಬಜೆಟ್‌ನಲ್ಲಿ ಆಡಲಾಗಿದೆ. ಕೃಷಿ ಮತ್ತು ಕೈಗಾರಿಕೆಗೆ ಸಮಾನ ಪ್ರಾಶಸ್ತ್ಯ ನೀಡುವ ಆಶಯ ಬಜೆಟ್‌ನಲ್ಲಿ ವ್ಯಕ್ತವಾಗಿದೆ. ಒಟ್ಟು ದೇಶಿ ಉತ್ಪಾದನೆಯಲ್ಲಿ ಶೇ 45ರಷ್ಟು ಕೊಡುಗೆ ನೀಡುತ್ತಿದ್ದರೂ ಜಾಗತೀಕರಣದ ನಂತರದ ಕಾಲಘಟ್ಟದಲ್ಲಿ ಸಣ್ಣ ಕೈಗಾರಿಕೆಗಳು ಮೂಲೆ-ಗುಂಪಾಗುತ್ತಲೇ ಬಂದಿದ್ದವು. ಅಂತಹ ನಿರ್ಲಕ್ಷಿತ ವಲಯದ ಪುನಶ್ಚೇತನಕ್ಕೆ ಈ ಸಲ ಉತ್ತೇಜನಕಾರಿ ಘೋಷಣೆಗಳನ್ನು ಮಾಡಿರುವುದು ಸ್ವಾಗತಾರ್ಹ. ವಿತ್ತೀಯ ಕೊರತೆಯನ್ನು ನಿವ್ವಳ ಆಂತರಿಕ ಉತ್ಪನ್ನದ ಶೇ 4.9ಕ್ಕೆ ಮಿತಿಗೊಳಿಸಲು ಗುರಿ ಹಾಕಿಕೊಂಡಿರುವುದು ಕೂಡ ಒಳ್ಳೆಯ ನಿರ್ಧಾರ. ಆದಾಯ ತೆರಿಗೆ ಸ್ತರಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿ, ಮಧ್ಯಮ ವರ್ಗದವರ ತೆರಿಗೆ ಹೊರೆಯನ್ನು ಸಣ್ಣ ಪ್ರಮಾಣದಲ್ಲಿ ಕಡಿಮೆ ಮಾಡಲಾಗಿದೆ. ಚಿನ್ನದ ಬೆಲೆಯಲ್ಲಿ ಇಳಿಕೆಯಾಗುವಂತಹ ನಿರ್ಧಾರ ಕೈಗೊಂಡಿದ್ದರಿಂದ ಜನಸಾಮಾನ್ಯರ ಮೊಗದಲ್ಲಿ ಒಂದು ಸಣ್ಣ ನಗು ಅರಳುವಂತಾಗಿದೆ. ಆರೋಗ್ಯ ಇಲಾಖೆಯ ಕಡೆಗೂ ಬಜೆಟ್ ಗಮನಹರಿಸಿದ್ದು, ಅನುದಾನದ ಮೊತ್ತವನ್ನು ಹೆಚ್ಚಿಸಲಾಗಿದೆ. ಆರ್ಥಿಕ ನೀತಿಗಳ ನಿರಂತರತೆ ಈ ಆಯವ್ಯಯದ ಹೆಗ್ಗುರುತುಗಳಲ್ಲಿ ಒಂದು. ಬಂಡವಾಳ ವೆಚ್ಚದ ತನ್ನ ಈ ಹಿಂದಿನ ಆದ್ಯತೆಯನ್ನು ಸರ್ಕಾರ ಮುಂದುವರಿಸಿದೆ. ಸಾರ್ವಜನಿಕ ಉದ್ದಿಮೆಗಳ ಭವಿಷ್ಯದ ಬಗೆಗೆ ಯಾವುದೇ ಖಚಿತ ನೀಲನಕ್ಷೆ ಇಲ್ಲ. ಶಿಕ್ಷಣದ ಮೇಲಿನ ವೆಚ್ಚ ಹೆಚ್ಚಳಕ್ಕೆ ತೀರ್ಮಾನಿಸಿ, ಹಲವು ಹೊಸ ಯೋಜನೆಗಳನ್ನು ಘೋಷಿಸಿದ್ದರೂ ಮೂಲಸೌಕರ್ಯ ವೃದ್ಧಿಗೆ ಕೊಟ್ಟಿರುವ ಗಮನ ಕಡಿಮೆ ಆದಂತಿದೆ. ಉದ್ಯೋಗ ಸೃಷ್ಟಿಯ ಆಸೆಯನ್ನು ಚಿಗುರಿಸಿದ್ದರೂ ಈ ಉದ್ದೇಶಕ್ಕಾಗಿ ಖಾಸಗಿ ವಲಯವನ್ನೇ ಸರ್ಕಾರ ಅವಲಂಬಿಸಬೇಕಿದೆ. ಹೀಗಾಗಿ, ಖಾಸಗಿ ವಲಯ ಹೇಗೆ ಸ್ಪಂದಿಸಲಿದೆ ಎಂಬುದರ ಮೇಲೆ ಈ ಯೋಜನೆಯ ಯಶಸ್ಸು ನಿಂತಿದೆ. ತೆರಿಗೆದಾತರು ಬಂಡವಾಳ ಹೂಡಿಕೆಗೆ ಹಿಂದೇಟು ಹಾಕುವಂತೆ ಹೂಡಿಕೆಯ ಲಾಭದ ಮೇಲೆ ವಿಧಿಸುವ ತೆರಿಗೆ ಪ್ರಮಾಣವನ್ನು ಹೆಚ್ಚಿಸಲಾಗಿದೆ. ಆದ್ಯತಾ ವಲಯಗಳನ್ನು ಒಂಬತ್ತು ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಆದರೆ, ಅನುದಾನದ ಹಂಚಿಕೆ ಯಾವ ರೀತಿ ಆಗಲಿದೆ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ನೆಲದ ವಾಸ್ತವದ ‘ಬಿಸಿ’ಯನ್ನು ತಾಗಿಸಿಕೊಂಡು, ರಾಜಕೀಯ ಒತ್ತಡಗಳಿಗೆ ಬಾಗಿದ ಬಜೆಟ್ ಇದು ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ.

ದಿನದ ಟ್ವೀಟ್

ಅದದೇ ವಿಷಯ, ಅದದೇ ಸಾಲು...

ಕೇಂದ್ರ ಬಜೆಟ್ ಓದುವಿಕೆ ವರ್ಷದಿಂದ ವರ್ಷಕ್ಕೆ ಬೋರ್ ಹೊಡೆಸುವಂತೆ ಇರುತ್ತದೆ– ಅದದೇ ವಿಷಯಗಳ ಬಗ್ಗೆ ಅದದೇ ಸಾಲುಗಳು... ಬಜೆಟ್ ಭಾಷಣ ಕೇಳಿದ ಬಳಿಕ ಸಂಸದರು ಶಾಲಾ ಹುಡುಗರಂತೆ ರಜೆ ಪಡೆಯುವುದೇಕೆ ಎಂಬುದು ಸಹ ಅರ್ಥವಾಗದ ಸಂಗತಿ. ಅದು ಅಷ್ಟೊಂದು ಬೋರ್ ಹೊಡೆಸುವಂತೆ ಇತ್ತೇ, ಕಬ್ಬಿಣದ ಕಡಲೆಯಾಗಿತ್ತೇ ಅಥವಾ ಕಷ್ಟಪಟ್ಟು ಅದನ್ನು ಕೇಳಿಸಿಕೊಂಡಿದ್ದಕ್ಕೆ ಸಿಕ್ಕ ಪ್ರತಿಫಲ ಮಾತ್ರವೇ? ಸಂಸತ್ತಿನ ಅಮೂಲ್ಯ ಸಮಯವನ್ನು ಯಾರೂ ಹಾಳುಮಾಡಬಾರದು.

ಯಶೋವರ್ಧನ್ ಝಾ ಆಜಾದ್, ಉದ್ಯಮಿ, ನಿವೃತ್ತ ಐಪಿಎಸ್ ಅಧಿಕಾರಿ

ಕಿಡಿನುಡಿ

ಎನ್‌ಡಿಎ ಸರ್ಕಾರದ ಉಳಿವಿಗಾಗಿ ಬಿಹಾರ ಮತ್ತು ಆಂಧ್ರಪ್ರದೇಶಕ್ಕೆ 2024ರ ಬಜೆಟ್ ನೀಡಿರುವ ರುಷುವತ್ತು ಹೇಗಿದೆಯೆಂದರೆ, ಒಕ್ಕೂಟ ತತ್ವವನ್ನು ರಾಜಕೀಯದ ಬಲಿಪೀಠಕ್ಕೆ ಒಪ್ಪಿಸಿದಂತೆ ಇದೆ. ಈ ಬಗೆಯ ರುಷುವತ್ತು ನೈತಿಕವಾಗಿ ಅಸಹ್ಯಕರವಾದುದು, ಸಂವಿಧಾನಾತ್ಮಕವಾಗಿ ಅನೈತಿಕವಾದುದು ಮತ್ತು ಆರ್ಥಿಕವಾಗಿ ಹಾಳುಗೆಡಹುವಂಥದ್ದು.

ಸಾಗರಿಕಾ ಘೋಷ್, ರಾಜ್ಯಸಭಾ ಸದಸ್ಯೆ, ಟಿಎಂಸಿ

25 ವರ್ಷಗಳ ಹಿಂದೆ

ಶನಿವಾರ, 24-7-1999

- **ಪಟೇಲ್ ಜತೆ ಮೈತ್ರಿ ಇಲ್ಲ ರಾಜ್ಯ ಬಿಜೆಪಿ ಸಭೆ ನಿರ್ಧಾರ**

ಬೆಂಗಳೂರು, ಜುಲೈ 23– ಮುಖ್ಯಮಂತ್ರಿ ಜೆ.ಎಚ್. ಪಟೇಲ್ ನೇತೃತ್ವದ ಜನತಾದಳ ಜತೆ ಚುನಾವಣೆ ಹೊಂದಾಣಿಕೆ ಮಾಡಿಕೊಳ್ಳದೇ ಇರಲು ಇಂದು ಇಲ್ಲಿ ನಡೆದ ರಾಜ್ಯ ಬಿಜೆಪಿ ಪದಾಧಿಕಾರಿಗಳ ಸಭೆ ನಿರ್ಧರಿಸಿದೆ.

‘ಜನರಿಂದ ತಿರಸ್ಕೃತಗೊಂಡಿರುವ ಜನತಾ ದಳದ ಜತೆ ಹೊಂದಾಣಿಕೆ ಮಾಡಿಕೊಳ್ಳಬೇಕೆಂಬ ನಿರ್ಧಾರವನ್ನು ಪಕ್ಷದ ವರಿಷ್ಠರು ರಾಜ್ಯ ಘಟಕದ ಮೇಲೆ ಹೇರಬಾರದು ಎಂಬುದು ಕಾರ್ಯಕರ್ತರ ಒತ್ತಾಸೆಯಾಗಿದೆ.

- **ಜನತಾದಳ ಪುನಶ್ಚೇತನಕ್ಕೆ ಪಣ**

ಬೆಂಗಳೂರು, ಜುಲೈ 23– ಒಳಸಂಚು, ಪಿತೂರಿಗಳಿಂದಾಗಿ ಇಬ್ಭಾಗವಾಗಿರುವ ಜನತಾದಳವನ್ನು ಮತ್ತೆ ಮೂಲ ಸಿದ್ಧಾಂತದ ಮೇಲೆ ಪುನಶ್ಚೇತನಗೊಳಿಸಿ ರಾಜ್ಯದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಅಧಿಕಾರಕ್ಕೆ ತರಬೇಕು ಎಂದು ದೇವೇಗೌಡರ ನೇತೃತ್ವದ ಬಣದ ಮುಖಂಡರು ಇಂದು ಪಣ ತೊಟ್ಟರು.

50 ವರ್ಷಗಳ ಹಿಂದೆ

ಬುಧವಾರ, 24-7-1974

- **‘ಸಂವಿಧಾನ ವಿರುದ್ಧ’ದ ಕಛತೀವು ಒಪ್ಪಂದಕ್ಕೆ ಖಂಡನೆ**

ನವದೆಹಲಿ, ಜುಲೈ 23– ಕಛತೀವು ದ್ವೀಪವನ್ನು ಶ್ರೀಲಂಕಾಕ್ಕೆ ವರ್ಗಾಯಿಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಪ್ರತಿಭಟಿಸಿ ಸಂಸತ್ತಿನ ಉಭಯ ಸದನಗಳಲ್ಲಿ ಇಂದು ಕಮ್ಯುನಿಸ್ಟೇತರ ವಿರೋಧ ಪಕ್ಷಗಳ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು.

ಕಳೆದ ತಿಂಗಳು ಭಾರತ ಮತ್ತು ಶ್ರೀಲಂಕಾ ಪ್ರಧಾನಿಗಳು ಸಹಿ ಹಾಕಿದ ಆ ಒಪ್ಪಂದವು ‘ಸಂವಿಧಾನಕ್ಕೆ ವಿರುದ್ಧವಾಗಿದ್ದು ಅಕ್ರಮವಾದುದೆಂದು’ ಅವರು ಹೇಳಿದರು.

- **ಪ್ರಾಣ ತೆಗೆಯುವ ಕಲಬೆರಕೆ**

ಕಲ್ಕತ್ತ, ಜುಲೈ 23– ಆಹಾರ, ಔಷಧ ಮತ್ತಿತರ ಸಾಮಗ್ರಿಗಳ ಕಲಬೆರಕೆಯಿಂದ 1973ರಲ್ಲಿ ಪಶ್ಚಿಮ ಬಂಗಾಳದಲ್ಲಿ ಕನಿಷ್ಠ 259 ಜನ ಸಾವಿಗೀಡಾದರು. ಸರ್ಕಾರಿ ದಾಖಲೆಗಳೇ ಈ ಅಂಶ ನಿರೂಪಿಸುತ್ತವೆ. ಶಂಕೆ ಬಂದ ತಕ್ಷಣ ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದಾಗ ಅವುಗಳ ಬಣ್ಣ ಬಯಲಾಯಿತು.

ಪ್ರಜಾಪ್ರಭುತ್ವ ಮತ್ತು ನೈತಿಕ ಮೌಲ್ಯಗಳ ರಕ್ಷಣೆಯಿಂದ ಪರಿಸರ ಉಳಿದೀತು, ನಾಡು ಬೆಳೆದೀತು

ಬೆಸೆಯಲಿ ಜೀವಜಾಲದ ಸರಪಳಿ

ವಿಶ್ಲೇಷಣೆ

ಅ.ನ.ಯಲ್ಲಪ್ಪ ರೆಡ್ಡಿ

ಅನೇಕತೆಯಲ್ಲಿ ಏಕತೆಯನ್ನು ಸಾಧಿಸುವುದು ರಾಜಕೀಯದ ಬಹುಮುಖ್ಯ ತತ್ವವಾಗಿದೆ. ಸಹಬಾಳ್ವೆ, ಎಲ್ಲ ಜೀವಿಗಳ ಏಳಿಗೆ ಮತ್ತು ಪರಿಸರದ ಬಗ್ಗೆ ಕಾಳಜಿ... ಇವೆಲ್ಲವೂ ಸಮಪಾಕದಲ್ಲಿ ಇದ್ದಾಗ ಮಾತ್ರ ಪ್ರಜಾಪ್ರಭುತ್ವ ಜೀವಂತವಾಗಿರುತ್ತದೆ. ಆದರೆ ಕೆಲವು ದಶಕಗಳಿಂದ ಅದು ತಲೆಕೆಳಗಾದಂತಿದೆ. ಪ್ರಜಾಪ್ರಭುತ್ವದ ಮೂಲ ಆಶಯಗಳೇ ಮಸುಕಾಗುವಂತೆ ಆಗಿರುವುದು ವಿಷಾದಕರ. ರಾಜಕೀಯವೆಂದರೆ ಓಲೈಕೆ, ಸ್ವಜನಪಕ್ಷ-ಪಾತ, ಅಧಿಕಾರದಾಹ ಮತ್ತು ಲಾಭಬಡುಕತನವನ್ನೇ ಪ್ರವೃತ್ತಿಯನ್ನಾಗಿಸುವ ವೃತ್ತಿ ಎಂಬಂತಾಗಿದೆ ಇಂದಿನ ಸ್ಥಿತಿ.

ಇದರ ಫಲಸ್ವರೂಪವಾಗಿ ವಿಭಜಕ ರಾಜಕಾರಣ ದಾಂಗುಡಿ ಇಡತೊಡಗಿದೆ. ಜನಸಮುದಾಯಗಳ ನಡುವೆ ಕಂದಕ ಸೃಷ್ಟಿಯಾಗಿದೆ. ಧರ್ಮದ ಹೆಸರಿನಲ್ಲಿ ದ್ವೇಷ ರಾಜಕಾರಣಕ್ಕೆ ದಾರಿ ಮಾಡಿಕೊಟ್ಟಿದೆ ಮತ್ತು ಧರ್ಮಾಂಧತೆಗೂ ಕಾರಣವಾಗಿದೆ. ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ಇದು ಬಹುದೊಡ್ಡ ಕಂಟಕವನ್ನು ತರಬಲ್ಲ ಸಂಗತಿ ಎಂಬುದು ಅನೇಕರಿಗೆ ಅರ್ಥವಾಗಿಲ್ಲ ಎಂಬುದು ವಿಷಾದಕರ.

ಇವೆಲ್ಲದರ ನಡುವೆ, ಜಾಗೃತನಾದ ಭಾರತೀಯ ಮತದಾರ ನಿಸ್ಸಂದಿಗ್ಧವಾದ ಒಂದು ಸಂದೇಶವನ್ನು ಜನಾದೇಶದ ಮೂಲಕ ವಿಶ್ವಕ್ಕೆ ಕೊಟ್ಟಿದ್ದಾನೆ. ಸರ್ವಾಧಿಕಾರಿ ಧೋರಣೆ, ಕಪಟ ಮತ್ತು ಕೊಳಕು ರಾಜಕೀಯವನ್ನು ಮೆಟ್ಟಿ ನಿಲ್ಲಬಲ್ಲ ಎತ್ತರದ ವ್ಯಕ್ತಿತ್ವ ತನಗಿದೆ ಎಂಬುದನ್ನು ಸಾಬೀತುಪಡಿಸಿದ್ದಾನೆ. 2024ರ ಲೋಕಸಭಾ ಚುನಾವಣೆಯ ಫಲಿತಾಂಶವು ಮತದಾರನ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಕೋಮು ಧ್ರುವೀಕರಣ ಮತ್ತು ಭಯ ಹುಟ್ಟಿಸುವ ಪ್ರವೃತ್ತಿ ಪ್ರಜಾಸತ್ತೆಯಲ್ಲಿ ಇರತಕ್ಕ-ದ್ದಲ್ಲ ಎಂಬ ದಿಟ್ಟ ಉತ್ತರವನ್ನೂ ಮತದಾರ ಕೊಟ್ಟಿದ್ದಾನೆ.

ಯಾರೊಬ್ಬರ ಹಕ್ಕುಗಳಿಗೂ ಧಕ್ಕೆಯುಂಟಾಗಬಾರದು, ವಿಭಿನ್ನ ಮತಧರ್ಮಗಳನ್ನು ಒಳಗೊಂಡಿರುವ ಭಾರತದಲ್ಲಿ ಎಲ್ಲ ಸಮುದಾಯಗಳ ಮೂಲಭೂತ ಹಕ್ಕುಗಳ ಸಂರಕ್ಷಣೆ ಆಗಬೇಕು ಎಂಬುದಕ್ಕೆ ಅನುಗುಣವಾಗಿ ನಿರ್ದೇಶನ, ಮಾರ್ಗದರ್ಶನ ಮತ್ತು ಕಾನೂನು ಪಾಲನೆಯ ಸಂದೇಶಗಳನ್ನು ಸುಪ್ರೀಂ ಕೋರ್ಟ್ ಸಹ ಕೊಡುತ್ತಲೇ ಬಂದಿದೆ.

ಇಂದು ಇಡೀ ವಿಶ್ವವು ಪ್ರಜಾಪ್ರಭುತ್ವ ಮಾದರಿಯನ್ನು ಅನುಸರಿಸುವುದಕ್ಕೆ ಪ್ರಾಧಾನ್ಯ ಕೊಡುತ್ತಿದೆ. ಏಕೆಂದರೆ, ಭೂಮಿತಾಯಿ ನಮಗೆಲ್ಲರಿಗೂ ಬದುಕಲು ಒಂದೇ ತೆರನಾದ ಹಕ್ಕುಬಾಧ್ಯತೆಗಳನ್ನು ಕೊಟ್ಟಿದ್ದಾಳೆ. ಪರಸ್ಪರ ಅವಲಂಬಿತವಾದ ಜೀವಜಗತ್ತಿನಲ್ಲಿ ವಿಶೇಷತಃ ಸಸ್ಯ-ವೃಕ್ಷ ಸಾಮ್ರಾಜ್ಯದಲ್ಲಿ ಬಹಳಷ್ಟು ವೈಜ್ಞಾನಿಕ ಅಂಶಗಳಿವೆ. ಜೊತೆಜೊತೆಗೆ ಅವುಗಳ ಅವಲಂಬನೆಯಿಲ್ಲದೆ ಮಾನವ ಬದುಕುಳಿಯಲಾರ ಎಂಬುದು ಕೂಡ ಸಾಬೀತಾಗಿದೆ. ಆದರೆ ಇಂದು ಜೀವಜಾಲದ ವಿಕಸನ ಪ್ರಕ್ರಿಯೆಯ ಸರಪಳಿ ಕಡಿದುಹೋಗಿದೆ. ಹಲವಾರು ತಳಿಗಳು ವಿನಾಶವಾಗಿವೆ ಇಲ್ಲವೇ ವಿನಾಶದ ಅಂಚಿಗೆ ಬಂದು ತಲುಪಿವೆ. ಈ ವಿನಾಶಪ್ರಕ್ರಿಯೆಯು ಅರಣ್ಯ ಪ್ರದೇಶವನ್ನು ವ್ಯಾಪಕವಾಗಿ ಆಪೋಶನ ತೆಗೆದುಕೊಳ್ಳುತ್ತಿದೆ.

ನಮ್ಮ ಪೂರ್ವಜರಿಗೆ ಜೈವಿಕ ವ್ಯವಸ್ಥೆಯ ಬಗ್ಗೆ ಚೆನ್ನಾಗಿ ಅರಿವಿತ್ತು. ಈ ಭೂಮಿಯ ನಿರ್ಮಿತಿಯ ಯಾವುದೂ ತಾನು ಮಾಡಿದ್ದಲ್ಲ, ಹಾಗಾಗಿ ಅದನ್ನು ಹಾಳುಗೆಡಹುವ ಅಧಿಕಾರ ತನಗಿಲ್ಲ ಎಂಬ ಅರಿವಿದ್ದ ಕಾರಣ ಅವರು ಪ್ರಕೃತಿಯನ್ನು ದೇವರು ಎಂದು ಪರಿಭಾವಿಸಿದ್ದರು. ಆನುವಂಶಿಕ ವೈವಿಧ್ಯದ ಜಾಲದಲ್ಲಿ ಆಹಾರ ಭದ್ರತೆ, ಜಲಭದ್ರತೆ, ಆರೋಗ್ಯ ಭದ್ರತೆಯ ಮಹತ್ವವನ್ನು ನಮ್ಮ ಪೂರ್ವಿಕರು ಬಹಳ ಚೆನ್ನಾಗಿ ಅರ್ಥಮಾಡಿಕೊಂಡು, ಅದಕ್ಕೆ ತಕ್ಕಂತೆ ತಮ್ಮ ಜೀವನವಿಧಾನವನ್ನು ರೂಪಿಸಿಕೊಂಡಿದ್ದರು.

ಈ ಭೂಮಿಯಲ್ಲಿರುವ ಇರುವೆಗಳ ಸಂಖ್ಯೆಯು ಮಾನವರಿಗಿಂತ ಅದೆಷ್ಟೋ ಕೋಟಿ ಪಟ್ಟು ಹೆಚ್ಚೇ ಇದೆ. ಮನುಷ್ಯನಿಗೆ ಟ್ರಾಫಿಕ್ ಜಾಮ್ ಸಮಸ್ಯೆ ಎದುರಾಗುತ್ತದೆ. ಆದರೆ ಇರುವೆಗಳಿಗೆ ಎಂದೂ ಅಂತಹ ಸಮಸ್ಯೆ ಬಾಧಿಸುವುದಿಲ್ಲ. ಸಹಜೀವನ, ಸಹಜಜೀವನ ಮತ್ತು ಪರಸ್ಪರ ಮಿತ್ರತ್ವದಿಂದ ಎಲ್ಲ ತೊಂದರೆಗಳನ್ನೂ ನಿರ್ವಹಿಸಿ ಮುನ್ನಡೆಯುವ, ಬದುಕುವ ಶಕ್ತಿ ಇಂತಹ ಪುಟ್ಟ ಜೀವಿಗಳಲ್ಲೂ ಇದೆಯೆಂದಾದರೆ ಅದೊಂದು ಬಗೆಯ ವಿಸ್ಮಯವೇ ಅಲ್ಲವೆ? ಮನುಷ್ಯ ತಾನೇತಾನಾಗಿ ಸಣ್ಣಪುಟ್ಟ ಸಮಸ್ಯೆಗಳನ್ನೂ ದೊಡ್ಡದು ಮಾಡಿಕೊಳ್ಳುತ್ತಾನೆ, ಮೂಲ ಸೌಕರ್ಯದ ಹೆಸರಿನಲ್ಲಿ ಪರಿಸರದ ಎದೆ ಬಗೆದು ಕೋಟ್ಯಂತರ ಜೀವಿಗಳ ವಿನಾಶಕ್ಕೆ ಕಾರಣನಾಗು-ತ್ತಾನೆ. ಪ್ರವಾಹ, ಬರಪರಿಸ್ಥಿತಿಯನ್ನು ತಂದುಕೊಳ್ಳುತ್ತಾನೆ. ನಗರೀಕರಣದ ಭರಾಟೆಯಲ್ಲಿ ಆಗುವ ತಾಪಮಾನ ಹೆಚ್ಚಳಕ್ಕೂ ಮನುಷ್ಯನೇ ಕಾರಣ.

ಇಂದು ವಿಲಕ್ಷಣ ಆಹಾರ ಕ್ರಮದ ಕಾರಣದಿಂದ ಮಾನವ ಸಂಕುಲ ವಿವಿಧ ರೋಗಗಳನ್ನು ಆಹ್ವಾನಿಸುತ್ತಿದೆ. ನದಿಯ ಸಹಜ ಹರಿವನ್ನು ತಿರುಗಿಸುವುದು, ಎರಡು ನದಿಗಳನ್ನು ಅಸಹಜವಾಗಿ ಒಂದಾಗಿಸುವುದು, ಬೃಹತ್ ಜಲಾಶಯ, ಕಟ್ಟಡ, ಸೇತುವೆಗಳ ನಿರ್ಮಾಣ, ಇವೆಲ್ಲದರ ನೇರ ವ್ಯತಿರಿಕ್ತ ಪರಿಣಾಮ ಆಗುವುದು ಮನುಷ್ಯನ ಮೇಲೆ ಮಾತ್ರವಲ್ಲ; ಜಲಚರ– ಪ್ರಾಣಿಗಳ ಸಂತತಿಗೂ ಇದರಿಂದ ಹಾನಿ ಉಂಟಾಗುತ್ತದೆ.

ನಮ್ಮ ಮುಂದಿರುವ ಬಹುಮುಖ್ಯ ಸಂಗತಿಯೆಂದರೆ, ಪ್ರಕೃತಿಯೊಂದಿಗೆ ಅನುಸಂಧಾನ ಮಾಡಿಕೊಂಡು ಪರಸ್ಪರ ಅವಲಂಬನೆಯೊಂದಿಗೆ ಎಚ್ಚರಿಕೆಯಿಂದ ಹೆಜ್ಜೆ ಇಡುವುದು. ಸಸ್ಯಶಾಸ್ತ್ರ ವಿಜ್ಞಾನಿ ಜಾನಕಿ ಅಮ್ಮಾಳ್ ಅವರು ಎತ್ನೊಬಾಟನಿ ಕ್ಷೇತ್ರದಲ್ಲಿ ಅಪರೂಪದ ಸಾಧನೆ, ಸಂಶೋಧನೆ ಮಾಡಿರುವ ಮೇರುವ್ಯಕ್ತಿ. ಪರಿಸರ ಕೇಂದ್ರಿತವಾದ ಅವರ ಸಂಶೋಧನೆಗಳ ಅವಲಂಬನೆ ಮತ್ತು ಅನುಸರಣೆ ಇಂದಿನ ಸನ್ನಿವೇಶದಲ್ಲಿ ತುಂಬ ಅಗತ್ಯ. ಜೀವಜಾಲವನ್ನು ಸರ್ವನಾಶದ ಅಂಚಿಗೆ ತಲುಪಿಸುವ ದಿಸೆಯಲ್ಲಿ ಕೆಲಸ ಮಾಡುತ್ತಿರುವ ನಮ್ಮ ಜೀವನ ಪದ್ಧತಿಯನ್ನು ಹದ್ದುಬಸ್ತಿಗೆ ತರಬೇಕೆಂದರೆ ಎತ್ನೊಬಾಟನಿ ಉದ್ಯಾನಗಳ ರಚನೆ ಅವಶ್ಯವಾಗಿ ಆಗಬೇಕು.

1972ರ ಸ್ಟಾಕ್‌ಹೋಂ ಒಪ್ಪಂದದಿಂದ 2024ರ ಜಾಗತಿಕ ಸಮಾವೇಶದ ತನಕ ಎಲ್ಲ ಸಂದರ್ಭಗಳಲ್ಲೂ ಪರಿಸರ-ಪ್ರಕೃತಿ-ಜೀವಜಾಲ ಸರಪಳಿಯ ಕುರಿತು ಅಧ್ಯಯನಗಳು ನಡೆದಿವೆ. ಬಹಳಷ್ಟು ತೀರ್ಮಾನಗಳಾಗಿವೆ. ಆದರೆ ಅವುಗಳ ಪಾಲನೆ ಸರಿಯಾಗಿ ಆಗಿಲ್ಲ. ಮುಂದಿನ ಪೀಳಿಗೆಗಳಿಗೆ ಈ ಭೂಮಿಯ ಮೇಲೆ ಬದುಕಲು ಬೇಕಾದ ಇಂತಹ ಮೂಲಭೂತ ಅಂಶಗಳನ್ನು ಮಲಿನಗೊಳಿಸದೇ ಉಳಿಸಬೇಕಾಗಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

ಸುಪ್ರೀಂ ಕೋರ್ಟ್ 1981ರಲ್ಲಿ ನೀಡಿದ ತೀರ್ಪೊಂದರ ಪ್ರಕಾರ, ನಮಗೆ ದೈವದತ್ತವಾಗಿ ಬಂದಿರುವ ಕೊಡುಗೆಗಳಾದ ನದಿಗಳು, ಪರ್ವತಗಳು, ಬೆಟ್ಟಗುಡ್ಡಗಳನ್ನು ನಾವ್ಯಾರೂ ನಿರ್ಮಾಣ ಮಾಡಿಲ್ಲ, ಮಾಡುವುದು ಸಾಧ್ಯವೂ ಅಲ್ಲ. ಹಾಗಿರುವಾಗ ಅವನ್ನು ಇನ್ನಾರಿಗೋ ಮಾರಾಟ ಮಾಡಲು, ಗಣಿಗಾರಿಕೆಗೆ ಅವಕಾಶ ಕೊಡಲು ಯಾರಿಗೂ ಹಕ್ಕಿಲ್ಲ.

ಬಳ್ಳಾರಿಯ ಸ್ವಾಮಿಮಲೈ ಮತ್ತು ದೇವರಗುಡ್ಡ-ದಂತಹ ಸಂಪದ್ಭರಿತ ಪ್ರದೇಶಗಳಲ್ಲಿ ಗಣಿಗಾರಿಕೆಗೆ ಅವಕಾಶ ಕೊಡುವ ಪ್ರಯತ್ನ ನಡೆದಿರುವುದನ್ನು ನಾವೆಲ್ಲ ಗಮನಿಸುತ್ತಲೇ ಇದ್ದೇವೆ. ಒಂದುವೇಳೆ ಅದಕ್ಕೆ ಅನುಮತಿ ಸಿಕ್ಕರೆ, ಮಾರ್ಪಡಿಸಲಾಗದ, ಸರಿಪಡಿಸಲಾಗದ ನಷ್ಟವಾಗಲಿದೆ. ಇದರ ಪರಿಣಾಮ ಬರೀ ಬಳ್ಳಾರಿಗೆ ಸೀಮಿತವಾಗುವುದಿಲ್ಲ. ತುಂಗಭದ್ರೆ ನದಿಗೂ ಆಗುತ್ತದೆ, ಚಿತ್ರದುರ್ಗ, ತುಮಕೂರು ಜಿಲ್ಲೆಗಳವರೆಗೂ ಅದರ ವಿನಾಶಕಾರಿ ಪರಿಣಾಮ ವ್ಯಾಪಿಸುತ್ತದೆ.

2024ರ ಬೇಸಿಗೆಯ ದಿನಗಳಲ್ಲಿ ತಡೆದುಕೊಳ್ಳಲು ಸಾಧ್ಯವಾಗದ ತಾಪಮಾನವನ್ನು ನಾವೆಲ್ಲ ಅನುಭವಿಸಿದ್ದೇವೆ. ಕೆಲವೆಡೆ ವಿಪರೀತ ಮಳೆ, ಪ್ರವಾಹ ಪರಿಸ್ಥಿತಿ, ಗುಡ್ಡಕುಸಿತಗಳಾಗಿವೆ. ಇವೆಲ್ಲವೂ ಭೂಮಿತಾಯಿಗೆ ಕೇಡು ಬಗೆದರೆ ಪರಿಣಾಮ ಏನಾಗುತ್ತದೆ ಎಂಬುದರ ಮುನ್ಸೂಚನೆ ಎಂಬುದನ್ನು ನಾವು ಅರಿಯಬೇಕಿದೆ.

ಬೆಂಗಳೂರಿನ ನಾಗರಭಾವಿಯಲ್ಲಿ ‘ಡಾ. ಜಾನಕಿ ಅಮ್ಮಾಳ್ ಎತ್ನೊಬಟ್ಯಾನಿಕಲ್ ಪಾರ್ಕ್’ ನಿರ್ಮಾಣ ಕಾರ್ಯ ಬೆಂಗಳೂರು ಎನ್ವಿರಾನ್‌ಮೆಂಟಲ್ ಟ್ರಸ್ಟ್‌ನ ನೇತೃತ್ವದಲ್ಲಿ ನಡೆದಿದೆ. ಈ ಪಾರ್ಕ್ ಮಾದರಿಯಲ್ಲಿ ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿಯೂ ಕನಿಷ್ಠ ಹತ್ತು ಎಕರೆಯಲ್ಲಿ ವಿವಿಧ ಬಗೆಯ ಸಸ್ಯ-ವೃಕ್ಷ ಉದ್ಯಾನವನ್ನು ನಿರ್ಮಿಸಿ ಅದನ್ನು ಉಳಿಸಿ, ಬೆಳೆಸಿದರೆ, ಶುದ್ಧಗಾಳಿಯನ್ನು ಪಡೆಯಬಹುದು, ಕೆಟ್ಟುಹೋಗಿರುವ ಪರಿಸರ ವ್ಯವಸ್ಥೆಯನ್ನು ಕೊಂಚಮಟ್ಟಿಗಾದರೂ ಸುಸ್ಥಿತಿಗೆ ತರಬಹುದು.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಹಿಂದೆಯೂ ಗುಂಡುತೋಪುಗಳ ಪರಿಕಲ್ಪನೆ ಇತ್ತು. ನಮ್ಮಲ್ಲಿ ಪವಿತ್ರ ವನಗಳಿದ್ದವು. ಆದರೆ ಆಧುನೀಕರಣದ ಭರಾಟೆಯಲ್ಲಿ ಅವೆಲ್ಲವೂ ಇಲ್ಲವಾಗುತ್ತಿವೆ. ಅವುಗಳ ಪುನರ್‌ಸೃಷ್ಟಿ ಆದಾಗ ಮಾತ್ರ ಪ್ರಕೃತಿ ಉಳಿದೀತು, ಆರೋಗ್ಯಪೂರ್ಣ ಜೀವನ ಸಾಕಾರವಾದೀತು, ಮುಂದಿನ ಪೀಳಿಗೆ ನೆಮ್ಮದಿಯಿಂದ ಉಸಿರಾಡಲು ಸಾಧ್ಯವಾದೀತು.

ಲೇಖಕ: ನಿವೃತ್ತ ಅರಣ್ಯಾಧಿಕಾರಿ, ಪರಿಸರ ತಜ್ಞ

ಚುರುಮುರಿ

ಪಂಚೆ ಕಲ್ಚರ್

• ಮಣ್ಣೆ ರಾಜು

ಪಂಚೆ ಉಟ್ಟು ಮಾಲ್‌ಗೆ ಬಂದ ಶಂಕ್ರಿಗೆ ಸೆಲ್ಯೂಟ್ ಹೊಡೆದ ಸೆಕ್ಯೂರಿಟಿ, ‘ಪಂಚೆಯಲ್ಲಿ ತುಂಬಾ ಚೆನ್ನಾಗಿ ಕಾಣಿಸ್ತೀರಿ ಸಾರ್...’ ಎಂದು ಹೇಳಿ ಸ್ವಾಗತಿಸಿದ. ಸುಮಿಗೂ ಖುಷಿಯಾಯಿತು.

‘ಸಾರ್, ನಮ್ಮ ಪಂಚೆ ಮಳಿಗೆಯಲ್ಲಿ ಡಿಸ್ಕೌಂಟ್ ಆಫರ್ ಇದೆ’ ಎಂದ ಮಾಲ್ ಸಿಬ್ಬಂದಿ.

ಪಂಚೆ ಮಳಿಗೆಯಲ್ಲಿ ಗಂಡಸರಿಗಿಂತ ಹೆಂಗಸರೇ ಹೆಚ್ಚಾಗಿದ್ದರು. ಗಂಡ, ಮಕ್ಕಳಿಗೆಂದು ಉತ್ಸಾಹದಿಂದ ಪಂಚೆ ಖರೀದಿಸುತ್ತಿದ್ದರು. ಟ್ರಯಲ್ ರೂಮ್‌ನಲ್ಲಿ ಮಾಲ್ ಸಿಬ್ಬಂದಿ ಗಂಡಸರು, ಮಕ್ಕಳಿಗೆ ಪಂಚೆ ಉಡಿಸುತ್ತಿದ್ದರು. ಸೊಂಟದಿಂದ ಜಾರದಂತೆ, ಕಾಲು ತೊಡರದಂತೆ ಪಂಚೆ ಉಡುವುದನ್ನು ಕಲಿಸಿಕೊಡುತ್ತಿದ್ದರು.

ಪಕ್ಕದ ಮಳಿಗೆಯಲ್ಲಿ ಚೀರಾಟ ಕೇಳಿ ಶಂಕ್ರಿ, ಸುಮಿ ಆತಂಕದಿಂದ ಅಲ್ಲಿಗೆ ಓಡಿಬಂದರು. ‘ಮೇಡಂ, ಇದು ಪಂಚೆ ಉಟ್ಟವರ ಚಿಕಿತ್ಸಾ ಕೇಂದ್ರ. ಎಸ್ಕಲೇಟರ್‌ನಲ್ಲಿ ಜಾರಿದವರು, ಪಂಚೆ ತೊಡರಿ ಬಿದ್ದು ಗಾಯಗೊಂಡವರಿಗೆ ಇಲ್ಲಿ ಉಚಿತವಾಗಿ ಪ್ರಥಮ ಚಿಕಿತ್ಸೆ ನೀಡುತ್ತೇವೆ’ ಮಾಲ್ ಮ್ಯಾನೇಜರ್ ಹೇಳಿದರು.

‘ಪಂಚೆ ಪ್ರೇಮ ಇಷ್ಟವಾಯ್ತು’ ಸುಮಿ ಮೆಚ್ಚಿದಳು.

‘ಹೌದು ಮೇಡಂ, ಸಿದ್ದರಾಮಯ್ಯ ಪಂಚೆ ಉಟ್ಟು ರಾಜ್ಯಭಾರ ಮಾಡ್ತಿದ್ದಾರೆ. ದೇವೇಗೌಡರು ಪಂಚೆಯಲ್ಲೇ ದೇಶ ಆಳಿದರು. ಕುಮಾರಸ್ವಾಮಿ ಪಂಚೆ ಉಟ್ಟು ದೇಶದ ಮಂತ್ರಿಯಾಗಿದ್ದಾರೆ. ಪಂಚೆ ಬರೀ ರೈತರು ಉಡುವ ‘ಅಗ್ರಿ’ಕಲ್ಚರ್ ಅಲ್ಲ, ನಮ್ಮ ಶ್ರೀಮಂತ ಸಂಸ್ಕೃತಿ ಸಾರುವ ‘ಸಿರಿ’ಕಲ್ಚರ್. ವರ್ಷಕ್ಕೊಮ್ಮೆ ಮಾಲ್‌ನಲ್ಲಿ ಪಂಚೆ ಫೆಸ್ಟ್ ಆಚರಿಸಲು ತೀರ್ಮಾನಿಸಿದ್ದೇವೆ’ ಅಂದರು ಮ್ಯಾನೇಜರ್.

‘ಪಂಚೆ ಬಿಚ್ಚಿ ಹೆಗಲ ಮೇಲೆ ಹಾಕಿಕೊಂಡು ಪಟಾಪಟಿ ಚಡ್ಡಿಯಲ್ಲಿ ಬರುವವರಿಗೂ ಮಾಲ್‌ಗೆ ಪ್ರವೇಶ ನೀಡುತ್ತೀರಾ?’ ಶಂಕ್ರಿ ಕೇಳಿದ.

‘ಮಾಲ್ ಪ್ರವೇಶದ ಬಗ್ಗೆ ಸರ್ಕಾರದ ಮಾರ್ಗಸೂಚಿಯಲ್ಲಿ ಇದೂ ಸೇರಿದ್ದರೆ ಅನುಸರಿಸ್ತೀವಿ. ಪಂಚೆ ಬದಲು ಟವೆಲ್ ಸುತ್ತಿಕೊಂಡು ಬರುವವರಿಗೂ ಪ್ರವೇಶ ಕೊಡಬೇಕು ಎಂದು ಸರ್ಕಾರ ಹೇಳಿದರೆ, ಅದನ್ನೂ ಪಾಲನೆ ಮಾಡ್ತೀವಿ...’ ಎಂದರು ಮ್ಯಾನೇಜರ್.

ಸಂಗತ

ಭಯ ಬೇಡ, ಎಚ್ಚರ ಇರಲಿ

ಸೊಳ್ಳೆಗಳ ನಿಯಂತ್ರಣವೊಂದೇ ಡೆಂಗಿಯನ್ನು ತಡೆಗಟ್ಟಲು ಇರುವ ಪರಿಹಾರ

• ಡಾ. ಲಕ್ಷ್ಮಣ ವಿ.ಎ.

ತಲೆನೋವು ಮತ್ತು ವಾಂತಿಯಿಂದ ಬಳಲುತ್ತಿದ್ದ ಯುವಕನೊಬ್ಬ ಬೆಂಗಳೂರಿನಲ್ಲಿರುವ ನನ್ನ ಕ್ಲಿನಿಕ್‌ಗೆ ಇತ್ತೀಚೆಗೆ ಚಿಕಿತ್ಸೆಗೆಂದು ಬಂದಿದ್ದ. ತುಂಬ ಗಾಬರಿಯಲ್ಲಿದ್ದಂತೆ ಕಾಣುತ್ತಿದ್ದ ಅವನನ್ನು ಪರೀಕ್ಷಿಸಿದಾಗ, ಅತಿಯಾದ ಗ್ಯಾಸ್ಟ್ರಿಕ್‌ನಿಂದ ಆಹಾರ ಪಚನವಾಗದೆ ವಾಂತಿ ಮತ್ತು ತಲೆನೋವು ಬಂದಿದೆ ಎಂಬುದು ತಿಳಿಯಿತು. ಅದಕ್ಕೆ ತಕ್ಕಂತೆ ಔಷಧಿಯ ಚೀಟಿ ಬರೆದುಕೊಟ್ಟಾಗ ಆತ ‘ಸರ್, ನನಗೆ ಭಯವಾಗುತ್ತಿದೆ. ಯಾವುದಕ್ಕೂ ಡೆಂಗಿ ರಕ್ತಪರೀಕ್ಷೆ ಮಾಡಿಸಿ’ ಎಂದು ದುಂಬಾಲು ಬಿದ್ದ. ಆದರೆ ನಾನು ಅವನ ಮಾತನ್ನು ಅಲ್ಲಗಳೆದು, ಒಂದು ದಿನ ತಾಳ್ಮೆಯಿಂದ ಇದ್ದು ಮತ್ತೆ ನಾಳೆ ಬಂದು ಭೇಟಿಯಾಗುವಂತೆ ತಿಳಿಸಿದೆ. ಆತ ಅಸಮಾಧಾನದಿಂದಲೇ ಕ್ಲಿನಿಕ್‌ನಿಂದ ತೆರಳಿದ್ದ.

ಮರುದಿನ ತಾನೇ ರಕ್ತಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ, ಡೆಂಗಿಗೆ ಸಂಬಂಧಪಟ್ಟ ಎಲ್ಲಾ ಪರೀಕ್ಷೆಗಳನ್ನು ಮಾಡಿಸಿಕೊಂಡಿದ್ದ ಯುವಕ, ನಾನು ಕ್ಲಿನಿಕ್‌ಗೆ ಬರುವುದನ್ನೇ ಕಾಯುತ್ತಿದ್ದ. ಎಲ್ಲ ವರದಿಗಳಲ್ಲೂ ಡೆಂಗಿ ನೆಗೆಟಿವ್ ಎಂದೇ ವರದಿಯಾಗಿತ್ತು. ಅವನ ತಲೆನೋವು ಮತ್ತು ವಾಂತಿ ಅದಾಗಲೇ ಗುಣವಾಗಿ ಗೆಲುವಾಗಿದ್ದ.

‘ಯಾಕ್ರೀ ಇಷ್ಟೊಂದು ದುಡ್ಡು ಖರ್ಚು ಮಾಡಿ ಇಷ್ಟೆಲ್ಲಾ ರಿಪೋರ್ಟ್ ಮಾಡ್ಸಿದ್ರಿ?’ ಎಂದು ಕೇಳಿದಾಗ, ‘ಯಾಕೆ ರಿಸ್ಕು ಬೇಕು ಸಾರ್? ನಮ್ಮೂರು ಹೊಳೆನರಸೀಪುರದಲ್ಲಿ ಡೆಂಗಿಯಿಂದಾಗಿ ಮೊನ್ನೆಯಷ್ಟೇ ಎಂಬಿಬಿಎಸ್ ವಿದ್ಯಾರ್ಥಿಯೇ ತೀರಿಹೋದ. ಡಾಕ್ಟರುಗಳಿಗೇ ಹೀಗಾದರೆ ಇನ್ನು ನಮ್ಮಂಥವರ ಪಾಡೇನು?’ ಎಂದು ಹೇಳುತ್ತಾ, ವ್ಯಾಟ್ಸ್‌ಆ್ಯಪ್‌ನಲ್ಲಿ ಆ ಮೃತ ವಿದ್ಯಾರ್ಥಿಯ ಫೋಟೊ ತೋರಿಸಿದ.

ಅವನು ಹೇಳಿದ ಎಲ್ಲ ಸಂಗತಿಗಳೂ ನಿಜವಾಗಿದ್ದವು. ಡಾಕ್ಟರುಗಳೂ ಎಲ್ಲರಂತೆ ಮನುಷ್ಯರೇ ಎಂದೂ, ಡಾಕ್ಟರ್ ಅಂದಮಾತ್ರಕ್ಕೆ ಸೊಳ್ಳೆಯಿಂದ, ಕಾಯಿಲೆಯಿಂದ, ಸಾವಿನಿಂದ ವಿನಾಯಿತಿ ಪಡೆಯಲು ಸಾಧ್ಯವಿಲ್ಲವೆಂದೂ ಅವನಿಗೆ ಹೇಗೆ ತಿಳಿಸಿ ಹೇಳುವುದು?

ಕಾಯಿಲೆ ಬಂದಾಗ ಸ್ವಲ್ಪಮಟ್ಟಿಗಿನ ತಾಳ್ಮೆ ಇರಬೇಕಾದುದು ಅವಶ್ಯ. ಪ್ರತಿವರ್ಷ ಮಳೆಗಾಲದ ಶುರುವಿನಲ್ಲಿ ಡೆಂಗಿ, ಮಲೇರಿಯ, ಚಿಕೂನ್‌ಗುನ್ಯದಿಂದಾಗಿ ಸಂಭವಿಸುವ ನೂರಾರು ಸಾವುಗಳು ಜನಸಾಮಾನ್ಯರಲ್ಲಿ ಜೀವಭಯ ಹುಟ್ಟಿಸುವುದು ಸಹಜ.

ಮೊನ್ನೆ ಭೇಟಿ ಮಾಡಿದ್ದ ಇನ್ನೊಬ್ಬರು ರೋಗಿ ‘ಸರ್, ನಮ್ಮ ಅಪ್ಪನಿಗೆ ಡೆಂಗಿ ಕಾಯಿಲೆಯಾಗಿದೆ. ಕುಟುಂಬದ ನಾಲ್ಕು ಜನ ಚಿಕ್ಕ ಮನೆಯಲ್ಲಿ ಒಟ್ಟಿಗೆ ವಾಸಿಸುತ್ತಿದ್ದೇವೆ. ಅವರು ಬಳಸಿದ ತಟ್ಟೆ, ಸಾಬೂನು ಬಳಸಬಹುದೇ?’ ಎಂದು ಆತಂಕದಿಂದ ಕೇಳಿದ್ದರು. ಆದರೆ ಈ ಕಾಯಿಲೆ ರೋಗಕಾರಕ ಸೊಳ್ಳೆ ಕಚ್ಚುವುದರಿಂದ ಮಾತ್ರ ಬರುತ್ತದೆ.

ಸಾಂಕ್ರಾಮಿಕ ಕಾಯಿಲೆಯ ಇಂತಹ ದುರಿತ ಸಂದರ್ಭಗಳಲ್ಲಿ ನಿಜವಾದ ಕಾಯಿಲೆ ತಂದೊಡ್ಡುವ ಸಂಕಟಗಳು ಒಂದೆಡೆಯಾದರೆ, ಕಾಯಿಲೆಗೆ ಸಂಬಂಧಿಸಿದ ರಣರೋಚಕ ಸುದ್ದಿಗಳು ಜನರನ್ನು ವಿಚಿತ್ರ ಭಯಕ್ಕೆ ದೂಡುತ್ತವೆ. ಕೆಲವು ಆರೋಗ್ಯ ಸಂಸ್ಥೆಗಳು ಜನರ ಭಯವನ್ನೇ ಬಂಡವಾಳವಾಗಿಸಿಕೊಂಡು ಸುಲಿಗೆಯಲ್ಲಿ ನಿರತವಾಗಿಬಿಡುವುದು ಇನ್ನೊಂದು ರೀತಿಯ ಸಂಕಟ.

ಸಾವಿಲ್ಲದ ಮನೆಯಲ್ಲಿ ಸಾಸಿವೆಯನ್ನು ತರಲು ಹೇಗೆ ಸಾಧ್ಯವಿಲ್ಲವೋ ಹಾಗೇ ಈ ಭೂಮಿಯ ಮೇಲೆ ಸೊಳ್ಳೆಯಿರದ ಜಾಗವೇ ಇಲ್ಲವೇನೊ. ಜಗತ್ತಿನಾದ್ಯಂತ ಪ್ರತಿವರ್ಷ ಡೆಂಗಿಯಿಂದ ಇಪ್ಪತ್ತೈದು ಸಾವಿರ ಜನ ಸಾವೀಗೀಡಾಗುತ್ತಿದ್ದಾರೆ ಎಂದು ವರದಿಗಳು ತಿಳಿಸುತ್ತವೆ. ಕರ್ನಾಟಕದಲ್ಲಿ ಇದೇ ವರ್ಷದ ಜೂನ್‌ನಿಂದ ಇಲ್ಲಿಯವರೆಗೆ ಒಂಬತ್ತು ಸಾವಿರ ಡೆಂಗಿ ಪ್ರಕರಣಗಳು ದಾಖಲಾಗಿವೆ.

ವಿಶ್ವ ಆರೋಗ್ಯ ಸಂಸ್ಥೆಯು ರೋಗಕಾರಕ ಸೊಳ್ಳೆ, ನೊಣ ಮತ್ತು ಇತರ ಕ್ರಿಮಿಕೀಟಗಳಿಂದ ಹರಡುವ ರೋಗಾಣುಗಳನ್ನು ತಡೆಗಟ್ಟಲು ಪ್ರತಿವರ್ಷ 13.5 ಕೋಟಿ ಡಾಲರ್ ಖರ್ಚು ಮಾಡಿದರೆ, ಕೇಂದ್ರ ಸರ್ಕಾರ ಪ್ರತಿವರ್ಷದ ಬಜೆಟ್‌ನಲ್ಲಿ ₹ 1,400 ಕೋಟಿ ಮೀಸಲಿಡುತ್ತದೆ. ಹಾಗೆಯೇ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಬಜೆಟ್‌ನಲ್ಲಿ ಗಣನೀಯ ಪ್ರಮಾಣದ ಹಣ ವಿನಿಯೋಗವಾಗುತ್ತದೆ. ಸರ್ಕಾರಗಳು ಇಷ್ಟೆಲ್ಲಾ ಖರ್ಚು ಮಾಡಿದರೂ ಸೊಳ್ಳೆಗಳ ನಿಯಂತ್ರಣ ಎಂಬುದು ಸಂಪೂರ್ಣವಾಗಿ ಸಾಧ್ಯವೇ ಇಲ್ಲ ಎನ್ನುವ ಪರಿಸ್ಥಿತಿ ಇರುವಾಗ, ಇದಕ್ಕೆ ನಾಗರಿಕರ ಸಹಾಯ ಕೂಡ ಅವಶ್ಯವಾಗುತ್ತದೆ. ಡೆಂಗಿ ಉಂಟುಮಾಡುವ ಸೊಳ್ಳೆ ಸಾಮಾನ್ಯವಾಗಿ ಹಗಲು ಹೊತ್ತಿನಲ್ಲಿ ತುಂಬ ಕ್ರಿಯಾಶೀಲವಾಗಿ ಇರುವುದರಿಂದ, ಈ ಸಂದರ್ಭಗಳಲ್ಲಿ ಸೊಳ್ಳೆ ಕಚ್ಚದಂತೆ ಎಚ್ಚರ ವಹಿಸಬೇಕು.

ತೀವ್ರ ಜ್ವರ, ತಲೆನೋವು, ಕಣ್ಣು ಗುಡ್ಡೆಗಳ ಹಿಂಭಾಗದಲ್ಲಿ ತೀವ್ರತೆರನಾದ ನೋವು, ಸ್ನಾಯುಸೆಳೆತ ಹಾಗೂ ಮಾಂಸಖಂಡಗಳಲ್ಲಿ ನೋವು, ಮೈ ಮೇಲೆ ಕಾಣುವ ಕೆಂಪು ದದ್ದೆಗಳು, ವಾಂತಿ ಮತ್ತು ಕೆಲವೊಮ್ಮೆ ರಕ್ತಮಿಶ್ರಿತ ಭೇದಿಯಾಗುತ್ತಿದ್ದರೆ ಡೆಂಗಿಗೆ ಸಂಬಂಧಿಸಿದ ಪರೀಕ್ಷೆ ಮಾಡಿಸಿಕೊಂಡು ಚಿಕಿತ್ಸೆ ಪಡೆಯಬೇಕು.

ಕೆಲವೊಮ್ಮೆ ಈ ಮೇಲಿನ ಯಾವ ಚಿಹ್ನೆಗಳನ್ನೂ ತೋರಿಸದೆ ವೈರಸ್ ನಮ್ಮೊಳಗೆ ಬೆಳೆಯುತ್ತಿರಬಹುದು. ಅದು ಸಣ್ಣಪುಟ್ಟ ಲಕ್ಷಣಗಳನ್ನು ತೋರಿಸುತ್ತಿರುವಾಗಲೇ ವೈದ್ಯರಲ್ಲಿಗೆ ಭೇಟಿ ನೀಡಿ ಚಿಕಿತ್ಸೆ ಪಡೆಯಬೇಕು. ಗಾಬರಿಗೆ ಒಳಗಾಗದೆ ಧೈರ್ಯವಾಗಿದ್ದರೆ ಯಾವುದೇ ಕಾಯಿಲೆಯನ್ನು ಸುಲಭವಾಗಿ ಗೆಲ್ಲಬಹುದು.

‘ಭಯ ಬೇಡ, ಎಚ್ಚರ ಇರಲಿ’ ಎಂಬ ಮಾತು ಎಲ್ಲ ಕಾಯಿಲೆಗಳಿಗೂ ಅನ್ವಯಿಸುವ ಘೋಷವಾಕ್ಯ.

ವಾಚಕರ ವಾಣಿ

ನಾಗರಿಕತೆಗೇ ಮಂಗಳಾರತಿ...

ವಾರಾಣಸಿಯಲ್ಲಿ ನಿತ್ಯವೂ ನಡೆಯುವ ‘ಗಂಗಾ ಆರತಿ’ ಮಾದರಿಯಲ್ಲಿ ಕಾವೇರಿಗೂ ಆರತಿ ಮಾಡಲೆಂದು ತಜ್ಞರ ಆಯೋಗವನ್ನು ಕಾಶಿಗೆ ಕಳಿಸುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ (ಪ್ರ.ವಾ., ಜುಲೈ 23). ಉತ್ತರ ಭಾರತದ ನದಿಗಳು ವರ್ಷವಿಡೀ ತುಂಬಿ ಹರಿಯುತ್ತಿರುತ್ತವೆ. ನಮ್ಮ ನದಿಗಳಾದರೋ ಅತಿವೃಷ್ಟಿಯಲ್ಲೂ ಬಿರುಬೇಸಿಗೆಯಲ್ಲೂ ರೈತರ ಪಾಲಿಗೆ ಕಣ್ಣೀರನ್ನೇ ಹರಿಸುತ್ತಿವೆ. ಜಲಾನಯನ ಕ್ಷೇತ್ರದ ದುರವಸ್ಥೆಯಿಂದಾಗಿ ನಮ್ಮ ನದಿಗಳು ಕೆಂಪು ಮೇಲ್ಮಣ್ಣನ್ನು ಮತ್ತು ಅಪಾರ ಮಾಲಿನ್ಯವನ್ನು ಸಾಗಿಸುತ್ತ ಮಹಾಮಳೆಯಲ್ಲಿ ರಜಸ್ವಲೆಯೇ ಆಗಿರುತ್ತವೆ. ಬೇಸಿಗೆಯಲ್ಲಿ ಶ್ರೀರಂಗಪಟ್ಟಣದ ಕಾವೇರಿಧಾರೆಗಳು ಹಸಿರು ಚಾಪೆಯನ್ನು ಹೊದೆದು ಮೃತಧಾರೆಗಳಾಗುತ್ತವೆ. ಸುತ್ತೆಲ್ಲ ಜಲತಜ್ಞರಿರುವ ಬೆಂಗಳೂರಿನ ಬೆಳ್ಳಂದೂರು ಕೆರೆಯಂತೂ ನೊರೆಯ ಬಗ್ಗಡವನ್ನೂ ಪ್ಲಾಸ್ಟಿಕ್ ಹೋಮದ ಹೊಗೆಯನ್ನೂ ಹೊಮ್ಮಿಸುತ್ತದೆ. ಇಲ್ಲಿನ ವೃಷಭಾವತಿಯಂತೂ ನಮ್ಮ ನಾಗರಿಕತೆಗೇ ಮಂಗಳಾರತಿ ಎತ್ತುತ್ತಿದೆ.

ಮಳೆನೀರನ್ನು ಇಂಗಿಸುವಂತೆ ಜನರಿಗೆ ಪ್ರೇರಣೆ ಕೊಟ್ಟು, ಕೆರೆಗಳ ಹೂಳೆತ್ತಿಸಿ, ಸಿಂಗಪುರ ಅಥವಾ ವೂಹಾನ್ ಮಾದರಿಯಲ್ಲಿ ಪ್ರತಿ ನಗರವೂ ಸ್ಪಂಜಿನ ನಗರವಾಗುವಂತೆ ಮಾಡಿ, ಪ್ರತಿ ಜಲಾಶಯವೂ ಪ್ರವಾಸಿಗರನ್ನು ಕೈಬೀಸಿ ಕರೆಯುವಂತೆ ಮಾಡುವತ್ತ ಸರ್ಕಾರ ಯೋಜಿಸಬೇಕಲ್ಲವೆ?

ನಾಗೇಶ ಹೆಗಡೆ, ಕೆಂಗೇರಿ

ಸದನದಲ್ಲಿ...

ಏನಿದು ಸದನದಲ್ಲಿ
ರಾಮಾಯಣ?!
ಹೌದು...
‘ವಾಲ್ಮೀಕಿ’ ರಾಮಾಯಣ!

ಎಚ್.ಆನಂದರಾಮ ಶಾಸ್ತ್ರೀ
ಬೆಂಗಳೂರು

ಬೇಕಾಗಿದೆ ವಚನ ವಿಶ್ವವಿದ್ಯಾಲಯ

ಬಸವಣ್ಣನವರು ಮತ್ತು ಶರಣರು ಕೊಟ್ಟ ವಚನಗಳನ್ನು ಫ.ಗು.ಹಳಕಟ್ಟಿ ಅವರು ಸಂಸ್ಕರಿಸಿ, ಪರಿಷ್ಕರಿಸಿ ಕನ್ನಡ ನಾಡಿಗೆ ಕೊಟ್ಟು ಈಗ 100 ವರ್ಷಗಳು ಸಂದಿವೆ. ಈ ನೆನಪಿನಲ್ಲಿ, ಹಳಕಟ್ಟಿ ಅವರ ಹುಟ್ಟೂರಾದ ಧಾರವಾಡದಲ್ಲಿ ಅವರ ಹೆಸರಿನಲ್ಲಿ ವಚನ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕು.

ಹದಿನಾರನೆಯ ಶತಮಾನದಲ್ಲಿ ನಡೆದ ವಚನಗಳ ಸಂಕಲನ ಕಾರ್ಯದ ಸಂದರ್ಭದಲ್ಲಿ ಮತ್ತು ಶೂನ್ಯ ಸಂಪಾದನೆಯ ರಚನಾ ಕಾಲಘಟ್ಟದಲ್ಲಿ ಕೆಲ ಪ್ರಕ್ಷಿಪ್ತ ವಚನಗಳು, ಖೋಟಾ ವಚನಗಳು ವಚನಗಳ ಕಟ್ಟಿನಲ್ಲಿ ಸೇರಿಕೊಂಡಿವೆ. ಅವುಗಳ ಪುನರಾವೃತ್ತಿಯಾಗಿ ಹಿಂದಿನ ಒಂದು ದಶಕದಿಂದ ನಡೆದ ಸಮಗ್ರ ವಚನಗಳ ಸಂಪುಟದ ಸಂಪಾದನೆಯಲ್ಲಿಯೂ ಕೆಲವು ಪ್ರಮಾದಗಳು ನಡೆದಿವೆ. ಇಂತಹ ದೋಷಪೂರಿತ ವಚನಗಳನ್ನು ತೆಗೆದುಹಾಕುವ ಮತ್ತು ವಚನ ಚಳವಳಿಯನ್ನು ಇಡೀ ಜಗತ್ತಿಗೆ ಪರಿಚಯಿಸುವ ಕಾರ್ಯ ಅತ್ಯಗತ್ಯವಾಗಿ ನಡೆಯಬೇಕಿದೆ. ಬಸವಕಾಲೀನ ಶರಣರ ಬಗ್ಗೆ ಅನೇಕ ಸಂಶೋಧನೆಗಳು ನಡೆಯಬೇಕಿದೆ.

ಶಶಿಕಾಂತ ಪಟ್ಟಣ, ಬೆಳಗಾವಿ

ಖರ್ಚು ಹೆಚ್ಚೇನಲ್ಲ...

ಅಧಿಕೃತವಾಗಿ ಹದಿನೈದು ಸಾವಿರ ರೂಪಾಯಿ ವಾರ್ಷಿಕ ಆದಾಯ ಎಂದು ಪ್ರಮಾಣಪತ್ರ ಪಡೆದ ಬಡ ಬೋರೇಗೌಡ ತನ್ನ ಮಗಳ ಮದುವೆಯ ಛತ್ರ, ಚಿನ್ನ, ಊಟ, ಬಟ್ಟೆಗೆಂದು ಆದಾಯದ ಮೂವತ್ತಮೂರು ಪಟ್ಟು ಖರ್ಚು (₹ 5 ಲಕ್ಷ) ಮಾಡುವುದನ್ನು ನೋಡಿದರೆ, ಅಂಬಾನಿ ಪುತ್ರನ ಮದುವೆಗೆ ಮಾಡಿದ ಖರ್ಚು ಹೆಚ್ಚೇನಲ್ಲ ಅನಿಸುತ್ತದೆ!

ಜೆ.ಬಿ.ಮಂಜುನಾಥ, ಪಾಂಡವಪುರ

ಅರ್ಹ ಶಿಕ್ಷಕರ ಗುರುತಿಸಬೇಕಿದೆ

ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯಿಂದ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಿರುವುದು (ಪ್ರ.ವಾ., ಜುಲೈ 23) ಸರಿಯಲ್ಲ. ನಾನು ತೀರಾ ಹತ್ತಿರದಿಂದ ಬಲ್ಲಂತೆ, ಹೀಗೆ ಅರ್ಜಿ ಹಾಕಿಕೊಂಡು ಪ್ರಶಸ್ತಿ ಪಡೆಯಲು ಎಷ್ಟೋ ಶಿಕ್ಷಕರಿಗೆ ಸ್ವಾಭಿಮಾನ ಅಡ್ಡಬರುತ್ತದೆ. ಅವರೆಲ್ಲ ತುಂಬ ಪ್ರಾಮಾಣಿಕರೂ ಪ್ರತಿಭಾವಂತರೂ ಶಾಲೆಗೆ ಭೂಷಣರೂ ಆಗಿದ್ದಾರೆ. ಅಂಥವರು ತಮ್ಮ ವ್ಯಕ್ತಿಗತ ಘನತೆ, ಗೌರವವನ್ನು ಬದಿಗಿರಿಸಿ, ಈ ರೀತಿ ಅರ್ಜಿ ಹಾಕಿಕೊಳ್ಳದೆ ಅರ್ಹ ಪ್ರಶಸ್ತಿ, ಗೌರವ, ಸನ್ಮಾನಗಳಿಂದ ವಂಚಿತರಾಗುತ್ತಿರುವುದು ಬೇಸರದ ಸಂಗತಿ.

ಶಿಕ್ಷಣ ಇಲಾಖೆಯೇ ಅಂತಹ ಶಿಕ್ಷಕರನ್ನು ಗುರುತಿಸಿ ಪ್ರಶಸ್ತಿ ನೀಡುವ ಜವಾಬ್ದಾರಿ ಹೊರಬೇಕು. ಇಲಾಖೆಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳ ಮೂಲಕ ಈ ಕಾರ್ಯ ನಡೆಸುವುದು ಅಂತಹ ಕಷ್ಟವೇನಲ್ಲ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ತಪ್ಪು ಮಾಡಿದವರಿಗಷ್ಟೇ ಶಿಕ್ಷೆಯಾಗಲಿ

ಬೆಂಗಳೂರಿನ ಬಸವೇಶ್ವರ ನಗರದ ಮಾರುತಿ ಡ್ರೈವಿಂಗ್ ಸ್ಕೂಲ್‌ನ ತರಬೇತುದಾರ ಕಾರು ಚಾಲನೆಯ ತರಬೇತಿ ವೇಳೆ ಯುವತಿಯೊಬ್ಬರೊಂದಿಗೆ ಅಸಭ್ಯವಾಗಿ ವರ್ತಿಸಿದ ಆರೋಪದ ಮೇಲೆ, ಆ ಕೇಂದ್ರದ ಪರವಾನಗಿ ಹಾಗೂ ಆ ತರಬೇತುದಾರನ ಚಾಲನಾ ಪರವಾನಗಿಯನ್ನು (ಡಿ.ಎಲ್) ಸಾರಿಗೆ ಮತ್ತು ರಸ್ತೆ ಸುರಕ್ಷತಾ ಇಲಾಖೆ ರದ್ದುಗೊಳಿಸಿರುವುದು ಸರಿಯಲ್ಲ.

ಒಬ್ಬ ತರಬೇತುದಾರ ಮಾಡಿದ ತಪ್ಪಿಗಾಗಿ ಅವನಿಗೆ ಮಾತ್ರ ಶಿಕ್ಷೆ ಕೊಡುವುದು ಸಮಂಜಸ. ಅದಕ್ಕೆ ಬದಲಾಗಿ ಅವನು ಕೆಲಸ ಮಾಡುತ್ತಿದ್ದ ಕೇಂದ್ರದ ಪರವಾನಗಿಯನ್ನೇ ರದ್ದುಪಡಿಸುವುದು ಎಷ್ಟು ಸರಿ? ಇದರಿಂದ ಅಲ್ಲಿ ಕೆಲಸ ಮಾಡುತ್ತಿದ್ದ ಇತರ ಸಿಬ್ಬಂದಿಗೆ ಮಾತ್ರವಲ್ಲದೆ ಅದರ ಮಾಲೀಕನಿಗೂ ತೊಂದರೆಯಲ್ಲವೇ? ಹೀಗೆ ಮಾಡುವುದರಿಂದ, ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದಂತೆ ಆಗುವುದಿಲ್ಲವೇ?

ಬಾಲಕೃಷ್ಣ ಎಂ.ಆರ್., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಂಕಿ ಅಂಶಗಳಲ್ಲಿ ಬಜೆಟ್ ನೋಟ

(ಲಕ್ಷ ಕೋಟಿಗಳಲ್ಲಿ)



ಆಧಾರ: ಬಜೆಟ್ 2024–2025

‘ಬಜೆಟ್: ಕಾಂಗ್ರೆಸ್ ಪ್ರಣಾಳಿಕೆಯ ನಕಲು’

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ‘ಇದೊಂದು ನಕಲು ಮಾಡಿದ ಬಜೆಟ್. ಕಾಂಗ್ರೆಸ್ ಪಕ್ಷವು ಲೋಕಸಭಾ ಚುನಾವಣೆಯಲ್ಲಿ ರೂಪಿಸಿದ್ದ ಪ್ರಣಾಳಿಕೆಯನ್ನು ನಕಲು ಮಾಡಿ, ಬಜೆಟ್ ರೂಪಿಸಿದ ‘ನಕಲು ಮಾಡುವ ಸರ್ಕಾರ’ ಎಂದು ಕಾಂಗ್ರೆಸ್ ಮಂಗಳವಾರ ಲೇವಡಿ ಮಾಡಿದೆ.

‘ನಮ್ಮ ಪಕ್ಷದ ಪ್ರಣಾಳಿಕೆಯನ್ನು ನಕಲು ಮಾಡಿದ್ದಾರೆ. ಆದರೂ, ಅವುಗಳನ್ನು ಸರಿಯಾಗಿ ಜಾರಿ ಮಾಡಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ’ ಎಂದು ಪಕ್ಷ ಹೇಳಿದೆ.

‘ನಿರುದ್ಯೋಗವು ಈ ದೇಶದ ಬಹುದೊಡ್ಡ ಸಮಸ್ಯೆ. ಈ ಸಮಸ್ಯೆಗೆ ಸರ್ಕಾರದ ಪ್ರತಿಕ್ರಿಯೆ ಮಾತ್ರ ಸ್ವಲ್ಪ ಮಾತ್ರವೇ. ಅವರ ನೀತಿಗಳು ನಿರುದ್ಯೋಗದಂಥ ಇಂಥ ಘೋರ ಪರಿಸ್ಥಿತಿಗೆ ತುಸುವೇ ಪರಿಣಾಮ ಬೀರಬಲ್ಲದಂತಾಗಿದೆ’ ಎಂದಿದೆ.

‘ಇದು ದೇಶದ ಪ್ರಗತಿಗಾಗಿ ಮಂಡಿಸಿದ ಬಜೆಟ್ ಅಲ್ಲ. ಮೋದಿ ಸರ್ಕಾರ ಉಳಿಸಿಕೊಳ್ಳಲು ಮಂಡಿಸಿದ ಬಜೆಟ್ ಅಷ್ಟೆ. ಜೊತೆಗೆ, ಇದೊಂದು ನಕಲು ಬಜೆಟ್. ಆದರೆ, ಸರ್ಕಾರಕ್ಕೆ ಕಾಂಗ್ರೆಸ್‌ನ ನ್ಯಾಯಪತ್ರವನ್ನು ಸರಿಯಾಗಿ ನಕಲು ಮಾಡಲು ಸಾಧ್ಯವಾಗಿಲ್ಲ! ಎನ್‌ಡಿಎ ಸರ್ಕಾರವನ್ನು ಉಳಿಸಿಕೊಳ್ಳಲು, ಅರೆ ಮನಸ್ಸಿನಿಂದ ಉಚಿತ ಕೊಡುಗೆಗಳನ್ನು ವಿತರಿಸಲಾಗಿದೆ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ‘ಎಕ್ಸ್’ನಲ್ಲಿ ಬರೆದುಕೊಂಡಿದ್ದಾರೆ.

‘ಇದು ಕಾಪಿ–ಪೇಸ್ಟ್ ಸರ್ಕಾರ, ಕಾಪಿ–ಪೇಸ್ಟ್ ಬಜೆಟ್’ ಎಂದು ಕಾಂಗ್ರೆಸ್‌ನ ಪವನ್ ಖೇರಾ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ಯುವಜನರಿಗೆ ಸ್ಟೈಫಂಡ್ ನೀಡುವ ಯೋಜನೆಯನ್ನು ಕಾಂಗ್ರೆಸ್ ಪ್ರಣಾಳಿಕೆಯಿಂದ ನಕಲು ಮಾಡಲಾಗಿದೆ ಎಂದು ಹೇಳಿದ್ದಾರೆ.

‘ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಯುವ ನ್ಯಾಯವನ್ನು ಉಲ್ಲೇಖಿಸಲಾಗಿತ್ತು. ಅದರಂತೆ ಪದವಿ/ಡಿಪ್ಲೊಮಾ ಹೊಂದಿರುವವರಿಗೆ ವರ್ಷದಲ್ಲಿ ₹1 ಲಕ್ಷ ಸ್ಟೈಫಂಡ್ ನೀಡುತ್ತೇವೆ ಎಂದಿತ್ತು. ಕೇಂದ್ರದ ಬಜೆಟ್‌ನಲ್ಲಿ, ಇಂಟರ್ನ್‌ಶಿಪ್ ಮಾಡುವವರಿಗೆ ವರ್ಷಕ್ಕೆ ₹60 ಸಾವಿರ ನೀಡುತ್ತೇವೆ ಎಂದು ಘೋಷಿಸಲಾಗಿದೆ. ಈ ಐಡಿಯಾ ನೀಡಿದ್ದಕ್ಕಾಗಿ ಮೋದಿ ಅವರು ಕಾಂಗ್ರೆಸ್‌ಗೆ ಧನ್ಯವಾದ ಹೇಳಬೇಕು’ ಎಂದು ಪವನ್ ಖೇರಾ ಹೇಳಿದ್ದಾರೆ.

ಉದ್ಯೋಗಕ್ಕೆ ಒತ್ತು: ಮಿತ್ರರಿಗಷ್ಟೇ ಸವಲತ್ತು

ಒಂದನೇ ಪುಟದಿಂದ...

ಸಬ್ಸಿಡಿ ಯಾವುದಕ್ಕೆ ಎಷ್ಟು?	₹1.64 ಲಕ್ಷ ಕೋಟಿ ರಸಗೊಬ್ಬರಗಳಿಗೆ ಸಹಾಯಧನ ನೀಡಲು ಮೀಸಲಿಟ್ಟ ಹಣ	₹2.06 ಲಕ್ಷ ಕೋಟಿ ಪಡಿತರಕ್ಕೆ ನೀಡುವ ಸಹಾಯಧನದ ಮೊತ್ತ	₹11,925 ಕೋಟಿ ಇಂಧನದ ಮೇಲಿನ ಸಹಾಯಧನಕ್ಕೆ ಮೀಸಲಿಟ್ಟ ಹಣ

ಪ್ರತಿವರ್ಷ 2 ಕೋಟಿ ಉದ್ಯೋಗ ಸೃಷ್ಟಿಸುತ್ತೇವೆ ಎಂದು 2014ರ ಪೂರ್ವದಲ್ಲಿ ಮೋದಿ ಅವರು ಮತದಾರರಿಗೆ ವಾಗ್ದಾನ ನೀಡಿದ್ದರು. ಹೊಸ ತಲೆಮಾರಿನ ಮತದಾರರಿಗೆ ಈ ಘೋಷಣೆ ಆಪ್ಯಾಯಮಾನವಾಗಿ ಕಂಡಿತ್ತು. ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲೇ ಅತಿ ಹೆಚ್ಚು ನಿರುದ್ಯೋಗ ಸ್ಥಿತಿ ಉಂಟಾಗಿದೆ ಎಂಬ ಕಠೋರ ಸತ್ಯವನ್ನು ಸರ್ಕಾರದ ಅಂಕಿ–ಅಂಶಗಳೇ ಬಹಿರಂಗಗೊಳಿಸಿದ್ದವು. ನಿರುದ್ಯೋಗ ಸಮಸ್ಯೆಯನ್ನು ಲೋಕಸಭಾ ಚುನಾವಣೆಯ ಪ್ರಚಾರದಲ್ಲಿ ವಿಪಕ್ಷಗಳು ಪ್ರಮುಖ ಅಸ್ತ್ರವನ್ನಾಗಿ ಮಾಡಿ ಕೊಂಡಿದ್ದವು. ಉತ್ತರ ಪ್ರದೇಶ, ಹರಿಯಾಣ, ರಾಜಸ್ಥಾನದಂತಹ ರಾಜ್ಯಗಳಲ್ಲಿ ಪಕ್ಷಕ್ಕೆ ಹಿನ್ನಡೆಯಾದ ಬಳಿಕ ‘ಡ್ಯಾಮೇಜ್ ಕಂಟ್ರೋಲ್’ಗೆ ಬಜೆಟ್‌ನಲ್ಲಿ ಕಸರತ್ತು ನಡೆಸಲಾಗಿದೆ. ಉದ್ಯೋಗ ಸೃಷ್ಟಿಗೆ ಹಲವು ಉಪಕ್ರಮಗಳನ್ನು ಪ್ರಕಟಿಸಲಾಗಿದೆ.

ದೇಶವನ್ನು 2047ರ ಹೊತ್ತಿಗೆ ‘ವಿಕಸಿತ ಭಾರತ’ವನ್ನಾಗಿ ಮಾಡಲು ಬಡವರು, ಮಹಿಳೆಯರು, ಯುವಜನರು ಮತ್ತು ರೈತರಿಗೆ ನಮ್ಮ ಸರ್ಕಾರ ಹೆಚ್ಚಿನ ಒತ್ತು ನೀಡಲಿದೆ ಎಂದು ಸಚಿವರು ಪುನರುಚ್ಚರಿಸಿದರು. ಉದ್ಯೋಗ ಮತ್ತು ಕೌಶಲವನ್ನು ಒದಗಿಸುವ ಗುರಿ ಹೊಂದಿರುವ ಐದು ಯೋಜನೆಗಳನ್ನು ಘೋಷಿಸಿದರು. ಇದಕ್ಕಾಗಿ ₹2 ಲಕ್ಷ ಕೋಟಿ ಮೀಸಲಿಡಲಾಗಿದೆ.

‘ಈ ಬಜೆಟ್‌ನಲ್ಲಿ ವಿಶೇಷವಾಗಿ ಉದ್ಯೋಗ, ಕೌಶಲ ವರ್ಧನೆ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳು, ಮಧ್ಯಮ ವರ್ಗಗಳ ಮೇಲೆ ಗಮನ ಹರಿಸುತ್ತೇವೆ. ಪಂಚ ಯೋಜನೆಗಳ ಮೂಲಕ 5 ವರ್ಷಗಳಲ್ಲಿ 4.1 ಕೋಟಿ ಜನರಿಗೆ ಉದ್ಯೋಗ, ಕೌಶಲ ಮತ್ತು ಇತರ ಅವಕಾಶಗಳನ್ನು ಒದಗಿಸಲಾಗುತ್ತದೆ’ ಎಂದು ಸಚಿವರು ಪ್ರತಿಪಾದಿಸಿದರು. ಶಿಕ್ಷಣ, ಉದ್ಯೋಗ ಮತ್ತು ಕೌಶಲ ಅಭಿವೃದ್ಧಿ ಕ್ಷೇತ್ರಗಳಿಗೆ ₹1.48 ಲಕ್ಷ ಕೋಟಿ ಮೀಸಲಿಡುವುದಾಗಿ ಸಚಿವರು ಪ್ರಸ್ತಾಪಿಸಿದರು. ಮಹಾರಾಷ್ಟ್ರ, ಹರಿಯಾಣ, ಜಮ್ಮು ಮತ್ತು ಕಾಶ್ಮೀರ, ಜಾರ್ಖಂಡ್, ದೆಹಲಿ ವಿಧಾನಸಭೆಗಳ ಚುನಾವಣೆ ಎದುರುಗೊಳ್ಳುವ ಹೊತ್ತಿನಲ್ಲಿ ಮತ್ತೆ ಯುವಜನರ ಮನ ಗೆಲ್ಲುವ ಪ್ರಯತ್ನ ಇದಾಗಿದೆ.

ಕೆಲವು ವರ್ಷಗಳಿಂದ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ (ನರೇಗಾ) ನಿರಂತರವಾಗಿ ಅನುದಾನ ಕಡಿತ ಮಾಡಲಾಗಿತ್ತು. ಈ ಬಾರಿ ಅನುದಾನ ಹೆಚ್ಚಿಸಲಾಗಿದೆ. ಈ ಕ್ಷೇತ್ರಕ್ಕೆ ₹86,000 ಕೋಟಿ ಕಾಯ್ದಿರಿಸಲಾಗಿದೆ. ಭುಗಿಲೆದ್ದಿರುವ ಕೃಷಿ ಬಿಕ್ಕಟ್ಟು ಪರಿಹಾರಕ್ಕೆ ಏನೂ ಮಾಡಿಲ್ಲವೆಂಬ ಕಟು ಟೀಕೆಯನ್ನೂ ಮೋದಿ ಸರ್ಕಾರ ಈ ಹಿಂದೆ ಎದುರಿಸಿತ್ತು. ಈ ಕಳಂಕದಿಂದ ಮುಕ್ತವಾಗಲು ಈ ಸಲ ಕೃಷಿ ಕ್ಷೇತ್ರಕ್ಕೆ ₹1.52 ಲಕ್ಷ ಕೋಟಿ ಮೀಸಲಿಡಲಾಗಿದೆ. ಬಿಜೆಪಿಯೇತರ ಸರ್ಕಾರಗಳ ಕಲ್ಯಾಣ ಕಾರ್ಯಕ್ರಮಗಳನ್ನು ‘ಬಿಟ್ಟಿ ಯೋಜನೆ’ಗಳೆಂದು ಹೀಗಳೆದಿದ್ದ ಬಿಜೆಪಿ ಇದೀಗ ಕಲ್ಯಾಣ ಕಾರ್ಯಕ್ರಮ ಹಾಗೂ ‘ಗ್ಯಾರಂಟಿ’ ಯೋಜನೆಗಳತ್ತ ಚಿತ್ತ ಹರಿಸಿದೆ. ಈ ಮೂಲಕ ಮತ ಬುಟ್ಟಿಯನ್ನು ಪುನಃ ಭದ್ರಗೊಳಿಸುವ ಪ್ರಯತ್ನ ನಡೆಸಿದೆ.

ಬಜೆಟ್ ಮಂಡನೆಯುದ್ದಕ್ಕೂ ಮೋದಿ ಅವರು ಮೌನ ಮೂರ್ತಿಯಂತೆ ಕುಳಿತಿದ್ದರು. ಬಜೆಟ್ ಘೋಷಣೆಗಳನ್ನು ಸಚಿವರು ಓದುತ್ತಿದ್ದಂತೆಯೇ ಮೇಜು ಗುದ್ದಿ ಸ್ವಾಗತಿಸಿದರು. ಆದರೆ, ಎಂದಿನ ಉತ್ಸಾಹ ಹಾಗೂ ಆವೇಶ ಕಾಣಲಿಲ್ಲ. ಬಿಹಾರ ಹಾಗೂ ಆಂಧ್ರ ಪ್ರದೇಶಕ್ಕೆ ಯೋಜನೆಗಳನ್ನು ಪ್ರಕಟಿಸಿದಾಗ ಸಚಿವರು ಹಾಗೂ ಆಡಳಿತ ಪಕ್ಷದ ಸದಸ್ಯರು ಸಂಭ್ರಮಿಸಿದರು. ಕೊನೆ ಕೊನೆಗೆ ಅವರ ಹುಮ್ಮಸ್ಸು ಮಾಯವಾಗಿತ್ತು. ಬೆಳಿಗ್ಗೆಯಿಂದ ಏರುಮುಖದ ಹಾದಿಯಲ್ಲಿದ್ದ ಷೇರು ಮಾರುಕಟ್ಟೆ ನಿರ್ಮಲಾ ಅವರ ಭಾಷಣ ಮುಗಿಯುವ ಹೊತ್ತಿಗೆ ಪಾತಾಳಕ್ಕೆ ಕುಸಿಯಿತು. ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆಯಲ್ಲಿ ಗಮನಾರ್ಹ ಬದಲಾವಣೆಗಳನ್ನು ಸಚಿವರು ಪ್ರಕಟಿಸಿದ ಕೂಡಲೇ ಷೇರು ಮಾರುಕಟ್ಟೆ ಪತರಗುಟ್ಟಿತು. ವಹಿವಾಟಿನ ವೇಳೆ ಮುಂಬೈ ಷೇರುಪೇಟೆ ಸೂಚ್ಯಂಕ 1,277 ಅಂಶ ಇಳಿಯಿತು. ಬಳಿಕ ನಿಧಾನವಾಗಿ ಚೇತರಿಸಿಕೊಂಡಿತು.

ಪರಮಾಣು ವಲಯದಲ್ಲಿ ಖಾಸಗಿ ಕಂಪನಿಗಳಿಗೆ ರತ್ನಗಂಬಳಿ ಹಾಸಲು ಕೇಂದ್ರ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಖಾಸಗಿ ಕಂಪನಿಗಳಿಗೆ ಸಣ್ಣ ಪರಮಾಣು ರಿಯಾಕ್ಟರ್‌ಗಳನ್ನು ಸ್ಥಾಪಿಸಲು ಹಾಗೂ ಸರ್ಕಾರದ ಸಹಭಾಗಿತ್ವದಲ್ಲಿ ಸಣ್ಣ, ಮಾಡ್ಯುಲರ್ ಪರಮಾಣು ರಿಯಾಕ್ಟರ್‌ಗಳ ಕುರಿತು ಸಂಶೋಧನೆ ನಡೆಸಲು ಅವಕಾಶ ಕಲ್ಪಿಸುವುದಾಗಿ ನಿರ್ಮಲಾ ಪ್ರಕಟಿಸಿದ್ದಾರೆ.

ನೀತಿ ಆಯೋಗದ ಸಭೆ ಬಹಿಷ್ಕರಿಸಲು ಸಿ.ಎಂಗಳ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು ‘ಇಂಡಿಯಾ’ ಒಕ್ಕೂಟದ ಪಕ್ಷಗಳು ಆಡಳಿತ ನಡೆಸುತ್ತಿರುವ ರಾಜ್ಯಗಳನ್ನು ಬಜೆಟ್‌ನಲ್ಲಿ ನಿರ್ಲಕ್ಷಿಸಿದೆ ಎಂದು ಆರೋಪಿಸಿರುವ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು, ಕೇಂದ್ರದ ನಿಲುವನ್ನು ಖಂಡಿಸಿ ಇದೇ ಶನಿವಾರ ನಡೆಯಲಿರುವ ನೀತಿ ಆಯೋಗದ ಆಡಳಿತ ಮಂಡಳಿ ಸಭೆಯನ್ನು ಬಹಿಷ್ಕರಿಸಲು ನಿರ್ಧರಿಸಿದ್ದಾರೆ.

ಆದರೆ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಮಾತ್ರ ಸಭೆಗೆ ಹಾಜರಾಗಲಿದ್ದಾರೆ.

ವಿರೋಧ ಪಕ್ಷಗಳು ಆಡಳಿತ ನಡೆಸುತ್ತಿರುವ ರಾಜ್ಯಗಳನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿರುವ ವಿರೋಧ ಪಕ್ಷಗಳ ಸಂಸದರು, ಬುಧವಾರ ಸಂಸತ್ತಿನಲ್ಲಿ ಪ್ರತಿಭಟನೆ ನಡೆಸಲಿದ್ದಾರೆ.

ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಮೊದಲಿಗೆ ಸಭೆ ಬಹಿಷ್ಕರಿಸುವುದಾಗಿ ಚೆನ್ನೈನಲ್ಲಿ ಘೋಷಿಸಿದರು. ಆ ಬಳಿಕ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ, ತೆಲಂಗಾಣದ ಎ.ರೇವಂತ್ ರೆಡ್ಡಿ, ಹಿಮಾಚಲ ಪ್ರದೇಶದ ಸುಖವಿಂದರ್ ಸಿಂಗ್ ಸುಖು ಅವರು ಕೂಡ ಸಭೆ ಬಹಿಷ್ಕರಿಸುವುದಾಗಿ ತಿಳಿಸಿದರು.

ನ್ಯಾಯಾಂಗ ಬಂಧನದಲ್ಲಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೂ ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್, ಕೇರಳದ ಪಿಣರಾಯಿ ವಿಜಯನ್ ಅವರು ಕೂಡ ಸಭೆಗೆ ಹಾಜರಾಗುವ ಸಾಧ್ಯತೆ ಕಡಿಮೆ ಎಂದು ಮೂಲಗಳು ತಿಳಿಸಿವೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಸೋಮವಾರ ನಡೆದ ‘ಇಂಡಿಯಾ’ ಒಕ್ಕೂಟದ ಸದನಗಳ ನಾಯಕರ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆದಿದ್ದು, ಡಿಎಂಕೆಯ ಕನಿಮೋಳಿ ಅವರು ಸ್ಟಾಲಿನ್ ಅವರ ತೀರ್ಮಾನದ ಬಗ್ಗೆ ಮುಖಂಡರ ಗಮನಕ್ಕೆ ತಂದರು.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ರಾಜ್ಯಸಭೆಯಲ್ಲಿ ಟಿಎಂಸಿ ಸದನ ನಾಯಕ ಡೆರೆಕ್ ಒಬ್ರಯಾನ್ ಅವರು ಹೇಳಿದ್ದಾರೆ.

ಸಿನಿ ಬಿಟ್ಸ್

ಹೊರಬಂತು ಸಿಂಹರೂಪಿಣಿ ಟೀಸರ್

ಯಶಸ್ವಿನಿ

‘ಸಿಂಹರೂಪಿಣಿ’ ಚಿತ್ರದ ಪಾತ್ರಗಳನ್ನು ಪರಿಚಯಿಸುವ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕಿನ್ನಾಳ್‌ರಾಜ್ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಸಂಗೀತ ನಿರ್ದೇಶಕ ರವಿ ಬಸ್ರೂರು ಹಾಗೂ ನಿರ್ದೇಶಕ ಜಡೇಶ್ ಹಂಪಿ ಚಿತ್ರದ ಟೀಸರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

‘ಚಿತ್ರದ ಶೀರ್ಷಿಕೆ ಹೇಳುವಂತೆ ಶ್ರೀ ಮಾರಮ್ಮ ದೇವಿ ಕುರಿತಾದ ಚಿತ್ರವಿದು. ಸಾಕಷ್ಟು ಗ್ರಾಫಿಕ್ಸ್ ಇದೆ. ಸಪ್ತಮಾತ್ರಿಕೆಯರ ವಿಷಯಗಳನ್ನು ಹೊಂದಿದ್ದು, ರಾಕ್ಷಸನನ್ನು ಸಂಹಾರ ಮಾಡಲು ಪಾರ್ವತಿದೇವಿ ಏಳು ಅವತಾರಗಳಲ್ಲಿ ಭೂಮಿಗೆ ಬರುತ್ತಾಳೆ. ಅದರಲ್ಲಿ ಕೊನೆಯದು ಶ್ರೀ ಮಾರಮ್ಮ ದೇವಿಯದು ಆಗಿರುತ್ತದೆ. ತಾಯಿಯ ಮಹಿಮೆ, ಪವಾಡಗಳನ್ನು ಈಗಿನ ಟ್ರೆಂಡ್‌ಗೆ ತಕ್ಕಂತೆ ಕಮರ್ಷಿಯಲ್ ಅಂಶಗಳನ್ನು ತೋರಿಸುವ ಪ್ರಯತ್ನ ಮಾಡಲಾಗಿದೆ’ ಎಂದರು ನಿರ್ದೇಶಕರು.

ದೊಡ್ಡಬಳ್ಳಾಪುರ ಕೆ.ಎಂ.ನಂಜುಂಡೇಶ್ವರ ಕಥೆ ಬರೆದು ಶ್ರೀ ಚಕ್ರ ಫಿಲ್ಮ್ಸ್ ಅಡಿಯಲ್ಲಿ ನಿರ್ಮಾಣ ಮಾಡುತ್ತಿದ್ದಾರೆ. ಆಕಾಶ್ ಪರ್ವ ಸಂಗೀತ, ಕಿರಣ್‌ಕುಮಾರ್ ಛಾಯಾಚಿತ್ರಗ್ರಹಣ, ವೆಂಕಿ ಯುಡಿವಿ ಸಂಕಲನವಿದೆ.

ಅಂಕಿತಾ ಗೌಡ, ಯಶಸ್ವಿನಿ ಚಿತ್ರದ ನಾಯಕಿಯರು. ಖುಷಿ ಬಸ್ರೂರು ಬಾಲ ದೇವಿಯಾಗಿ ಕಾಣಿಸಿಕೊಂಡಿದ್ದಾರೆ. ತಬಲ ನಾಣಿ, ವಿಜಯ್ ಚೆಂಡೂರು, ಹರೀಶ್ ರಾಯ್, ಯಶ್ ಶೆಟ್ಟಿ, ದಿನೇಶ್ ಮಂಗಳೂರು ಮುಂತಾದವರು ಪ್ರಮುಖ ಪಾತ್ರದಲ್ಲಿದ್ದಾರೆ.

‘ಫೈರ್‌ಫ್ಲೈ’ಗೆ ರಚನಾ ನಾಯಕಿ

ನಿವೇದಿತಾ ಶಿವರಾಜ್‌ಕುಮಾರ್ ನಿರ್ಮಾಣದ, ವಂಶಿ ನಿರ್ದೇಶನದ ‘ಫೈರ್‌ಫ್ಲೈ’ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದ್ದು, ಚಿತ್ರದಲ್ಲಿ ವಂಶಿಗೆ ರಚನಾ ಇಂದರ್ ಜೋಡಿಯಾಗಿದ್ದಾರೆ.

ನಿರ್ದೇಶನದ ಜೊತೆಗೆ ವಂಶಿ ಹೀರೊ ಆಗಿ ಈ ಸಿನಿಮಾದಲ್ಲಿ ಅಭಿನಯಿಸುತ್ತಿದ್ದಾರೆ. ‘ಲವ್ ಮಾಕ್ಟೇಲ್’, ‘ಹರಿಕಥೆ ಅಲ್ಲ ಗಿರಿಕಥೆ’, ‘ಲವ್ 360’, ‘ತ್ರಿಬಲ್ ರೈಡಿಂಗ್’, ‘ನಾಟ್‌ಔಟ್’ ಸಿನಿಮಾಗಳಲ್ಲಿ ಬಣ್ಣ ಹಚ್ಚಿರುವ ರಚನಾ ಇಂದರ್ ಈ ಸಿನಿಮಾದಲ್ಲಿ ‘ನೇಹಾ’ ಎಂಬ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ. ತಮ್ಮ ಪಾತ್ರದ ಬಗ್ಗೆ ಮಾತನಾಡಿರುವ ರಚನಾ, ‘ನೇಹಾ ಬದುಕನ್ನು ತುಂಬಾ ಇಷ್ಟಪಡುತ್ತಾಳೆ, ಬದುಕನ್ನು ಅನುಭವಿಸುತ್ತಾಳೆ, ಭವಿಷ್ಯದ ಬಗ್ಗೆ ಹೆಚ್ಚು ಯೋಚನೆ ಮಾಡುವಾಕೆಯಲ್ಲ. ಸಿನಿಮಾ ಅದ್ಭುತವಾಗಿ ಮೂಡಿಬಂದಿದೆ’ ಎನ್ನುತ್ತಾರೆ.

ಚಿತ್ರದಲ್ಲಿ ಮೂಗು ಸುರೇಶ್, ಶೀತಲ್ ಶೆಟ್ಟಿ, ಸುಧಾರಾಣಿ, ಅಚ್ಯುತ್ ಕುಮಾರ್ ಪ್ರಮುಖ ಪಾತ್ರಗಳಿಗೆ ಬಣ್ಣಹಚ್ಚಿದ್ದು, ದೀಪಾವಳಿಗೆ ‘ಫೈರ್‌ಫ್ಲೈ’ ಸಿನಿಮಾ ತೆರೆಕಾಣಲಿದೆ. ವಂಶಿ ನಾಯಕರಾಗಿಯೂ ಈ ಸಿನಿಮಾ ಮೂಲಕ ಚಂದನವನಕ್ಕೆ ಹೆಜ್ಜೆ ಇಡುತ್ತಿದ್ದಾರೆ. ಚಿತ್ರಕ್ಕೆ ಅಭಿಲಾಷ್ ಕಳತ್ತಿ ಛಾಯಾಚಿತ್ರಗ್ರಹಣ, ಚರಣ್‌ರಾಜ್ ಸಂಗೀತ ಸಂಯೋಜನೆ ಇದೆ. ರಘು ನಿಡುವಳ್ಳಿ ಸಂಭಾಷಣೆ ಬರೆದಿದ್ದಾರೆ.

ರಚನಾ ಇಂದರ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಆಕೆ ಯಾಕೆ ಹೀಗಿದ್ದಳು?

ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಈ ಅಜ್ಜಿಯನ್ನು ಬೀದಿಯ ಜನ ಬಜಾರಿಯೆಂದು ಘೋಷಿಸಿಯಾಗಿತ್ತು. ಆದರೆ, ಆ ತಾಯಿ ಯಾರ ಜೊತೆಯೂ ಯಾವ ಜಗಳವನ್ನೂ ಮಾಡಿದ್ದು ನಾನಂತೂ ನೋಡಿರಲಿಲ್ಲ. ಉಪ್ಪಿನಕಾಯಿ ಹಾಕುವ ಕಾಯಕ ಮಾಡುತ್ತಿದ್ದಳು. ಹಲವಾರು ಜನ ಬಂದು ಆಗಾಗ ಬಂದು ಖರೀದಿಸುತ್ತಿದ್ದರು.

ಅವಳ ಮನೆ ಓಣಿಯ ಹಿಂಭಾಗದಲ್ಲಿತ್ತು. ಮುಂದಿನ ಪುಟ್ಟ ಮನೆಯಲ್ಲಿ ಅವಳ ಗಂಡ ವಾಸವಿದ್ದ. ಮನೆ ಪಾಲಾಗಿರುವುದು ಗೊತ್ತಾಗುತ್ತಿತ್ತು. ಮಕ್ಕಳು ಮರಿ ಇದ್ದಂತೆ ಕಾಣಲಿಲ್ಲ. ಇಬ್ಬರಿಗೂ ಪರಸ್ಪರ ಮಾತುಕತೆ ತಪ್ಪಿ ಹೋಗಿ ಅನೇಕ ವರ್ಷಗಳೇ ಆಗಿದ್ದವಂತೆ. ಗಂಡನ ಕಣ್ಣೆತ್ತಿಯೂ ನೋಡದೆ ಅವಳು ಸಾಗಿ ಹೋಗುತ್ತಿದ್ದಳು.

ಒಂದು ದಿನ ಅವರ ಮನೆ ಮುಂದೆ ಶಾಮಿಯಾನ ಹಾಕಿದ್ದರು. ಅಜ್ಜ ಹಿಂದಿನ ರಾತ್ರಿ ಸತ್ತು ಹೋಗಿದ್ದ. ಬಂಧು ಬಳಗದವರು ಸೇರಿದ್ದರು. ಜೋರಾದ ಗಲಾಟೆ ಶುರುವಾಗಿತ್ತು. ಅಜ್ಜಿ ಯಾರ ಮಾತಿಗೂ ಸೊಪ್ಪು ಹಾಕದೆ ತನ್ನ ಹಟ ಮುಂದುವರಿಸಿದ್ದಳು. ಯಾವ ಕಾರಣಕ್ಕೂ ನಾನವನ ಮುಖವನ್ನು ನೋಡುವುದಿಲ್ಲ. ನನ್ನ ಪಾಲಿಗೆ ಅವನು ಸತ್ತು ಬಹಳ ವರ್ಷಗಳಾದವು. ತಾಳಿ ತೆಗೆಯುವುದಿಲ್ಲ. ಬಳೆ ಒಡೆಯಲು ಬಿಡುವುದಿಲ್ಲ. ಕಣ್ಣೀರು ಹಾಕುವುದನ್ನು ನೀವಂತೂ ಮರೆತು ಬಿಡಿ. ನಿಮಗಿಷ್ಟವಿದ್ದರೆ ಧಪನ್ ಮಾಡಿ. ಇಲ್ಲ ಅವನ ಹೆಣ ಅಲ್ಲೇ ಬಿದ್ದಿರಲಿ ಎಂದು ಖಡಕ್ಕಾಗಿ ಹೇಳಿ ಎದ್ದು ಹೋದಳು.

ಅಜ್ಜಿ ಯಾಕಿಷ್ಟು ನಿಷ್ಠುರವಾಗಿ ನಡೆದುಕೊಳ್ಳುತ್ತಿದ್ದಾಳೆಂಬ ಕುತೂಹಲ ಎಲ್ಲರಂತೆ ನನಗೂ ಇತ್ತು. ಬಂದ ಹಲವರು ಅಜ್ಜನ ಪರವಾಗಿ ವಾದಿಸಿದರೆ; ಕೆಲವರು ಮಾತ್ರ ಅಜ್ಜಿಯೇ ಸರಿ ಎನ್ನುತ್ತಿದ್ದರು. ಅಷ್ಟೊಂದು ಉರಿಸಿದ, ಕುಡಿದು ಸತಾಯಿಸಿ, ವಿನಾಕಾರಣ ಅನುಮಾನ ಪಟ್ಟ, ಅವನನ್ನು ಅಜ್ಜಿ ಕ್ಷಮಿಸದಿರುವುದೇ ಸರಿ ಎನ್ನುವವರ ದನಿ ಸಣ್ಣ ಪ್ರಮಾಣದಲ್ಲಿತ್ತು. ಆಗಿದ್ದು ಆಗಿ ಹೋಗಿದೆ. ಮತ್ತೆ ನೋಡಬೇಕು ಎಂದರೂ ಗಂಡನ ಮುಖ ಸಿಗುವುದಿಲ್ಲ. ಸತ್ತ ಮೇಲೆ ಎಲ್ಲರನ್ನೂ, ಎಲ್ಲವನ್ನೂ ಕ್ಷಮಿಸುವುದು ಮನುಷ್ಯ ಧರ್ಮ. ಹೆಂಗಸಾದ ಇವಳಿಗೆ ಇಷ್ಟು ಹಟಮಾರಿತನ ಇರುವುದು ಸರಿಯಲ್ಲ ಎಂದು ಕೆಲವರು ತೀರ್ಮಾನ ಹೇಳುತ್ತಿದ್ದರು.

ಅಜ್ಜಿ ತನ್ನ ನಿರ್ಧಾರವನ್ನು ಬದಲಿಸಲೇ ಇಲ್ಲ. ಹೋಗಿ ತನ್ನ ಮನೆಯಲ್ಲಿ ಪಟ್ಟಾಗಿ ಕುಳಿತಳು. ಶವವನ್ನು ಹೊತ್ತು ಸಾಗಿಸಿದರು. ಆಮೇಲೆ ಸ್ನಾನ ಮುಗಿಸಿ ಅಂಗಳಕ್ಕೆ ಬಂದ ಆಕೆ ಸಹಜವಾಗಿ ತಲೆ ಬಾಚಿಕೊಂಡು ಹೂ ಮುಡಿದಳು. ಬೀದಿಯ ಜನ ಆಕೆ ಈಗ ಅಳಬಹುದೆಂದು ಹಾಕಿದ್ದ ಲೆಕ್ಕಾಚಾರವೂ ಅಲ್ಲಿ ಜರುಗಲಿಲ್ಲ. ಮನಸ್ಸನ್ನು ಹೀಗೆ ಗಟ್ಟಿಕಲ್ಲು ಮಾಡಿಕೊಂಡ ಈಕೆ ಮೊದಲು ಈ ತರಹ ಇರಲಿಲ್ಲ ಎಂದು ಕೆಲವರು ವಿವರಿಸಿದರು. ಜೀವನದ ಕೆಲ ಕಹಿ ಘಟನೆಗಳನ್ನು ಮರೆತು ಮುನ್ನಡೆವ ಸ್ವಭಾವ ಹೆಚ್ಚಿನವರಲ್ಲಿ ಇರಬಹುದು. ತೀವ್ರ ಅಘಾತ, ವಿವರಿಸಲಾಗದ ಅವಮಾನ, ಮಾನಸಿಕ ಹಿಂಸೆ ಅನುಭವಿಸಿದ ಮನುಷ್ಯನ ಒಳಗಿನ ಗಾಯದ ಗಾಢತೆ ಹೀಗೆ ಕಠೋರವಾಗಿಸಬಹುದೇನೋ? ಹೊರಗಿನಿಂದ ನಿಂತು ನೋಡುವ ಯಾರಿಗೂ ಒಳಗಿನ ಮರ್ಮ ಏನೆಂದು ತಿಳಿಯುವುದೇ ಇಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಜುಲೈ 24, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ತೃತೀಯ ಗಂ. 7-31 ನಂತರ ಚತುರ್ಥಿ ಗಂ. 28-40 ನಕ್ಷತ್ರ: ಶತಭಿಷ ಗಂ. 18-15 ಯೋಗ: ಸೌಭಾಗ್ಯ ಗಂ. 11-10 ಕರಣ: ವಿಷ್ಟಿ ಗಂ. 07-31, ಕರ್ಕಾಟಕ ಮಾಸದ 08 ನೇ ದಿನ, ಮಳೆನಕ್ಷತ್ರ: ಪುಷ್ಯ 2.

ರಾಹುಕಾಲ: ಮಧ್ಯಾಹ್ನ 12-00 – 01-30

ಸೂರ್ಯೋದಯ: 06-18 **ಸೂರ್ಯಾಸ್ತ:** 06-57

ಮುಸ್ಲಿಂ ದಿನಾಂಕ: 17 ಮೊಹರಮ್

ಅದೃಷ್ಟ ಸಂಖ್ಯೆ: 12, 6

ಮೇಷ: ಕೆಲವು ಪ್ರಮುಖ ಕಾರ್ಯಗಳನ್ನು ಮಾಡುವಾಗ ಸಣ್ಣಪುಟ್ಟ ಸಮಸ್ಯೆಗಳು ಎದುರಾಗಬಹುದು. ಅವನ್ನು ಲೆಕ್ಕಿಸದೆ ಗುರಿ ಸಾಧನೆಯ ಬಗ್ಗೆ ಯೋಚಿಸಿರಿ. ಉದ್ಯೋಗಕ್ಕಾಗಿ ನಡೆಸಿದ ಪ್ರಯತ್ನ ಈ ದಿನ ಫಲ ನೀಡಲಿದೆ.

ವೃಷಭ: ಅಧಿಕಾರಿ ವರ್ಗದಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಜನ ಸಾಮಾನ್ಯರಿಂದ ಪ್ರೋತ್ಸಾಹ ದೊರಕುತ್ತವೆ. ಹೊಸ ವ್ಯವಹಾರಗಳ ಚಾಲನೆಗೆಂದು ಉತ್ತಮ ಮಾರ್ಗದರ್ಶನವನ್ನು ಹೊಂದುವಿರಿ.

ಮಿಥುನ: ವಿದ್ಯಾರ್ಥಿ ವರ್ಗಕ್ಕೆ ಬಂದಿರುವ ಜವಾಬ್ದಾರಿಯುಕ್ತ ನಡವಳಿಕೆ ಮತ್ತು ಉತ್ಸಾಹದಿಂದ ಏಳಿಗೆಯ ಸೂಚನೆ ಇರುವುದು. ಮದುವೆ ವಿಷಯಗಳತ್ತ ಗಮನಹರಿಸುವಂತೆ ಮನೆಯವರಿಂದ ಒತ್ತಡ ಬರಲಿದೆ.

ಕರ್ಕಾಟಕ: ಸಾಮರ್ಥ್ಯ, ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದಾಗಿ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆಯನ್ನು ನಿಮ್ಮದಾಗಿಸಿಕೊಳ್ಳುವಿರಿ. ವೃತ್ತಿಯಲ್ಲಿ ಉನ್ನತಿ ತೋರಿಬಂದರೂ ವಿಘ್ನ ಭೀತಿ ಇರುತ್ತದೆ.

ಸಿಂಹ: ಅತಿ ಔದಾರ್ಯತನ ತೋರಬೇಕೆನಿಸಿದಲ್ಲಿ ಹಣಕಾಸಿನ ಸ್ಥಿತಿಯನ್ನು ಗಮನಿಸಿಕೊಳ್ಳಿರಿ. ಏಕಾಗ್ರತೆಯಿಂದಾಗಿ ದೊಡ್ಡ ಮೊತ್ತದ ಅಥವಾ ಹೆಚ್ಚಿನ ಜವಾಬ್ದಾರಿಯ ಕೆಲಸವನ್ನು ಒಪ್ಪಿಕೊಳ್ಳಬಹುದು.

ಕನ್ಯಾ: ಲಭ್ಯವಿರುವ ಅವಕಾಶಗಳ ಬಗ್ಗೆ ಯೋಚಿಸಿ ಸದುಪಯೋಗ ಪಡಿಸಿಕೊಳ್ಳುವುದು ಉತ್ತಮ. ಪರಿಸ್ಥಿತಿಯನ್ನು ಬುದ್ಧಿವಂತಿಕೆ ಮತ್ತು ಬಹಳ ಎಚ್ಚರಿಕೆಯಿಂದ ನಿಭಾಯಿಸಬೇಕು.

ತುಲಾ: ಪುನಃ ಹಿಂದಿನ ಕಂಪನಿಯನ್ನೇ ಆಶ್ರಯಿಸುವ ಬಗ್ಗೆ ಯೋಚನೆ ಮಾಡಿ. ಪೆಟ್ರೋಲಿಯಂ ಉತ್ಪನ್ನಗಳಿಂದ ಆದಾಯವಿದೆ. ಮನೆಯ ಹೆಚ್ಚುವರಿ ಆದಾಯದಿಂದ ಹುಮ್ಮಸ್ಸು ಹೆಚ್ಚುವುದು.

ವೃಶ್ಚಿಕ: ಗೃಹದಲ್ಲಿ ಸಂಭ್ರಮಾಚರಣೆಯ ಸಲುವಾಗಿ ಖರ್ಚುಗಳು ಸಂಭವಿಸಲಿವೆ. ವಿದ್ಯಾರ್ಥಿಗಳ ಮನೋಕಾಮನೆಗಳು ಪೂರ್ಣಗೊಳ್ಳುವುದು. ಚಿಂತೆ ಮತ್ತು ಭಯ ಇವೆರಡನ್ನೂ ದೂರ ಮಾಡಿಕೊಳ್ಳಿ.

ಧನು: ಆಸ್ತಿ ಕೊಳ್ಳುವಾಗ ಎಲ್ಲಾ ವಿವರಗಳ ಬಗ್ಗೆ ಎರಡೆರಡು ಬಾರಿ ಮಾಹಿತಿಯನ್ನು ಪಡೆದುಕೊಳ್ಳಿರಿ. ಒತ್ತಡ ತರುವಂಥ ಕೆಲಸಗಳಿಂದ ದೂರವಿರಿ. ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಹೊಂದುವಿರಿ.

ಮಕರ: ಈ ದಿನ ಹೆಚ್ಚಿನ ಆತ್ಮಸ್ಥೈರ್ಯದಿಂದ ಯಾವುದೇ ಕೆಲಸವನ್ನು ಪ್ರಾರಂಭಿಸಿದರೂ ಜಯ ಕಾಣುವಿರಿ. ವಾಹನ ಮಾರಾಟಗಳಿಂದ ಆದಾಯ ಪಡೆದುಕೊಳ್ಳುವಿರಿ. ಶ್ರಮದ ಬದುಕಿನಿಂದ ಹೊಸ ಘಟ್ಟ ತಲುಪುವಿರಿ.

ಕುಂಭ: ಬಿಸಿನೆಸ್ ಸಂಬಂಧ ಬ್ಯಾಂಕ್ ಅಧಿಕಾರಿಗಳ ಜತೆ ತಕ್ಷಣದಲ್ಲಿ ಮಾತುಕತೆ ನಡೆಸಬೇಕಾದೀತು. ಸ್ವಂತ ಉದ್ಯಮದಲ್ಲಿರುವವರು ತಮ್ಮ ಕಾರ್ಯ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದರಲ್ಲಿ ಸಫಲತೆ ಹೊಂದುವರು.

ಮೀನ: ಮನೆಯ ದಾಖಲೆ ಪತ್ರಗಳನ್ನು, ಲೆಕ್ಕಪತ್ರಗಳನ್ನು ಪರಿಶೀಲಿಸಿ, ಸರಿಪಡಿಸಿಕೊಳ್ಳುವ ಬಗ್ಗೆ ಯೋಚನೆ ಮಾಡಿ. ಗೌರವಯುತ ಸ್ಥಾನಮಾನಗಳು ದೊರಕುತ್ತವೆ. ದಿನದ ಅಂತ್ಯದಲ್ಲಿ ಸಂತಸದ ಸುದ್ದಿ ಸಿಗಲಿದೆ.

ಪದಬಂಧ 5751

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪಾನಕವಾದ ಮೇಲೆ ಸಿದ್ಧಪಡಿಸಿದ ಅಡುಗೆ (2)
3.ಕೃಪಣತನವನ್ನು ಹೀಗೂ ಹೇಳುವರು (5)
5.ಹದ್ದು ಕುಳಿತಿರುವ ಎಲ್ಲೆ (4)
6.ಅತಿದೊಡ್ಡ ಗಾತ್ರದ ಜಲಚರ ಸಸ್ತನಿ (4)
7.ಉಪ್ಪಿನ ಗುಣವುಳ್ಳದ್ದು (2)
9.ಗಾದೆ ಮಾತಿನಲ್ಲಿ ಕೈ ಕೆಸರಾದರೆ - (5)
11.ಮಣ್ಣಿನ ಅಥವಾ ಪಿಂಗಾಣಿಯ ಪಾತ್ರೆ (2)
12.ಉತ್ತರ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಕರೆಯಲ್ಪಡುವ ಊರು (4)
13.ಬಸಿರಾದ ಹೆಂಗಸು (4)
14.ಪುಟದ ಕೆಳಗೆ ಬರೆದಿರುವ ಟಿಪ್ಪಣಿ(5)
15.ಕಕ್ಕಾಬಿಕ್ಕಿಯಾಗಿರುವ ಚಿಕ್ಕಪ್ಪನ ಹೆಂಡತಿ! (2)

ಮೇಲಿಂದ ಕೆಳಕ್ಕೆ

2.ವರ ಹಿಡಿದಿರುವ ಚಿನ್ನ (4)
3.ಬದ್ಧಮಾತ್ಸರ್ಯ ಅಥವಾ ಪೈಪೋಟಿ (2)
4.ಗಿಣಿಯ ಹತ್ತಿರ ನದಿ ಇದೆ (4)
6.ತಿಂಡಿಪೋತ ಇಲ್ಲಿದ್ದಾನೆ (4)
8.ಹೊಳೆಯನ್ನು ದಾಟುವ ಸ್ಥಳ (4)
10.ರಾಜಸ್ಥಾನದ ಮಾರವಾಡ ಪ್ರದೇಶದವನು (4)
11.ಇಡೀ ಜಗತ್ತಿಗೆ ಸಂಬಂಧಿಸಿದ್ದು (4)
13.ಖನಿಜಗಳ ನೆಲೆ (2)



5750ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಉತ್ಪ್ರೇಕ್ಷೆ 2.ಕಡುಹಗೆ 4.ಹರಿಹಾಯು 6.ಕಂಬಳ 7.ಸುಹ 9.ಕಪೋತ 11.ಹರ 13.ಮೆಲುಕು 14.ಪರೀಕ್ಷಕ 16.ತರಕಲು 17.ಅರಳೆ

ಮೇಲಿಂದ ಕೆಳಕ್ಕೆ

1.ಉದಾಹರಿಸು 2.ಕರ್ಮ 3.ಹಣೆಬರಹ 5.ಯುವಕ 8.ಹಲಾಲು ಕೋರ 10.ತದ್ರೂಪ 12.ರಣಕಹಳೆ 15.ಹಾಲು

ಸುಡೊಕು 6136

	8			9		5		3
6		5						
			1		5		7	6
		4					5	
	5					1		9
2				5	9		6	
1			9					
	3					6	4	1
8		6		3			9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6135 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7

ಕೇಂದ್ರ ಬಜೆಟ್ 2024-25

ಬಜೆಟ್‌ನಲ್ಲಿ ರೈತರ ಬೇಡಿಕೆಗಳನ್ನು ಈಡೇರಿಸಿಲ್ಲ. ಈ ಮೂಲಕ ರೈತರ ಕೈಗಳನ್ನು ಬರಿದಾಗಿಸಲಾಗಿದೆ. ಹವಾಮಾನ ಬದಲಾವಣೆ ಹೆಸರಿನಲ್ಲಿ ಕೃಷಿ ಸಂಶೋಧನೆಗಾಗಿ ಖಾಸಗಿ ಕ್ಷೇತ್ರಗಳಿಗೆ ಅನುದಾನ ನೀಡಲಾಗಿದೆ. ಇದರಿಂದ ಕಾರ್ಪೊರೇಟ್ ಉದ್ಯಮಿಗಳು ಮತ್ತು ವಿದೇಶಿ ಲಾಬಿ ಗುಂಪುಗಳು ತಮ್ಮ ಅಜೆಂಡಾವನ್ನು ಹೇರುತ್ತವೆ.
ರಾಕೇಶ್ ಟಿಕಾಯತ್, ರೈತ ನಾಯಕ

ಪ್ರಜಾವಾಣಿ
ಬುಧವಾರ, 24ಜುಲೈ 2024

₹1.52 ಲಕ್ಷ ಕೋಟಿ ಕೃಷಿ ಮತ್ತು ಸಂಬಂಧಿತ ವಲಯಕ್ಕೆ ಮೀಸಲಿಟ್ಟಿರುವ ಅನುದಾನ

10,000 ಬಯೊ ಇನ್‌ಪುಟ್ ರಿಸೋರ್ಸ್ ಸೆಂಟರ್

109 ಅಧಿಕ ಇಳುವರಿ ನೀಡುವ ತಳಿಗಳು

400 ಡಿಜಿಟಲ್ ಸಮೀಕ್ಷೆ ನಡೆಯುವ ಜಿಲ್ಲೆಗಳು

ದುಡಿಯುವ ಮಹಿಳೆಯರಿಗೆ ಹಾಸ್ಟೆಲ್

ಉದ್ಯೋಗದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಿಸುವ ಕ್ರಮವಾಗಿ ಉದ್ಯಮಗಳು ಮತ್ತು ಅದಕ್ಕೆ ಸಂಬಂಧಪಟ್ಟ ವಲಯಗಳ ಸಹಯೋಗದಲ್ಲಿ ದುಡಿಯುವ ಮಹಿಳೆಯರಿಗಾಗಿ 'ವರ್ಕಿಂಗ್ ವಿಮೆನ್ ಹಾಸ್ಟೆಲ್'ಗಳನ್ನು ತೆರೆಯಲಾಗುವುದು.

ಮಹಿಳಾ ಸ್ವ-ಸಹಾಯ ಗುಂಪುಗಳು ನಡೆಸುವ ಉದ್ದಿಮೆಗಳಿಗೆ ಮಾರುಕಟ್ಟೆ ಪ್ರವೇಶ ಉತ್ತೇಜನಕ್ಕೆ ಮತ್ತು ಮಹಿಳೆಯರಿಗಾಗಿ ನಿರ್ದಿಷ್ಟ ಕೌಶಲ ಕಾರ್ಯಕ್ರಮಗಳನ್ನು ಉದ್ಯಮಗಳ ಸಹಭಾಗಿತ್ವದಲ್ಲಿ ಆಯೋಜಿಸಲಾಗುತ್ತದೆ.

ಉನ್ನತ ಶಿಕ್ಷಣ: ₹ 10 ಲಕ್ಷದವರೆಗೆ ಸಾಲ

ದೇಶೀಯ ಶಿಕ್ಷಣ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಅರ್ಹರಿಗೆ ₹10 ಲಕ್ಷದವರೆಗೆ ಸಾಲ ಒದಗಿಸಿ, ಆರ್ಥಿಕ ಬೆಂಬಲ ನೀಡಲಾಗುತ್ತದೆ.

ಈ ಉದ್ದೇಶಕ್ಕಾಗಿ, ಇ-ವೋಚರ್‌ಗಳನ್ನು ಪ್ರತಿ ವರ್ಷ 1 ಲಕ್ಷ ವಿದ್ಯಾರ್ಥಿಗಳಿಗೆ ನೇರವಾಗಿ, ಸಾಲದ ಮೊತ್ತದ ಶೇ 3 ರಷ್ಟು ವಾರ್ಷಿಕ ಬಡ್ಡಿ ರಿಯಾಯಿತಿಗಾಗಿ ನೀಡಲಾಗುತ್ತದೆ.

ಸರ್ಕಾರದ ಯೋಜನೆಗಳು ಮತ್ತು ನೀತಿಗಳ ಅಡಿಯಲ್ಲಿ ಯಾವುದೇ ಪ್ರಯೋಜನ ಪಡೆಯದ ಯುವಜನರಿಗೆ ಈ ಸೌಲಭ್ಯ ಒದಗಿಸುವುದು ಸರ್ಕಾರದ ಉದ್ದೇಶ.

1 ಕೋಟಿ ಯುವಕರಿಗೆ ಇಂಟರ್ನ್‌ಶಿಪ್; ತಿಂಗಳಿಗೆ ₹ 5 ಸಾವಿರ ಭತ್ಯೆ

ದೇಶದ 500 ಕಂಪನಿಗಳಲ್ಲಿ 5 ವರ್ಷಗಳಲ್ಲಿ 1 ಕೋಟಿ ಯುವಕರಿಗೆ ಇಂಟರ್ನ್‌ಶಿಪ್ ಅವಕಾಶ ಒದಗಿಸುವ ಯೋಜನೆಯನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ.

ಪ್ರಧಾನಮಂತ್ರಿಯರ ಪ್ಯಾಕೇಜ್ ಅಡಿಯಲ್ಲಿ ಸರ್ಕಾರವು ಈ ಸಮಗ್ರ ಯೋಜನೆಯನ್ನು ಪ್ರಕಟಿಸಿದೆ. ಇದರಲ್ಲಿ, ಯುವಕರಿಗೆ ತಿಂಗಳಿಗೆ ₹5,000 ಇಂಟರ್ನ್‌ಶಿಪ್ ಭತ್ಯೆ ಮತ್ತು ಒಂದು ಬಾರಿ ₹6,000 ಧನಸಹಾಯ ನೀಡಲಾಗುತ್ತದೆ. ಕಂಪನಿಗಳು ತಮ್ಮ ಸಿಎಸ್‌ಆರ್ (ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ) ನಿಧಿಯಿಂದ ತರಬೇತಿ ವೆಚ್ಚ ಮತ್ತು ಇಂಟರ್ನ್‌ಶಿಪ್ ವೆಚ್ಚದ ಶೇಕಡಾ 10ರಷ್ಟು ಭರಿಸಲಿವೆ.

ಇಂಟರ್ನ್‌ಶಿಪ್‌ಗೆ ಸೇರುವ ಯುವಜನರು 12 ತಿಂಗಳು, ವಿವಿಧ ವೃತ್ತಿಗಳು ಮತ್ತು ಉದ್ಯೋಗಾವಕಾಶಗಳಿಗೆ ಹಾಗೂ ನೈಜ ವ್ಯಾವಹಾರಿಕ ಪರಿಸರಕ್ಕೆ ತಮ್ಮನ್ನು ಒಡ್ಡಿಕೊಳ್ಳಲಿದ್ದಾರೆ. ಲಾಭದಾಯಕ ಕಾರ್ಪೊರೇಟ್ ಕಂಪನಿಗಳು ಮೂರು ವರ್ಷದ ನಿವ್ವಳ ಲಾಭದಲ್ಲಿ ಕನಿಷ್ಠ ಶೇ 2ರಷ್ಟು ಹಣವನ್ನು ಸಿಎಸ್‌ಆರ್ ಚಟುವಟಿಕೆಗೆ ನಿರ್ದಿಷ್ಟ ಹಣಕಾಸು ವರ್ಷದಲ್ಲಿ ವೆಚ್ಚಮಾಡಬೇಕಿದೆ.

ಕೃಷಿಗೆ ಚೈತನ್ಯ: ಸಂಶೋಧನೆಗೆ ಬಲ

• ಎಸ್. ಸಂಪತ್

ಪ್ರಸಕ್ತ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಕೃಷಿ ಮತ್ತು ಸಂಬಂಧಿತ ವಲಯಕ್ಕೆ ₹1.52 ಲಕ್ಷ ಕೋಟಿ ಅನುದಾನ ಮೀಸಲಿಟ್ಟಿದ್ದು ನೈಸರ್ಗಿಕ ಕೃಷಿಗೆ ಪ್ರೋತ್ಸಾಹ, ಕೃಷಿ ಸಂಶೋಧನೆ, ಹೊಸ ತಳಿಗಳ ಅಭಿವೃದ್ಧಿ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಘೋಷಿಸಲಾಗಿದೆ.

ಹೆಚ್ಚುತ್ತಿರುವ ಆಹಾರ ಬೇಡಿಕೆಯ ಪೂರೈಕೆ ಹಾಗೂ ಕೃಷಿಗೆ ಮತ್ತಷ್ಟು ಚೈತನ್ಯ ತುಂಬಲು ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ದೇಶದಾದ್ಯಂತ ಮುಂದಿನ ಎರಡು ವರ್ಷಗಳಲ್ಲಿ ಒಂದು ಕೋಟಿ ರೈತರಿಗೆ ನೈಸರ್ಗಿಕ ಕೃಷಿ ಪ್ರಾರಂಭಿಸಲು ಅಗತ್ಯ ಉತ್ತೇಜನ ನೀಡಲಾಗುವುದು. ಇದಕ್ಕಾಗಿ ಅವರಿಗೆ ಪ್ರಮಾಣೀಕರಣ (ಸರ್ಟಿಫಿಕೇಷನ್) ಮತ್ತು ಬ್ರ್ಯಾಂಡಿಂಗ್ ಬೆಂಬಲ ಒದಗಿಸಲಾಗುತ್ತದೆ.

ಈ ಕಾರ್ಯಕ್ರಮವನ್ನು ವೈಜ್ಞಾನಿಕ ಸಂಸ್ಥೆಗಳು ಮತ್ತು ಆಸಕ್ತ ಗ್ರಾಮ ಪಂಚಾಯಿತಿಗಳ ಮೂಲಕ ಜಾರಿಗೊಳಿಸಲಾಗುತ್ತದೆ.

ಆದ್ಯತೆ 1

ಇತರ ಕೊಡುಗೆಗಳು

- ನೈಸರ್ಗಿಕ ಕೃಷಿಯನ್ನು ಉತ್ತೇಜಿಸಲು 10 ಸಾವಿರ 'ಬಯೊ ಇನ್‌ಪುಟ್ ರಿಸೋರ್ಸ್ ಸೆಂಟರ್‌ಗಳ' ಸ್ಥಾಪನೆ
- ಕೃಷಿ ಉತ್ಪಾದಕತೆಯನ್ನು ವೃದ್ಧಿಸಲು ಮತ್ತು ಹವಾಗುಣ ಸಹಿಷ್ಣು ತಳಿಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಕೃಷಿ ಸಂಶೋಧನಾ ವ್ಯವಸ್ಥೆಯ ಸಮಗ್ರ ಪರಿಶೀಲನೆ
- ಸರ್ಕಾರಿ ಮತ್ತು ಹೊರಗಿನ ಸಂಸ್ಥೆಗಳ ತಜ್ಞರಿಂದ ಸಂಶೋಧನಾ ಕಾರ್ಯದ ಮೇಲ್ವಿಚಾರಣೆ
- 32 ಕೃಷಿ ಮತ್ತು ತೋಟಗಾರಿ ಕೆ ಬೆಳೆಗಳ, ಅಧಿಕ ಇಳುವರಿ ಮತ್ತು ಹವಾಗುಣ ಸಹಿಷ್ಣು ಗುಣವಿರುವ 109 ಹೊಸ ತಳಿಗಳನ್ನು ಬಿಡುಗಡೆ ಮಾಡಲಾಗುವುದು
- ಬೇಳೆಕಾಳು ಮತ್ತು ಎಣ್ಣೆಕಾಳುಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು ಪಣ. ಅದಕ್ಕಾಗಿ ಅವುಗಳ ಉತ್ಪಾದನೆ, ಸಂಗ್ರಹಣೆ ಮತ್ತು ಮಾರುಕಟ್ಟೆಯನ್ನು ಬಲಪಡಿಸುವುದು
- ಮಧ್ಯಂತರ ಬಜೆಟ್‌ನಲ್ಲಿ ಘೋಷಿಸಿದಂತೆ ಎಣ್ಣೆ ಕಾಳುಗಳಾದ ಸಾಸಿವೆ, ಶೇಂಗಾ, ಎಳ್ಳು, ಸೋಯಾಬೀನ್, ಸೂರ್ಯಕಾಂತಿ ಬೆಳೆಗಳಲ್ಲಿ 'ಆತ್ಮನಿರ್ಭರತೆ' ಸಾಧಿಸಲು ಕಾರ್ಯತಂತ್ರ ರೂಪಿಸಲಾಗುವುದು
- ತರಕಾರಿ ಉತ್ಪಾದನೆ ಮತ್ತು ಪೂರೈಕೆ ಸರಪಳಿಯನ್ನು ಬಲಪಡಿಸಲಾಗುವುದು. ಸಂಗ್ರಹಣೆ, ಮಾರುಕಟ್ಟೆ ಸೇರಿದಂತೆ ತರಕಾರಿ ಪೂರೈಕೆ ಸರಪಳಿಗಾಗಿ ರೈತ ಮತ್ತು ಉತ್ಪಾದಕರ ಸಂಸ್ಥೆಗಳು, ಸಹಕಾರಿ ಸಂಸ್ಥೆಗಳು ಮತ್ತು ಸ್ಟಾರ್ಟ್‌ಅಪ್‌ಗಳಿಗೆ ಉತ್ತೇಜನ
- ಈ ವರ್ಷ ದೇಶದ 400 ಜಿಲ್ಲೆಗಳಲ್ಲಿ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಬಳಸಿ ಕೃಷಿ ಬೆಳೆಯ ಡಿಜಿಟಲ್ ಸಮೀಕ್ಷೆ ನಡೆಸಲಾಗುವುದು. ಆರು ಕೋಟಿ ರೈತರ ಮತ್ತು ಅವರ ಜಮೀನುಗಳನ್ನು ನೋಂದಾಯಿಸಲು ಕ್ರಮ
- ಐದು ರಾಜ್ಯಗಳಲ್ಲಿ 'ಜನ್ ಸಮರ್ಥ ಆಧಾರಿತ ಕಿಸಾನ್ ಕ್ರೆಡಿಟ್ ಕಾರ್ಡ್'ಗಳ ವಿತರಣೆ
- ಸಿಗಡಿ ಉತ್ಪಾದನೆ ಮತ್ತು ರಫ್ತಿಗೆ ಪ್ರೋತ್ಸಾಹ. ಸಿಗಡಿ ಸಂತಾನೋತ್ಪತ್ತಿ ಕೇಂದ್ರಗಳ ಜಾಲ ಸ್ಥಾಪನೆಗೆ ಆರ್ಥಿಕ ನೆರವು ನೀಡಲಾಗುವುದು. ನಬಾರ್ಡ್ ಮೂಲಕ ಸೀಗಡಿ ಸಾಕಾಣಿಕೆ, ಸಂಸ್ಕರಣೆ ಮತ್ತು ರಫ್ತಿಗೆ ಹಣಕಾಸಿನ ನೆರವು
- ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ರಾಷ್ಟ್ರೀಯ ಸಹಕಾರ ನೀತಿಯನ್ನು ತರಲಾಗುವುದು. ಗ್ರಾಮೀಣ ಆರ್ಥಿಕತೆಗೆ ವೇಗ ನೀಡುವುದು ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು ಈ ನೀತಿ ಗುರಿಯಾಗಿರಲಿದೆ

ಉದ್ಯೋಗ, ಕೌಶಲ: ಯುವಜನರಿಗೆ ಉತ್ತೇಜನ

• ಕೆ.ಎಂ. ಸಂತೋಷ್ ಕುಮಾರ್

ಉದ್ಯೋಗ, ಕೌಶಲ ಮತ್ತು ಇತರ ಅವಕಾಶಗಳಿಗೆ ಬಹುದೊಡ್ಡ ಉತ್ತೇಜನ ನೀಡಲಾಗಿದೆ. ಈ ನಿಟ್ಟಿನಲ್ಲಿ ಸುಮಾರು 4.1 ಕೋಟಿ ಯುವಜನರಿಗೆ ಪ್ರಯೋಜನ ಕಲ್ಪಿಸುವ ಐದು ಯೋಜನೆಗಳ ಪ್ಯಾಕೇಜ್‌ಗೂ ₹2 ಲಕ್ಷ ಕೋಟಿ ಅನುದಾನವನ್ನು ಈ ಸಾಲಿನ ಬಜೆಟ್‌ನಲ್ಲಿ ಮೀಸಲಿಡಲಾಗಿದೆ.

'ಎಲ್ಲರಿಗೂ ಸಾಕಷ್ಟು ಅವಕಾಶಗಳನ್ನು ಸೃಷ್ಟಿಸಲು' ಸರ್ಕಾರ ನೀಡಿರುವ ಒಂಬತ್ತು ಪ್ರಮುಖ ಆದ್ಯತೆಗಳಲ್ಲಿ 'ಉದ್ಯೋಗ ಮತ್ತು ಕೌಶಲ' ಕೂಡ ಒಂದೆನಿಸಿದೆ. ಇದು ಉದ್ಯೋಗಿಗಳು ಮತ್ತು ಉದ್ಯೋಗದಾತರನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ.

ಪ್ರಧಾನಮಂತ್ರಿಯವರ 'ಐದು ಯೋಜನೆಗಳು ಮತ್ತು ಉಪಕ್ರಮಗಳ ಪ್ಯಾಕೇಜ್'ನಡಿ ಐದು ವರ್ಷಗಳ ಅವಧಿಯಲ್ಲಿ 4.1 ಕೋಟಿ ಯುವ ಜನರಿಗೆ ಉದ್ಯೋಗ, ಕೌಶಲ ಮತ್ತು ಇತರ ಅವಕಾಶಗಳನ್ನು ಕಲ್ಪಿಸುವ ಉದ್ದೇಶ ಹೊಂದಿವೆ.

ಪ್ರಧಾನ ಮಂತ್ರಿಗಳ ಪ್ಯಾಕೇಜ್‌ನ ಭಾಗವಾಗಿ 'ಉದ್ಯೋಗ ಲಿಂಕ್ಡ್ ಇನ್ಸೆಂಟಿವ್'ಗಾಗಿ ಸರ್ಕಾರವು ಮೂರು ಯೋಜನೆಗಳನ್ನು ಜಾರಿಗೆ ತರಲಿದೆ. ಇವುಗಳು ಇಪಿಎಫ್‌ಒನಲ್ಲಿ ದಾಖಲಾತಿಯನ್ನು ಆಧರಿಸಿವೆ. ಮೊದಲ ಬಾರಿಗೆ ಉದ್ಯೋಗಿಗಳ ಗುರುತಿಸುವಿಕೆ ಮತ್ತು ಉದ್ಯೋಗಿಗಳು ಹಾಗೂ ಉದ್ಯೋಗದಾತರಿಗೆ ಬೆಂಬಲ ನೀಡುವುದು ಇವುಗಳ ಆದ್ಯತೆಯಾಗಿದೆ.

ಆದ್ಯತೆ 2

ಹೊಸ ಯೋಜನೆಗಳು...

- ನವ ಉದ್ಯೋಗಿಗಳಿಗೆ ಒಂದು ತಿಂಗಳ ವೇತನ
- ಮೊದಲ ಬಾರಿಗೆ, ಎಲ್ಲಾ ಔಪಚಾರಿಕ ವಲಯಗಳಲ್ಲಿ ಹೊಸದಾಗಿ ಉದ್ಯೋಗಕ್ಕೆ ಸೇರುವ ಎಲ್ಲರಿಗೂ ಒಂದು ತಿಂಗಳ ವೇತನವನ್ನು ಇದರಲ್ಲಿ ನೀಡಲಾಗುತ್ತದೆ.
- ಇಪಿಎಫ್‌ಒನಲ್ಲಿ ನೋಂದಾಯಿಸಿದಂತೆ, ಮೊದಲ ಬಾರಿಯ ಉದ್ಯೋಗಿಗಳಿಗೆ ಮೂರು ಕಂತುಗಳಲ್ಲಿ ₹15,000 ಅನ್ನು ನೇರ ಲಾಭವಾಗಿ ವರ್ಗಾಯಿಸಲಾಗುತ್ತದೆ. ಇದು ತಿಂಗಳಿಗೆ ₹1 ಲಕ್ಷದೊಳಗೆ ವೇತನ ಪಡೆಯುವ ಎಲ್ಲ ಉದ್ಯೋಗಿಗಳಿಗೆ ಅನ್ವಯಿಸುತ್ತದೆ.
- ಈ ಯೋಜನೆಯು 2.10 ಕೋಟಿ ಯುವಕರಿಗೆ ಪ್ರಯೋಜನವಾಗುವ ನಿರೀಕ್ಷೆ ಇದೆ

'ಉತ್ಪಾದನೆಯಲ್ಲಿ ಉದ್ಯೋಗ ಸೃಷ್ಟಿ' ಯೋಜನೆ

- ಎರಡನೆಯ ಈ ಹೊಸ ಯೋಜನೆಯಡಿ ಮೊದಲ ಬಾರಿಯ ಉದ್ಯೋಗಿಗಳ ಉದ್ಯೋಗಕ್ಕೆ ಸಂಬಂಧಿಸಿ ಉತ್ಪಾದನಾ ವಲಯದಲ್ಲಿ ಹೆಚ್ಚುವರಿ ಉದ್ಯೋಗ ಸೃಷ್ಟಿಗೆ ಸರ್ಕಾರ ಉತ್ತೇಜನ ನೀಡಲಿದೆ.
- ಉದ್ಯೋಗ ಆರಂಭಿಸಿದ ಮೊದಲ ನಾಲ್ಕು ವರ್ಷಗಳಲ್ಲಿ ಅವರ ಇಪಿಎಫ್‌ಒ ಕೊಡುಗೆಗೆ ಸಂಬಂಧಿಸಿದಂತೆ ಉದ್ಯೋಗಿ ಮತ್ತು ಉದ್ಯೋಗದಾತರಿಗೆ ನೇರವಾಗಿ ನಿರ್ದಿಷ್ಟ ಪ್ರಮಾಣದಲ್ಲಿ ಪ್ರೋತ್ಸಾಹ ನೀಡಲಾಗುತ್ತದೆ.
- ಈ ಯೋಜನೆಯು ಉದ್ಯೋಗಕ್ಕೆ ಪ್ರವೇಶಿಸುವ 30 ಲಕ್ಷ ಯುವಕರಿಗೆ ಮತ್ತು ಅವರ ಉದ್ಯೋಗದಾತರಿಗೆ ಪ್ರಯೋಜನ ಕಲ್ಪಿಸಲಿದೆ.

ಉದ್ಯೋಗದಾತರಿಗೆ ಬೆಂಬಲ

- ಮೂರನೇ ಯೋಜನೆ ಎನಿಸಿದ, ಉದ್ಯೋಗದಾತ ಕೇಂದ್ರಿತವಾದ ಈ ಯೋಜನೆಯು ಎಲ್ಲ ವಲಯಗಳಲ್ಲಿ ಸೃಷ್ಟಿಸುವ ಹೆಚ್ಚುವರಿ ಉದ್ಯೋಗಗಳನ್ನು ಒಳಗೊಂಡಿರಲಿದೆ. ತಿಂಗಳಿಗೆ ₹1 ಲಕ್ಷ ಸಂಬಳದೊಳಗಿನ ಎಲ್ಲ ಹೆಚ್ಚುವರಿ ಉದ್ಯೋಗಗಳು ಈ ಯೋಜನೆ ವ್ಯಾಪ್ತಿಗೆ ಸೇರಲಿವೆ.
- ಪ್ರತಿ ಹೆಚ್ಚುವರಿ ಉದ್ಯೋಗಿಗೆ ಅವರ ಇಪಿಎಫ್‌ಒ ಕೊಡುಗೆಗಾಗಿ ಸರ್ಕಾರವು ಉದ್ಯೋಗದಾತರಿಗೆ ಎರಡು ವರ್ಷಗಳವರೆಗೆ ತಿಂಗಳಿಗೆ ₹ 3,000ರವರೆಗೆ ಮರುಪಾವತಿಸಲಿದೆ.
- ಈ ಯೋಜನೆಯು 50 ಲಕ್ಷ ಜನರಿಗೆ ಹೆಚ್ಚುವರಿ ಉದ್ಯೋಗ ಸೃಷ್ಟಿಗೆ ಉತ್ತೇಜಿಸುವ ನಿರೀಕ್ಷೆಯಿದೆ.

2 ಲಕ್ಷ ಕೋಟಿ ಉದ್ಯೋಗ, ಕೌಶಲ ಹೆಚ್ಚಿಸಲು ಮೀಸಲಿಟ್ಟ ಹಣ

4.1 ಕೋಟಿ ಯುವಕರಿಗೆ ವಿವಿಧ ಯೋಜನೆಗಳಿಂದ ಅನುಕೂಲವಾಗಲಿದೆ

ಕೌಶಲ ಹೆಚ್ಚಿಸುವ ಯೋಜನೆ

- ನಾಲ್ಕನೇ ಯೋಜನೆಯಾಗಿ, ರಾಜ್ಯ ಸರ್ಕಾರಗಳು ಮತ್ತು ಉದ್ಯಮಗಳ ಸಹಯೋಗದೊಂದಿಗೆ ಕೌಶಲ ಹೆಚ್ಚಿಸುವ ಕಾರ್ಯಕ್ರಮಕ್ಕೆ ಒತ್ತು ನೀಡಲಾಗುತ್ತಿದೆ.
- 5 ವರ್ಷಗಳ ಅವಧಿಯಲ್ಲಿ 20 ಲಕ್ಷ ಯುವ ಜನರು ಕೌಶಲ ಹೊಂದಲಿದ್ದಾರೆ. ಇದಕ್ಕಾಗಿ 1,000 ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು (ಐಟಿಐ) ಮೇಲ್ದರ್ಜೆಗೇರಿಸಲಾಗುತ್ತಿದೆ.

ಮಾದರಿ ಕೌಶಲ ಸಾಲ ಯೋಜನೆ

- 'ಮಾದರಿ ಕೌಶಲ ಸಾಲ ಯೋಜನೆ'ಯಡಿ ಸರ್ಕಾರದ ಪ್ರಚಾರ ನಿಧಿಯಿಂದ ಖಾತರಿಯೊಂದಿಗೆ ₹7.5 ಲಕ್ಷದ ವರೆಗೆ ಸಾಲ ಒದಗಿಸಲಾಗುವುದು. ಈ ಕ್ರಮವು ಪ್ರತಿ ವರ್ಷ 25,000 ವಿದ್ಯಾರ್ಥಿಗಳಿಗೆ ನೆರವಾಗುವ ನಿರೀಕ್ಷೆ ಇದೆ

ಪ್ರತಿಕ್ರಿಯೆಗಳು



ಎನ್‌ಡಿಎ ಸರ್ಕಾರ ಉಳಿಸಿಕೊಳ್ಳುವುದಷ್ಟೇ ಸಚಿವೆ ನಿರ್ಮಲಾ ಅವರ ಬಜೆಟ್ ಮಂಡನೆಯ ಉದ್ದೇಶ. ಕೇಂದ್ರ ಸರ್ಕಾರ ದೇಶವನ್ನು ಒಂದಾಗಿ ಈ ಬಜೆಟ್‌ನಲ್ಲಿ ನೋಡಿಲ್ಲ. 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳನ್ನು ಕಡೆಗಣಿಸಿದೆ. ಪ್ರಧಾನಿಯವರು ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿಗೆ ನೆರವು ನೀಡಬಹುದೆಂದು ಭರವಸೆ ಇಟ್ಟುಕೊಂಡಿದ್ದೆ. ಕರ್ನಾಟಕದ ಹಿತ ರಕ್ಷಣೆ ಮಾಡುತ್ತಾರೆ ಎಂಬ ಭರವಸೆಯೂ ಈಡೇರಿಲ್ಲ
ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ



ಭಾರತ ಜಗತ್ತಿನಲ್ಲೇ ಮೂರನೇ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿ ಬೆಳೆಯಲು ಈ ಆಯವ್ಯಯವು ಸಹಕಾರಿ. ರೈತರು, ಮಹಿಳೆಯರು, ಯುವಜನರು, ತೆರಿಗೆ ಪಾವತಿಸುವವರ ಬದುಕನ್ನು ವಿಶ್ಲೇಷಿಸಿ ಅವರ ಅನುಕೂಲಕ್ಕೆ ತಕ್ಕಂತೆ ಬಜೆಟ್ ನೀಡಿದ್ದಾರೆ. ಪಿಎಂ ಗತಿಶಕ್ತಿ ಮಾಸ್ಟರ್ ಪ್ಲಾನ್ ಅನ್ನು ಕೇಂದ್ರ ಸರ್ಕಾರ ಇನ್ನೂ ಒಂದು ವರ್ಷ ಮುಂದುವರಿಸಲಿದೆ. ಹೈದರಾಬಾದ್-ಬೆಂಗಳೂರು ಕೈಗಾರಿಕಾ ಕಾರಿಡಾರ್‌ನಿಂದ ಹೊಸ ಉದ್ಯೋಗಗಳು ಸೃಷ್ಟಿಯಾಗಿ ಜನರ ಬದುಕು ಸುಭದ್ರವಾಗಲಿದೆ
ಆರ್. ಅಶೋಕ, ವಿರೋಧಪಕ್ಷದ ನಾಯಕ, ವಿಧಾನಸಭೆ

ಶಿಕ್ಷಣ, ಉದ್ಯೋಗ, ಕೌಶಲ್ಯಭಿವೃದ್ಧಿಗಾಗಿ ₹1.48 ಲಕ್ಷ ಕೋಟಿ ಮೀಸಲಿಡುವ ಮೂಲಕ ಮೋದಿಯವರ ಕನಸಿನ 'ವಿಕಸಿತ ಭಾರತ' ನಿರ್ಮಾಣಕ್ಕೆ ನಿರ್ಮಲಾ ಅವರು ಉತ್ತಮ ಅಡಿಪಾಯ ಹಾಕಿದ್ದಾರೆ. ದೇಶದ ಅರ್ಥ ವ್ಯವಸ್ಥೆಗೆ ಶರವೇಗ ನೀಡುವ ನಿಟ್ಟಿನಲ್ಲಿ ಘೋಷಿಸಿರುವ ಕಾರ್ಯಕ್ರಮಗಳು ಹಣದುಬ್ಬರವನ್ನು ನಿಯಂತ್ರಿಸಲಿವೆ. ಬಡತನ ನಿರ್ಮೂಲನೆ, ಗ್ರಾಮೀಣಾಭಿವೃದ್ಧಿಗೆ ₹2.66 ಲಕ್ಷ ಕೋಟಿ, ಕೃಷಿ ಕ್ಷೇತ್ರಕ್ಕೆ ₹1.52 ಲಕ್ಷ ಕೋಟಿ ಅನುದಾನ ನೀಡುವ ಮೂಲಕ ರೈತರ ಏಳಿಗೆಗೆ ಮತ್ತು ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಲಾಗಿದೆ.
ಬಿ.ವೈ.ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ಕೃಷಿಗೆ ಒತ್ತು, ರೈತರ ನಿರ್ಲಕ್ಷ್ಯ

ವಿಶ್ಲೇಷಣೆ

ಟಿ.ಎನ್. ಪ್ರಕಾಶ್ ಕಮ್ಮರಡಿ

ಕೃಷಿ ಉತ್ಪನ್ನಗಳಿಗೆ ನೀಡಲಾಗುವ ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಭದ್ರತೆಗೆ ಆಗ್ರಹಿಸಿ ರೈತರು ದೆಹಲಿ ಗಡಿಯಲ್ಲಿ ಆರಂಭಿಸಿದ ಪ್ರತಿಭಟನೆ 200 ದಿನಕ್ಕೆ ಕಾಲಿಡುತ್ತಿದೆ. ಇನ್ನೊಂದೆಡೆ ರಾಜ್ಯವೂ ಸೇರಿ ದೇಶದಾದ್ಯಂತ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ವರದಿ ಇದೆ. ಇವೆಲ್ಲವನ್ನೂ ಸರಿಪಡಿಸುವ ಯತ್ನವನ್ನು ಸರ್ಕಾರವು ಬಜೆಟ್‌ನಲ್ಲಿ ಮಾಡುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಪಾಠ ಕಲಿತಿಲ್ಲ ಎಂದೇ ಹೇಳಬೇಕಾಗುತ್ತದೆ

ದೇಶದಲ್ಲಿ ರೈತರ ಈಗಿನ ಸ್ಥಿತಿಯನ್ನು ಗಮನದಲ್ಲಿ ಇರಿಸಿಕೊಂಡು ಈ ಬಜೆಟ್‌ನ ಮೇಲೆ ಕೆಲವು ನಿರೀಕ್ಷೆಗಳು ಇದ್ದವು. ಈ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಆದ ಹಿನ್ನಡೆಗೆ ರೈತರ ಆಕ್ರೋಶವೂ ಒಂದು ಪ್ರಮುಖ ಕಾರಣ. ರೈತರನ್ನು ಅಸಡ್ಡೆ ಮಾಡಿದ್ದು ಮತ್ತು ರೈತರಿಂದ ವಿಮುಖರಾಗಿದ್ದರಿಂದಲೇ ಕೇಂದ್ರ ಸರ್ಕಾರವು ರೈತವರ್ಗದ ಆಕ್ರೋಶಕ್ಕೆ ಗುರಿಯಾಯಿತು ಎಂಬುದು ನಿಚ್ಚಳ. ಇವುಗಳಿಂದ ಕೇಂದ್ರ ಸರ್ಕಾರವು ಪಾಠ ಕಲಿತಿದೆ ಎಂದುಕೊಳ್ಳಲಾಗಿತ್ತು. ಆದರೆ ಅದು ಸುಳ್ಳಾಗಿದೆ. ಪಾಠ ಕಲಿತಿದ್ದರೆ ಬಜೆಟ್‌ನ ಘೋಷಣೆಗಳು ರೈತ ಕೇಂದ್ರಿತವಾಗಿರುತ್ತಿದ್ದವು. ಆದರೆ ಯಥಾಪ್ರಕಾರ ಈ ಬಜೆಟ್, ಕೃಷಿಯನ್ನು ಒಂದು ಉದ್ದಿಮೆ ವಲಯವನ್ನಾಗಿ ನೋಡುವುದಕ್ಕೇ ಒತ್ತು ನೀಡಿದೆ.

ರೈತರನ್ನು ಮನುಷ್ಯರು ಎಂದು ಪರಿಗಣಿಸುವ ನೀತಿ ರೂಪಿಸುವುದಕ್ಕೂ, ಕೃಷಿಯನ್ನು ಒಂದು ಉತ್ಪಾದಕ ವಲಯ ಎಂದು ಪರಿಗಣಿಸುವುದಕ್ಕೂ ಬಹಳ ವ್ಯತ್ಯಾಸವಿದೆ. ಉತ್ಪಾದಕತೆಗೆ ಒತ್ತು ನೀಡುವುದು ಸ್ವಾಗತಾರ್ಹವೇ. ಆದರೆ ಉತ್ಪಾದನೆ ಹೆಚ್ಚಿಸದರಷ್ಟೇ ಸಾಲದು. ಉತ್ಪಾದನೆಯ ನಂತರ ಏನು ಎಂಬುದರತ್ತ ಗಮನ ಹರಿಸಬೇಕಿತ್ತು. ಉತ್ಪಾದಿಸಿದ ರೈತರಿಗೆ ಬೆಲೆ ಸಿಗುವಂತೆ ಮಾಡಬೇಕಿತ್ತು. ದೇಶದಲ್ಲಿ ಈಗ ಬೇಳೆಕಾಳುಗಳು ಮತ್ತು ಎಣ್ಣೆಬೀಜಗಳ ಉತ್ಪಾದಕತೆಗೆ ಹೆಚ್ಚು ಆದ್ಯತೆ ನೀಡಬೇಕಿದೆ. ತರಕಾರಿ ಮತ್ತು ಇತರ ಕೃಷಿ ಉತ್ಪನ್ನಗಳ ಬೆಲೆ ಸ್ಥಿರತೆ ಮತ್ತು ಮಾರುಕಟ್ಟೆ ಸುಧಾರಣೆಗೆ ಬಜೆಟ್‌ನಲ್ಲಿ ಒತ್ತು ನೀಡಬೇಕಿತ್ತು. ಡಿಜಿಟಲ್-ಸಹಕಾರಿ ಮಾರುಕಟ್ಟೆ ರೂಪಿಸುವ ಮೂಲಕ ರೈತರಿಗೆ ಹೆಚ್ಚಿನ ಬೆಲೆ ಸಿಗುವಂತೆ ಮಾಡಬೇಕಿತ್ತು. ಆದರೆ ಇವುಗಳನ್ನು ಸಾಧಿಸುವ ಅಂಶಗಳು ಬಜೆಟ್‌ನಲ್ಲಿ ಇಲ್ಲ.

ಕೃಷಿ ಪುನರುಜ್ಜೀವನ, ಉತ್ಪಾದಕತೆ, ನೈಸರ್ಗಿಕ ಕೃಷಿ, ಹವಾಮಾನ ಬದಲಾವಣೆ ಸುಸ್ಥಿರ ಕೃಷಿ ಎಂಬ ಬಣ್ಣ-ಬಣ್ಣದ ಮಾತುಗಳನ್ನು ಬಜೆಟ್ ಭಾಷಣದಲ್ಲಿ ಆಡಲಾಗಿದೆ. ಇವೆಲ್ಲವೂ ಒಳ್ಳೆಯ ವಿಚಾರಗಳೇ. ಇವುಗಳಿಗೆ ಬಜೆಟ್‌ನಲ್ಲಿ ದುಡ್ಡು ಕೊಟ್ಟರಷ್ಟೇ ಸಾಲದು. ಇವುಗಳನ್ನು ಸಾಧಿಸಲು ವಿಸ್ತೃತವಾದ ಮಟ್ಟದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ (ಆರ್ ಆ್ಯಂಡ್ ಡಿ) ಕೆಲಸಗಳು ಆಗಬೇಕಿದೆ. ಈಗ ದೇಶದಲ್ಲಿ ನಡೆಯುತ್ತಿರುವ ಕೃಷಿ ಸಂಶೋಧನಾ ಪದ್ಧತಿಯು ರಾಸಾಯನಿಕ ಕೃಷಿ ಮತ್ತು ಆಧುನಿಕ ಕೃಷಿಯನ್ನೇ ಕೇಂದ್ರೀಕರಿಸಿವೆ. ಸರ್ಕಾರವೇ, ಒಂದೆಡೆ ನೈಸರ್ಗಿಕ ಕೃಷಿ ಎನ್ನುತ್ತಾ ಮತ್ತೊಂದೆಡೆ ರಸ ಗೊಬ್ಬರದ ಸಹಾಯಧನ ಹೆಚ್ಚಿಸಿದೆ. ಬಜೆಟ್‌ನಲ್ಲಿ ಘೋಷಿಸಿದ ತಕ್ಷಣ ಇವು ಬದಲಾಗುವುದಿಲ್ಲ. ಈ ಘೋಷಣೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರದ ಬಳಿ ನೀಲನಕ್ಷೆ ಇದ್ದಂತಿಲ್ಲ.

ಎಷ್ಟೋ ಕೋಟಿ ರೈತರಿಗೆ ನೈಸರ್ಗಿಕ ಕೃಷಿಯಲ್ಲಿ ತರಬೇತಿ ನೀಡುತ್ತವೆ ಎಂದು ಘೋಷಿಸಿದ್ದಾರೆ. ನೈಸರ್ಗಿಕ ಕೃಷಿ ಎಂದಕೂಡಲೇ ರಸಗೊಬ್ಬರ ಮತ್ತು ಕೀಟನಾಶಕಗಳನ್ನು ಬದಿಗೆ ಇಡಬೇಕಾಗುತ್ತದೆ. ಆದರೆ ಅವುಗಳಿಗೆ ಪರ್ಯಾಯವಾದ ಜೈವಿಕ ಗೊಬ್ಬರವು ದೇಶದ ಎಲ್ಲಾ ರೈತರಿಗೂ ಸಾಲುವಷ್ಟು ನಮ್ಮಲ್ಲಿ ಇದೆಯೇ? ಅದರ ವೆಚ್ಚ ಎಷ್ಟಾಗುತ್ತದೆ? ಕೀಟನಾಶಕಗಳಿಗೆ ಪರ್ಯಾಯವೇನು? ನೈಸರ್ಗಿಕ ಕೃಷಿಗೆ ಬದಲಾಗುವ ಉದ್ದೇಶದ ಸಂಶೋಧನೆಗಳು, ಪರಿಕರ ಸಿದ್ಧತೆಗಳು ಇಲ್ಲದೆಯೇ ಕೋಟ್ಯಂತರ ರೈತರಿಗೆ ತರಬೇತಿ ಹೇಗೆ ಕೊಡುತ್ತೀರಿ? ಇವ್ಯಾವುವೂ ಇಲ್ಲದ ಘೋಷಣೆ ಕಾರ್ಯಸಾಧುವಲ್ಲ.

'ಭೂ-ಆಧಾರ್' ಜಾರಿಗೆ ತರುವುದಾಗಿ ಎಂದು ಹಣಕಾಸು ಸಚಿವೆ ಹೇಳಿದ್ದಾರೆ. ಇದರ ಹಿಂದಿನ ಉದ್ದೇಶ ಏನು ಎಂಬುದನ್ನು ಅವರು ಸ್ಪಷ್ಟಪಡಿಸಿಲ್ಲ. 'ಭೂ-ಆಧಾರ್'ನಿಂದ ರೈತರ ಜಮೀನಿನ ಎಲ್ಲಾ ದಾಖಲೆಗಳು ಜಗಜ್ಜಾಹೀರಾಗುತ್ತವೆ. ಇದು ಹಲವು ಅಕ್ರಮಗಳಿಗೂ ಕಾರಣವಾಗಬಹುದು. ಹೀಗಾಗಿ ಈ ಬಗ್ಗೆ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ನರೇಗಾ ಮತ್ತು ಕೃಷಿಯನ್ನು ಪರಸ್ಪರ ಪೂರಕವಾಗಿ ಇರುವಂತಹ ನೀತಿಗಳ ಅವಶ್ಯಕತೆ ಇತ್ತು. ಆದರೆ ಅಂತಹ ಪರಿಹಾರಗಳು ಬಜೆಟ್‌ನಲ್ಲಿ ಇಲ್ಲ. ಬಹಳ ಸಮಸ್ಯೆ ಇರುವುದರಿಂದಲೇ ರೈತರು ಬೀದಿಗೆ ಇಳಿದಿದ್ದಾರೆ, ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅವುಗಳನ್ನು ಪರಿಹರಿಸಲು ಬಜೆಟ್‌ನಲ್ಲಿ ಬಣ್ಣ-ಬಣ್ಣದ ಘೋಷಣೆಗಳನ್ನು ಮಾಡಲಾಗಿದೆ. ಆದರೆ ಅವುಗಳನ್ನು ಸಾಧಿಸಲು ನೀಲನಕ್ಷೆ ಇಲ್ಲ. ಬಜೆಟ್‌ನಲ್ಲಿ ರೈತರನ್ನು ನಿರ್ಲಕ್ಷಿಸಲಾಗಿದೆ ಎಂದೇ ಹೇಳಬೇಕಾಗುತ್ತದೆ.

ನಿರೂಪಣೆ: ಜಯಸಿಂಹ ಆರ್.

ದೆಹಲಿಯು ದೇಶದ ಬೆಳವಣಿಗೆಯ ಎಂಜಿನ್ ಆಗಿದ್ದು, ಕೇಂದ್ರಕ್ಕೆ ₹2.32 ಲಕ್ಷ ಕೋಟಿ ತೆರಿಗೆ ಪಾವತಿಸಿದೆ. ಆದರೂ ಕೇಂದ್ರದ ಬಳಿ ದೆಹಲಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂಲಸೌಕರ್ಯದ ಅಭಿವೃದ್ಧಿಗಾಗಿ ₹20 ಸಾವಿರ ಕೋಟಿ ಅನುದಾನ ಕೇಳಿದ್ದೆವು. ರಾಜ್ಯಕ್ಕೆ ₹1,168 ಕೋಟಿ ಅನುದಾನ ನೀಡಲಾಗಿದೆ **ಅತಿಶಿ– ದೆಹಲಿ ಹಣಕಾಸು ಸಚಿವೆ**

ಎಂಎಸ್‌ಎಂಇ ವಲಯಕ್ಕೆ ಒಂದಿಷ್ಟು ಟಾನಿಕ್

ಆದ್ಯತೆ 4

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಅರ್ಥ ವ್ಯವಸ್ಥೆಯ ಪಾಲಿನ ಅತ್ಯಂತ ಮಹತ್ವದ ಸ್ತಂಭ ಎಂದೇ ಪರಿಗಣಿತವಾಗಿರುವ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ದಿಮೆಗಳ ಹಿತ ಕಾಯಲು ಬಜೆಟ್‌ನಲ್ಲಿ ಕೆಲವು ಕ್ರಮಗಳನ್ನು ಪ್ರಕಟಿಸಲಾಗಿದೆ.

- ಎಂಎಸ್‌ಎಂಇ ಉದ್ದಿಮೆಗಳಿಗೆ ಯಂತ್ರೋಪಕರಣ ಹಾಗೂ ಸಲಕರಣೆಗಳ ಖರೀದಿಗೆ ಅಡಮಾನ ರಹಿತವಾಗಿ ಅವಧಿ ಸಾಲ ಒದಗಿಸಲು, ಸಾಲ ಖಾತರಿ ಯೋಜನೆಯನ್ನು ಆರಂಭಿಸಲಾಗುತ್ತದೆ. ₹100 ಕೋಟಿವರೆಗಿನ ಸಾಲಗಳಿಗೆ ಇದು ಖಾತರಿಯನ್ನು ಒದಗಿಸುತ್ತದೆ.
- ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ ಎಷ್ಟರಮಟ್ಟಿಗೆ ಸಾಲವನ್ನು ಒದಗಿಸಬಹುದು ಎಂಬುದನ್ನು ಪರಿಶೀಲಿಸಲು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ತಮ್ಮದೇ ಆದ ವ್ಯವಸ್ಥೆಯೊಂದನ್ನು ರೂಪಿಸಲಿವೆ.
- ಎಂಎಸ್‌ಎಂಇ ವಲಯದ ಉದ್ದಿಮೆಗಳು ಹಣಕಾಸಿನ ಬಿಕ್ಕಟ್ಟಿಗೆ ಸಿಲುಕಿದ ಸಂದರ್ಭಗಳಲ್ಲಿಯೂ ಅವುಗಳಿಗೆ ಬ್ಯಾಂಕ್ ಸಾಲ ಸಿಗುವಂತೆ ಆಗಲು ಹೊಸ ವ್ಯವಸ್ಥೆಯೊಂದನ್ನು ರೂಪಿಸಲಾಗುತ್ತದೆ.
- ಮುದ್ರಾ ಯೋಜನೆಯ ಅಡಿ ನೀಡುವ ಸಾಲದ ಮೊತ್ತವನ್ನು ಈಗಿನ ₹10 ಲಕ್ಷದಿಂದ ₹20 ಲಕ್ಷಕ್ಕೆ ಹೆಚ್ಚಿಸಲಾಗುತ್ತದೆ. 'ತರುಣ್' ವರ್ಗದ ಅಡಿಯಲ್ಲಿ ಹಿಂದೆ ಸಾಲ ಪಡೆದು, ಅದನ್ನು ಸರಿಯಾಗಿ ಹಿಂದಿರುಗಿಸಿದವರಿಗೆ ಈ ಸೌಲಭ್ಯ ಸಿಗಲಿದೆ.
- ಎಂಎಸ್‌ಎಂಇ ಕ್ಲಸ್ಟರ್‌ಗಳಲ್ಲಿ ಸಿಡ್ಬಿ ಮೂರು ವರ್ಷಗಳೊಳಗೆ ಹೊಸ ಶಾಖೆಗಳನ್ನು ತೆರೆಯಲಿದೆ, ಉದ್ದಿಮೆಗಳಿಗೆ ಸಾಲ ಒದಗಿಸಲಿದೆ. ಈ ವರ್ಷದಲ್ಲಿ 24 ಶಾಖೆಗಳು ಆರಂಭವಾಗಲಿವೆ.

- ಎಂಎಸ್‌ಎಂಇ ವಲಯದ ಉದ್ದಿಮೆಗಳು ಹಾಗೂ ಸಾಂಪ್ರದಾಯಿಕ ಶಿಲ್ಪಿಗಳು ತಮ್ಮ ಉತ್ಪನ್ನಗಳನ್ನು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುವಂತೆ ಆಗಲು, ಪಿಪಿಪಿ ಮಾದರಿಯಲ್ಲಿ ಇ–ವಾಣಿಜ್ಯ ರಫ್ತು ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ.
- ಹೂಡಿಕೆ ಆಕರ್ಷಿಸಲು ಸನ್ನದ್ಧವಾಗಿರುವ ಕೈಗಾರಿಕಾ ಪಾರ್ಕ್‌ಗಳನ್ನು ಸರಿಸುಮಾರು 100 ನಗರಗಳಲ್ಲಿ ರಾಜ್ಯ ಸರ್ಕಾರಗಳು ಹಾಗೂ ಖಾಸಗಿ ವಲಯದ ಸಹಭಾಗಿತ್ವದಲ್ಲಿ ನಿರ್ಮಿಸಲಾಗುತ್ತದೆ.
- ಮಹತ್ವದ ಖನಿಜಗಳ ದೇಶಿ ಉತ್ಪಾದನೆ, ಪುನರ್ಬಳಕೆಗೆ ಹಾಗೂ ವಿದೇಶಗಳಲ್ಲಿ ಮಹತ್ವದ ಖನಿಜಗಳ ಆಸ್ತಿ ಸ್ವಾಧೀನಕ್ಕೆ ಪ್ರತ್ಯೇಕ ಮಿಷನ್ ಆರಂಭಿಸಲಾಗುತ್ತದೆ.
- ದಿವಾಳಿ ಸಂಹಿತೆಯ ಅಡಿಯಲ್ಲಿ ಪ್ರಕ್ರಿಯೆಗಳಿಗೆ ವೇಗ ನೀಡಲು ದಿವಾಳಿ ಸಂಹಿತೆಗೆ ಸೂಕ್ತ ತಿದ್ದುಪಡಿ ತರಲಾಗುತ್ತದೆ, ನ್ಯಾಯಮಂಡಳಿಗಳಲ್ಲಿ ಸುಧಾರಣೆ ತರಲಾಗುತ್ತದೆ, ಅವುಗಳನ್ನು ಬಲಪಡಿಸಲಾಗುತ್ತದೆ. ಹೆಚ್ಚುವರಿಯಾಗಿ ನ್ಯಾಯಮಂಡಳಿಗಳನ್ನು ಸ್ಥಾಪಿಸಲಾಗುತ್ತದೆ.
- ಸಾಲ ವಸೂಲಾತಿ ನ್ಯಾಯಮಂಡಳಿಗಳ ಸುಧಾರಣೆಗೆ ಹಾಗೂ ಅವುಗಳನ್ನು ಇನ್ನಷ್ಟು ಬಲಪಡಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಸಾಲ ವಸೂಲಾತಿಗೆ ವೇಗ ನೀಡಲು ಹೆಚ್ಚುವರಿಯಾಗಿ ನ್ಯಾಯಮಂಡಳಿ ಆರಂಭಿಸಲಾಗುತ್ತದೆ.

₹3.3 ಲಕ್ಷ ಕೋಟಿ
ದಿವಾಳಿ ಸಂಹಿತೆಯ ಅಡಿ ಪ್ರಕರಣಗಳ ಇತ್ಯರ್ಥದಿಂದ ಸಾಲದಾತರಿಗೆ ಮರಳಿದ ಹಣದ ಮೊತ್ತ

1,000
ಪ್ರಕರಣಗಳನ್ನು ದಿವಾಳಿ ಸಂಹಿತೆಯ ಅಡಿಯಲ್ಲಿ ಇತ್ಯರ್ಥಪಡಿಸಲಾಗಿದೆ

₹20,000 ಕೋಟಿ
ಬಿಹಾರದಲ್ಲಿ ಹೆದ್ದಾರಿಗಳ ಅಭಿವೃದ್ಧಿಗೆ ವಿನಿಯೋಗ

₹20 ಲಕ್ಷ
ಮುದ್ರಾ ಯೋಜನೆ ಅಡಿಯಲ್ಲಿ ನೀಡುವ ಸಾಲದ ಮೊತ್ತ

ಪ್ರತಿಕ್ರಿಯೆಗಳು



ಲೋಕಸಭಾ ಚುನಾವಣಾ ಫಲಿತಾಂಶದ ಬಳಿಕ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ 2024ರ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯನ್ನು ಓದಿದ್ದು ಖುಷಿ ತಂದಿದೆ. ಉದ್ಯೋಗ-ಸಂಬಂಧಿತ ಉತ್ತೇಜಕ (ಇಎಲ್‌ಐ), ಕೆಲಸದ ತರಬೇತಿ ಪಡೆಯುವ ಅಭ್ಯರ್ಥಿಗೆ ಭತ್ಯೆ ಹಾಗೂ ಏಂಜೆಲ್ ತೆರಿಗೆ ರದ್ದುಗೊಳಿಸಿರುವುದು ಸಂತಸ ತಂದಿದೆ

ಪಿ. ಚಿದಂಬರಂ, ರಾಜ್ಯಸಭಾ ಸದಸ್ಯ

ಕೇಂದ್ರ ಬಜೆಟ್‌ನಲ್ಲಿ ಬಂಗಾಳವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ನಾವು ಏನು ತಪ್ಪು ಮಾಡಿದ್ದೇವೆ? ಬಡವರ ಹಿತಾಸಕ್ತಿ ಕಾಪಾಡಿಲ್ಲ. ರಾಜಕೀಯ ಪಕ್ಷಪಾತಿಯಾಗಿದ್ದು, ಯಾವುದೇ ದಿಕ್ಕುದೆಸೆ, ದೂರದೃಷ್ಟಿಯಿಲ್ಲ. ರಾಜಕೀಯ ಉದ್ದೇಶ ಗುರಿ ಸಾಧಿಸಲು ಬಜೆಟ್ ಮಂಡನೆಯಾಗಿದೆ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ



ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ತಮ್ಮ ಬಜೆಟ್‌ನಲ್ಲಿ ಇಂಟರ್ನ್‌ಶಿಪ್ ಯೋಜನೆ ಘೋಷಿಸುವ ಮೂಲಕ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯ ಅಂಶವನ್ನು ನಕಲು ಮಾಡಿದ್ದಾರೆ

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಕೇಂದ್ರದ ಬಜೆಟ್‌ನಲ್ಲಿ ತಮಿಳುನಾಡು ರಾಜ್ಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಇದನ್ನು ಖಂಡಿಸಿ, ಜುಲೈ 27ರಂದು ದೆಹಲಿಯಲ್ಲಿ ನಿಗದಿಯಾಗಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ನೀತಿ ಆಯೋಗದ ಸಭೆಯನ್ನು ಬಹಿಷ್ಕರಿಸುತ್ತೇನೆ

ಎಂ.ಕೆ. ಸ್ಟಾಲಿನ್, ತಮಿಳುನಾಡು ಮುಖ್ಯಮಂತ್ರಿ

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಮಂಡಿಸಿದ ಬಜೆಟ್ ದೇಶದಲ್ಲಿ ಹಣಕಾಸು ಮತ್ತು ರಾಜಕೀಯ ದಿವಾಳಿತನವನ್ನು ಪ್ರತಿಬಿಂಬಿಸಿದೆ. 'ಆಂಧ್ರ– ಬಿಹಾರ ಬಜೆಟ್' ಇದಾಗಿದೆ

ಅಭಿಷೇಕ್ ಬ್ಯಾನರ್ಜಿ, ಟಿಎಂಸಿ ಪ್ರಧಾನ ಕಾರ್ಯದರ್ಶಿ

ಸರ್ಕಾರವನ್ನು ಉಳಿಸಿಕೊಳ್ಳಲಿಕ್ಕಾಗಿ ಬಿಜೆಪಿಯು ಬಿಹಾರ ಮತ್ತು ಆಂಧ್ರಪ್ರದೇಶಕ್ಕೆ ಬಜೆಟ್‌ನ ದೊಡ್ಡ ಮೊತ್ತವನ್ನು ನೀಡುತ್ತಿದೆ ಎಂಬುದನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಆದರೆ ಮಹಾರಾಷ್ಟ್ರದ ತಪ್ಪೇನು? ನಾವು ಅತಿದೊಡ್ಡ ತೆರಿಗೆ ಪಾವತಿದಾರರಲ್ಲವೇ? ನಾವು ಕೊಟ್ಟ ಕೊಡುಗೆಗೆ ಸಿಕ್ಕಿದ್ದೇನು? ಬಿಜೆಪಿಯು ಮಹಾರಾಷ್ಟ್ರವನ್ನು ಏಕೆ ದ್ವೇಷಿಸುತ್ತಿದೆ ಮತ್ತು ಅವಮಾನಿಸುತ್ತಿದೆ

ಆದಿತ್ಯ ಠಾಕ್ರೆ, ಶಿವಸೇನಾ ನಾಯಕ (ಉದ್ಧವ್ ಬಣ)

ಮೂಲಸೌಕರ್ಯ ಅಭಿವೃದ್ಧಿ ಮತ್ತು ಆರ್ಥಿಕ ಅವಕಾಶಗಳ ಸೃಷ್ಟಿ

ಪೂರ್ವ– ಈಶಾನ್ಯ ರಾಜ್ಯಗಳ ಅಭಿವೃದ್ಧಿಗೆ 'ಪೂರ್ವೋದಯ'

ಆದ್ಯತೆ 3

₹2.66 ಲಕ್ಷ ಕೋಟಿ
ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಮೀಸಲಿಟ್ಟಿರುವ ಹಣ

3 ಕೋಟಿ
ಪಿ.ಎಂ ಆವಾಸ್ ಅಡಿಯಲ್ಲಿ ನಿರ್ಮಿಸಲಾಗುವ ಹೆಚ್ಚುವರಿ ಮನೆಗಳು

₹3 ಲಕ್ಷ ಕೋಟಿ
ಹೆಣ್ಣು ಮಕ್ಕಳ ಯೋಜನೆಗೆ ಮೀಸಲಿಟ್ಟಿರುವ ಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಪೂರ್ವ ಭಾಗದ ರಾಜ್ಯಗಳು ಹಾಗೂ ಈಶಾನ್ಯ ಭಾಗದ ರಾಜ್ಯಗಳ ಅಭಿವೃದ್ಧಿಗೆ ಹಲವು ಕ್ರಮಗಳನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಪೂರ್ವ ಭಾಗದ ರಾಜ್ಯಗಳಾದ ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳ, ಒಡಿಶಾ ಅಭಿವೃದ್ಧಿಗೆ 'ಪೂರ್ವೋದಯ' ಹೆಸರಿನಲ್ಲಿ ಯೋಜನೆಯೊಂದನ್ನು ಸಿದ್ಧಪಡಿಸುವುದಾಗಿ ಬಜೆಟ್‌ನಲ್ಲಿ ಹೇಳಲಾಗಿದೆ. ಈ ಯೋಜನೆಯ ವ್ಯಾಪ್ತಿಗೆ ದಕ್ಷಿಣದ ಆಂಧ್ರಪ್ರದೇಶವನ್ನು ಕೂಡ ಸೇರಿಸಲಾಗಿದೆ.

ಈ ಯೋಜನೆಯು ಮಾನವ ಸಂಪನ್ಮೂಲ ಅಭಿವೃದ್ಧಿ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಆರ್ಥಿಕ ಅವಕಾಶಗಳ ಸೃಷ್ಟಿಯ ಆಯಾಮಗಳನ್ನು ಒಳಗೊಂಡಿದೆ. ಈ ಕ್ರಮಗಳ ಮೂಲಕ ಈ ರಾಜ್ಯಗಳು ವಿಕಸಿತ ಭಾರತ ನಿರ್ಮಾಣದ ಚಾಲಕ ಶಕ್ತಿಗಳಾಗುವಂತೆ ಮಾಡುವ ಉದ್ದೇಶ ಇದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಅಮೃತಸರ–ಕೋಲ್ಕತ್ತ ಕೈಗಾರಿಕಾ ಕಾರಿಡಾರ್‌ನಲ್ಲಿ ಗಯಾದಲ್ಲಿ ಕೈಗಾರಿಕಾ ನೋಡ್ ಅಭಿವೃದ್ಧಿಪಡಿಸಲು ನೆರವು ಒದಗಿಸಲಾಗುತ್ತದೆ. ಈ ಕೈಗಾರಿಕಾ ಕಾರಿಡಾರ್ ದೇಶದ ಪೂರ್ವ ಭಾಗದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ವೇಗ ನೀಡಲಿದೆ. ಅಲ್ಲದೆ, ದೇಶದ ಸಾಂಸ್ಕೃತಿಕ ಮಹತ್ವದ ಪುರಾತನ ಕೇಂದ್ರಗಳನ್ನು ಆಧುನಿಕ ಅರ್ಥ ವ್ಯವಸ್ಥೆಯ ಕೇಂದ್ರಗಳನ್ನಾಗಿ ಅಭಿವೃದ್ಧಿಪಡಿಸಲು ಗಯಾದಲ್ಲಿನ ಕೈಗಾರಿಕಾ ನೋಡ್ ಒಂದು ಮಾದರಿಯಾಗಿ ಒದಗಿಬರಲಿದೆ ಎಂದು ನಿರ್ಮಲಾ ಅವರು ಹೇಳಿದ್ದಾರೆ.

ವಿದ್ಯುತ್ ಉತ್ಪಾದನಾ ಘಟಕ

ಬಿಹಾರದ ಪೀರಪೈಂತಿಯಲ್ಲಿ 2,400 ಮೆಗಾ ವಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಘಟಕವನ್ನು ₹21,400 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತದೆ. ಬಿಹಾರದಲ್ಲಿ ಹೊಸ ವಿಮಾನ ನಿಲ್ದಾಣಗಳು, ವೈದ್ಯಕೀಯ ಕಾಲೇಜುಗಳು ಮತ್ತು ಕ್ರೀಡಾ ಮೂಲಸೌಕರ್ಯಗಳು ತಲೆ ಎತ್ತಲಿವೆ.

ಮಹಿಳಾ ಕೇಂದ್ರಿತ ಅಭಿವೃದ್ಧಿ

ಅಭಿವೃದ್ಧಿಯು ಮಹಿಳೆಯರನ್ನು ಕೇಂದ್ರೀಕರಿಸಿ ಇರಬೇಕು ಎಂಬ ಉದ್ದೇಶದಿಂದ, ಮಹಿಳೆಯರು ಹಾಗೂ ಹೆಣ್ಣುಮಕ್ಕಳಿಗೆ ನೆರವಾಗುವ ಯೋಜನೆಗಳಿಗೆ ಬಜೆಟ್‌ನಲ್ಲಿ ₹3 ಲಕ್ಷ ಕೋಟಿಗಿಂತ ಹೆಚ್ಚಿನ ಮೊತ್ತವನ್ನು ಮೀಸಲಿರಿಸಲಾಗಿದೆ ಎಂದು ತಿಳಿಸಲಾಗಿದೆ.

ಈ ರೀತಿ ಮಾಡಿರುವುದು, ಆರ್ಥಿಕ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರವು ಹೆಚ್ಚಾಗಬೇಕು ಎಂಬ ವಿಚಾರದಲ್ಲಿ ಸರ್ಕಾರ ಹೊಂದಿರುವ ಬದ್ಧತೆಯನ್ನು ತೋರಿಸುತ್ತಿದೆ ಎಂದು ಬಜೆಟ್‌ನಲ್ಲಿ ಹೇಳಲಾಗಿದೆ.

- ಪಟ್ನಾ – ಪೂರ್ಣಿಯಾ ಎಕ್ಸ್‌ಪ್ರೆಸ್‌ವೇ
- ಬಕ್ಸರ್–ಭಾಗಲಪುರ ಎಕ್ಸ್‌ಪ್ರೆಸ್‌ವೇ
- ಬೋಧಗಯಾ, ರಾಜಗೀರ್, ವೈಶಾಲಿ ಮತ್ತು ದರ್ಭಾಂಗಾ ಮಾರ್ಗ
- ಬಕ್ಸರ್‌ನಲ್ಲಿ ಗಂಗಾ ನದಿಗೆ ಎರಡು ಪಥಗಳ ಹೆಚ್ಚುವರಿ ಸೇತುವೆ ನಿರ್ಮಾಣ

ಆಂಧ್ರಪ್ರದೇಶಕ್ಕೆ ವಿಶೇಷ ಆರ್ಥಿಕ ನೆರವು

ಆಂಧ್ರಪ್ರದೇಶ ರಾಜ್ಯಕ್ಕೆ ರಾಜಧಾನಿಯನ್ನು ಕಟ್ಟಿಕೊಳ್ಳಲು ಅಗತ್ಯವಿರುವ ಬಂಡವಾಳ ಒದಗಿಸಲು, ಬೇರೆ ಬೇರೆ ಸಂಸ್ಥೆಗಳ ಮೂಲಕ ವಿಶೇಷ ಹಣಕಾಸಿನ ನೆರವು ಪಡೆದುಕೊಳ್ಳಲು ಅನುಕೂಲ ಮಾಡಿಕೊಡಲಾಗುತ್ತದೆ ಎಂದು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ.

ಹಾಲಿ ಹಣಕಾಸು ವರ್ಷದಲ್ಲಿ ಈ ಉದ್ದೇಶಕ್ಕೆ ₹15 ಸಾವಿರ ಕೋಟಿ ಒಗ್ಗೂಡಿಸಿಕೊಡಲಾಗುತ್ತದೆ, ಮುಂದಿನ ವರ್ಷಗಳಲ್ಲಿ ಇನ್ನಷ್ಟು ನೆರವು ಒದಗಿಸಲಾಗುತ್ತದೆ ಎಂದು ಘೋಷಿಸಲಾಗಿದೆ.

ಪೋಲಾವರಂ ನೀರಾವರಿ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ನೆರವು ಒದಗಿಸಲಾಗುತ್ತದೆ. ವಿಶಾಖಪಟ್ಟಣ–ಚೆನ್ನೈ ಕೈಗಾರಿಕಾ ಕಾರಿಡಾರ್‌ನ ಕೊಪ್ಪರ್ತಿ ನೋಡ್‌ನಲ್ಲಿ ಮೂಲಸೌಕರ್ಯ ನಿರ್ಮಾಣಕ್ಕೆ, ಹೈದರಾಬಾದ್–ಬೆಂಗಳೂರು ಕೈಗಾರಿಕಾ ಕಾರಿಡಾರ್‌ನ ಒರವಕಲ್ ನೋಡ್‌ನಲ್ಲಿ ಮೂಲಸೌಕರ್ಯ ನಿರ್ಮಾಣಕ್ಕೆ ನೆರವು ಒದಗಿಸಲಾಗುತ್ತದೆ.

ಅಭಿವೃದ್ಧಿಯಲ್ಲಿ ಹಿಂದುಳಿದಿರುವ ರಾಯಲಸೀಮಾ, ಪ್ರಕಾಶಂ ಮತ್ತು ಆಂಧ್ರಪ್ರದೇಶದ ಉತ್ತರ ಕರಾವಳಿಯ ಅಭಿವೃದ್ಧಿಗೆ ಅನುದಾನ ಒದಗಿಸಲಾಗುತ್ತದೆ.

ಬುಡಕಟ್ಟು ಸಮುದಾಯಗಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವ ಉದ್ದೇಶದಿಂದ ಪ್ರಧಾನ ಮಂತ್ರಿ ಜನಜಾತೀಯ ಉನ್ನತ ಗ್ರಾಮ ಅಭಿಯಾನವನ್ನು ಕೇಂದ್ರ ಸರ್ಕಾರವು ಆರಂಭಿಸಲಿದೆ. ಈ ಯೋಜನೆಯ ವ್ಯಾಪ್ತಿಗೆ 63 ಸಾವಿರ ಗ್ರಾಮಗಳು ಬರಲಿವೆ, ಯೋಜನೆಯಿಂದಾಗಿ ಬುಡಕಟ್ಟು ಸಮುದಾಯಗಳ ಐದು ಕೋಟಿ ಮಂದಿಗೆ ಅನುಕೂಲ ಆಗಲಿದೆ.

ಈಶಾನ್ಯ ರಾಜ್ಯಗಳಲ್ಲಿ ಬ್ಯಾಂಕ್ ಶಾಖೆಗಳು: ಬ್ಯಾಂಕಿಂಗ್ ಸೇವೆಗಳ ವ್ಯಾಪ್ತಿಯನ್ನು ಹಿಗ್ಗಿಸುವ ಉದ್ದೇಶದಿಂದ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್‌ನ 100 ಶಾಖೆಗಳನ್ನು ಈಶಾನ್ಯ ಭಾಗಗಳಲ್ಲಿ ಹೊಸದಾಗಿ ಆರಂಭಿಸಲಾಗುತ್ತದೆ.

ಖೇಲೊ ಇಂಡಿಯಾಕ್ಕೆ ಮತ್ತೊಮ್ಮೆ ಸಿಂಹಪಾಲು

ನವದೆಹಲಿ (ಪಿಟಿಐ): ಕೇಂದ್ರ ಬಜೆಟ್‌ನಲ್ಲಿ ಕ್ರೀಡಾ ಸಚಿವಾಲಯಕ್ಕೆ ನಿಗದಿಪಡಿಸಿದ ಮೊತ್ತದಲ್ಲಿ ಖೇಲೊ ಇಂಡಿಯಾ ಯೋಜನೆಗೆ ಸಿಂಹಪಾಲು ದೊರಕಿದೆ. ತಳಮಟ್ಟದಲ್ಲಿ ಕ್ರೀಡೆಯನ್ನು ಪ್ರೋತ್ಸಾಹಿಸಲು ಈ ಯೋಜನೆ ಜಾರಿಗೊಳಿಸಲಾಗಿದೆ.

ಬಜೆಟ್‌ನಲ್ಲಿ ಕ್ರೀಡಾ ಸಚಿವಾಲಯಕ್ಕೆ ₹3,442 ಕೋಟಿ ನಿಗದಿಪಡಿಸಿದ್ದು, ಇದರಲ್ಲಿ ₹900 ಕೋಟಿ ಮೊತ್ತ ಖೇಲೊ ಇಂಡಿಯಾಕ್ಕೆ ಹಂಚಿಕೆ ಮಾಡಲಾಗಿದೆ. ಕಳೆದ ಹಣಕಾಸು ವರ್ಷದಲ್ಲಿ ಈ ಯೋಜನೆಗೆ ₹880 ಕೋಟಿ ನೀಡಲಾಗಿತ್ತು.

ಒಲಿಂಪಿಕ್ಸ್ ಹತ್ತಿರದಲ್ಲೇ ಇರುವುದರಿಂದ ಮತ್ತು ಮುಂದಿನ ಪ್ರಮುಖ ಕ್ರೀಡಾಕೂಟಗಳಿಗೆ (ಏಷ್ಯನ್ ಗೇಮ್ಸ್ ಮತ್ತು ಕಾಮನ್ವೆಲ್ತ್ ಗೇಮ್ಸ್) ಎರಡು ವರ್ಷಗಳು ಇರುವ ಕಾರಣ ಸಚಿವಾಲಯಕ್ಕೆ ಹಂಚಿಕೆ ಮಾಡಿರುವ ಮೊತ್ತದಲ್ಲಿ ಅಲ್ಪ ಏರಿಕೆಯಷ್ಟೇ ಆಗಿದೆ. ಕ್ರೀಡಾ ಸಚಿವಾಲಯಕ್ಕೆ ಈ ಬಾರಿ ನಿಗದಿಪಡಿಸಿದ ಮೊತ್ತ ಕಳೆದ ಬಾರಿಗಿಂತ ₹45.36 ಕೋಟಿ ಹೆಚ್ಚು.

ಖೇಲೊ ಇಂಡಿಯಾ ಯೋಜನೆಗೆ ಕೇಂದ್ರ ಸರ್ಕಾರ ಇತ್ತೀಚಿನ ವರ್ಷಗಳಲ್ಲಿ ಅತಿ ಹೆಚ್ಚು ಮೊತ್ತ ನೀಡುತ್ತ ಬಂದಿದೆ.

ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳಿಗೆ ನೀಡಲಾಗುವ ನೆರವಿನಲ್ಲಿ ₹15 ಕೋಟಿ ಹೆಚ್ಚಳವಾಗಿದೆ. 2023–24ರಲ್ಲಿ ₹325 ಕೋಟಿ ಹಂಚಿಕೆ ಮಾಡಿದ್ದರೆ, ಈ ಸಲ ₹340 ಕೋಟಿ ನಿಗದಿಪಡಿಸಲಾಗಿದೆ.

ತನಗೆ ವಹಿಸಿರುವ ಕ್ರೀಡಾಂಗಣಗಳನ್ನು ಮತ್ತು 'ಟಾಪ್ಸ್' (ಟಾರ್ಗೆಟ್ ಒಲಿಂಪಿಕ್ಸ್ ಪೋಡಿಯಂ ಸ್ಕೀಮ್) ಯೋಜನೆಯನ್ನು ನಿರ್ವಹಿಸುವ ಭಾರತ ಕ್ರೀಡಾ ಪ್ರಾಧಿಕಾರಕ್ಕೆ ನಿಗದಿಪಡಿಸಿರುವ ಮೊತ್ತದಲ್ಲೂ ₹28 ಕೋಟಿ ಏರಿಕೆ ಆಗಿದೆ. ಈ ಸಲ ₹822.60 ಕೋಟಿ (ಕಳೆದ ಸಲ ₹795.77 ಕೋಟಿ) ಹಂಚಿಕೆ ಮಾಡಲಾಗಿದೆ.

ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆತಡೆ ಘಟಕ (ನಾಡಾ) ಮತ್ತು ರಾಷ್ಟ್ರೀಯ ಡೋಪ್ ಟೆಸ್ಟಿಂಗ್ ಲ್ಯಾಬೊರೇಟರಿಗೆ (ಎನ್‌ಡಿಟಿಎಲ್)ಈ ಬಾರಿ 22.30 ಕೋಟಿ (ಕಳೆದ ಬಾರಿ ₹21.73 ಕೋಟಿ) ಹಂಚಿಕೆ ಮಾಡಲಾಗಿದೆ.

ಪ್ರಗತಿಯತ್ತ ದಾಪುಗಾಲಿಗೆ ಮೂಲಸೌಕರ್ಯಕ್ಕೆ ಮಹತ್ವ



ವಿಶ್ಲೇಷಣೆ

ಎಸ್.ಆರ್.ಕೇಶವ

ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸಲು ಭಾರತವು ಉತ್ಪಾದನಾ ವಲಯವನ್ನು ಉತ್ತೇಜಿಸಬೇಕಾಗಿದೆ. ಉತ್ಪಾದನಾ ವಲಯವು ಕೇವಲ ಶೇ 11.4ರಷ್ಟು ಉದ್ಯೋಗವನ್ನು ಒದಗಿಸುತ್ತದೆ ಎಂಬುದನ್ನು ಆರ್ಥಿಕ ಸಮೀಕ್ಷೆ–2024 ತಿಳಿಸುತ್ತದೆ. ಕೃಷಿಯ ಮೇಲಿನ ಹೆಚ್ಚಿನ ಒತ್ತಡವನ್ನು ನಿವಾರಿಸಲು ಕೈಗಾರಿಕಾ ವಲಯವು ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸಬೇಕಾಗುತ್ತದೆ. ಹಾಗಾಗಿ ಈ ಆಯವ್ಯಯದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಆದ್ದರಿಂದ, ಕೈಗಾರಿಕಾ ಪಾರ್ಕ್‌ಗಳನ್ನು ಬಜೆಟ್‌ನಲ್ಲಿ ಪ್ರಸ್ತಾವಿಸಲಾಗಿದೆ. ನಗರ ಯೋಜನೆಗಳನ್ನು ಉತ್ತಮವಾಗಿ ಬಳಸುವ ಮೂಲಕ ರಾಜ್ಯಗಳು ಮತ್ತು ಖಾಸಗಿ ವಲಯದ ಸಹಭಾಗಿತ್ವದಲ್ಲಿ ಸರಿಸುಮಾರು 100 ನಗರಗಳಲ್ಲಿ ಸಂಪೂರ್ಣ ಮೂಲಸೌಕರ್ಯದೊಂದಿಗೆ ಹೂಡಿಕೆಗೆ ಸಿದ್ಧವಾಗಿರುವ 'ಪ್ಲಗ್ ಆ್ಯಂಡ್ ಪ್ಲೇ' ಕೈಗಾರಿಕಾ ಪಾರ್ಕ್‌ಗಳ ಅಭಿವೃದ್ಧಿ ಮಾಡಲಾಗುತ್ತದೆ. ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಕಾರ್ಯಕ್ರಮದಡಿ 12 ಕೈಗಾರಿಕಾ ಪಾರ್ಕ್‌ಗಳನ್ನು ಮಂಜೂರು ಮಾಡಲಾಗುತ್ತದೆ.

ಎಂಎಸ್‌ಎಂಇಗಳಿಗೆ ಪ್ರೋತ್ಸಾಹ: ಅತಿಸಣ್ಣ ಮತ್ತು ಸಣ್ಣ ಉದ್ಯಮಗಳಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಪ್ರೋತ್ಸಾಹ ನೀಡುವ ಜೊತೆಗೆ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗಾರ್ಹತೆಯನ್ನು ಹೆಚ್ಚಿಸುವ ಕ್ರಮಗಳನ್ನು ಆಯವ್ಯಯದಲ್ಲಿ ಪ್ರಸ್ತಾವ ಮಾಡಲಾಗಿದೆ. ಎಂಎಸ್‌ಎಂಇಗಳಿಗೆ ಸಾಲ ಖಾತರಿ ಯೋಜನೆಯನ್ನು ಕೇಂದ್ರ ಆಯವ್ಯಯ 2024-25ರಲ್ಲಿ ಘೋಷಿಸಲಾಗಿದೆ. ಇದರ ಜೊತೆಗೆ ಮೇಲಾಧಾರವಿಲ್ಲದ (ಅಡಮಾನವಿಲ್ಲದ) ಸಾಲ ಮಾದರಿಗಳನ್ನು ಅಭಿವೃದ್ಧಿಪಡಿಸಲು ಬ್ಯಾಂಕುಗಳನ್ನು ಪ್ರೋತ್ಸಾಹಿಸಲಾಗುತ್ತದೆ.

ಮುದ್ರಾ ಸಾಲದ ಮಿತಿಯನ್ನು ₹10 ಲಕ್ಷದಿಂದ ₹20 ಲಕ್ಷಕ್ಕೆ ಹೆಚ್ಚಿಸಲಾಗಿದೆ ಮತ್ತು ಟಿಆರ್‌ಇಡಿಎಸ್ (TReDS) ವೇದಿಕೆಯಲ್ಲಿ ಖರೀದಿದಾರರಿಗೆ ಕಡ್ಡಾಯ ಆನ್‌ಬೋರ್ಡಿಂಗ್ ಮಿತಿಯನ್ನು ₹500 ಕೋಟಿಯಿಂದ ₹250 ಕೋಟಿಗೆ ಇಳಿಸಲಾಗಿದೆ. ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯ ಅಡಿಯಲ್ಲಿ ಎಂಎಸ್‌ಎಂಇ ವಲಯದಲ್ಲಿ 50 ಬಹು-ಉತ್ಪನ್ನ ಆಹಾರ-ವಿಕಿರಣ (ಆಹಾರ ವಸ್ತುಗಳು ಹೆಚ್ಚು ಕಾಲ ಕೆಡದಂತೆ ಮಾಡುವ ಪ್ರಕ್ರಿಯೆ) ಘಟಕಗಳು ಮತ್ತು ಇ-ಕಾಮರ್ಸ್ ರಫ್ತು ಕೇಂದ್ರಗಳನ್ನು ಸ್ಥಾಪಿಸಲು ಆರ್ಥಿಕ ನೆರವು ನೀಡಲು ಪ್ರಸ್ತಾವಿಸಲಾಗಿದೆ.

ಎನ್‌ಎಬಿಎಲ್ ಮಾನ್ಯತೆಯೊಂದಿಗೆ 100 ಆಹಾರ ಗುಣಮಟ್ಟ ಮತ್ತು ಸುರಕ್ಷತಾ ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಲು ನೆರವು ನೀಡಲಾಗುತ್ತದೆ.

ಹೊಸ ಉದ್ಯೋಗಿಗಳಿಗೆ ನೇರ ನಗದು ವರ್ಗಾವಣೆ ವ್ಯವಸ್ಥೆ ಮತ್ತು ಅದಕ್ಕೆ ಪೂರಕವಾಗಿ ಉದ್ಯೋಗದಾತರಿಗೆ ಕೆಲವು ಪ್ರಯೋಜನಗಳನ್ನು ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದ್ದು, ಇದು ಹೆಚ್ಚುವರಿ ನೇಮಕಾತಿಯನ್ನು ಉತ್ತೇಜಿಸುತ್ತದೆ. ಹೊಸ ಉದ್ಯೋಗಿಗಳು ಒಂದು ತಿಂಗಳ ವೇತನಕ್ಕೆ ಸಮಾನವಾದ ವೇತನವನ್ನು ಗರಿಷ್ಠ ₹15,000ವರೆಗೆ ಪಡೆಯುತ್ತಾರೆ, ಇದನ್ನು ಮೂರು ಕಂತುಗಳಲ್ಲಿ ನೀಡಲಾಗುತ್ತದೆ. ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆಗೆ (ಇಪಿಎಫ್‌ಒ) ಪ್ರತಿ ಹೆಚ್ಚುವರಿ ಉದ್ಯೋಗಿಗೆ ಅವರ ಇಪಿಎಫ್‌ಒ ಕೊಡುಗೆಗಾಗಿ 2 ವರ್ಷಗಳವರೆಗೆ ಉದ್ಯೋಗದಾತರಿಗೆ ತಿಂಗಳಿಗೆ ₹3,000ವರೆಗೆ ಮರುಪಾವತಿ ಮಾಡಲಾಗುತ್ತದೆ. ಇದರಿಂದ 2.1 ಲಕ್ಷ ಯುವಕರು ಪ್ರಯೋಜನ ಪಡೆಯುವ ನಿರೀಕ್ಷೆಯಿದೆ. ಇದು ಉದ್ಯೋಗ ಸೃಷ್ಟಿಗೆ ಸಹಾಯ ಮಾಡುತ್ತದೆ, ಜೊತೆಗೆ ರಫ್ತು ಹೆಚ್ಚು ಮಾಡಲು ಉತ್ತೇಜನ ನೀಡುತ್ತದೆ. ಈ ಘಟಕಗಳು ಬಾಹ್ಯ ವ್ಯಾಪಾರದ ಸುಮಾರು 40 ಪ್ರತಿಶತಕ್ಕೆ ಕೊಡುಗೆ ನೀಡುತ್ತವೆ.

ನಗರಾಭಿವೃದ್ಧಿ: ಈ ಬಜೆಟ್‌ನ ಪ್ರಮುಖ ಕೇಂದ್ರ ಬಿಂದುಗಳಲ್ಲಿ ನಗರಾಭಿವೃದ್ಧಿಯು ಒಂದು. 2023ರಲ್ಲಿ, ವಿಶ್ವ ಬ್ಯಾಂಕ್ ಪ್ರಕಾರ, ದೇಶದ ಜನಸಂಖ್ಯೆಯ ಶೇ 36ರಷ್ಟು ಜನರು ನಗರಗಳಲ್ಲಿ ವಾಸಿಸುತ್ತಿದ್ದಾರೆ. ಆದರೆ ವಸತಿ, ಮೂಲಸೌಕರ್ಯ, ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ಹಲವು ಸಮಸ್ಯೆಗಳಿವೆ. ಆದ್ದರಿಂದ ಬಜೆಟ್ 2024-25 ಅವುಗಳನ್ನು ಪರಿಹರಿಸಲು ಪ್ರಯತ್ನಿಸುತ್ತದೆ. ಇದು ನಗರಾಭಿವೃದ್ಧಿಗೆ ಒಂದು ಬಹುಮುಖಿ ವಿಧಾನವಾಗಿದೆ. ಇದು ನಗರ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳು, ಕೈಗಾರಿಕಾ ಕಾರ್ಮಿಕರು ಮತ್ತು ಒಟ್ಟಾರೆ ನಗರ ಮೂಲಸೌಕರ್ಯಗಳಿಗೆ ಪ್ರಯೋಜನವನ್ನು ನೀಡುತ್ತದೆ.

ಬೆಳವಣಿಗೆಯ ಕೇಂದ್ರವಾಗಿ ನಗರಗಳು: ಆರ್ಥಿಕ ಮತ್ತು ಸಾರಿಗೆ ಯೋಜನೆ ಮತ್ತು ನಗರ ಪ್ರದೇಶಗಳ ಸುತ್ತಲಿನ ಪ್ರದೇಶಗಳ ಕ್ರಮಬದ್ಧ ಅಭಿವೃದ್ಧಿಯ ಮೂಲಕ 'ನಗರಗಳನ್ನು ಬೆಳವಣಿಗೆಯ ಕೇಂದ್ರ'ಗಳಾಗಿ ಅಭಿವೃದ್ಧಿಪಡಿಸಲು ಸರ್ಕಾರವು ರಾಜ್ಯಗಳೊಂದಿಗೆ ಸಹಕರಿಸಲಿದೆ. 30 ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ 14 ದೊಡ್ಡ ನಗರಗಳಿಗೆ ಸಾರಿಗೆ ಆಧಾರಿತ ಅಭಿವೃದ್ಧಿಯ ಯೋಜನೆಗಳನ್ನು ಬಜೆಟ್ ಘೋಷಿಸಿದೆ. ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳು ಮತ್ತು ಅಭಿವೃದ್ಧಿ ಬ್ಯಾಂಕ್‌ಗಳ ಸಹಭಾಗಿತ್ವದಲ್ಲಿ 100 ದೊಡ್ಡ ನಗರಗಳಿಗೆ ನೀರು ಸರಬರಾಜು, ಒಳಚರಂಡಿ, ಸಂಸ್ಕರಣೆ ಮತ್ತು ಘನ ತ್ಯಾಜ್ಯ ನಿರ್ವಹಣೆ ಯೋಜನೆಗಳನ್ನು ಉತ್ತೇಜಿಸಲಿದೆ ಎಂದು ಕೂಡ ಬಜೆಟ್‌ನಲ್ಲಿ ಹೇಳಲಾಗಿದೆ.

ಮೂಲಸೌಕರ್ಯ ಅಭಿವೃದ್ಧಿ: ಮೂಲಸೌಕರ್ಯ ಅಭಿವೃದ್ಧಿಯು ಆರ್ಥಿಕ ಅಭಿವೃದ್ಧಿಗೆ ಕಾರಣವಾಗುತ್ತದೆ. ಆದ್ದರಿಂದ ಮುಂದಿನ 5 ವರ್ಷಗಳಲ್ಲಿ ಇತರ ಆದ್ಯತೆ, ಹಣಕಾಸಿನ ಬಲವರ್ಧನೆಯ ಅಗತ್ಯಗಳೊಂದಿಗೆ ಮೂಲಭೂತ ಸೌಕರ್ಯಗಳಿಗೆ ಬಲವಾದ ಹಣಕಾಸಿನ ಬೆಂಬಲವನ್ನು ಬಜೆಟ್ ಪುನರುಚ್ಚರಿಸಿದೆ. ಈ ವರ್ಷ ಬಂಡವಾಳ ವೆಚ್ಚಕ್ಕಾಗಿ ₹11,11,111 ಕೋಟಿ ಒದಗಿಸಲಾಗಿದೆ.

25,000 ಗ್ರಾಮೀಣ ವಾಸಸ್ಥಳಗಳಿಗೆ ಸರ್ವಋತು ಸಂಪರ್ಕವನ್ನು ಒದಗಿಸಲು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ 4ನೇ ಹಂತವನ್ನು ಪ್ರಾರಂಭಿಸಲಾಗುವುದು ಎಂಬುದು ಬಜೆಟ್ 2024-25 ರಲ್ಲಿ ಘೋಷಿಸಲಾದ ಮತ್ತೊಂದು ಸ್ವಾಗತಾರ್ಹ ಹೆಜ್ಜೆ.

ಲೇಖಕ: ಅರ್ಥಶಾಸ್ತ್ರದ ಪ್ರಾಧ್ಯಾಪಕ, ಬೆಂಗಳೂರು ವಿಶ್ವವಿದ್ಯಾಲಯ

ಮಹಿಳೆಯರಿಗೆ ಕಡಿಮೆ ಮುದ್ರಾಂಕ ಶುಲ್ಕ

ಅತಿ ಹೆಚ್ಚು ಮುದ್ರಾಂಕ ಶುಲ್ಕ ವಿಧಿಸುತ್ತಿರುವ ರಾಜ್ಯಗಳು ಕಡಿಮೆ ಮುದ್ರಾಂಕ ಶುಲ್ಕ ವಿಧಿಸುವುದಕ್ಕೆ ಉತ್ತೇಜನ ನೀಡಲಾಗುವುದು. ಜೊತೆಗೆ, ಮಹಿಳೆಯರು ಖರೀದಿಸುವ ಆಸ್ತಿಗಳಿಗೆ ಕಡಿಮೆ ಮುದ್ರಾಂಕ ಶುಲ್ಕ ವಿಧಿಸುವ ರಾಜ್ಯಗಳಿಗೂ ಉತ್ತೇಜನ ನೀಡಲಾಗುವುದು ಎಂದು ಕೇಂದ್ರ ಸರ್ಕಾರ ಘೋಷಿಸಿದೆ.

- 30 ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ 14 ನಗರಗಳಲ್ಲಿ ಸಾರಿಗೆ ಸಂಬಂಧಿಸಿ ಅಭಿವೃದ್ಧಿಗೆ ಯೋಜನೆ ರೂಪಿಸಲಾಗುವುದು. ಇದರ ಜಾರಿ ಹಾಗೂ ಇದಕ್ಕಾಗಿ ಹಣಕಾಸಿನ ಯೋಜನೆಯನ್ನೂ ರೂಪಿಸಲಾಗುವುದು

- ಬಾಡಿಗೆ ಮನೆಯನ್ನು ಪಡೆದುಕೊಳ್ಳಲು ಸಶಕ್ತವಾದ ಹಾಗೂ ಪಾರದರ್ಶಕವಾದ ಮಾರುಕಟ್ಟೆ ವ್ಯವಸ್ಥೆ ರೂಪಿಸಲು ನೀತಿ ಹಾಗೂ ನಿಯಮಗಳನ್ನು ರೂಪಿಸಲಾಗುವುದು
- ನಗರ ಪ್ರದೇಶಗಳಲ್ಲಿನ ಭೂ ದಾಖಲೆಗಳನ್ನು ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ಮೂಲಕ ಡಿಜಿಟಲೀಕರಣ ಮಾಡಲಾಗುವುದು. ಭೂ ದಾಖಲೆಗಳ ನಿರ್ವಹಣೆ, ಅಪ್‌ಡೇಟ್ ಹಾಗೂ ತೆರಿಗೆ ನಿರ್ವಹಣೆಗಾಗಿ ತಂತ್ರಜ್ಞಾನ ಆಧಾರಿತ ವ್ಯವಸ್ಥೆ ರೂಪಿಸಲಾಗುವುದು

₹24,931.98 ಕೋಟಿ ಸಾರಿಗೆ ಸೌಲಭ್ಯ ಮತ್ತು ಮೆಟ್ರೊ ಯೋಜನೆ

₹5,000 ಕೋಟಿ ಸ್ವಚ್ಛ ಭಾರತ ಮಿಷನ್ (ನಗರ)

₹2.2 ಲಕ್ಷ ಕೋಟಿ ನಗರಗಳಲ್ಲಿ ವಾಸಿಸುವ ಬಡವರಿಗಾಗಿ ಮನೆ ನಿರ್ಮಿಸುವ ಯೋಜನೆಗೆ ಮುಂದಿನ ಐದು ವರ್ಷಗಳಲ್ಲಿ ಕೇಂದ್ರ ಸರ್ಕಾರದ ನೆರವು

ಕೇಂದ್ರ ಬಜೆಟ್ 2024-25



‘ಇಂಧನ ಪರಿವರ್ತನೆ’ ಯೋಜನೆಗೆ ಒತ್ತು

- ಸಣ್ಣ ಮಾಡ್ಯುಲರ್ ಅಣು ವಿದ್ಯುತ್ ಸ್ಥಾವರಗಳ ಸ್ಥಾಪನೆ
- ಸುಧಾರಿತ ತಂತ್ರಜ್ಞಾನಗಳ ಸಂಶೋಧನೆಗೆ ಖಾಸಗಿ ಸಂಸ್ಥೆಗಳ ಜತೆ ಒಪ್ಪಂದ

ಆದ್ಯತೆ 6

ನವದೆಹಲಿ (ಪಿಟಿಐ): ಪಳೆಯುಳಿಕೆ ಇಂಧನ ಬಳಕೆಯನ್ನು ತಗ್ಗಿಸಿ ನವೀಕರಿಸಬಹುದಾದ ಇಂಧನ ಬಳಕೆಯನ್ನು ಉತ್ತೇಜಿಸಲು ಹಲವು ಉಪಕ್ರಮಗಳನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಭಾರತದ ‘ಇಂಧನ ಪರಿವರ್ತನಾ ಯೋಜನೆ’ಯು ಸಣ್ಣ ಮಾಡ್ಯುಲರ್ ಅಣು ವಿದ್ಯುತ್ ಸ್ಥಾವರಗಳು (ಎಸ್‌ಎಂಆರ್), ‘ಪಂಪ್ಡ್ ಸ್ಟೋರೇಜ್’ ಯೋಜನೆಗಳು ಮತ್ತು ಅಧಿಕ ಸಾಮರ್ಥ್ಯದ ಉಷ್ಣ ವಿದ್ಯುತ್ ಸ್ಥಾವರಗಳನ್ನು ಅಭಿವೃದ್ಧಿಪಡಿಸುವುದರ ಮೇಲೆ ಕೇಂದ್ರೀಕೃತವಾಗಿರಲಿದೆ ಎಂದು ಸರ್ಕಾರ ಪ್ರಕಟಿಸಿದೆ.

ಭಾರತದಲ್ಲಿ ಅಣು ವಿದ್ಯುತ್ ಬಳಕೆಯ ಪಾಲನ್ನು ಹೆಚ್ಚಿಸುವುದಕ್ಕಾಗಿ ಸುಧಾರಿತ ತಂತ್ರಜ್ಞಾನಗಳ ಕುರಿತು ಸಂಶೋಧನೆ ನಡೆಸಲು ಸರ್ಕಾರವು ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ ಸಣ್ಣ ಮಾಡ್ಯುಲರ್ ರಿಯಾಕ್ಟರ್‌ಗಳನ್ನು ಅಭಿವೃದ್ಧಿಪಡಿಸಲಿದೆ.

‘ಹಡಗು, ವಿಮಾನಯಾನ, ಕಬ್ಬಿಣ ಮತ್ತು ಉಕ್ಕು ಹಾಗೂ ರಾಸಾಯನಿಕಗಳನ್ನು ತಯಾರಿಸುವ ಕೈಗಾರಿಕೆಗಳು ಹೆಚ್ಚಿನ ಪ್ರಮಾಣದಲ್ಲಿ ಇಂಗಾಲ ಹೊರಸೂಸುತ್ತಿದ್ದು, ಆ ಪ್ರಮಾಣವನ್ನು ತಗ್ಗಿಸಲು ಅಗತ್ಯ ಮಾರ್ಗಸೂಚಿಯನ್ನು ಸಿದ್ಧಪಡಿಸಲಾಗುವುದು’ ಎಂದು ನಿರ್ಮಲಾ ಸೀತಾರಾಮನ್ ತಿಳಿಸಿದರು.

‘ವಿಕಸಿತ ಭಾರತ’ದ ಆಶಯದ ಈಡೇರಿಕೆಗೆ ಇಂಧನ ಪರಿವರ್ತನೆಯ ಅಗತ್ಯವಿದ್ದು, ಈ ಹಾದಿಯಲ್ಲಿ ಅಣು ಶಕ್ತಿಯು ಪ್ರಮುಖ ಪಾತ್ರವನ್ನು ವಹಿಸಲಿದೆ. ಭಾರತ್ ಹೆಸರಿನಲ್ಲಿ ಸಣ್ಣ ಸ್ಥಾವರಗಳನ್ನು ಸ್ಥಾಪಿಸಲು, ಭಾರತ್ ಮಾಡ್ಯುಲರ್ ಸ್ಥಾವರಗಳ ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಪರಮಾಣು ಶಕ್ತಿಗೆ ಸಂಬಂಧಿಸಿದಂತೆ ಸಂಶೋಧನೆ ಮತ್ತು ಹೊಸ ತಂತ್ರಜ್ಞಾನಗಳ ಅಭಿವೃದ್ಧಿಗಾಗಿ ಸರ್ಕಾರವು ಖಾಸಗಿ ಸಂಸ್ಥೆಗಳ ಜತೆ ಕೈಜೋಡಿಸಲಿದೆ’ ಎಂದು ಮಾಹಿತಿ ನೀಡಿದರು.

ಎಸ್‌ಎಂಆರ್‌ಗಳು ಗಾತ್ರದಲ್ಲಿ ಸಣ್ಣದಾಗಿರಲಿದ್ದು, 300 ಮೆಗಾವಾಟ್ ಅಥವಾ ಅದಕ್ಕಿಂತ ಕಡಿಮೆ ವಿದ್ಯುತ್ ಉತ್ಪಾದಿಸುತ್ತದೆ. ಅವುಗಳನ್ನು ಅಣು ವಿದ್ಯುತ್ ಸ್ಥಾವರಗಳಿಗೆ ಟ್ರಕ್ ಅಥವಾ ರೈಲಿನಲ್ಲಿ ಸಾಗಿಸಬಹುದು.

ಏನಿದು ‘ಪಂಪ್ಡ್ ಸ್ಟೋರೇಜ್’?

ದಿನದ 24 ಗಂಟೆಯೂ ನಿರಂತರ ವಿದ್ಯುತ್ ಪೂರೈಸುವ ಉದ್ದೇಶದಿಂದ ‘ಪಂಪ್ಡ್ ಸ್ಟೋರೇಜ್’ ಯೋಜನೆ ಜಾರಿಗೊಳಿಸುವುದನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಪಂಪ್ಡ್-ಸ್ಟೋರೇಜ್ ಯೋಜನೆಯಲ್ಲಿ ನೀರನ್ನು ಎರಡು ಕಡೆ ಸಂಗ್ರಹಿಸಿಡಲಾಗುತ್ತದೆ. ಒಂದು ಸಂಗ್ರಹಾಗಾರ ಬೆಟ್ಟದ ಮೇಲೆ ಮತ್ತು ಇನ್ನೊಂದು ಕೆಳಭಾಗದಲ್ಲಿ ಇರಲಿದೆ. ಬೆಟ್ಟದ ಮೇಲಿರುವ ಸಂಗ್ರಹಾಗಾರಕ್ಕೆ ನೀರನ್ನು ಪಂಪ್ ಮಾಡಲು ಹೆಚ್ಚುವರಿ ವಿದ್ಯುತ್ ಅನ್ನು ಬಳಸಲಾಗುತ್ತದೆ. ವಿದ್ಯುತ್‌ನ ಬೇಡಿಕೆ ಹೆಚ್ಚಾದಾಗ, ನೀರನ್ನು ಟರ್ಬೈನ್ ಮೂಲಕ ಬೆಟ್ಟದ ಕೆಳಗಿರುವ ಸಂಗ್ರಹಾಗಾರಕ್ಕೆ ಹರಿಸುವ ಮೂಲಕ ವಿದ್ಯುತ್ ಉತ್ಪಾದಿಸಲಾಗುತ್ತದೆ. ಸೌರ ಮತ್ತು ಪವನ ಶಕ್ತಿಯಿಂದ ನಿರಂತರ ವಿದ್ಯುತ್ ಉತ್ಪಾದನೆ ಅಸಾಧ್ಯವಾಗಿರುವ ಕಾರಣ ‘ಪಂಪ್ಡ್ ಸ್ಟೋರೇಜ್’ ವ್ಯವಸ್ಥೆಯು ಮಹತ್ವ ಪಡೆದುಕೊಂಡಿದೆ.

ಸೂರ್ಯ ಘರ್ ಉಚಿತ ವಿದ್ಯುತ್ ಯೋಜನೆ

ಫೆಬ್ರುವರಿಯಲ್ಲಿ ಮಂಡಿಸಿದ್ದ ಮಧ್ಯಂತರ ಬಜೆಟ್‌ನಲ್ಲಿ ಮಾಡಿದ ಘೋಷಣೆಯಂತೆ ‘ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್’ ವಿದ್ಯುತ್ ಯೋಜನೆಯನ್ನು ಪ್ರಾರಂಭಿಸಲಾಗಿದೆ. ದೇಶದ 1 ಕೋಟಿ ಕುಟುಂಬಗಳು ಪ್ರತಿ ತಿಂಗಳು 300 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್‌ಅನ್ನು ಪಡೆಯಲು ಸಾಧ್ಯವಾಗುವಂತೆ ಮನೆಗಳ ಚಾವಣಿ ಮೇಲೆ ಸೌರ ವಿದ್ಯುತ್ ಫಲಕಗಳನ್ನು ಈ ಯೋಜನೆಯಡಿ ಸ್ಥಾಪಿಸಲಾಗುತ್ತದೆ. ಈ ಯೋಜನೆಗೆ ಜನರಿಂದ ಉತ್ತಮ ಸ್ಪಂದನೆ ದೊರೆತಿದೆ. ಈಗಾಗಲೇ 1.28 ಕೋಟಿ ಮಂದಿ ಹೆಸರು ನೋಂದಾಯಿಸಿದ್ದು, 14 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ.

ಅತ್ಯಾಧುನಿಕ ಉಷ್ಣ ವಿದ್ಯುತ್ ಸ್ಥಾವರ

ಅತ್ಯಾಧುನಿಕ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಗೆ ಅಗತ್ಯವಿರುವಂತಹ ತಂತ್ರಜ್ಞಾನವನ್ನು ಸ್ಥಳೀಯವಾಗಿಯೇ ಅಭಿವೃದ್ಧಿಪಡಿಸುವ ಕಾರ್ಯ ಪೂರ್ಣಗೊಂಡಿದೆ. ಎನ್‌ಟಿಪಿಸಿ ಮತ್ತ ಬಿಎಚ್‌ಇಎಲ್ ಕಂಪನಿಗಳು ಜಂಟಿ ಸಹಭಾಗಿತ್ವದಲ್ಲಿ ‘ಅಡ್ವಾನ್ಸ್ಡ್ ಅಲ್ಟ್ರಾ ಸೂಪರ್ ಕ್ರಿಟಿಕಲ್’ (ಎಯುಎಸ್‌ಸಿ) ತಂತ್ರಜ್ಞಾನವನ್ನು ಬಳಸಿಕೊಂಡು 800 ಮೆಗಾವಾಟ್ ಸಾಮರ್ಥ್ಯದ ಸ್ಥಾವರಗಳನ್ನು ಸ್ಥಾಪಿಸಲಾಗುವುದು. ಸರ್ಕಾರವೂ ಅಗತ್ಯ ಹಣಕಾಸಿನ ನೆರವು ನೀಡಲಿದೆ. ಈ ಸ್ಥಾವರಗಳಿಗೆ ಬೇಕಿರುವ ಉನ್ನತ ಗುಣಮಟ್ಟದ ಉಕ್ಕು ಮತ್ತು ಇತರ ಸುಧಾರಿತ ಲೋಹದ ಸಾಧನಗಳನ್ನು ಸ್ಥಳೀಯವಾಗಿ ಉತ್ಪಾದಿಸಲಾಗುತ್ತದೆ. ಇದು ಆರ್ಥಿಕತೆಗೆ ಪ್ರಮುಖ ಕೊಡುಗೆ ನೀಡಲಿದೆ.

ನಗರ ಪ್ರದೇಶಗಳಲ್ಲಿ ರಸ್ತೆ ಬದಿ ಫುಡ್ ಹಬ್ ನಿರ್ಮಾಣ

ನಗರಗಳ ಬಹುಮುಖಿ ಪ್ರಗತಿ ದಾರಿಗಳು ಹತ್ತು ಹಲವು

• ಸುಕೃತ ಎಸ್.

ಆದ್ಯತೆ 5

ನಗರಾಭಿವೃದ್ಧಿ ಕ್ಷೇತ್ರವನ್ನು ಈ ಬಾರಿ ಕೇಂದ್ರ ಸರ್ಕಾರ ತನ್ನ ಪ್ರಮುಖ ಆದ್ಯತೆಯನ್ನಾಗಿಸಿಕೊಂಡಿದೆ. ಇದಕ್ಕೆ ಸಂಬಂಧಿಸಿ ಹಲವು ಘೋಷಣೆಗಳನ್ನೂ ಮಾಡಿದೆ. ‘ನಗರಗಳನ್ನು ಬೆಳವಣಿಗೆಯ ಕೇಂದ್ರ’ವನ್ನಾಗಿಸುವ ಗುರಿಯನ್ನು ಸರ್ಕಾರ ಹಾಕಿಕೊಂಡಿದೆ.

ಬೆಳವಣಿಗೆ ಕೇಂದ್ರಗಳೆಂದರೆ ಏನು ಎಂಬುದನ್ನೂ ಬಜೆಟ್‌ನಲ್ಲಿ ವಿವರಿಸಲಾಗಿದೆ. ನಗರದ ಒಟ್ಟಾರೆ ಆರ್ಥಿಕ ಬೆಳವಣಿಗೆಗೆ ಒತ್ತು ನೀಡುವುದು. ಜೊತೆಗೆ, ನಗರಗಳ ಬಹುಮುಖ್ಯ ಸಮಸ್ಯೆಯಾದ ವಾಹನ ದಟ್ಟಣೆ ಸಂಬಂಧ ಯೋಜನೆ ರೂಪಿಸುವುದು ಮತ್ತು ಉತ್ತಮ ರಸ್ತೆಗಳ ನಿರ್ಮಾಣವೂ ಸೇರಿಕೊಂಡಿದೆ. ನಗರ ಯೋಜನೆಗಳನ್ನು ಬಳಸಿಕೊಂಡು ನಗರಗಳಿಗೆ ಹೊಂದಿಕೊಂಡಿರುವ ಪ್ರದೇಶಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು ಎಂದು ಕೇಂದ್ರ ಹೇಳಿದೆ.

ನಗರಗಳಲ್ಲಿ ಪಾಳು ಬಿದ್ದ ಪ್ರದೇಶಗಳನ್ನು ಸೃಜನಾತ್ಮಕವಾಗಿ ಮರು ಅಭಿವೃದ್ಧಿ ಮಾಡಲಾಗುವುದು. ನಗರದ ಯಾವುದೋ ಒಂದು ಪ್ರದೇಶದಲ್ಲಿ ಈ ಹಿಂದೆ ಕಾರ್ಖಾನೆಗಳು ಇದ್ದಿರಬಹುದು ಅಥವಾ ಯಾವುದೋ ಕಚೇರಿಗಳ ಕಟ್ಟಡ ಇದ್ದಿರಬಹುದು. ಇಂಥ ಪ್ರದೇಶಗಳನ್ನು ಮರು ಅಭಿವೃದ್ಧಿ ಮಾಡಲು ಯೋಜನೆ ರೂಪಿಸಲಾಗುತ್ತದೆ.

ನಗರಗಳಲ್ಲಿ ವಾಸಿಸುವ ಬಡವರಿಗಾಗಿ ಮನೆ ನಿರ್ಮಾಣ ಮಾಡುವ ಸಂಬಂಧ ಅನುದಾನಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಲಿದೆ. ಇದನ್ನು ‘ಪ್ರಧಾನಮಂತ್ರಿ ಆವಾಸ್ ಯೋಜನೆ- ನಗರ 2.0’ ಯೋಜನೆಯಡಿ ಕಾರ್ಯಗತಗೊಳಿಸಲಾಗುವುದು.

ದೇಶದಾದ್ಯಂತ ನಗರಗಳಲ್ಲಿ ವಾಸಿಸುತ್ತಿರುವ ಸುಮಾರು 1 ಕೋಟಿ ಬಡವರು ಹಾಗೂ ಮಧ್ಯಮ ವರ್ಗದವರಿಗೆ ಮನೆ ನಿರ್ಮಾಣ ಮಾಡಿಕೊಡುವ ಸಂಬಂಧ ₹10 ಲಕ್ಷ ಕೋಟಿ ಹೂಡಿಕೆ ಮಾಡಲಾಗುವುದು. ಜೊತೆಗೆ, ಕೈಗೆಟಕುವ ದರಗಳಲ್ಲಿ ಮನೆ ನಿರ್ಮಿಸಲು ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುವ ಅನುಕೂಲ ಮಾಡಿಕೊಡಲಾಗುವುದು ಎಂದೂ ಬಜೆಟ್‌ನಲ್ಲಿ ಘೋಷಿಸಲಾಗಿದೆ.

ರಸ್ತೆಬದಿ ಫುಡ್ ಹಬ್ ನಿರ್ಮಾಣ: ನಗರ ಪ್ರದೇಶಗಳಲ್ಲಿ ರಸ್ತೆ ಬದಿ ತಿಂಡಿ ತಿನ್ನುವವರ ಸಂಖ್ಯೆ ಹೆಚ್ಚಿದೆ. ಈ ಕಾರಣಕ್ಕಾಗಿ ರಸ್ತೆಬದಿ ತಿಂಡಿ ವ್ಯಾಪಾರಿಗಳಿಗೆ ಅನುಕೂಲ ಮಾಡಿಕೊಡಲು, ಒಂದು ವಾರವಿಡೀ ನಡೆಯುವ ಫುಡ್ ಹಬ್ (ಆಹಾರೋತ್ಸವ) ನಡೆಸಲಾಗುವುದು ಎಂದು ಕೇಂದ್ರ ಹೇಳಿದೆ. ಮುಂದಿನ ಐದು ವರ್ಷಗಳಲ್ಲಿ ಪ್ರತೀ ವರ್ಷವೂ ಆಯ್ದ ಕೆಲವು ನಗರಗಳಲ್ಲಿ 100 ಫುಡ್ ಹಬ್‌ಗಳನ್ನು ಹಮ್ಮಿಕೊಳ್ಳಲಾಗುವುದು. ಇದನ್ನು ‘ಪ್ರಧಾನಮಂತ್ರಿ ಸ್ವನಿಧಿ ಯೋಜನೆ’ ಅಡಿಯಲ್ಲಿ ಕಾರ್ಯಗತಗೊಳಿಸಲಾಗುವುದು ಎಂದೂ ಹೇಳಿದೆ.

ಪ್ರಧಾನಮಂತ್ರಿ ಆವಾಸ್ ಯೋಜನೆ–ನಗರ (ಪಿಎಂಎವೈ)



ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್



ನಗರ ಪುನಶ್ಚೇತನ ಸ್ಟಾರ್ಟ್‌ಸಿಟಿ



ಈ ವರ್ಷ ರಾಜ್ಯಗಳಿಗೆ ಸಿಗುವುದೆಷ್ಟು?

₹23.49 ಲಕ್ಷ ಕೋಟಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ವರ್ಗಾವಣೆಗೆ ಮೀಸಲಿಟ್ಟಿರುವ ಅನುದಾನ

₹12.47 ಲಕ್ಷ ಕೋಟಿ ರಾಜ್ಯಗಳು ಪಡೆಯಲಿರುವ ತೆರಿಗೆಯ ಪಾಲು

₹6.68 ಲಕ್ಷ ಕೋಟಿ ಕೇಂದ್ರ ಪ್ರಾಯೋಜಿತ ಯೋಜನೆಗಳ ಅನುದಾನ

₹2.24 ಲಕ್ಷ ಕೋಟಿ ಕೆಲವು ಪ್ರಮುಖ ವರ್ಗಾವಣೆಯ ಮೊತ್ತ

₹1.32 ಲಕ್ಷ ಕೋಟಿ ಹಣಕಾಸು ಆಯೋಗದ ಅನುದಾನಗಳು

₹57,798 ಕೋಟಿ ದೆಹಲಿ, ಪುದುಚೆರಿ ಹಾಗೂ ಜಮ್ಮು ಮತ್ತು ಕಾಶ್ಮೀರಕ್ಕೆ ಮೀಸಲಿಟ್ಟ ಅನುದಾನ

ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ನೀಡಿದ ಪಾಲು (ಲಕ್ಷ ಕೋಟಿಗಳಲ್ಲಿ)

ವರ್ಷ	ಪಾಲು
2019	₹11.45
2020	₹13.20
2021	₹17.06
2022	₹18.65
2023	₹20.99
2024 (ಈ ಬಜೆಟ್‌ನಲ್ಲಿ ಘೋಷಣೆ)	₹23.49



ನೀರು ಪೂರೈಕೆ ಮತ್ತು ಸ್ವಚ್ಛತೆ

ನಗರಗಳಲ್ಲಿನ ಸಮಸ್ಯೆಗಳಲ್ಲಿ ನೀರು ಸರಬರಾಜು ಹಾಗೂ ಸ್ವಚ್ಛತೆಯು ಬಹು ಮುಖ್ಯವಾದುದು. ಇದಕ್ಕಾಗಿ ರಾಜ್ಯ ಸರ್ಕಾರ ಮತ್ತು ಅಂತರರಾಷ್ಟ್ರೀಯ ಬ್ಯಾಂಕುಗಳ ಪಾಲುದಾರಿಕೆಯೊಂದಿಗೆ ಹಲವು ಯೋಜನೆಗಳನ್ನು ರೂಪಿಸಲಾಗುವುದು ಎಂದು ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಘೋಷಿಸಿದೆ.

ಚರಂಡಿ ನೀರು ಸಂಸ್ಕರಣೆ, ಘನ ತ್ಯಾಜ್ಯ ನಿರ್ವಹಣೆ ಹಾಗೂ ನೀರು ಪೂರೈಕೆಗೆ ಸಂಬಂಧಿಸಿದಂತೆ ಯೋಜನೆ ರೂಪಿಸಲಾಗುವುದು. ಈ ಯೋಜನೆಗಳು 100 ದೊಡ್ಡ ನಗರಗಳಲ್ಲಿ ಅನುಷ್ಠಾನಗೊಳ್ಳಲಿದೆ. ಶುದ್ಧೀಕರಿಸಿದ ನೀರನ್ನು ಕುಡಿಯಲು ಬಳಸುವ ಹಾಗೂ ಕೃಷಿಗೆ ಬಳಸುವ ಸಂಬಂಧವೂ ಯೋಜನೆ ರೂಪಿಸಲಾಗುತ್ತದೆ.

ಪ್ರಸ್ತುತ ತೆರಿಗೆ ಸ್ಲ್ಯಾಬ್			ಹೊಸ ತೆರಿಗೆ ಸ್ಲ್ಯಾಬ್			
	ತೆರಿಗೆ ಪ್ರಮಾಣ (ಶೇ)	ತೆರಿಗೆ ಮೊತ್ತ (₹)			ತೆರಿಗೆ ಮೊತ್ತ (₹)	ತೆರಿಗೆ ಉಳಿಕೆ
ಆದಾಯ		16,00,000			16,00,000	
ಸ್ಟ್ಯಾಂಡರ್ಡ್ ಡಿಡಕ್ಷನ್		-50,000			-75,000	
ತೆರಿಗೆಗೊಳಪಡುವ ಆದಾಯ		15,50,000			15,25,000	
(₹ಲಕ್ಷಗಳಲ್ಲಿ) 0-3	0	0	0-3	0	0	0
3-6	5	15,000	3-7	5	20,000	-5,000
6-9	10	30,000	7-10	10	30,000	0
9-12	15	45,000	10-12	15	30,000	15,000
12-15	20	60,000	12-15	20	60,000	0
›15	30	15,000	›15	30	7,500	7,500
ಒಟ್ಟು ತೆರಿಗೆ	-	1,65,000	-	-	1,47,500	17,500

(ಸರ್ಚಾರ್ಜ್ ಸೆಸ್ ಪ್ರತ್ಯೇಕ)

(₹16 ಲಕ್ಷ ವೇತನ ಆದಾಯ ಗಳಿಸುವ ತೆರಿಗೆದಾರನ ಹಿನ್ನೆಲೆಯಲ್ಲಿ ಮೇಲಿನ ಲೆಕ್ಕ ಹಾಕಲಾಗಿದೆ)

ಬಜೆಟ್ ಸ್ವಾರಸ್ಯ...

- ಕೆಂಪು ಬಣ್ಣದ ‘ಬಹೀ ಖಾತಾ’ದಲ್ಲಿ ಮಡಚಿಟ್ಟಿದ್ದ ಟ್ಯಾಬ್ಲೆಟ್ ಪಿಸಿ ತೆರೆದು ಬಜೆಟ್ ಓದುವ ಮೂಲಕ ಸಾಂಪ್ರದಾಯಿಕತೆಗೆ ಆಧುನಿಕ ಸ್ಪರ್ಶ
- ನೇರಳೆ ಬಣ್ಣದ ಅಂಚು ಹೊಂದಿದ್ದ ಬಿಳಿ ಬಣ್ಣದ ಮೈಸೂರು ಸಿಲ್ಕ್ ಸೀರೆಯುಟ್ಟು 83 ನಿಮಿಷ ಬಜೆಟ್ ಮಂಡಿಸಿದ ಹಣಕಾಸು ಸಚಿವೆ
- ಪ್ರಧಾನಿ ನರೇಂದ್ರ ಮೋದಿ ಅವರು ಲೋಕಸಭೆಗೆ ಆಗಮಿಸುತ್ತಿದ್ದಂತೆಯೇ ‘ಭಾರತ್ ಮಾತಾ ಕಿ ಜೈ’ ಎಂದು ಜೈಕಾರ ಹಾಕಿದ ಬಿಜೆಪಿ ಸದಸ್ಯರು. ಇದಕ್ಕೆ ಪ್ರತಿಯಾಗಿ ವಿರೋಧ ಪಕ್ಷಗಳ ಸದಸ್ಯರಿಂದ ‘ಜೈ ಸಂವಿಧಾನ್’ ಘೋಷಣೆ.
- ‘ಬಿಜೆಪಿ ನೇತೃತ್ವದ ಎನ್‌ಡಿಎಗೆ ಮತ್ತೊಮ್ಮೆ ಸರ್ಕಾರ ರಚಿಸಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದ’ ಎಂದ ನಿರ್ಮಲಾ ಸೀತಾರಾಮನ್ ಹೇಳಿಕೆಗೆ ‘400 ಪಾರ್’ ಎಂದು ವ್ಯಂಗ್ಯವಾಡಿದ ವಿಪಕ್ಷಗಳ ಸದಸ್ಯರು
- ರೈಲ್ವೆ ಮತ್ತು ಅಗ್ನಿಪಥ ಯೋಜನೆಗಳಿಗೆ ಅನುದಾನ ಇಲ್ಲ

ದೇಶಕ್ಕೆ ‘ಹಿತ’, ಜನರಿಗೆ ‘ಮಿತ’ ನೀಡಿದ ಬಜೆಟ್

ಬಜೆಟ್ ವಿಶ್ಲೇಷಣೆ

ಪ್ರಮೋದ ಶ್ರೀಕಾಂತ ದೈತೋಟ

ನರೇಂದ್ರ ಮೋದಿ ಸರ್ಕಾರದ ಮೂರನೇ ಅವಧಿಯ ಮೊದಲ ಬಜೆಟ್ ಇದಾಗಿದ್ದರಿಂದ, ಜನ ಸಾಮಾನ್ಯರಿಗೆ ಅನ್ವಯವಾಗುವ ಆದಾಯ ತೆರಿಗೆ ವಿನಾಯಿತಿ ಮಿತಿಯ ಹೆಚ್ಚಳಕ್ಕೆ ಸಂಬಂಧಪಟ್ಟು ಅತಿಯಾದ ನಿರೀಕ್ಷೆ ಇಟ್ಟುಕೊಳ್ಳಲಾಗಿತ್ತು. ಆದರೆ ಅದು ಸಣ್ಣ ಹಾಗೂ ಮಧ್ಯಮ ವರ್ಗದ ತೆರಿಗೆದಾರರ ದೃಷ್ಟಿಯಿಂದ ನಿರೀಕ್ಷೆಯು ನೂರಕ್ಕೆ ನೂರು ನಿಜವಾಗಲಿಲ್ಲ. ಅದೇ ರೀತಿ, ದೇಶದ ಷೇರು ಮಾರುಕಟ್ಟೆಯ ಪ್ರಮುಖ ಆಧಾರ ಸ್ತಂಭವಾಗಿರುವ ವೈಯಕ್ತಿಕ ಹೂಡಿಕೆದಾರರೂ ಸೇರಿದಂತೆ ಎಲ್ಲ ಹೂಡಿಕೆದಾರರ ಹಿತ ಕಾಪಾಡುವಲ್ಲಿ ಬಜೆಟ್ ವಿಫಲವಾಗಿದೆ.

ಪ್ರಸ್ತುತ ಜಾರಿಯಲ್ಲಿರುವ ಹೊಸ ತೆರಿಗೆ ಪದ್ಧತಿಯಡಿ ಇರುವ ಗರಿಷ್ಠ ಆದಾಯ ವಿನಾಯಿತಿ ಮಿತಿಯಾದ ₹3 ಲಕ್ಷವನ್ನು ಹೆಚ್ಚಿಸಲಿಲ್ಲ ಎಂದಾದರೂ, ಅದರ ನಂತರದ ಹಂತದ ಆದಾಯ ತೆರಿಗೆ ಮಿತಿಯನ್ನು (ಸ್ಲ್ಯಾಬ್) ಎರಡು ಹಂತದ ವರ್ಗದಲ್ಲಿ ಒಂದೊಂದು ಲಕ್ಷ ಹೆಚ್ಚಿಸಲಾಗಿದೆ. ಉಳಿದ ಸ್ಲ್ಯಾಬ್ ಮೊತ್ತಗಳನ್ನು ಮೊದಲಿನಂತೆಯೇ ಕಾಯ್ದುಕೊಳ್ಳಲಾಗಿದೆ. ತೆರಿಗೆ ದರಗಳಲ್ಲಿ ಬದಲಾವಣೆ ಮಾಡದೆ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲಾಗಿದೆ. ಆದರೆ ಹೊಸ ತೆರಿಗೆ ಪದ್ಧತಿ ಅನುಸರಿಸುವವರಿಗೆ ಈಗ ಸಿಗುತ್ತಿರುವ ₹ 50 ಸಾವಿರದ ಸ್ಟ್ಯಾಂಡರ್ಡ್ ಡಿಡಕ್ಷನ್ ಮಿತಿಯನ್ನು ₹75 ಸಾವಿರಕ್ಕೆ ಹೆಚ್ಚಿಸಲಾಗಿದೆ.

ಈ ಆಂತರಿಕ ಸ್ಲ್ಯಾಬ್ ಮಿತಿಗಳ ಬದಲಾವಣೆ ಹಾಗೂ ಸ್ಟ್ಯಾಂಡರ್ಡ್ ಡಿಡಕ್ಷನ್ ಮಿತಿಯ ಹೆಚ್ಚಳದ ಪರಿಣಾಮವಾಗಿ ₹17,500ರಷ್ಟು (ಸೆಸ್ ಹಾಗೂ ಸರ್ಚಾರ್ಜ್ ಲಾಭ ಪ್ರತ್ಯೇಕ) ತೆರಿಗೆ ಮುಂದಿನ ವರ್ಷದಲ್ಲಿ ಉಳಿತಾಯವಾಗಲಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಮ್ಮ ಬಜೆಟ್ ಭಾಷಣದಲ್ಲಿ ಉಲ್ಲೇಖಿಸಿದ್ದಾರೆ. ಆದರೆ ಈ ಮೊತ್ತ, ಗರಿಷ್ಠ ತೆರಿಗೆ ಆದಾಯದ ಮಿತಿಯಾದ ₹15 ಲಕ್ಷಕ್ಕೂ ಮೀರಿದ ಆದಾಯ ಉಳ್ಳವರನ್ನು ಉದ್ದೇಶಿಸಿ ನಿರೂಪಿಸಲಾಗಿದೆ. ಹಂತ ಹಂತವಾಗಿ ಈ ಮಿತಿಗಿಂತ ಆದಾಯ ಕಡಿಮೆಯಾದಂತೆ, ತೆರಿಗೆ ಲಾಭದ ಮೊತ್ತವೂ ಆಯಾ ದರಕ್ಕೆ ಅನ್ವಯಿಸಿ ಪ್ರಮಾಣಾನುಗತವಾಗಿ ಕಡಿಮೆಯಾಗುತ್ತದೆ.

ಬಜೆಟ್‌ನಲ್ಲಿ ಹಳೆಯ ತೆರಿಗೆ ಪದ್ಧತಿಯಡಿ ಯಾವುದೇ ಬದಲಾವಣೆಗಳನ್ನು ಮಾಡಿಲ್ಲ. ಹೀಗಾಗಿ ಈ ಪದ್ಧತಿ ನೇರವಾಗಿ ತೊಡೆದು ಹಾಕಿಲ್ಲವೆಂದಾದರೂ, ಬಹುತೇಕ ವರ್ಗದ ಜನರಿಗೆ ತೆರಿಗೆ ಉಳಿತಾಯದ ದೃಷ್ಟಿಯಿಂದ ಅದು ಅಷ್ಟೊಂದು ಪ್ರಾಯೋಗಿಕವಲ್ಲದ ಕಾರಣ ಸಹಜವಾಗಿ ಹೆಚ್ಚು ಹೆಚ್ಚು ತೆರಿಗೆದಾರರು ಪ್ರತಿ ವರ್ಷ ತಾವಾಗಿಯೇ ಹೊಸ ತೆರಿಗೆ ಯೋಜನೆಗೆ ಬರುವಂತೆ ಮಾಡುವುದು ಸರಕಾರದ ಉದ್ದೇಶ.

ಇನ್ನೂ ಒಂದು ಕಾರಣವೆಂದರೆ, ಹಳೆಯ ತೆರಿಗೆ ಪದ್ಧತಿಯಡಿ, ಅನೇಕ ರೀತಿಯ ತೆರಿಗೆ ರಿಯಾಯಿತಿಗಳಿದ್ದು ತೆರಿಗೆದಾರರು ಅವುಗಳನ್ನು ಉದ್ದೇಶಪೂರ್ವಕವಾಗಿ ಅಥವಾ ಸರಿಯಾಗಿ ಅರ್ಥೈಸದೆ ಬಳಸಿಕೊಂಡು, ತೆರಿಗೆ ರಿಫಂಡ್ ಪಡೆಯುತ್ತಿರುವುದು ತೆರಿಗೆ ಇಲಾಖೆಗೆ ಬಹಳ ಸಮಸ್ಯೆಯಾಗುತ್ತಿದೆ. ಹೀಗಾಗಿ ಅಂತಹ ವಿನಾಯಿತಿಗಳ ಸತ್ಯಾಸತ್ಯತೆಯನ್ನು ಪರಿಶೀಲಿಸುವ ಅಗತ್ಯ ಹೊಸ ತೆರಿಗೆ ಪದ್ಧತಿಗೆ ಜನ ವರ್ಗವಾದಾಗ ಬರುವುದಿಲ್ಲ ಹಾಗೂ ಈ ಬೆಳವಣಿಗೆಯಿಂದ ಸಾಕಷ್ಟು ತೆರಿಗೆ ಸಮಸ್ಯೆಗಳೂ ಕ್ರಮಾಗತವಾಗಿ ನಿವಾರಣೆಯಾಗಿ ನಮ್ಮ ತೆರಿಗೆ ವ್ಯವಸ್ಥೆ ಸರಳವಾಗುತ್ತಾ ಹೋಗುತ್ತದೆ ಎಂಬುದು ನಿರೀಕ್ಷೆ. ಈಗಾಗಲೇ ಮೂರನೇ ಎರಡರಷ್ಟು ತೆರಿಗೆದಾರರು ಹೊಸ ತೆರಿಗೆ ಪದ್ಧತಿಗೆ ವರ್ಗವಾಗಿದ್ದಾರೆ. ಆದರೆ ಇನ್ನೂ ಮನೆ ಬಾಡಿಗೆ, ಮನೆ ಸಾಲದ ಬಡ್ಡಿ, ಹೂಡಿಕೆ, ಶಿಕ್ಷಣ ಸಾಲದ ಬಡ್ಡಿ, ದೇಣಿಗೆ ಸೇರಿದಂತೆ ಅನೇಕ ವಿಧದ ಪಾವತಿ ಮಾಡುವ ತೆರಿಗೆದಾರರಿಗೆ ಹಳೆಯ ತೆರಿಗೆ ಪದ್ಧತಿಯೇ ಸೂಕ್ತವೆಂದು ಕಾಣುತ್ತದೆ.

ಕುಟುಂಬ ಪಿಂಚಣಿ ಪಡೆಯುವ ಮಂದಿಗೆ ಅನುಕೂಲವಾಗುವ ಮಟ್ಟದಲ್ಲಿ, ಸ್ಟ್ಯಾಂಡರ್ಡ್ ಡಿಡಕ್ಷನ್ ಮಿತಿಯನ್ನು ₹15 ಸಾವಿರದಿಂದ ₹25 ಸಾವಿರಕ್ಕೆ ಹೆಚ್ಚಿಸಲಾಗಿದೆ. ಈ ಮೊತ್ತ ಚಿಕ್ಕದಾಗಿದ್ದರೂ ಆ ವರ್ಗದ ಜನ ಅಧಿಕ ಮಂದಿ ಇರುವುದನ್ನು ಸರ್ಕಾರ ಪರಿಗಣಿಸಿದೆ.

ಚಿನ್ನ ಹಾಗೂ ಬೆಳ್ಳಿಯ ಮೇಲಿನ ಆಮದು ತೆರಿಗೆಯನ್ನು ಶೇ15 ರಿಂದ 6ಕ್ಕೆ ಇಳಿಸಿರುವುದರಿಂದ ಗೃಹ ಬಳಕೆಯ ಉಪಯೋಗಕ್ಕಿರುವ ಆಭರಣಗಳ ಬೆಲೆ ಕೊಂಚ ಇಳಿಕೆಯಾಗಲಿದೆ.

ವೈಯಕ್ತಿಕ ತೆರಿಗೆದಾರರಿಗೆ ಈ ಬಾರಿಯ ಬಜೆಟ್ ಹೆಚ್ಚುವರಿ ಸ್ಟ್ಯಾಂಡರ್ಡ್ ಡಿಡಕ್ಷನ್ ಹಾಗೂ ತೆರಿಗೆ ದರಗಳಿಗೆ ಸಂಬಂಧಿಸಿ ‘ಹಿತ’ ಅನುಭವ ನೀಡಿದರೂ ಅದೇ ಮಂದಿ ಹೂಡಿಕೆದಾರರಾಗಿ ಯೋಚಿಸಿದಾಗ ಬಂಡವಾಳ ಲಾಭಕ್ಕೆ ಸಂಬಂಧಿಸಿ ಬಹಳಷ್ಟು ತೆರಿಗೆ ದರಗಳನ್ನು ಹೆಚ್ಚಿಸಿರುವುದು ಅವರ ಹೂಡಿಕೆಯ ಉತ್ಸಾಹವನ್ನು ‘ಮಿತ’ಗೊಳಿಸಲಿದೆ.

ಉದಾಹರಣೆಗೆ, ಕಂಪನಿಯ ಷೇರುಗಳನ್ನು ಷೇರುದಾರರಿಂದ ತಾವೇ ಖರೀದಿಸುವಾಗ ಸಿಗುವ ಸಂಪೂರ್ಣ ಮೊತ್ತ ಡಿವಿಡೆಂಡ್ ಎಂದು ಪರಿಗಣಿಸಿ ತೆರಿಗೆಗೊಳಪಡಿಸುವುದು ಹೆಚ್ಚಿನ ತೆರಿಗೆ ದರ ಅನ್ವಯವಾಗುವುದಕ್ಕೆ ಕಾರಣವಾಗಿದೆ. ಫ್ಯೂಚರ್ಸ್ ಮತ್ತು ಆಪ್ಷನ್ಸ್ ವ್ಯವಹಾರಗಳಿಗೆ ಸಂಬಂಧಿಸಿ ಸೆಕ್ಯುರಿಟಿ ವ್ಯವಹಾರಗಳ ತೆರಿಗೆಯನ್ನು ಕ್ರಮವಾಗಿ ಶೇ 0.02 ಹಾಗೂ 0.1 ಕ್ಕೆ ಹೆಚ್ಚಿಸುವುದು ಹಿಂದಿನ ದರಕ್ಕೆ ತುಲನೆ ಮಾಡಿದರೆ ಶೇ 160 ಹಾಗೂ ಶೇ 60ರಷ್ಟು ಹೆಚ್ಚಳವಾಗಿರುತ್ತದೆ.

ಷೇರು, ಮ್ಯೂಚುವಲ್ ಫಂಡ್ ಇತ್ಯಾದಿ ಕೆಲವು ಅಲ್ಪಾವಧಿ ಹೂಡಿಕೆ ಲಾಭಕ್ಕೆ ಸಂಬಂಧಿಸಿ ಪ್ರಸ್ತುತ ಇರುವ ಶೇ15ರ ತೆರಿಗೆ ದರವನ್ನು ಶೇ20ಕ್ಕೆ ಹೆಚ್ಚಿಸಿರುವುದು ಬಂಡವಾಳ ಹೂಡಿಕೆ ಮಾರುಕಟ್ಟೆಯ ಮೇಲೆ ಮುಂದೆ ಸಾಕಷ್ಟು ಪರಿಣಾಮ ಬೀರಲಿದೆ. ಈ ಹಿಂದೆ ಶೇ10 ರ ದರದಲ್ಲಿ ತೆರಿಗೆಗೊಳಪಡುತ್ತಿದ್ದ ದೀರ್ಘಾವಧಿ ಹೂಡಿಕೆಗಳು ಮುಂದೆ ಶೇ 12.5ರ ದರದಲ್ಲಿ ತೆರಿಗೆಗೊಳಪಡಲಿವೆ. ಆದರೆ ಈ ವರ್ಗದ ಹೂಡಿಕೆಗಳಿಗೆ ಸಿಗುತ್ತಿದ್ದ ₹1 ಲಕ್ಷದ ವಿನಾಯಿತಿ ಮಿತಿಯನ್ನು ₹1.25 ಲಕ್ಷಕ್ಕೆ ಹೆಚ್ಚಿಸಿರುವುದು ಸಣ್ಣ ವರ್ಗದ ಹೂಡಿಕೆದಾರರಿಗೆ ತುಸು ಸಮಾಧಾನ ತಂದುಕೊಟ್ಟಿದೆ. ಇನ್ನೂ ಒಂದು ಗಮನಾರ್ಹ ಬದಲಾವಣೆ ಎಂದರೆ, ದೀರ್ಘಾವಧಿ ಬಂಡವಾಳ ಹೂಡಿಕೆಗೆ ಇದ್ದ ಶೇ 20ರ ದರವನ್ನು ಶೇ 12.5ಕ್ಕೆ ಇಳಿಕೆ ಮಾಡಿದ ಪರಿಣಾಮ ಹಣದುಬ್ಬರ ಪ್ರಮಾಣಕ್ಕೆ ತಕ್ಕ ಸೂಚ್ಯಂಕದ ಪ್ರಯೋಜನ ಮುಂದೆ ಸಿಗುವುದಿಲ್ಲ. ಇದರಿಂದ ಆಸ್ತಿ ಮಾರಾಟದಿಂದ ಬರುವ ಲಾಭದ ಮೇಲೆ ಸಾಕಷ್ಟು ತೆರಿಗೆ ಪರಿಣಾಮ ಬೀರಲಿದೆ.

ಮೇಲಿನ ಕೆಲವು ವಿಚಾರಗಳನ್ನು ಹೊರತುಪಡಿಸಿದರೆ, ಈ ಬಾರಿಯ ಬಜೆಟ್ ಒಟ್ಟಾರೆ ದೇಶದ ಆರ್ಥಿಕತೆಯನ್ನು ಉತ್ತೇಜಿಸುವ ಅನೇಕ ಜನಪರ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸುವ ಉದ್ದೇಶ ಹೊಂದಿದೆ. ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಉತ್ತೇಜನ ನೀಡಲು ಹೆಚ್ಚಿನ ಮೊತ್ತದ ಸಾಲ ಯೋಜನೆಗಳು, ಹೊಸ ಉದ್ಯೋಗಾವಕಾಶಗಳನ್ನು ಸೃಜಿಸುವ ಕಂಪನಿಯ ಉದ್ಯೋಗಿಗಳ ಖಾತೆಗೆ ಸರ್ಕಾರದಿಂದಲೂ ಹೆಚ್ಚುವರಿ ಪಿಎಫ್ ದೇಣಿಗೆ, ಹೀಗೆ ಅನೇಕ ಯೋಜನೆಗಳು ಒಟ್ಟಾರೆಯಾಗಿ ಆರ್ಥಿಕತೆಯಲ್ಲಿ ಕ್ರಮೇಣ ಸಂಚಲನ ಮೂಡಿಸಲಿವೆ.



ಕೇಂದ್ರ ಬಜೆಟ್ 2024-25



ಪ್ರಮುಖ ಯೋಜನೆಗಳಿಗೆ ಹಣ ಹಂಚಿಕೆ (ಕೋಟಿಗಳಲ್ಲಿ)



ಆವಿಷ್ಕಾರ, ಅಭಿವೃದ್ಧಿಗಾಗಿ ₹1 ಲಕ್ಷ ಕೋಟಿ

ಪ್ರಜಾವಾಣಿ ವಾರ್ತೆ

ಆವಿಷ್ಕಾರ, ಸಂಶೋಧನೆ ಮತ್ತು ಅಭಿವೃದ್ಧಿಗೂ ಕೇಂದ್ರ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ₹1 ಲಕ್ಷ ಕೋಟಿ ಮೀಸಲಿಟ್ಟಿದೆ. ಮೂಲ ಸಂಶೋಧನೆ ಮತ್ತು ಮೂಲ ಮಾದರಿ ಅಭಿವೃದ್ಧಿಗಾಗಿ 'ಅನುಸಂಧಾನ ರಾಷ್ಟ್ರೀಯ ಸಂಶೋಧನಾ ನಿಧಿ'ಯಡಿ ಅನುದಾನ ಒದಗಿಸಲಾಗುತ್ತದೆ.

ಆದ್ಯತೆ 8

ಸಂಶೋಧನಾ ಕ್ಷೇತ್ರದಲ್ಲಿ ಖಾಸಗಿಯವರನ್ನೂ ತೊಡಗಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಖಾಸಗಿ ವಲಯದಲ್ಲಿ ನಡೆಯುವ ಸಂಶೋಧನೆ ಮತ್ತು ನಾವೀನ್ಯವನ್ನು ವಾಣಿಜ್ಯಿಕವಾಗಿ ಬಳಕೆ ಬಳಕೆ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಬಾಹ್ಯಾಕಾಶ ಆರ್ಥಿಕತೆ

ಬಾಹ್ಯಾಕಾಶ ಕ್ಷೇತ್ರಕ್ಕೂ ಕೇಂದ್ರ ಸರ್ಕಾರ ಆದ್ಯತೆಯನ್ನು ಮುಂದುವರಿಸಿದೆ. ಮುಂದಿನ 10 ವರ್ಷಗಳಲ್ಲಿ ಬಾಹ್ಯಾಕಾಶ ಆರ್ಥಿಕತೆಯನ್ನು 5 ಪಟ್ಟು ವಿಸ್ತರಿಸುವ ಗುರಿ ಹೊಂದಿದೆ. ಈ ಉದ್ದೇಶಕ್ಕಾಗಿ ₹1,000 ಕೋಟಿ ಮೊತ್ತದ ನಿಧಿ ಸ್ಥಾಪಿಸಲಾಗುತ್ತಿದೆ.

ಭವಿಷ್ಯದ ಸುಧಾರಣೆಗಳು

ಉದ್ಯೋಗಾವಕಾಶಗಳು ಮತ್ತು ಹೆಚ್ಚಿನ ಸುಸ್ಥಿರ ಬೆಳವಣಿಗೆ ಸಾಧಿಸುವ ನಿಟ್ಟಿನಲ್ಲಿ ಭವಿಷ್ಯದ ಸುಧಾರಣೆಗಳನ್ನು ಕೈಗೊಳ್ಳಲಾಗುತ್ತಿದೆ. ಆರ್ಥಿಕ ಅಭಿವೃದ್ಧಿಗೆ ವ್ಯಾಪಕವಾದ ವಿಧಾನ ಅನುಸರಿಸಲು ಮತ್ತು ಉದ್ಯೋಗ ಅವಕಾಶಗಳನ್ನು ಸುಗಮಗೊಳಿಸಲು ಆರ್ಥಿಕ ನೀತಿ ಚೌಕಟ್ಟನ್ನು ರೂಪಿಸಲಾಗುತ್ತಿದೆ.

ಆದ್ಯತೆ 9

ಉತ್ಪಾದಕತೆಗೆ ಅಗತ್ಯವಿರುವ ಅಂಶಗಳಲ್ಲಿ ಸುಧಾರಣೆ ತರುವುದು, ಮಾರುಕಟ್ಟೆಗಳು ಮತ್ತು ವಲಯಗಳನ್ನು ಹೆಚ್ಚು ಪರಿಣಾಮಕಾರಿಯಾಗಿಸಲು ಅನುಕೂಲವಾಗುವಂತೆ ಸುಧಾರಣೆಗಳನ್ನು ಪ್ರಾರಂಭಿಸಿ, ಉತ್ತೇಜಿಸಲಾಗುವುದು.

ಈ ಸುಧಾರಣೆಗಳು ಉತ್ಪಾದನೆಯ ಎಲ್ಲಾ ಅಂಶಗಳನ್ನು ಒಳಗೊಂಡಿರಲಿವೆ. ಅವುಗಳೆಂದರೆ ಭೂಮಿ, ಕಾರ್ಮಿಕರು, ಬಂಡವಾಳ ಮತ್ತು ಉದ್ಯಮಶೀಲತೆ, ತಂತ್ರಜ್ಞಾನ. ಈ ಒಟ್ಟು ಅಂಶಗಳು ಉತ್ಪಾದಕತೆಯನ್ನು ಸುಧಾರಿಸಲು ಮತ್ತು ಅಸಮಾನತೆಯನ್ನು ಕಡಿಮೆ ಮಾಡಲು ಅನುವು ಮಾಡಿಕೊಡಲಿವೆ.

ಈ ಸುಧಾರಣೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಕೇಂದ್ರ ಹಾಗೂ ರಾಜ್ಯಗಳ ನಡುವೆ ಸಮನ್ವಯ– ಒಮ್ಮತ ಅಗತ್ಯ. ಆ ಮೂಲಕ, ಸ್ಪರ್ಧಾತ್ಮಕ ಒಕ್ಕೂಟ ವ್ಯವಸ್ಥೆ ಉತ್ತೇಜಿಸುವುದು ಹಾಗೂ ಈ ಸುಧಾರಣೆಗಳ ತ್ವರಿತ ಅನುಷ್ಠಾನಕ್ಕಾಗಿ ರಾಜ್ಯಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ಪ್ರಕಟಿಸಲಾಗಿದೆ. ಇದರ ಭಾಗವಾಗಿ ರಾಜ್ಯ ಸರ್ಕಾರಗಳಿಗೆ 50 ವರ್ಷಗಳವರೆಗೆ ಬಡ್ಡಿ ರಹಿತ ಸಾಲವನ್ನೂ ಒದಗಿಸಲಾಗುತ್ತಿದೆ.

ಮೂಲಸೌಕರ್ಯ ಅಭಿವೃದ್ಧಿ ₹11,11,111 ಕೋಟಿ

- ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ (ಪಿಎಂಜಿಎಸ್‌ವೈ) 4ನೇ ಹಂತವನ್ನು ಜಾರಿಗೊಳಿಸಲಾಗುವುದು. ಈ ಯೋಜನೆ ಮೂಲಕ, ಗ್ರಾಮೀಣ ಭಾಗದ 25 ಸಾವಿರ ವಸತಿ ಪ್ರದೇಶಗಳಿಗೆ ಸರ್ವ ಋತು ಸಂಪರ್ಕ ಒದಗಿಸಲಾಗುವುದು
- ಬ್ಯಾರೇಜುಗಳು, ನದಿಗಳ ಮಾಲಿನ್ಯ ತಡೆ ಹಾಗೂ ನೀರಾವರಿ ಯೋಜನೆಗಳಿಗೆ ವೇಗ ನೀಡಲಾಗುವುದು
- ಪ್ರವಾಸೋದ್ಯಮಕ್ಕೆ ನೀಡುವ ಉತ್ತೇಜನದಿಂದ ಉದ್ಯೋಗಗಳ ಸೃಷ್ಟಿ ಹಾಗೂ ಹೂಡಿಕೆಗಳನ್ನು ಆಕರ್ಷಿಸಲು ಸಾಧ್ಯ

• ಭೀಮಸೇನ ಚಳಗೇರಿ

ಈ ಹಿಂದಿನ ಅವಧಿಯಲ್ಲಿ ಕೇಂದ್ರ ಸರ್ಕಾರ, ರಸ್ತೆಗಳು, ಸೇತುವೆಗಳು ಸೇರಿದಂತೆ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಗಮನಾರ್ಹ ಪ್ರಮಾಣದಲ್ಲಿ ಹೂಡಿಕೆ ಮಾಡಿತ್ತು. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಮಂಗಳವಾರ ಮಂಡನೆಯಾಗಿರುವ ಬಜೆಟ್‌ನಲ್ಲಿ ಕೂಡ ಕೇಂದ್ರವು ಮೂಲಸೌಕರ್ಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿದೆ.

ಆದ್ಯತೆ 7

ಪ್ರಸಕ್ತ, ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ₹ 11,11,111 ಕೋಟಿ ಹಂಚಿಕೆ ಮಾಡಲಾಗಿದ್ದು, ಇದು ಒಟ್ಟು ಜಿಡಿಪಿಯ ಶೇ 3.4ರಷ್ಟಾಗಲಿದೆ ಎಂದು ಬಜೆಟ್ ಮಂಡನೆ ವೇಳೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಮೂಲಸೌಕರ್ಯ ಕ್ಷೇತ್ರದಲ್ಲಿ ರಾಜ್ಯಗಳ ಜೊತೆಗೆ ಖಾಸಗಿಯವರೂ ಹೂಡಿಕೆ ಮಾಡುವುದಕ್ಕೆ ಕೇಂದ್ರ ಸರ್ಕಾರ ಅವಕಾಶ ಮಾಡಿ ಕೊಟ್ಟಿದೆ. ರಾಜ್ಯಗಳು ತಮ್ಮ ಆದ್ಯತೆಗೆ ಅನುಗುಣವಾಗಿ ಮೂಲಸೌಕರ್ಯಗಳ ಅಭಿವೃದ್ಧಿಗೆ ನೆರವು ನೀಡುವುದನ್ನು ಕೇಂದ್ರ ಉತ್ತೇಜಿಸುತ್ತದೆ. ಈ ಉದ್ದೇಶಕ್ಕಾಗಿ ರಾಜ್ಯಗಳಿಗೆ ದೀರ್ಘಾವಧಿಯ ಬಡ್ಡಿರಹಿತ ಸಾಲ ನೀಡುವುದಕ್ಕಾಗಿ ಈ ವರ್ಷ ₹1.5 ಲಕ್ಷ ಕೋಟಿ ತೆಗೆದಿರಿಸಲಾಗಿದೆ.

ಹೂಡಿಕೆ– ಖಾಸಗಿ ವಲಯಕ್ಕೂ ಪ್ರಾಶಸ್ತ್ಯ: ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲದೇ, ಖಾಸಗಿ ವಲಯ ಕೂಡ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಹೂಡಿಕೆ ಮಾಡುವುದಕ್ಕೆ ಉತ್ತೇಜನ ನೀಡುವುದಾಗಿ ಹೇಳಿದ್ದಾರೆ. ಇದಕ್ಕೆ ಪೂರಕವಾಗಿ, ನೀತಿ ಮತ್ತು ನಿಯಮಗಳ ನಿರೂಪಣೆ, ಹಣಕಾಸು ಒದಗಿಸುವುದಕ್ಕಾಗಿ ಮಾರುಕಟ್ಟೆ ಆಧಾರಿತ ನೀತಿಯೊಂದನ್ನು ರೂಪಿಸಲಾಗುವುದು ಎಂದೂ ಅವರು ಹೇಳಿದ್ದಾರೆ.

ಪ್ರವಾಸೋದ್ಯಮಕ್ಕೆ ಉತ್ತೇಜನ

ದೇಶದಲ್ಲಿ ಪ್ರವಾಸೋದ್ಯಮ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿವೆ ಎಂದಿರುವ ಕೇಂದ್ರ ಸರ್ಕಾರ, ಈ ಕ್ಷೇತ್ರದಲ್ಲಿ ಹೂಡಿಕೆ ಹಾಗೂ ಅಭಿವೃದ್ಧಿಗೆ ಒತ್ತು ನೀಡುವುದಾಗಿ ಬಜೆಟ್‌ನಲ್ಲಿ ಹೇಳಿದೆ.

ಮಧ್ಯಂತರ ಬಜೆಟ್‌ನಲ್ಲಿ ಘೋಷಿಸಿರುವ ಕ್ರಮಗಳ ಜೊತೆಗೆ, ಹೊಸ ಯೋಜನೆಗಳನ್ನು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದಾರೆ.

ಪ್ರಮುಖ ಅಂಶಗಳು

- ಗಯಾದಲ್ಲಿ ವಿಷ್ಣುಪಾದ ದೇಗುಲ ಕಾರಿಡಾರ್, ಬೋಧಗಯಾದಲ್ಲಿ ಮಹಾಬೋಧಿ ದೇಗುಲ ಕಾರಿಡಾರ್ ಯೋಜನೆಗೆ ನೆರವು. ಕಾಶಿ ವಿಶ್ವನಾಥ ದೇವಾಲಯ ಕಾರಿಡಾರ್ ಮಾದರಿಯಲ್ಲಿ ಇವುಗಳ ಅಭಿವೃದ್ಧಿ
- ಬಿಹಾರದ ರಾಜಗಿರ್‌ನಲ್ಲಿರುವ ಜೈನ ಮುನಿ 20ನೇ ತೀರ್ಥಂಕರ ಮುನಿಸುವ್ರತ ಬಸದಿ ಹಾಗೂ ಬ್ರಹ್ಮಕುಂಡದ ಸಮಗ್ರ ಅಭಿವೃದ್ಧಿ

ನಳಂದ ವಿಶ್ವವಿದ್ಯಾಲಯ

- ನಳಂದ ವಿಶ್ವವಿದ್ಯಾಲಯದ ಪುನರುತ್ಥಾನದ ಜೊತೆಗೆ, ಅದನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಗೊಳಿಸಲಾಗುವುದು
- ದೇವಾಲಯಗಳು, ಸ್ಮಾರಕಗಳು, ಕರಕುಶಲ ಕಲೆ, ವನ್ಯಜೀವಿಧಾಮಗಳು, ಸಾಗರ ತೀರಗಳು ಒಡಿಶಾ ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ವಿಪುಲ ಅವಕಾಶ ಒದಗಿಸುತ್ತವೆ. ಈ ಎಲ್ಲ ಕ್ಷೇತ್ರಗಳ ಅಭಿವೃದ್ಧಿಗಾಗಿ ಕೇಂದ್ರ ಒಡಿಶಾಕ್ಕೆ ನೆರವು ನೀಡಲಿದೆ

ಪ್ರವಾಹ ನಿಯಂತ್ರಣಕ್ಕೆ ಕ್ರಮ

ಈ ವರ್ಷ ಬಿಹಾರ, ಅಸ್ಸಾಂ, ಹಿಮಾಚಲ ಪ್ರದೇಶ, ಉತ್ತರಾಖಂಡ ಹಾಗೂ ಸಿಕ್ಕಿಂ ರಾಜ್ಯಗಳಲ್ಲಿ ಪ್ರವಾಹ ಪರಿಸ್ಥಿತಿಯಿಂದಾಗಿ ಜನರು ಸಾಕಷ್ಟು ತೊಂದರೆ ಅನುಭವಿಸಬೇಕಾಯಿತು. ಈ ರಾಜ್ಯಗಳು ಈ ಹಿಂದೆಯೂ ಪ್ರವಾಹದಿಂದಾಗಿ ಸಂಕಷ್ಟ ಎದುರಿಸಿವೆ. ಅದರಲ್ಲೂ, ನೇಪಾಳ ಸೇರಿದಂತೆ ನೆರೆ ದೇಶಗಳಲ್ಲಿ ಸುರಿದ ಮಳೆಯಿಂದಾಗಿ ಪ್ರವಾಹ ಕಂಡುಬಂದಿರುವುದು ಹೆಚ್ಚು. ಪ್ರವಾಹ ನಿಯಂತ್ರಣಕ್ಕಾಗಿ ಕೆಲ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ನೇಪಾಳದಲ್ಲಿ ಕೈಗೊಂಡಿರುವ ಇಂತಹ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ.

'ತ್ವರಿತಗತಿ ನೀರಾವರಿ ಪ್ರಯೋಜನ ಕಾರ್ಯಕ್ರಮ' ಹಾಗೂ ಇತರ ಸಂಪನ್ಮೂಲಗಳ ಮೂಲಕ 'ಪ್ರವಾಹ ನಿಯಂತ್ರಣ ರಚನೆ' ಯೋಜನೆಗಳಿಗೆ ಅಂದಾಜು ₹11,500 ಕೋಟಿ ನೆರವು ಒದಗಿಸಲಾಗುವುದು' ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದಾರೆ. ಬಿಹಾರದಲ್ಲಿ ಕೋಸಿ ನದಿಯ ಪ್ರವಾಹವನ್ನು ತಡೆಗಟ್ಟುವುದು ಹಾಗೂ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿ ಸಮೀಕ್ಷೆ ಕೈಗೆತ್ತಿಕೊಳ್ಳಲಾಗುವುದು ಎಂದೂ ಅವರು ಹೇಳಿದ್ದಾರೆ. ಪ್ರವಾಹ ನಿರ್ವಹಣೆ ಮತ್ತು ಸಂಬಂಧಿಸಿದ ಪ್ರಾಜೆಕ್ಟ್‌ಗಳಿಗಾಗಿ ಬಿಹಾರ, ಅಸ್ಸಾಂ, ಹಿಮಾಚಲ ಪ್ರದೇಶ, ಉತ್ತರಾಖಂಡ, ಸಿಕ್ಕಿಂಗೆ ಹಣಕಾಸು ನೆರವು ನೀಡಲಾಗುವುದು ಎಂದೂ ತಿಳಿಸಿದ್ದಾರೆ.

ರಾಜ್ಯದ ರೈಲ್ವೆ ಯೋಜನೆಗಳಿಗೆ ₹7,500 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಹೊಸ ರೈಲು ಮಾರ್ಗಗಳ ನಿರ್ಮಾಣ, ದ್ವಿಪಥ ಹಾಗೂ ಗೇಜ್ ಪರಿವರ್ತನೆ ಸೇರಿದಂತೆ ವಿವಿಧ ಮೂಲಸೌಕರ್ಯ ಕಾಮಗಾರಿಗಳಿಗೆ ಬಜೆಟ್‌ನಲ್ಲಿ ₹7,500 ಕೋಟಿ ಹಂಚಿಕೆ ಮಾಡಲಾಗಿದೆ.

'2009-14ರ ಅವಧಿಯಲ್ಲಿ ರಾಜ್ಯದ ರೈಲ್ವೆ ಯೋಜನೆಗಳಿಗೆ ವಾರ್ಷಿಕ ₹835 ಕೋಟಿ ಅನುದಾನ ನೀಡಲಾಗುತ್ತಿತ್ತು. ಈಗ ಅನುದಾನ ಬಿಡುಗಡೆ ಪ್ರಮಾಣ ಒಂಬತ್ತು ಪಟ್ಟು ಹೆಚ್ಚಾಗಿದೆ' ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ರಾಜ್ಯದಲ್ಲಿ 31 ರೈಲ್ವೆ ಯೋಜನೆಗಳು ಅನುಷ್ಠಾನವಾಗುತ್ತಿದ್ದು, ಇವುಗಳ ಉದ್ದ 3,866 ಕಿ.ಮೀ. ಈ ಯೋಜನೆಗಳ ಒಟ್ಟು ಮೊತ್ತ ₹47,346 ಕೋಟಿ ಎಂದು ಅವರು ಮಾಹಿತಿ ನೀಡಿದರು.

'ಯುಪಿಎ ಅವಧಿಯಲ್ಲಿ ವರ್ಷಕ್ಕೆ 114 ಕಿ.ಮೀ. ಹೊಸ ಮಾರ್ಗಗಳ ನಿರ್ಮಾಣ ಮಾಡಲಾಗುತ್ತಿತ್ತು. ಎನ್‌ಡಿಎ ಅವಧಿಯಲ್ಲಿ 166 ಕಿ.ಮೀ.ಗೆ ಏರಿದೆ ಎಂದರು.

ಕೊಟ್ಟೂರು–ಹರಿಹರ–ಹರಪ್ಪನಹಳ್ಳಿ, ಚಿಕ್ಕಮಗಳೂರು–ಸಕಲೇಶಪುರ, ಮುನಿರಾಬಾದ್–ಮೆಹಬೂಬ್‌ನಗರ, ಬಾಗಲಕೋಟೆ–ಕುಡಚಿ, ತುಮಕೂರು–ಚಿತ್ರದುರ್ಗ–ದಾವಣಗೆರೆ, ಮಾರಿಕುಪ್ಪಂ–ಕುಪ್ಪಂ, ಗದಗ–ವಾಡಿ, ಶಿವಮೊಗ್ಗ–ರಾಣೆಬೆನ್ನೂರು ಹೊಸ ರೈಲು ಮಾರ್ಗಗಳಿಗೆ ಹೆಚ್ಚುವರಿ ಅನುದಾನ ಘೋಷಿಸಲಾಗಿದೆ.

ಉಪನಗರ ರೈಲಿಗೆ ₹350 ಕೋಟಿ: ಬೆಂಗಳೂರಿನ ಸಂಚಾರ ದಟ್ಟಣೆ ತಗ್ಗಿಸಲು ರೂಪಿಸಲಾಗಿರುವ ಉಪನಗರ ರೈಲು ಯೋಜನೆಗೆ ಈ ಸಲ ₹350 ಕೋಟಿ ಮೀಸಲಿಡಲಾಗಿದೆ.

147 ಕಿ.ಮೀ. ಉದ್ದದ ಈ ಯೋಜನೆಗೆ ಕೇಂದ್ರ ಸಚಿವ ಸಂಪುಟ 2020ರಲ್ಲಿ ಅನುಮೋದನೆ ನೀಡಿತ್ತು. ₹15,767 ಕೋಟಿಯ ಈ ಯೋಜನೆಗೆ ಕೇಂದ್ರ ಶೇ 20 ಹಾಗೂ ರಾಜ್ಯ ಶೇ 20ರಷ್ಟು ಹಣ ಭರಿಸಬೇಕಿದೆ. ಶೇ 60 ಮೊತ್ತವನ್ನು ಸಾಲವಾಗಿ ಪಡೆಯಲಾಗುತ್ತದೆ. ಕೇಂದ್ರವು 2022–23ರಲ್ಲಿ ₹50 ಕೋಟಿ, 23–24ರಲ್ಲಿ ₹450 ಕೋಟಿ ಅನುದಾನ ನೀಡಿತ್ತು.

ರಾಯಚೂರಿನಲ್ಲಿ ಏಮ್ಸ್ ಸ್ಥಾಪಿಸಬೇಕು ಎಂದು ರಾಜ್ಯ ಸರ್ಕಾರವು ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು. ಬಜೆಟ್‌ನಲ್ಲಿ ಇದರ ಬಗ್ಗೆ ಪ್ರಸ್ತಾಪ ಇಲ್ಲ. ಬೆಂಗಳೂರಿನ ವರ್ತುಲ ರಸ್ತೆ ಯೋಜನೆಗೆ ಅನುದಾನ ನೀಡುವ ಬಗ್ಗೆಯೂ ಉಲ್ಲೇಖ ಇಲ್ಲ.

ಕಾರ್ಮಿಕರ ಅನುಕೂಲಕ್ಕೆ ಹಲವು ಕ್ರಮ

ಪ್ರಜಾವಾಣಿ ವಾರ್ತೆ

ಉದ್ಯೋಗ ಮತ್ತು ಕೌಶಲ ಸೇರಿದಂತೆ ಕಾರ್ಮಿಕರಿಗೆ ಹಲವು ಸೇವೆಗಳನ್ನು ಒದಗಿಸಲು ಕೇಂದ್ರ ಸರ್ಕಾರವು ಅನುಕೂಲ ಮಾಡಿಕೊಡಲಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದಾರೆ.

ಇ–ಶ್ರಮ್ ಪೋರ್ಟಲ್ ಅನ್ನು ಇತರ ಪೋರ್ಟಲ್‌ಗಳೊಂದಿಗೆ ಜೋಡಿಸಲಾಗುವುದು. ಇದರಿಂದ ಹಲವು ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಇದರೊಟ್ಟಿಗೆ ವೇಗವಾಗಿ ಬದಲಾಗುತ್ತಿರುವ ಕಾರ್ಮಿಕ ಮಾರುಕಟ್ಟೆ, ಕೌಶಲದ ಅವಶ್ಯಕತೆ ಹಾಗೂ ಲಭ್ಯವಿರುವ ಉದ್ಯೋಗದ ಮಾಹಿತಿಯು ಸಂಭಾವ್ಯ ಉದ್ಯೋಗದಾತರು ಮತ್ತು ಕೌಶಲ ಹೊಂದಿದ ಮಾನವ ಸಂಪನ್ಮೂಲ ಪೂರೈಕೆದಾರರ ನಡುವೆ ಸಂಪರ್ಕ ಒದಗಿಸುವ ಕಾರ್ಯವಿಧಾನವು ಸಹ ಈ ಸೇವೆಯಲ್ಲಿ ಒಳಗೊಂಡಿರಲಿದೆ ಎಂದಿದ್ದಾರೆ.

ಕೈಗಾರಿಕೆ ಮತ್ತು ವಹಿವಾಟಿಗೆ ಅನುಕೂಲವಾಗುವಂತೆ 'ಶ್ರಮ್ ಸುವಿಧಾ' ಹಾಗೂ 'ಸಮಾಧಾನ್ ಪೋರ್ಟಲ್'ಗಳನ್ನು ಮರುವಿನ್ಯಾಸಗೊಳಿಸಲಾಗು ವುದು ಎಂದು ಹೇಳಿದ್ದಾರೆ.

ಅಭಿಪ್ರಾಯ

ಮಣಿಪುರ ಜನಾಂಗೀಯ ಸಂಘರ್ಷ ಮಾತ್ರವಲ್ಲ ಪ್ರವಾಹದಿಂದಲೂ ನಲುಗಿದೆ. ಪ್ರವಾಹದಿಂದ ಸಂಕಷ್ಟ ಎದುರಿಸುತ್ತಿರುವ ಈಶಾನ್ಯದ ಎಲ್ಲ ರಾಜ್ಯಗಳಿಗೆ ಬಜೆಟ್‌ನಲ್ಲಿ ನೆರವು ಘೋಷಿಸಿರುವ ಕೇಂದ್ರ, ಮಣಿಪುರವನ್ನು ನಿರ್ಲಕ್ಷಿಸಿದೆ. ಕಳೆದ ಎರಡು ದಶಕಗಳಲ್ಲಿ ಮಣಿಪುರ ಎರಡು ಅತ್ಯಂತ ಭೀಕರ ಪ್ರವಾಹಗಳನ್ನು ಎದುರಿಸಿದೆ. 50 ಸಾವಿರಕ್ಕೂ ಹೆಚ್ಚು ಜನರು ನೆಲೆ ಕಳೆದುಕೊಂಡಿದ್ದಾರೆ. ಆದರೆ, ಈ ಬಾರಿಯ ಬಜೆಟ್‌ನಲ್ಲಿ ಯಾವುದೇ ನೆರವು ಘೋಷಿಸಿಲ್ಲ. ನಮಗೆ ನಿರಾಸೆಯಾಗಿದೆ

ಕೆ.ಮೇಘಚಂದ್ರ ಸಿಂಗ್, ಮಣಿಪುರ ಕಾಂಗ್ರೆಸ್ ಅಧ್ಯಕ್ಷ

ಪ್ರಸಕ್ತ ಬಜೆಟ್‌ನಲ್ಲಿ ತೆಲಂಗಾಣ ರಾಜ್ಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ರಾಜ್ಯ ಕುರಿತ ತನ್ನ ಪಕ್ಷಪಾತ ಧೋರಣೆಯನ್ನು ಕೇಂದ್ರ ಸರ್ಕಾರ ಪ್ರದರ್ಶಿಸಿದೆ. ತನ್ನ ಮಿತ್ರಪಕ್ಷಗಳಾದ ಟಿಡಿಪಿ, ಜೆಡಿಯು ಮೆಚ್ಚಿಸುವುದಕ್ಕಾಗಿ ಎನ್‌ಡಿಎ ರೂಪಿಸಿರುವ ಬಜೆಟ್. ಇದು 'ಕುರ್ಚಿ ಬಚಾವೊ ಬಜೆಟ್' (ಕುರ್ಚಿ ಉಳಿಸಿ ಬಜೆಟ್) ಕೂಡ ಆಗಿದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು

ಎ.ರೇವಂತ ರೆಡ್ಡಿ, ತೆಲಂಗಾಣ ಮುಖ್ಯಮಂತ್ರಿ

ಕೃಷಿ ಉತ್ಪಾದನೆ ಹೆಚ್ಚಿಸುವುದಕ್ಕಾಗಿ ಬಜೆಟ್‌ನಲ್ಲಿ ಘೋಷಿಸಿರುವ ಹಲವಾರು ಕ್ರಮಗಳಿಂದ ಜಮ್ಮು–ಕಾಶ್ಮೀರಕ್ಕೆ ದೊಡ್ಡ ಪ್ರಮಾಣದಲ್ಲಿ ಪ್ರಯೋಜನವಾಗಲಿದೆ. ನೈಸರ್ಗಿಕ ಕೃಷಿ, ಎಣ್ಣೆಕಾಳುಗಳ ಬೇಸಾಯ, ಸಾಗಾಣಿಕೆ ವ್ಯವಸ್ಥೆಗೆ ಉತ್ತೇಜನ ಹಾಗೂ ಸಹಕಾರ ತತ್ವಗಳು ಜಮ್ಮು–ಕಾಶ್ಮೀರದ ರೈತರು, ಗ್ರಾಮಗಳು ಹಾಗೂ ಕಾರ್ಮಿಕರ ಪ್ರಗತಿಯನ್ನು ಖಾತ್ರಿಪಡಿಸುತ್ತವೆ

ಮನೋಜ್ ಸಿನ್ಹಾ, ಜಮ್ಮು–ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್



ಬಜೆಟ್‌ನಲ್ಲಿ ಪಂಜಾಬ್ ಮತ್ತು ದೆಹಲಿಗೆ ಹಣಕಾಸು ಸಮರ್ಪಕವಾಗಿ ಹಂಚಿಕೆಯಾಗಿಲ್ಲ. ಇದು 'ಸರ್ಕಾರ ಉಳಿಸಿ, ಹಣದುಬ್ಬರ ಹೆಚ್ಚಿಸಿ' ಎಂಬ ಘೋಷವಾಕ್ಯದ ಬಜೆಟ್

ಸಂಜಯ್ ಸಿಂಗ್, ಎಎಪಿ ರಾಜ್ಯಸಭಾ ಸದಸ್ಯ

ಮಹಿಳೆಯರಿಗೆ ನಿರ್ದಿಷ್ಟ ಯೋಜನೆಗಳ ಕೊರತೆ

ಬಜೆಟ್ ವಿಶ್ಲೇಷಣೆ

ಮಾಲಿನಿ ಎಲ್.ತಂತ್ರಿ


ನಳಿನ್ ಕುಮಾರ್

ಭಾರತವು ಈಗ ಕವಲುದಾರಿಯಲ್ಲಿದೆ. ಒಂದೆಡೆ, ಜಾಗತಿಕ ಮಟ್ಟದಲ್ಲಿ ಪ್ರಮುಖ ರಾಷ್ಟ್ರ ಎಂಬ ಹೆಗ್ಗುರುತನ್ನು ಪಡೆದಿದ್ದರೆ, ಮತ್ತೊಂದೆಡೆ, ದೇಶೀಯ ಮಟ್ಟದಲ್ಲಿ ಅನುಷ್ಠಾನಗಳ ವಿಚಾರದಲ್ಲಿರುವ ತೊಡಕುಗಳ ನಿವಾರಣೆಗೆ ಮಾರ್ಗಗಳನ್ನು ಹುಡುಕುತ್ತಿದೆ. ದೇಶದಲ್ಲಿ ಮಹಿಳೆಯರು ಮತ್ತು ಮಕ್ಕಳಿಗೆ ಸಂಬಂಧಿಸಿದ ಕ್ಷೇತ್ರದಲ್ಲಿಯೂ ಇಂತಹ ವೈರುಧ್ಯ ಇದೆ.

ಭಾರತವು ಜನಸಂಖ್ಯೆಯ ಸ್ವರೂಪದಲ್ಲಿ ಬದಲಾವಣೆಗಳನ್ನು ಕಾಣುತ್ತಿದೆ. ಇದೇ ಹೊತ್ತಿಗೆ, ಜನಪ್ರಿಯ ನಿರೀಕ್ಷೆಗಳಿಗೆ ವಿರುದ್ಧವಾಗಿ, ದೇಶದಲ್ಲಿ ಮಹಿಳೆಯರು ಉದ್ಯೋಗಗಳಲ್ಲಿ ಪಾಲ್ಗೊಳ್ಳುತ್ತಿರುವ ಪ್ರಮಾಣವು ನಿಧಾನವಾಗಿ ಕುಸಿಯುತ್ತಿದೆ. ಮತ್ತಷ್ಟು ಆತಂಕಕಾರಿಯಾದ ವಿಚಾರವೇನೆಂದರೆ, ಎಸ್‌ಟಿಇಎಮ್ (STEM) ವಿಭಾಗಗಳಲ್ಲಿ (ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತಕ್ಕೆ ಸಂಬಂಧಿಸಿದ ಶಿಕ್ಷಣ, ಉದ್ಯೋಗ) ಮಹಿಳೆಯರ ದಾಖಲಾತಿಯ ಪ್ರಮಾಣವು ಶೇ 43 ಆಗಿದ್ದರೆ, ಉದ್ಯೋಗ ಮಾಡುತ್ತಿರುವವರ ಪ್ರಮಾಣ ಕೇವಲ ಶೇ 29ರಷ್ಟಿದೆ.

ಇದೇ ಕಾಲಕ್ಕೆ, ಕಳೆದ ಹತ್ತು ವರ್ಷಗಳಿಂದ, ದೇಶದ ಲಿಂಗಾನುಪಾತವು (ಹುಟ್ಟಿನ ಆಧಾರದಲ್ಲಿ–ಎಸ್‌ಆರ್‌ಬಿ) ಉತ್ತಮಗೊಂಡಿದೆ. 2014–15ರಲ್ಲಿ 918 ಇದ್ದ ಲಿಂಗ ಅನುಪಾತವು 2023–24ರಲ್ಲಿ 930ಕ್ಕೆ ಏರಿಕೆಯಾಗಿದೆ. ಜತೆಗೆ, 2014–16ರಲ್ಲಿ ಒಂದು ಲಕ್ಷಕ್ಕೆ 130 ತಾಯಂದಿರು (ಎಂಎಂಆರ್) ಸಾಯುತ್ತಿದ್ದರು. 2018–20ರ ಹೊತ್ತಿಗೆ ದೇಶದಲ್ಲಿ ತಾಯಂದಿರ ಮರಣ ಪ್ರಮಾಣವು ಒಂದು ಲಕ್ಷಕ್ಕೆ 97 ಆಗಿದೆ. ಈ ಬಾರಿಯ ಆರ್ಥಿಕ ಸಮೀಕ್ಷೆಯಲ್ಲಿ ಹೇಳಿರುವಂತೆ, ತಾಯಂದಿರ ಮರಣ ಪ್ರಮಾಣದ ಇಳಿಕೆಯ ಶ್ರೇಯವು ಮಹಿಳೆಯರಿಗಾಗಿ ಬಜೆಟ್‌ನಲ್ಲಿ ಹೆಚ್ಚು ಅನುದಾನ (ಕಳೆದ ಹತ್ತು ವರ್ಷಗಳಲ್ಲಿ ಶೇ 218.8) ನೀಡಿದ್ದಕ್ಕೆ ಸಲ್ಲಬೇಕು.

'ವಿಕಸಿತ ಭಾರತ' ಸಾಧ್ಯವಾಗಬೇಕು ಎಂದರೆ, ಬಡವರು, ಅನ್ನದಾತರ ಜತೆಗೆ ಮಹಿಳೆಯರು ಮತ್ತು ಯುವ ಜನತೆಯ ಅಭಿವೃದ್ಧಿ ಆಗಬೇಕು ಎಂದು ಈ ಬಾರಿಯ ಬಜೆಟ್‌ನಲ್ಲಿಯೂ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಸ್ತಾಪಿಸಿದ್ದಾರೆ. ಆದರೆ, ಮಹಿಳೆಯರಿಗಾಗಿ ಮಧ್ಯಂತರ ಬಜೆಟ್‌ನಲ್ಲಿ ಇದ್ದಂತಹ ನಿರ್ದಿಷ್ಟ ಯೋಜನೆಗಳು ಈ ಬಜೆಟ್‌ನಲ್ಲಿ ಕಾಣುತ್ತಿಲ್ಲ. ಮಹಿಳಾ ಹಾಸ್ಟೆಲ್‌ಗಳು, ಶಿಶು ಆರೈಕೆ ಕೇಂದ್ರಗಳು, ಮಹಿಳೆಯರಿಗಾಗಿಯೇ ಕೌಶಲ ತರಬೇತಿ ಯೋಜನೆ ಕೈಗೊಳ್ಳಲು ಭಾಗೀದಾರಿಕೆ ಮತ್ತು ಮಹಿಳಾ ಸ್ವಸಹಾಯ ಗುಂಪುಗಳಿಗೆ ಮಾರುಕಟ್ಟೆ ಸೃಷ್ಟಿಗೆ ಉತ್ತೇಜನ ನೀಡುವುದು ಸೇರಿದಂತೆ ಹಲವು ಕಾರ್ಯಕ್ರಮಗಳ ಪ್ರಸ್ತಾವ ಮಾಡಲಾಗಿತ್ತು.

ಉದ್ಯಮದ ಅಗತ್ಯಕ್ಕೆ ತಕ್ಕಂತೆ ಕೋರ್ಸ್‌ಗಳನ್ನು ಪುನರ್ ಸಂಯೋಜಿಸುವುದು ಉತ್ತಮ ನಡೆಯಾಗಿದ್ದು, ಇದರಿಂದ ಯುವಜನರು, ವಿಶೇಷವಾಗಿ ಮಹಿಳೆಯರು, ಉದ್ಯೋಗ ಪಡೆಯುವ ಸಾಧ್ಯತೆ ಹೆಚ್ಚಾಗಲಿದೆ. ಜತೆಗೆ, ಮಹಿಳೆಯರ ಅಭಿವೃದ್ಧಿಗಾಗಿ ₹3 ಲಕ್ಷ ಕೋಟಿಗೂ ಹೆಚ್ಚಿನ ಯೋಜನೆಗಳನ್ನು ಬಜೆಟ್‌ನಲ್ಲಿ ಘೋಷಿಸಲಾಗಿದ್ದು, ಅವು ಮಹಿಳೆಯರು ಮತ್ತು ಬಾಲಕಿಯರಿಗೆ ನೆರವಾಗಲಿವೆ ಎನ್ನಲಾಗಿದೆ. ಆದರೆ, ಈ ಪೈಕಿ ಎಷ್ಟು ಮೊತ್ತ ಶಿಕ್ಷಣ, ಆರೋಗ್ಯ (ಆಶಾ, ಅಂಗನವಾಡಿ) ಕೌಶಲಾಭಿವೃದ್ಧಿ ಮತ್ತು ಸುರಕ್ಷತೆಗೆ ವಿನಿಯೋಗವಾಗಲಿದೆ ಎನ್ನುವುದರ ಬಗ್ಗೆ ಸ್ಪಷ್ಟತೆ ಇಲ್ಲ.

ಹಣಕಾಸು ಸಚಿವರು ಯೋಜನೆಗಳ ಅನುಷ್ಠಾನದಲ್ಲಿ ರಾಜ್ಯಗಳ ಪಾತ್ರದ ಬಗ್ಗೆ ಒತ್ತಿ ಹೇಳಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಏಕೆಂದರೆ, ಬೆಂಗಳೂರು ಸೇರಿದಂತೆ ಕರ್ನಾಟಕದ ಅಂಗನವಾಡಿಗಳ ನಿರಾಶಾದಾಯಕ ಪರಿಸ್ಥಿತಿಯ ಬಗ್ಗೆ ಅಧ್ಯಯನಗಳು ಬೆಳಕು ಚೆಲ್ಲಿದ್ದು, ಗಮನಾರ್ಹ ಅನುದಾನದ ನಡುವೆಯೂ ಸಕ್ಷಮ ಅಂಗನವಾಡಿ ಮತ್ತು ಪೋಷಣ್–2 ಕಾರ್ಯಕ್ರಮದ ಕಳಪೆ ಸಾಧನೆಯತ್ತ ಬೆಟ್ಟು ಮಾಡುತ್ತಿವೆ. ಬಜೆಟ್ ಉತ್ತಮವಾಗಿದ್ದರೂ, ರಾಜ್ಯಗಳಲ್ಲಿ ಅವುಗಳ ಅನುಷ್ಠಾನ ಯಾವಾಗಲೂ ಉತ್ತಮವಾಗಿಯೇನೂ ಇರುವುದಿಲ್ಲ. ಅಂಗನವಾಡಿಗಳು ಉತ್ತಮ ಸ್ಥಿತಿಯಲ್ಲಿರಬೇಕು. ಏಕೆಂದರೆ, ಬದುಕು ಆರಂಭವಾಗುವುದೇ ಅಲ್ಲಿ.



ಮಾಲಿನಿ ಅವರು ಬೆಂಗಳೂರಿನ ಐಸೆಕ್‌ನಲ್ಲಿ ಸಹ ಪ್ರಾಧ್ಯಾಪಕಿಯಾಗಿದ್ದರೆ, ನಳಿನ್ ಕುಮಾರ್ ಅವರು ಬೆಂಗಳೂರು ಪಿಇಎಸ್ ವಿವಿಯಲ್ಲಿ ಪ್ರಾಧ್ಯಾಪಕರು

ಚಿನ್ನದ ಧಾರಣೆ ₹3,350 ಇಳಿಕೆ

ನವದೆಹಲಿ (ಪಿಟಿಐ): ಬಜೆಟ್‌ನಲ್ಲಿ ಚಿನ್ನ, ಬೆಳ್ಳಿ ಮೇಲಿನ ಕಸ್ಟಮ್ಸ್ ಸುಂಕ ಕಡಿತಗೊಳಿಸುವುದಾಗಿ ಪ್ರಕಟವಾದ ಬೆನ್ನಲ್ಲೇ, ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಭಾರಿ ಇಳಿಕೆಯಾಗಿದೆ.

ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ಚಿನ್ನದ ದರವು 10 ಗ್ರಾಂ ಗೆ ₹3,350 ಇಳಿಕೆಯಾಗಿ, ₹72,300ರಂತೆ ಮಾರಾಟವಾಗಿದೆ. ಕೆ.ಜಿ ಬೆಳ್ಳಿ ಧಾರಣೆಯು ₹3,500 ಕಡಿಮೆಯಾಗಿ ₹87,500ಕ್ಕೆ ತಲುಪಿದೆ.

ಕಳೆದ ಐದು ದಿನದ ವಹಿವಾಟಿನಲ್ಲಿ ಬೆಳ್ಳಿ ಧಾರಣೆ ₹6,900 ಇಳಿಕೆಯಾಗಿದ್ದರೆ, ಚಿನ್ನದ ದರವು ₹3,860 ಕಡಿಮೆಯಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,509
ಇಂದಿನ ಅಂತ್ಯ	24,479
▼	30
ದಿನದ ಕನಿಷ್ಠ	24,074

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹255-425
ದ್ವಿತಳಿ (ಬಿ.ವಿ)	₹256-603

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹570
12 ಕ್ಕೆ	₹75
ಮೈಸೂರು	
100ಕ್ಕೆ	₹573

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1590 (1570)
ಸೋಯಾ (ರಿಫೈನ್ಡ್)	₹965 (965)
ಸೂರ್ಯಕಾಂತಿ (ರಿಫೈನ್ಡ್)	₹990 (965)
ಪಾಮೋಲಿನ್	₹910 (910)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹209
ಆರ್‌ಎಸ್‌ಎಸ್-5	₹203
ಗುಡ್ ಲಾಟ್	₹190

(ಪ್ರತಿ ಕೆ.ಜಿಗೆ)

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

-:ಪಿತೃದೇವೋಭವ:- ವೈಕುಂಠ ಸಮಾರಾಧನೆ

ಶ್ರೀ ಆರ್. ಎನ್. ಮಾಧವ
ಜನನ: 20-12-1948 ಮರಣ: 14-07-2024
ದೈವದೀನರಾದರು ಆದಕಾರಣ ಸ್ವಗೃಹದಲ್ಲಿ 24.07.2024 ಬೆಳಿಗ್ಗೆ 9-00 ಗಂಟೆಗೆ ಪೂಜೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ತಾವುಗಳು ಕುಟುಂಬ ಸಮೇತವಾಗಿ ಆಗಮಿಸಿ ಅಗಲಿದ ಆತ್ಮಕ್ಕೆ ಶಾಂತಿಯನ್ನು ಕೋರಬೇಕೆಂದು ವಿನಂತಿಸುತ್ತೇವೆ
-:ದುಃಖತಪ್ತರು:- ಧರ್ಮಪತ್ನಿ ಸಾವಿತ್ರಿ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು. ಫೋನ್: 8088886269

2nd YEAR REMEMBRANCE



G K Narasimha Murthy
Gavipuram / Hanumanthanagar
From Family, Relatives and Friends

LOOKING FOR JOB OPPORTUNITY
Refer Classifieds on Wednesday

ಆರ್ಥಿಕತೆ ಬೆಳವಣಿಗೆಗೆ ಉತ್ತೇಜನ: ಮಾರುಕಟ್ಟೆಯಿಂದ ₹14 ಲಕ್ಷ ಕೋಟಿ ಸಂಗ್ರಹಕ್ಕೆ ನಿರ್ಧಾರ

ಶೇ 4.9ಕ್ಕೆ ವಿತ್ತೀಯ ಕೊರತೆ ಗುರಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಆದಾಯ ಮತ್ತು ವೆಚ್ಚಗಳ ನಡುವಿನ ವಿತ್ತೀಯ ಕೊರತೆಯನ್ನು 2024-25ನೇ ಆರ್ಥಿಕ ಸಾಲಿಗೆ ಜಿಡಿಪಿಯ ಶೇ 4.9ರಷ್ಟಕ್ಕೆ ತಗ್ಗಿಸುವ ಗುರಿ ನಿಗದಿಪಡಿಸಿದೆ.

ಆದರೆ, ವಿತ್ತೀಯ ಹೊಣೆಗಾರಿಕೆ ಹಾಗೂ ಬಜೆಟ್ ನಿರ್ವಹಣೆ ಕಾಯ್ದೆ ಪ್ರಕಾರ ವಿತ್ತೀಯ ಕೊರತೆಯು ಶೇ 3ಕ್ಕಿಂತ ಹೆಚ್ಚಿರಬಾರದು.

ಫೆಬ್ರುವರಿಯಲ್ಲಿ ಮಂಡಿಸಿದ್ದ ಮಧ್ಯಂತರ ಬಜೆಟ್‌ನಲ್ಲಿ ವಿತ್ತೀಯ ಕೊರತೆಯನ್ನು ಪ್ರಸಕ್ತ ಆರ್ಥಿಕ ವರ್ಷಕ್ಕೆ ಶೇ 5.1ಕ್ಕೆ ತಗ್ಗಿಸುವ ಗುರಿ ಹೊಂದಲಾಗಿತ್ತು. ಪೂರ್ಣ ಬಜೆಟ್‌ನಲ್ಲಿ ಇದನ್ನು ಪರಿಷ್ಕರಿಸಲಾಗಿದೆ. 2025-26ನೇ ಆರ್ಥಿಕ ವರ್ಷದಲ್ಲಿ ಶೇ 4.5ಕ್ಕೆ ತಗ್ಗಿಸಲಾಗುವುದು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದಿಂದ ವಿತ್ತೀಯ ಕೊರತೆ ನೀಗಿಸಲು ಕೇಂದ್ರ ಸರ್ಕಾರವು ಮಾರುಕಟ್ಟೆಯಿಂದ ಸರಾಸರಿ ₹14.13 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಲು ನಿರ್ಧರಿಸಿದೆ. ಒಟ್ಟು ನಿವ್ವಳ ಬಂಡವಾಳ ₹11.63 ಲಕ್ಷ ಕೋಟಿ ಸಂಗ್ರಹವಾಗುವ ನಿರೀಕ್ಷೆಯಿದೆ ಎಂದು ತಿಳಿಸಿದ್ದಾರೆ.

ದೇಶದ ಆರ್ಥಿಕತೆಯ ಬೆಳವಣಿಗೆಗೆ ಉತ್ತೇಜನ ನೀಡಲು ಈ ನಿರ್ಧಾರ ಕೈಗೊಳ್ಳಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳು ನೀಡುವ ಲಾಭಾಂಶಕ್ಕಿಂತಲೂ ಹೆಚ್ಚು ಹಣ ಸಂಗ್ರಹಿಸುವ ಗುರಿ ಹೊಂದಿದೆ. ಬಾಂಡ್‌ಗಳನ್ನು ವಿತರಣೆ ಮಾಡುವ ಮೂಲಕ ಈ ಮೊತ್ತ ಸಂಗ್ರಹಿಸಲು ತೀರ್ಮಾನಿಸಿದೆ.

₹10 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ ನಿರೀಕ್ಷೆ: ಸರಕು ಮತ್ತು ಸೇವಾ ತೆರಿಗೆಯಿಂದ ಪ್ರಸಕ್ತ ಹಣಕಾಸು ವರ್ಷದಲ್ಲಿ ₹10.68 ಲಕ್ಷ ಕೋಟಿ ವರಮಾನ ಸಂಗ್ರಹವಾಗಲಿದೆ ಎಂದು ಬಜೆಟ್‌ನಲ್ಲಿ ಅಂದಾಜಿಸಲಾಗಿದೆ. ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 11.6ರಷ್ಟು ಹೆಚ್ಚಿದೆ.

ಲಾಭಾಂಶ: ಮಧ್ಯಂತರ ಬಜೆಟ್‌ನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಂದ 2024-25ನೇ ಆರ್ಥಿಕ ವರ್ಷದಲ್ಲಿ ₹1.02 ಲಕ್ಷ ಕೋಟಿ ಲಾಭಾಂಶದ ಗುರಿ ನಿಗದಿಪಡಿಸಿತ್ತು. ಆರ್‌ಬಿಐ ಮೇ ತಿಂಗಳಿನಲ್ಲಿ ಈ ಗುರಿ ಮೀರಿ ಕೇಂದ್ರಕ್ಕೆ ₹2.11 ಲಕ್ಷ ಕೋಟಿ ಲಾಭಾಂಶ ನೀಡಿದೆ. ಕೇಂದ್ರ ಸಾರ್ವಜನಿಕ ವಲಯದ ಉದ್ದಿಮೆಗಳಿಂದ ₹43,000 ಕೋಟಿ ಲಾಭಾಂಶವನ್ನು ನಿರೀಕ್ಷಿಸಿದೆ.

ಬಂಡವಾಳ ವೆಚ್ಚ ₹11.11 ಲಕ್ಷ ಕೋಟಿ: ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸರ್ಕಾರವು ಬಂಡವಾಳ ವೆಚ್ಚವನ್ನು ₹11.11 ಲಕ್ಷ ಕೋಟಿಗೆ ನಿಗದಿಪಡಿಸಿದೆ. 2023-24ನೇ ಆರ್ಥಿಕ ವರ್ಷದಲ್ಲಿ ₹9.5 ಲಕ್ಷ ಕೋಟಿ ನಿಗದಿಪಡಿಸಿತ್ತು.

ಮೂಲ ಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲು ಉದ್ದೇಶ ಹೊಂದಿದೆ. ಅಲ್ಲದೆ, ರಾಜ್ಯಗಳಿಗೆ ಸಾರ್ವಜನಿಕ ವೆಚ್ಚ ಹೆಚ್ಚಳಕ್ಕೆ ಅನುಗುಣವಾಗಿ ಪ್ರೋತ್ಸಾಹ ನೀಡಲು ಬಜೆಟ್‌ನಲ್ಲಿ ಒತ್ತು ನೀಡಿದೆ.





ಪ್ರತಿ ರೂಪಾಯಿಯಲ್ಲಿ ತೆರಿಗೆ ಪಾಲು 63 ಪೈಸೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಬೊಕ್ಕಸಕ್ಕೆ ಬರುವ ಪ್ರತಿ ಒಂದು ರೂಪಾಯಿಯ ಆದಾಯದಲ್ಲಿ ನೇರ ಮತ್ತು ಪರೋಕ್ಷ ತೆರಿಗೆಯಿಂದ 63 ಪೈಸೆ ಹರಿದು ಬರಲಿದೆ.

ಸಾಲ ಮತ್ತು ಇತರೆ ಮೂಲಗಳಿಂದ 27 ಪೈಸೆ, ಬಂಡವಾಳ ಹಿಂತೆಗೆತ ಸೇರಿ ತೆರಿಗೆಯೇತರ ವರಮಾನ 9 ಪೈಸೆ ಮತ್ತು ಸಾಲವಲ್ಲದ ಬಂಡವಾಳದಿಂದ 1 ಪೈಸೆಯು ಖಜಾನೆಗೆ ಸೇರಲಿದೆ ಎಂದು ಬಜೆಟ್‌ನಲ್ಲಿ ವಿವರಿಸಲಾಗಿದೆ.

ಕಾರ್ಪೊರೇಟ್ ಮತ್ತು ವೈಯಕ್ತಿಕ ಆದಾಯ ತೆರಿಗೆ ಒಳಗೊಂಡ ನೇರ ತೆರಿಗೆಯಿಂದ 36 ಪೈಸೆ ದೊರೆಯಲಿದೆ. ಈ ಪೈಕಿ ವೈಯಕ್ತಿಕ ಆದಾಯ ತೆರಿಗೆದಾರರು ನೀಡುವ ತೆರಿಗೆ ಪಾಲು 19 ಪೈಸೆ ಹಾಗೂ ಕಾರ್ಪೊರೇಟ್ ತೆರಿಗೆ ಪಾಲು 17 ಪೈಸೆ ಆಗಿದೆ.

ಪರೋಕ್ಷ ತೆರಿಗೆ ಲೆಕ್ಕಾಚಾರ: ಪರೋಕ್ಷ ತೆರಿಗೆಗಳ ಪೈಕಿ ಸರಕು ಮತ್ತು ಸೇವಾ ತೆರಿಗೆಯಿಂದ (ಜಿಎಸ್‌ಟಿ) ಬೊಕ್ಕಸಕ್ಕೆ ಪ್ರತಿ ಒಂದು ರೂಪಾಯಿಯಲ್ಲಿ 18 ಪೈಸೆ ಸೇರ್ಪಡೆಯಾಗುತ್ತದೆ. ಅಬಕಾರಿ ಸುಂಕದಿಂದ 5 ಪೈಸೆ ಮತ್ತು ಕಸ್ಟಮ್ಸ್ ಸುಂಕದಿಂದ 4 ಪೈಸೆಯು ಖಜಾನೆಗೆ ಹರಿದು ಬರಲಿದೆ. ಸಾಲ ಮತ್ತು ಇತರೆ ಮೂಲಗಳಿಂದ 27 ಪೈಸೆಯನ್ನು ಖಜಾನೆಗೆ ಸೇರಿಸಲಾಗುತ್ತದೆ.

ಖರ್ಚಿನ ಲೆಕ್ಕಾಚಾರದಲ್ಲಿ ಬಡ್ಡಿ ಪಾವತಿ ಮತ್ತು ರಾಜ್ಯಗಳ ತೆರಿಗೆ ಪಾಲು ಕ್ರಮವಾಗಿ 19 ಪೈಸೆ ಮತ್ತು 21 ಪೈಸೆ ಆಗಿದೆ. ರಕ್ಷಣಾ ಇಲಾಖೆಗೆ 8 ಪೈಸೆ ನಿಗದಿಪಡಿಸಲಾಗಿದೆ.

ಪ್ರತಿ ರೂಪಾಯಿಯಲ್ಲಿ 16 ಪೈಸೆಯು ಕೇಂದ್ರ ವಲಯದ ಯೋಜನೆಗಳ ವೆಚ್ಚಕ್ಕೆ ಮೀಸಲಾಗಿದೆ. ಕೇಂದ್ರ ಪುರಸ್ಕೃತ ಯೋಜನೆಗಳ ವೆಚ್ಚ 8 ಪೈಸೆ ಆಗಿದೆ.

ಆರ್ಥಿಕ ಆಯೋಗ ಮತ್ತು ಇತರೆ ವರ್ಗಾವಣೆಗೆ 9 ಪೈಸೆ, ಸಬ್ಸಿಡಿಗೆ 6 ಪೈಸೆ, ಪಿಂಚಣಿಗೆ 4 ಪೈಸೆ ಹಾಗೂ ಇತರೆ ಖರ್ಚುಗಳಿಗೆ 9 ಪೈಸೆಯನ್ನು ವ್ಯಯ ಮಾಡುತ್ತದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಅನುಭವವುಳ್ಳ ವಾಹನ ಚಾಲಕರುಬೇಕಾಗಿದ್ದಾರೆ. Heavy vehicle ಲೈಸನ್ಸ್ ಹೊಂದಿರಬೇಕು. ಸಂಪರ್ಕಿಸಿ: ಗಾಯತ್ರಿಅಸೋಸಿಯೆಟ್ಸ್, ಬೈರತಿ, ಬೆಂಗಳೂರು 560077. 8453353646/ 6362872796/ 9448488536/ 9844083318.

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ವರ್ಕ್ ಫ್ರಮ್ ಹೋಮ್. ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.15,000 - 43,500/-. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ವರ್ಕ್ ಫ್ರಮ್ ಹೋಂ ಕೆಲಸಗಳಿಗೆ ತಕ್ಷಣ ಬೇಕಾಗಿದ್ದಾರೆ ಸಂಬಳ 25,000 ದಿಂದ 30,000 ಸಂಪರ್ಕಿಸಿ : 9739839008

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6364468422 9663542555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿಮ್ಮೋಗ 8095555517

Security & Detectives

ರಕ್ಷಾ ಸೆಕ್ಯುರಿಟಿ ಸರ್ವಿಸಸ್ ಸೆಕ್ಯುರಿಟಿ ಗಾರ್ಡ್ ಹುದ್ದೆಗಳಿಗೆ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳುತ್ತಿದೆ. ಪ್ರತಿಷ್ಠಿತ MNC ಯಲ್ಲಿ ಉದ್ಯೋಗದ ಸ್ಥಳವು ಬೆಂಗಳೂರು ಆಗಿರುತ್ತದೆ.ಪುರುಷ/ ಮಹಿಳಾ ಅಭ್ಯರ್ಥಿಗಳಿಗೆ ಮೂಲ ಇಂಗ್ಲಿಷ್ ಮಾತನಾಡುವ/ ಬರವಣಿಗೆ ಕೌಶಲ್ಯ ಹೊಂದಿರುವ ಉತ್ತಮ ಅವಕಾಶ, ಕನ್ನಡ ಭಾಷೆ ಹೆಚ್ಚುವರಿ ಪ್ರಯೋಜನವಾಗಿದೆ. ವಿದ್ಯಾರ್ಹತೆ: 10 ನೇ ತರಗತಿ ತೇರ್ಗಡೆಯ ಅಗತ್ಯವಿದೆ, ವಯಸ್ಸು: 18-30 ವರ್ಷಗಳ ನಡುವೆ ಇರಬೇಕು ಉದ್ಯಮದಲ್ಲಿ ಉತ್ತಮ ಸಂಬಳ. ಕ್ಲೈಂಟ್ ಸಂದರ್ಶನದಲ್ಲಿ ಉತ್ತೀರ್ಣರಾಗಲು ಒಳಪಟ್ಟಿರುತ್ತದೆ.ನೋಂದಣಿಗಾಗಿ ಸಂಪರ್ಕಿಸಿ: ಸಂತೋಷ್-9493419561 ವೈ.ಎಸ್.ಶಾಹಿದ್-6281557937 ಎನ್.ಕೆ.ಯಾದವ್ -6300676517.

ಇತರೆ

For Sale

ಸೆಂಟ್ರಿಂಗ್ ಸಾಮಗ್ರಿಗಳು ಲಭ್ಯವಿದೆ (ದೊಡ್ಡಪ್ರಮಾಣ), ಸೆಂಟ್ರಿಂಗ್ ಶೀಟ್ಗಳು, ಕಮಾನುಗಳು , ಕಾಲಾವದಿ ಕಟ್ಟುವಸಾಮಗ್ರಿಗಳು, ಜ್ಯಾಕ್ಗಳು,ಕಟ್ಟಡ ಪ್ರಿಕರಗಳು. ಸ್ಥಳ: ಬೆಂಗಳೂರು, ಅತ್ತಿಬೆಲೆ-9042493334

ಭವಿಷ್ಯ

Astrology

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ

Travel

ಸುಸಜ್ಜಿತ ಪ್ರವಾಸಗಳು: 13.09.2024 06.10.2024 29.10.2024 ರಿಂದ 5/7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. ಸೆಪ್ಟೆಂಬರ್ ಅಕ್ಟೋಬರ್ ತಿಂಗಳಲ್ಲಿ 6 ದಿನಗಳ ದುಬೈ, ಅಬುದಾಬಿ ಶಾರ್ಜಾ/ಬಾಲಿ. 14.10.2024 19.12.2024 ರಿಂದ 10 ದಿನಗಳ ಕಾಂಬೋಡಿಯ ವಿಯಟ್ನಾಂ. 05.10.2024 30.10.2024 ರಿಂದ 11 ದಿನಗಳ ಅಯೋಧ್ಯಾ,ನೇಪಾಳ ಮುಕ್ತಿನಾಥ ಕಾಶಿ. 09.09.2024 18.09.2024 26.09.2024 ರಿಂದ 5/8 ದಿನಗಳ ಕಾಶಿ,ಅಯೋಧ್ಯಾ,ಗಯಾ. 13.09.2024 14.10.2024 ರಿಂದ 15 ದಿನಗಳ ಚಾರ್‌ಧಾಮ್ 17.10.2024 01.11.2024 ರಿಂದ 11 ದಿನಗಳ ಪುರಿ ಕೋಲ್ಕತಾ ಡಾರ್ಜಲಿಂಗ್ ಗ್ಯಾಂಗ್‌ಟಾಕ್. ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

20.09.2024 12 ದಿನಗಳು ಚಾರ್‌ಧಾಮ್ ಪ್ರವಾಸ. 10.10.2024 15 ದಿನಗಳು ಕೋನಾರ್ಕ್ ಪುರಿಜಗನ್ನಾಥ ಭುವನೇಶ್ವರ್ ಕಾಶಿ,ಗಯಾ ಅಯೋಧ್ಯ,ನೇಪಾಳ ಅಲಹಾಬಾದ್ ಪೋಕ್ರಾ,ಮುಕ್ತಿನಾಥ, 30.10.2024 16 ದಿನಗಳು ಮಹಾರಾಷ್ಟ್ರ ಮಧ್ಯಪ್ರದೇಶ ಗುಜರಾತ್ ಅಷ್ಟ ಜ್ಯೋತಿರ್ಲಿಂಗಗಳ ಪ್ರವಾಸ. ಮಲ್ಟಿ ಎಕ್ಸ್‌ಎಲ್ ಬಸ್ಸು ವಿಮಾನದಲ್ಲಿ ಪ್ರಯಾಣ. ಸಂಪರ್ಕಿಸಿ: ವಿಷ್ಣನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು-70. 9342287551 8050629305

13 ದಿನಗಳ ಚಾರ್‌ಧಾಮ್. 8 ದಿನಗಳ ನೇಪಾಳ,ಮುಕ್ತಿನಾಥ. 13/7 ದಿನಗಳು ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್. 6 ದಿನಗಳ ಇಂಡೋನೇಷ್ಯಾ ಬಾಲಿ. 6 ದಿನಗಳ ದುಬೈ. 18 ದಿನಗಳ ಯುಕೆ,ಯುರೋಪ್ (10ದೇಶಗಳು). 6 ದಿನಗಳ ಶ್ರೀಲಂಕಾ ಪ್ರವಾಸ. ಸಂಪರ್ಕಿಸಿ: 9900080793 9880079588. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು-04

29.08.2024: 6`ದಿನಗಳು ವಿಮಾನದಲ್ಲಿ ಕಾಶಿ,ಅಯೋಧ್ಯ ಗಯಾ,ಅಲಹಾಬದ್ 32000/ (ಕೆಲವೇ`ಸೀಟುಗಳಿವೆ) 16.09.2024: 12/16`ದಿನಗಳು ದೆಹಲಿ,ಹರಿದ್ವರ್ ಬದ್ರಿನಾಥ್,ಕೇದಾರನಾಥ ಗಂಗೋತ್ರಿ,ಯಮುನೋತ್ರಿ 30000/`42000/ ಶ್ರೀಸಾಯಿ`ರಾಘವೇಂದ್ರ ಟ್ರಾವೆಲ್ಸ್ 9739847429/ 9845560219/ 9886968166

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560| +91 9901641752 | 080-45557163/164
*Conditions apply

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8500-9455
ಬೆಂಗಳೂರು	₹8000-12000
ಕೆ.ಆರ್.ಪೇಟೆ	₹7000-9550
ತಿಪಟೂರು	₹9300-9500

ಬಂಡವಾಳ ವೃದ್ಧಿ ತೆರಿಗೆ ಬಿಸಿ

ನವದೆಹಲಿ (ಪಿಟಿಐ): ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಡಿಮ್ಯಾಟ್ ಖಾತೆಯಲ್ಲಿ ಹೂಡಿಕೆದಾರರು ಇರಿಸಿಕೊಂಡ ಷೇರುಗಳನ್ನು ಮಾರಾಟ ಮಾಡಿದ ಬಳಿಕ ಬರುವ ಲಾಭಕ್ಕೆ ವಿಧಿಸುವ ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆಯನ್ನು (ಎಲ್‌ಟಿಸಿಜಿ) ಶೇ 10ರಿಂದ ಶೇ 12.5ಕ್ಕೆ ಏರಿಕೆ ಮಾಡಲಾಗಿದೆ.

ಕರೆನ್ಸಿ ಮತ್ತು ಚಿನ್ನ ಮಾರಾಟಕ್ಕೂ ಈ ತೆರಿಗೆ ಅನ್ವಯಿಸಲಿದೆ. ಅಲ್ಲದೆ, ತೆರಿಗೆ ವಿನಾಯಿತಿ ಪಡೆಯುವ ಮೊತ್ತವನ್ನು ₹1 ಲಕ್ಷದಿಂದ ₹1.25 ಲಕ್ಷಕ್ಕೆ ಹೆಚ್ಚಿಸಲಾಗಿದೆ.

ಅಲ್ಪಕಾಲದ ಬಂಡವಾಳ ವೃದ್ಧಿ ತೆರಿಗೆಯನ್ನು ಶೇ 15ರಿಂದ ಶೇ 20ಕ್ಕೆ ಏರಿಕೆ ಮಾಡಲಾಗಿದೆ. 'ಬಜೆಟ್‌ನಲ್ಲಿ ಪ್ರಸ್ತಾಪಿಸಲಾದ ಬಂಡವಾಳ ವೃದ್ಧಿ ತೆರಿಗೆಯಿಂದ ಬೊಕ್ಕಸಕ್ಕೆ ಹೆಚ್ಚುವರಿಯಾಗಿ ₹15,000 ಕೋಟಿ ಸಂಗ್ರಹವಾಗಲಿದೆ' ಎಂದು ಕಂದಾಯ ಕಾರ್ಯದರ್ಶಿ ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ.

ಎನ್‌ಪಿಎಸ್ ವಾತ್ಸಲ್ಯ

ರಾಷ್ಟ್ರೀಯ ಪಿಂಚಣಿ ಯೋಜನೆಯಡಿ ಮಕ್ಕಳಿಗೆ ಹೊಸದಾಗಿ ಎನ್‌ಪಿಎಸ್ ವಾತ್ಸಲ್ಯ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯಡಿ ಪೋಷಕರು ತಮ್ಮ ಮಕ್ಕಳಿಗೆ ಸಣ್ಣ ವಯಸ್ಸಿನಲ್ಲಿಯೇ ಪಿಂಚಣಿ ಯೋಜನೆಯನ್ನು ಪ್ರಾರಂಭಿಸಬಹುದಾಗಿದೆ. ಆ ಮಗುವಿಗೆ 18 ವರ್ಷ ತುಂಬಿದ ಬಳಿಕ ಸಾಮಾನ್ಯ ರಾಷ್ಟ್ರೀಯ ಪಿಂಚಣಿಯಾಗಿ ಈ ಯೋಜನೆ ಪರಿವರ್ತನೆಯಾಗಲಿದೆ.

ತೆರಿಗೆ ವಿನಾಯಿತಿ ಹೆಚ್ಚಳ: ಖಾಸಗಿ ವಲಯದಲ್ಲಿ ಉದ್ಯೋಗದಾತರು ರಾಷ್ಟ್ರೀಯ ಪಿಂಚಣಿ ಯೋಜನೆಯಡಿ ನೀಡುವ ಉದ್ಯೋಗಿಯ ಮೂಲ ವೇತನದ ಶೇ 10ರಷ್ಟು ಮೊತ್ತಕ್ಕೆ ಈ ಮೊದಲು ತೆರಿಗೆ ವಿನಾಯಿತಿ ಲಭಿಸುತ್ತಿತ್ತು. ಸದ್ಯ ಇದನ್ನು ಶೇ 14ರಷ್ಟಕ್ಕೆ ಹೆಚ್ಚಿಸಲಾಗಿದೆ. ಸದ್ಯ ಸರ್ಕಾರಿ ನೌಕರರಿಗೆ ಶೇ 14ರಷ್ಟಕ್ಕೆ ತೆರಿಗೆ ವಿನಾಯಿತಿ ಇದೆ.

ತೆರಿಗೆ ವರಮಾನ ಸಂಗ್ರಹ ಎಷ್ಟು?

ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹38.31 ಲಕ್ಷ ಕೋಟಿ ತೆರಿಗೆ ವರಮಾನ ಸಂಗ್ರಹಿಸುವ ಗುರಿ ನಿಗದಿಪಡಿಸಲಾಗಿದೆ. ಮಧ್ಯಂತರ ಬಜೆಟ್‌ನಲ್ಲಿ ನಿಗದಿಪಡಿಸಿದ್ದ ಈ ಗುರಿಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

2023-24ನೇ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 11.46ರಷ್ಟು ಹೆಚ್ಚಿದೆ. ಇದರಲ್ಲಿ ನೇರ ತೆರಿಗೆಯಿಂದ ₹21.99 ಲಕ್ಷ ಕೋಟಿ (ವೈಯಕ್ತಿಕ ಆದಾಯ ತೆರಿಗೆ ಮತ್ತು ಕಾರ್ಪೊರೇಟ್ ತೆರಿಗೆ) ಮತ್ತು ಪರೋಕ್ಷ ತೆರಿಗೆಯಿಂದ (ಕಸ್ಟಮ್ಸ್, ಅಬಕಾರಿ ಸುಂಕ ಮತ್ತು ಜಿಎಸ್‌ಟಿ) ₹16.32 ಲಕ್ಷ ಕೋಟಿ ಸಂಗ್ರಹಿಸಲು ನಿರ್ಧರಿಸಿದೆ.

ನವೋದ್ಯಮ: ಏಂಜೆಲ್ ತೆರಿಗೆ ರದ್ದು

ನವದೆಹಲಿ (ಪಿಟಿಐ): ನವೋದ್ಯಮಗಳಲ್ಲಿ (ಸ್ಟಾರ್ಟ್‌ಅಪ್) ಬಂಡವಾಳ ತೊಡಗಿಸುವ ಹೂಡಿಕೆದಾರರ (ಏಂಜೆಲ್ ಇನ್‌ವೆಸ್ಟರ್ಸ್) ಮೇಲೆ ವಿಧಿಸುತ್ತಿದ್ದ ಶೇ 30.9ರಷ್ಟು ತೆರಿಗೆಯನ್ನು (ಏಂಜೆಲ್ ಟ್ಯಾಕ್ಸ್) ಕೇಂದ್ರ ಸರ್ಕಾರ ರದ್ದುಪಡಿಸಿದೆ. ದೇಶದಲ್ಲಿ ನವೋದ್ಯಮಗಳಿಗೆ ಉತ್ತೇಜನ ನೀಡುವುದು ಹಾಗೂ ಎಲ್ಲಾ ವರ್ಗದ ಹೂಡಿಕೆದಾರರಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಈ ನಿರ್ಧಾರ ಕೈಗೊಂಡಿದೆ.

ಷೇರುಪೇಟೆಗಳಲ್ಲಿ ನೋಂದಾಯಿತ ಆಗಿರದ ಕಂಪನಿಗಳು ಅಥವಾ ನವೋದ್ಯಮಗಳಲ್ಲಿ ವಿದೇಶಗಳಿಂದ ಆಗುವ ಹೂಡಿಕೆಗೆ ಏಂಜೆಲ್ ತೆರಿಗೆ ಅನ್ವಯವಾಗುತಿತ್ತು. ಬಜೆಟ್‌ಗೂ ಮುನ್ನವೇ ಈ ತೆರಿಗೆ ರದ್ದುಪಡಿಸುವಂತೆ ಡಿಪಿಐಐಟಿಯು ಸರ್ಕಾರಕ್ಕೆ ಶಿಫಾರಸು ಮಾಡಿತ್ತು.

'ದೇಶದಲ್ಲಿ ನವೋದ್ಯಮಗಳಿಗೆ ಮತ್ತಷ್ಟು ಬಲ ನೀಡಬೇಕಿದೆ. ಹೂಡಿಕೆದಾರರಿಗೆ ಉತ್ಸಾಹ ತುಂಬಿ ಅವರ ಅನ್ವೇಷಣೆಗಳಿಗೆ ಬೆಂಬಲ ನೀಡಲು ಈ ತೆರಿಗೆಯನ್ನು ರದ್ದುಪಡಿಸಲಾಗಿದೆ' ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಪ್ರಸ್ತುತ ದೇಶದಲ್ಲಿ 1.17 ಲಕ್ಷಕ್ಕೂ ಹೆಚ್ಚು ನವೋದ್ಯಮಗಳು ನೋಂದಣಿಯಾಗಿವೆ. ಸರ್ಕಾರ ರೂಪಿಸಿರುವ ನವೋದ್ಯಮ ನೀತಿಗೆ ಅನುಗುಣವಾಗಿ ಇವುಗಳಿಗೆ ಪ್ರೋತ್ಸಾಹ ಧನ ದೊರೆಯುತ್ತದೆ. 'ಸರ್ಕಾರದ ಈ ನಿರ್ಧಾರವು ಸಕಾರಾತ್ಮಕವಾಗಿದೆ. ಇದು ಹೂಡಿಕೆದಾರರಿಗೆ ತೆರಿಗೆ ಉಳಿತಾಯಕ್ಕಷ್ಟೇ ಅನುಕೂಲ ಕಲ್ಪಿಸುವುದಿಲ್ಲ. ದೇಶೀಯ ನವೋದ್ಯಮಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆಗೂ ಅವಕಾಶ ಕಲ್ಪಿಸಲಿದೆ' ಎಂದು ಡೆಲಾಯ್ಟ್ ಇಂಡಿಯಾದ ಪಾಲುದಾರ ಸುಮಿತ್ ಸಿಂಘಾನಿಯ ಹೇಳಿದ್ದಾರೆ.

'ಎಂಎಸ್‌ಎಂಇಗೆ ಬೆಂಬಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಯಾರಿಕಾ ವಲಯದಲ್ಲಿ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ (ಎಂಎಸ್‌ಎಂಇ) ಬಜೆಟ್‌ನಲ್ಲಿ ಹಣಕಾಸಿನ ನೆರವು ಒದಗಿಸಲಾಗಿದೆ. ₹100 ಕೋಟಿ ವರೆಗಿನ ಕ್ರೆಡಿಟ್ ಗ್ಯಾರಂಟಿ ಯೋಜನೆಯು ಯಂತ್ರೋಪಕರಣಗಳ ಹೂಡಿಕೆಗೆ ಉತ್ತೇಜಿಸಲು ಮತ್ತು ಉತ್ಪಾದಕತೆ ಹೆಚ್ಚಿಸಲು ನೆರವಾಗಲಿದೆ ಎಂದು ಕಾಸಿಯಾ ತಿಳಿಸಿದೆ.

ಎಂ.ಜಿ. ರಾಜಗೋಪಾಲ್

ಔಪಚಾರಿಕ ವಲಯದ ಉದ್ಯೋಗ ಉತ್ತೇಜಿಸುವ ಗುರಿ ಹೊಂದಲಾಗಿದೆ. ಇದಕ್ಕಾಗಿ ಮೂರು ಉದ್ಯೋಗ ಸಂಯೋಜಿತ ಪ್ರೋತ್ಸಾಹ ಯೋಜನೆಗಳನ್ನು ಪ್ರಕಟಿಸಲಾಗಿದೆ. ಸರ್ಕಾರದ ಈ ನಿರ್ಧಾರ ಸ್ವಾಗತಾರ್ಹವಾಗಿದೆ ಎಂದು ಕಾಸಿಯಾ ಅಧ್ಯಕ್ಷ ಎಂ.ಜಿ. ರಾಜಗೋಪಾಲ್ ಹೇಳಿದ್ದಾರೆ.

ಸಾಲ ಮರು ಪಾವತಿಸಿದ ಉದ್ಯಮಿಗಳಿಗೆ ಮುದ್ರಾ ಯೋಜನೆಯಡಿ ನೀಡುವ ಸಾಲವನ್ನು ₹10 ಲಕ್ಷದಿಂದ ₹20 ಲಕ್ಷಗಳಿಗೆ ಹೆಚ್ಚಿಸಲಾಗಿದೆ. ಇದು ಸಣ್ಣ ಉದ್ಯಮಿಗಳು ತಮ್ಮ ಕಾರ್ಯಾಚರಣೆ ವಿಸ್ತರಿಸಲು ಸಹಕಾರಿಯಾಗಲಿದೆ. 100 ನಗರಗಳಲ್ಲಿ 'ಪ್ಲಗ್ ಮತ್ತು ಪ್ಲೇ' ಕೈಗಾರಿಕಾ ಪಾರ್ಕ್‌ಗಳ ಘೋಷಣೆಯು ಹೂಡಿಕೆಯನ್ನು ಆಕರ್ಷಿಸಲಿದೆ. ಜೊತೆಗೆ, ಕೈಗಾರಿಕಾ ಮೂಲ ಸೌಕರ್ಯದ ಅಭಿವೃದ್ಧಿಗೂ ನೆರವಾಗಲಿದೆ ಎಂದು ಹೇಳಿದ್ದಾರೆ.

'ದೂರದೃಷ್ಟಿಯುಳ್ಳ ಬಜೆಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯೋಗ ಸೃಷ್ಟಿಯಲ್ಲಿ ನಿರ್ಣಾಯಕ ಪಾತ್ರವಹಿಸುವ ಸಣ್ಣ, ಮಧ್ಯಮ ಗಾತ್ರದ ಕೈಗಾರಿಕೆಗಳಿಗೆ ಬಜೆಟ್ ಆರ್ಥಿಕ ಶಕ್ತಿ ನೀಡಿದೆ. ಇದು ದೂರದೃಷ್ಟಿಯುಳ್ಳ ದೂರಗಾಮಿ ಬಜೆಟ್ ಆಗಿದೆ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಪ್ರತಿಕ್ರಿಯಿಸಿದೆ.

ರಮೇಶ್ ಚಂದ್ರ ಲಹೋಟಿ

ಆದರೆ, ಬಜೆಟ್ ಕೆಲವು ರಾಜ್ಯಗಳಿಗೆ ನೀಡಿರುವಂತೆ ಕರ್ನಾಟಕ ರಾಜ್ಯಕ್ಕೆ ಯಾವುದೇ ರೀತಿಯ ನಿರ್ದಿಷ್ಟ ಆದ್ಯತೆ ನೀಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದೆ.

ಸರ್ಕಾರವು ಪಿಎಲ್‌ಐ ಜೊತೆಗೆ ಇಎಲ್‌ಐ (ನೌಕರ ಲಿಂಕ್ಡ್ ಇನ್ಸೆಂಟಿವ್) ಯೋಜನೆಯ ಮೇಲೆ ಗಮನಹರಿಸಿದೆ. ಇಪಿಎಫ್‌ಒ ಮೂಲಕ ಮೊದಲ ಬಾರಿಗೆ ಕೆಲಸ ಮಾಡುವವರಿಗೆ ವೇತನ ಪ್ರಯೋಜನವನ್ನು ನೀಡುವ ಮೂಲಕ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಒತ್ತು ನೀಡಿದೆ ಎಂದು ಸಂಸ್ಥೆಯ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ ಹೇಳಿದ್ದಾರೆ.

ಉದ್ಯೋಗ ಮತ್ತು ಕೌಶಲಕ್ಕೆ ಹೆಚ್ಚು ಒತ್ತು ನೀಡಿದ್ದು, ಹಬ್ ಮತ್ತು ಸ್ಪೋಕ್ ಮಾದರಿಯಲ್ಲಿ ಕೈಗಾರಿಕಾ ತರಬೇತಿ ಮತ್ತು ಉನ್ನತ ಶಿಕ್ಷಣಕ್ಕಾಗಿ ₹10 ಲಕ್ಷದವರೆಗಿನ ಸಾಲಗಳಿಗೆ ಹೆಚ್ಚುವರಿ ಬೆಂಬಲ ನೀಡಿದೆ. ಇದು ವಿಕಸಿತ ಭಾರತದ ಗುರಿಯನ್ನು ವೇಗವಾಗಿ ಸಾಧಿಸಲು ಸಹಾಯ ಮಾಡುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಷೇರು ಸೂಚ್ಯಂಕ ಕುಸಿತ

ಮುಂಬೈ (ಪಿಟಿಐ): ಬಜೆಟ್‌ನಲ್ಲಿ ಬಂಡವಾಳ ವೃದ್ಧಿ ತೆರಿಗೆ ಮತ್ತು ಷೇರು ವಹಿವಾಟು ತೆರಿಗೆ ಹೆಚ್ಚಿರುವುದರಿಂದ ಮಂಗಳವಾರ ನಡೆದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಕುಸಿತ ಕಂಡಿವೆ.

ಆರಂಭಿಕ ವಹಿವಾಟಿನಲ್ಲಿ ಶೇ 1.5ಕ್ಕೂ ಹೆಚ್ಚು ಕುಸಿತ ಕಂಡಿದ್ದ ಸೂಚ್ಯಂಕಗಳು, ವಹಿವಾಟಿನ ಅಂತ್ಯಕ್ಕೆ ಚೇತರಿಸಿಕೊಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 73 ಅಂಶ ಕಡಿಮೆಯಾಗಿ, 80,429ಕ್ಕೆ ಸ್ಥಿರಗೊಂಡಿತು. ವಹಿವಾಟಿನ ವೇಳೆ 1,277 ಅಂಶ (ಶೇ 1.58) ಇಳಿಕೆಯಾಗಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 30 ಅಂಶ ಇಳಿಕೆ ಕಂಡು 24,479ಕ್ಕೆ ಅಂತ್ಯಗೊಂಡಿತು. ವಹಿವಾಟಿನ ವೇಳೆ 435 ಅಂಶ (ಶೇ 1.77) ಕುಸಿತ ಕಂಡಿತ್ತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಟೈಟನ್ ಷೇರಿನ ಶೇ 6ರಷ್ಟು ಏರಿಕೆಯಾಗಿದೆ. ಅದಾನಿ ಪೋರ್ಟ್ಸ್, ಎನ್‌ಟಿಪಿಸಿ, ಹಿಂದುಸ್ತಾನ್ ಯೂನಿಲಿವರ್, ಎಚ್‌ಸಿಎಲ್ ಟೆಕ್ನಾಲಜೀಸ್ ಮತ್ತು ಸನ್‌ಫಾರ್ಮಾ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಐಟಿಸಿ ಷೇರಿನ ಮೌಲ್ಯ ಶೇ 5ರಷ್ಟು ಇಳಿದಿದೆ. ಲಾರ್ಸೆನ್ ಆ್ಯಂಡ್ ಟೂಬ್ರೊ, ಬಜಾಜ್ ಫೈನಾನ್ಸ್, ಎಸ್‌ಬಿಐ, ಆ್ಯಕ್ಸಿಸ್ ಬ್ಯಾಂಕ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಇಳಿದಿದೆ.

ಸುಮಾರು 4 ಕೋಟಿ ಜನರಲ್ಲಿ ಎಚ್‌ಐವಿ: ವಿಶ್ವಸಂಸ್ಥೆ ವರದಿ

ಏಡ್ಸ್‌ನಿಂದ ಪ್ರತಿ ನಿಮಿಷಕ್ಕೆ ಒಬ್ಬರ ಸಾವು

ವಿಶ್ವಸಂಸ್ಥೆ(ಎಪಿ): ಕಳೆದ ವರ್ಷ ವಿಶ್ವದಾದ್ಯಂತ ಸುಮಾರು 4 ಕೋಟಿ ಮಂದಿಯಲ್ಲಿ ಎಚ್‌ಐವಿ ವೈರಸ್ ಪತ್ತೆಯಾಗಿದ್ದು ಈ ಪೈಕಿ 90 ಲಕ್ಷ ಜನರು ಯಾವುದೇ ರೀತಿಯ ಚಿಕಿತ್ಸೆ ಪಡೆದಿಲ್ಲ. ಇದರಿಂದಾಗಿ ಪ್ರತಿ ನಿಮಿಷಕ್ಕೆ ಒಬ್ಬರು ಮೃತಪಟ್ಟಿದ್ದಾರೆ ಎಂದು ವಿಶ್ವಸಂಸ್ಥೆಯ ವರದಿ ತಿಳಿಸಿದೆ.

ಏಡ್ಸ್‌ಗೆ ಸಂಬಂಧಿಸಿದ ಹೊಸ ವರದಿಯನ್ನು ವಿಶ್ವಸಂಸ್ಥೆಯು ಸೋಮವಾರ ಬಿಡುಗಡೆ ಮಾಡಿದೆ. ಇದರ ಪ್ರಕಾರ, ಏಡ್ಸ್ ಅನ್ನು ಕೊನೆಗಾಣಿಸಲು ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಆದರೆ, ಮಧ್ಯಪ್ರಾಚ್ಯ ಮತ್ತು ಉತ್ತರ ಆಫ್ರಿಕಾ, ಪೂರ್ವ ಯುರೋಪ್, ಕೇಂದ್ರೀಯ ಏಷ್ಯಾ ಹಾಗೂ ಲ್ಯಾಟಿನ್ ಅಮೆರಿಕದಲ್ಲಿ ಕಾಯಿಲೆಪೀಡಿತರ ಸಂಖ್ಯೆ ಹೆಚ್ಚಳ ಮತ್ತು ಅಗತ್ಯ ಹಣಕಾಸಿನ ಅಲಭ್ಯತೆಯಿಂದಾಗಿ ಈ ನಿಟ್ಟಿನಲ್ಲಿ ನಿರೀಕ್ಷಿತ ಪ್ರಗತಿ ಕಂಡುಬಂದಿಲ್ಲ.

2023ರಲ್ಲಿ ಜಾಗತಿಕವಾಗಿ 3.99 ಕೋಟಿ ಮಂದಿಯಲ್ಲಿ ಎಚ್‌ಐವಿ ಇತ್ತು. ಇದರಲ್ಲಿ ಶೇ 88ರಷ್ಟು ಮಂದಿಗೆ ತಾವು ಎಚ್‌ಐವಿ ಪೀಡಿತರು ಎಂಬುದು ತಿಳಿದಿತ್ತು. ಶೇ 77ರಷ್ಟು ಮಂದಿ ಚಿಕಿತ್ಸೆ ಪಡೆದಿದ್ದು, ಅವರಲ್ಲಿ ಶೇ 72ರಷ್ಟು ಪ್ರಮಾಣದ ವೈರಸ್ ತೀವ್ರತೆ ತಗ್ಗಿತ್ತು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.



2004ರಲ್ಲಿ ಎಚ್‌ಐವಿಯಿಂದ 21 ಲಕ್ಷ ಮಂದಿ ಮೃತಪಟ್ಟಿದ್ದರು. 2023ರಲ್ಲಿ 6.30 ಲಕ್ಷ ಮಂದಿ ಮೃತಪಟ್ಟಿದ್ದಾರೆ. 2004ಕ್ಕೆ ಹೋಲಿಸಿದರೆ, 2023ರಲ್ಲಿ ಮೃತರ ಸಂಖ್ಯೆ ಗಣನೀಯವಾಗಿ ತಗ್ಗಿದೆ. 2025ರ ವೇಳೆಗೆ ಏಡ್ಸ್‌ನಿಂದ ಮೃತರಾಗುವವರ ಸಂಖ್ಯೆಯನ್ನು 2.5 ಲಕ್ಷಕ್ಕಿಂತ ಕಡಿಮೆಗೊಳಿಸಬೇಕು ಎಂಬ ಗುರಿ ಹೊಂದಲಾಗಿದೆ ಎಂದು ವಿಶ್ವಸಂಸ್ಥೆ ತಿಳಿಸಿದೆ. ಆಫ್ರಿಕಾದಲ್ಲಿ ಎಚ್‌ಐವಿ ಸೋಂಕು ಹದಿಹರೆಯದ ಯುವತಿಯರಲ್ಲೇ ಹೆಚ್ಚಾಗಿ ಕಂಡುಬರುತ್ತಿದೆ. ಲೈಂಗಿಕ ಕಾರ್ಯಕರ್ತರು, ಪುರುಷ ಸಲಿಂಗಿಗಳು ಮತ್ತು ಇಂಜೆಕ್ಷನ್‌ಗಳಿಂದ ಎಚ್‌ಐವಿ ಹರಡುವ ಪ್ರಮಾಣ ಶೇ 55ಕ್ಕೆ ಏರಿಕೆಯಾಗಿದೆ. 2010ರಲ್ಲಿ ಈ ಪ್ರಮಾಣ ಶೇ 45 ಇತ್ತು ಎಂದು ವರದಿ ತಿಳಿಸಿದೆ.

'ಇಂಜೆಕ್ಷನ್ ಬೆಲೆ ₹33 ಲಕ್ಷ'

ಎಚ್‌ಐವಿ ಚಿಕಿತ್ಸೆಯು ಪ್ರಗತಿಯ ಹಂತದಲ್ಲಿದ್ದು, ಮಾನವನ ದೇಹದಲ್ಲಿ 6 ತಿಂಗಳ ಕಾಲ ಸಕ್ರಿಯವಾಗಿರಬಹುದಾದ ಎಚ್‌ಐವಿ ನಿರೋಧಕ ಸಾಮರ್ಥ್ಯದ ಇಂಜೆಕ್ಷನ್‌ಗಳು ಲಭ್ಯವಿವೆ. ಆದರೆ, ಅದರ ಎರಡು ಡೋಸ್‌ಗೆ ವಾರ್ಷಿಕ ₹33.5 ಲಕ್ಷ (40,000 ಡಾಲರ್) ವೆಚ್ಚವಾಗಲಿದ್ದು, ಶ್ರೀಮಂತರಿಗೆ ಮಾತ್ರ ಕೈಗೆಟುಕಲಿದೆ. ಈ ಔಷಧ ಜನಸಾಮಾನ್ಯರ ಕೈಗೆಟುಕುವಂತೆ ಮಾಡಲು ಉತ್ಪಾದಕರಿಗೆ ಮನವಿ ಮಾಡಲಾಗುತ್ತಿದೆ ಎಂದು ವಿಶ್ವಸಂಸ್ಥೆಯ ಏಡ್ಸ್ ಯೋಜನೆಯ ನಿರ್ದೇಶಕರು ತಿಳಿಸಿದ್ದಾರೆ.

'2030ರೊಳಗೆ ಎಚ್‌ಐವಿ ತಡೆಗೆ ಪಣ'

'2030ರ ಒಳಗಾಗಿ ಏಡ್ಸ್ ಅನ್ನು ಕೊನೆಗಾಣಿಸುವುದಾಗಿ ವಿಶ್ವದ ನಾಯಕರು ಪ್ರಮಾಣ ಮಾಡಿದ್ದರು. ಏಡ್ಸ್ ನಿಯಂತ್ರಣಕ್ಕೆ ಅಗತ್ಯವಿರುವ ಸಂಪನ್ಮೂಲಗಳನ್ನು ಖಾತ್ರಿಪಡಿಸುವ ಮೂಲಕ ತಾವು ನೀಡಿದ ಭರವಸೆಯಂತೆ ನಡೆದುಕೊಳ್ಳಬಹುದು' ಎಂದು ವಿಶ್ವಸಂಸ್ಥೆಯ ಏಡ್ಸ್ ಕಾರ್ಯಕಾರಿ ನಿರ್ದೇಶಕಿ ವಿನ್ನೀ ಬ್ಯಾನಿಮಾ ಹೇಳಿದರು.

ಏಡ್ಸ್ ಕೊನೆಗಾಣಿಸುವ ಭಾಗವಾಗಿ 2025ರ ಒಳಗೆ ಎಚ್‌ಐವಿ ಸೋಂಕಿತರ ಸಂಖ್ಯೆಯನ್ನು ವಾರ್ಷಿಕ 3.70 ಲಕ್ಷದಷ್ಟು ಕಡಿಮೆಗೊಳಿಸುವ ಗುರಿ ಹಾಕಿಕೊಳ್ಳಲಾಗಿತ್ತು. ಆದರೆ, 2023ರಲ್ಲಿ ಹೊಸದಾಗಿ 13 ಲಕ್ಷ ಮಂದಿ ಸೋಂಕಿಗೆ ತುತ್ತಾಗಿದ್ದಾರೆ. ಅಂದರೆ, ವಿಶ್ವನಾಯಕರು ಹಾಕಿಕೊಂಡ ಗುರಿಗಿಂತಲೂ ಸೋಂಕಿತರ ಸಂಖ್ಯೆ ಮೂರು ಪಟ್ಟು ಹೆಚ್ಚಿದೆ ಎಂದು ವರದಿ ಹೇಳಿದೆ.

ಮುಂಬೈ ಧಾರಣೆ

ಶೇಂಗಾ

23-07-2024

ಜಾವಾ 70/80(ಹೊಸ)	11800-11900
ಜಾವಾ 80/90(ಹೊಸ)	11200-11300
ದಪ್ಪ ಮಧ್ಯಪ್ರದೇಶ(ಹೊಸ)	9600-9700
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1580)
ಒಂದು ವಾರದ ಡೆಲಿವರಿ	1595 (1575)
ಸೋಯಾ ಕಚ್ಚಾ	915 (915)
ಪಾಮ್ ವಾರದ ಡೆಲಿವರಿ	908 (908)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (925)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹69,300 (72,850)
ಬೆಳ್ಳಿ ಕೆ.ಜಿ ₹84,900 (88,300)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ವಿನಿಮಯ ದರ

$ ಡಾಲರ್	83.69
£ ಪೌಂಡ್	108.06
€ ಯುರೊ	90.85
¥ ಯೆನ್ (100ಕ್ಕೆ)	54

ಸುಧಾ, ಮಯೂರ ಓದಿರಿ

ಶಫಾಲಿ, ದೀಪ್ತಿ ಆಟಕ್ಕೆ ಒಲಿದ ಜಯ

ಗುಂಪಿನಲ್ಲಿ ಅಗ್ರಸ್ಥಾನದೊಂದಿಗೆ ನಾಲ್ಕರ ಘಟ್ಟಕ್ಕೆ ಭಾರತ • ನೇಪಾಳಕ್ಕೆ ನಿರಾಸೆ

ದಂಬುಲಾ (ಪಿಟಿಐ): ಶಫಾಲಿ ವರ್ಮಾ ಅವರ ಬಿರುಸಿನ ಬ್ಯಾಟಿಂಗ್ ಮತ್ತು ದೀಪ್ತಿ ಶರ್ಮಾ ಅವರ ಸ್ಪಿನ್ ಮೋಡಿಯ ಬಲದಿಂದ ಭಾರತ ಮಹಿಳಾ ತಂಡವು ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ನೇಪಾಳ ವಿರುದ್ಧ ಸುಲಭ ಜಯ ಸಾಧಿಸಿತು.

ರಣಗಿರಿ ದಂಬುಲಾ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಎ ಗುಂಪಿನ ಪಂದ್ಯದಲ್ಲಿ ಭಾರತ ತಂಡವು 82 ರನ್‌ಗಳಿಂದ ಜಯಿಸಿತು. ಇದರೊಂದಿಗೆ ಗುಂಪಿನ ಎಲ್ಲ ಮೂರು ಪಂದ್ಯಗಳನ್ನೂ ಜಯಿಸಿ ಸೆಮಿಫೈನಲ್‌ಗೆ ಸಾಗಿತು.

ಟಾಸ್ ಗೆದ್ದ ಭಾರತ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಶಫಾಲಿ (81; 48ಎ, 4X12, 6X1) ಮತ್ತು ಹೇಮಲತಾ ದಯಾಳನ್ (47; 42ಎ, 4X5, 6X1) ಮೊದಲ ವಿಕೆಟ್ ಜೊತೆಯಾಟದಲ್ಲಿ 122 ರನ್ ಸೇರಿಸಿದರು. ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 178 ರನ್ ಗಳಿಸಿತು. ಶಫಾಲಿ ಮತ್ತು ಹೇಮಲತಾ ಅವರು ಹಾಕಿದ ಗಟ್ಟಿ ಅಡಿಪಾಯದ ಮೇಲೆ 200ಕ್ಕಿಂತಲೂ ಹೆಚ್ಚು ರನ್‌ಗಳು ಸೇರುವ ನಿರೀಕ್ಷೆ ಇತ್ತು. ಆದರೆ, ನೇಪಾಳದ ಎಡಗೈ ಬೌಲರ್ ಸೀತಾ ರಾಣಾ ಮಗರ್ ಅವರು 14 ಹಾಗೂ 16ನೇ ಓವರ್‌ನಲ್ಲಿ ಕ್ರಮವಾಗಿ ಹೇಮಲತಾ ಮತ್ತು ಶಫಾಲಿ ಅವರ ವಿಕೆಟ್ ಗಳಿಸಿದರು.

ಸಜನಾ (10; 12ಎ) ಅವರು ಹೆಚ್ಚು ಹೊತ್ತು ನಿಲ್ಲದಂತೆ ಕಬಿತಾ ಜೋಶಿ ಎಲ್‌ಬಿಡಬ್ಲ್ಯು ಬಲೆ ಬೀಸಿದರು. ಇದರಿಂದಾಗಿ ರನ್ ವೇಗ ಕಡಿಮೆಯಾಯಿತು. ಜೆಮಿಮಾ ರಾಡ್ರಿಗಸ್ 15 ಎಸೆತಗಳಲ್ಲಿ 28 ರನ್ ಗಳಿಸಿ ತಂಡದ ಮೊತ್ತವನ್ನು ಹೆಚ್ಚಿಸಿದರು.

ಗುರಿ ಬೆನ್ನಟ್ಟಿದ ನೇಪಾಳ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 96 ರನ್ ಗಳಿಸಿತು. ಸೀತಾ ರಾಣಾ ಮಗರ್ ಅವರು (18 ರನ್) ತಮ್ಮ ತಂಡದ ಪರ ಹೆಚ್ಚು ರನ್ ಗಳಿಸಿದ ಬ್ಯಾಟರ್ ಆದರು. ರುಬಿನಾ ಚೆಟ್ರಿ ಅವರು ಒಂದು ಸಿಕ್ಸರ್ ಸಹಿತ 15 ರನ್ ಗಳಿಸಿದರು. ಭಾರತದ ಅನುಭವಿ ಬೌಲರ್‌ಗಳ ಎದುರು 20 ಓವರ್‌ಗಳನ್ನು ಆಡಿದ್ದು ನೇಪಾಳ ತಂಡದ ಹೆಗ್ಗಳಿಕೆ ಎನಿಸಿತು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 178 (ಶಫಾಲಿ ವರ್ಮಾ 81, ಹೇಮಲತಾ ದಯಾಳನ್ 47, ಜೆಮಿಮಾ ರಾಡ್ರಿಗಸ್ 28, ಸೀತಾ ರಾಣಾ ಮಗರ್ 25ಕ್ಕೆ2) **ನೇಪಾಳ:** 20 ಓವರ್‌ಗಳಲ್ಲಿ 9ಕ್ಕೆ 96 (ಸೀತಾ ರಾಣಾ ಮಗರ್ 18, ರುಬಿನಾ ಚೆಟ್ರಿ 15, ಬಿಂದು ರಾವಲ್ ಔಟಾಗದೆ 17, ಅರುಂಧತಿ ರೆಡ್ಡಿ 28ಕ್ಕೆ2, ದೀಪ್ತಿ ಶರ್ಮಾ 10ಕ್ಕೆ3, ರಾಧಾ ಯಾದವ್ 12ಕ್ಕೆ2) **ಫಲಿತಾಂಶ:** ಭಾರತ ತಂಡಕ್ಕೆ 82 ರನ್‌ಗಳ ಜಯ. **ಪಂದ್ಯದ ಆಟಗಾರ್ತಿ:** ಶಫಾಲಿ ವರ್ಮಾ

ಶಫಾಲಿ ವರ್ಮಾ –ಎಕ್ಸ್ ಚಿತ್ರ

ಸೆಮಿಗೆ ಪಾಕಿಸ್ತಾನ

ದಂಬುಲಾ (ಪಿಟಿಐ): ಗುಲ್ ಫಿರೋಜಾ ಅವರ ಬೀಸಾಟ ಮತ್ತು ಬೌಲರ್‌ಗಳ ಉತ್ತಮ ದಾಳಿಯಿಂದಾಗಿ ಪಾಕಿಸ್ತಾನ ವನಿತೆಯರ ತಂಡವು ಏಷ್ಯಾ ಕಪ್ ಟಿ20 ಟೂರ್ನಿಯಲ್ಲಿ ಯುಎಇ ತಂಡವನ್ನು ಸೋಲಿಸಿತು. ಇದರೊಂದಿಗೆ ಸೆಮಿಫೈನಲ್ ಪ್ರವೇಶಿಸಿತು.

ಯುಎಇ (ಯುನೈಟೆಡ್ ಅರಬ್ ಎಮಿರೇಟ್ಸ್) ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 103 ರನ್ ಗಳಿಸಿತು. ಅದಕ್ಕುತ್ತರವಾಗಿ ಪಾಕ್ ತಂಡವು 14.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 107 ರನ್ ಗಳಿಸಿತು. ಎ ಗುಂಪಿನ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ತಂಡವು ಭಾರತದ ಎದುರು ಸೋತಿತ್ತು. ಆದರೆ ಎರಡು ಪಂದ್ಯ ಗೆದ್ದು 4 ಅಂಕ ಗಳಿಸಿ ಸೆಮಿಫೈನಲ್ ಪ್ರವೇಶಿಸಿತು.

ಸಂಕ್ಷಿಪ್ತ ಸ್ಕೋರು: ಯುಎಇ: 20 ಓವರ್‌ಗಳಲ್ಲಿ 8ಕ್ಕೆ 103 (ತೀರ್ಥ ಸತೀಶ್ 40, ಸಾದಿಯಾ ಇಕ್ಬಾಲ್ 11ಕ್ಕೆ2, ನಶ್ರಾ ಸಂಧು 22ಕ್ಕೆ2, ತೌಬಾ ಹಸನ್ 17ಕ್ಕೆ2) **ಪಾಕಿಸ್ತಾನ:** 14.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 107 (ಗುಲ್ ಫಿರೋಜಾ ಔಟಾಗದೆ 62, ಮುನೀಬಾ ಅಲಿ ಔಟಾಗದೆ 37) **ಫಲಿತಾಂಶ:** ಪಾಕಿಸ್ತಾನ ತಂಡಕ್ಕೆ 10 ವಿಕೆಟ್‌ಗಳ ಜಯ. **ಪಂದ್ಯದ ಆಟಗಾರ್ತಿ:** ಗುಲ್ ಫಿರೋಝಾ.

ಶ್ರೀಲಂಕಾ ಎದುರಿನ ಸರಣಿಗೆ ಭಾರತ ತಂಡದ ಸಿದ್ಧತೆ ಆರಂಭ

ಅಭ್ಯಾಸಕ್ಕೆ ಗಂಭೀರ್ ಮಾರ್ಗದರ್ಶನ

ಪೆಲೆಕೆಲೆ, ಶ್ರೀಲಂಕಾ (ಪಿಟಿಐ): ಭಾರತ ಕ್ರಿಕೆಟ್ ತಂಡದ ನೂತನ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಮಂಗಳವಾರ ಕಾರ್ಯಾರಂಭ ಮಾಡಿದರು. ಶ್ರೀಲಂಕಾ ಎದುರಿನ ಸರಣಿಗಾಗಿ ಭಾರತ ತಂಡದವರು ಇಲ್ಲಿ ಅಭ್ಯಾಸ ನಡೆಸಿದರು. ಗಂಭೀರ್ ಮಾರ್ಗದರ್ಶನ ನೀಡಿದರು. ಫೀಲ್ಡಿಂಗ್ ಅಭ್ಯಾಸವೂ ಸೇರಿದಂತೆ ವಿವಿಧ ಕಸರತ್ತುಗಳನ್ನು ಆಟಗಾರರು ಮಾಡಿದರು.

ತರಬೇತಿ ಅವಧಿಯಲ್ಲಿ ಓಟ, ಕ್ಯಾಚಿಂಗ್ ಮತ್ತು ಪ್ರತಿಯೊಬ್ಬ ಆಟಗಾರನೊಂದಿಗೆ ಪ್ರತ್ಯೇಕ ಮಾತುಕತೆ ನಡೆದವು. ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್ ಕೂಡ ಈ ಸಂದರ್ಭದಲ್ಲಿ ಸಹ ಆಟಗಾರರೊಂದಿಗೆ ಚರ್ಚೆ ನಡೆಸಿದರು.

ವಿಕೆಟ್‌ಕೀಪರ್–ಬ್ಯಾಟರ್ ಸಂಜು ಸ್ಯಾಮ್ಸನ್ ಅವರಿಗೆ ಬ್ಯಾಟಿಂಗ್ ಕುರಿತ ಕೆಲವು ಸಲಹೆಗಳನ್ನು ಗಂಭೀರ್ ನೀಡಿದರು. ಆಲ್‌ರೌಂಡರ್ ಶಿವಂ ದುಬೆ ಅವರೊಂದಿಗೆ ಕೆಲಹೊತ್ತು ಚರ್ಚೆ ನಡೆಸಿದ್ದು ಕಂಡುಬಂತು.

ಭಾರತ ತಂಡದ ಮುಖ್ಯಕೋಚ್ ಗೌತಮ್ ಗಂಭೀರ್ ಅವರು ಸಂಜು ಸ್ಯಾಮ್ಸನ್ ಅವರಿಗೆ ಬ್ಯಾಟಿಂಗ್ ಕುರಿತ ಸಲಹೆ ನೀಡಿದರು –ಪಿಟಿಐ ಚಿತ್ರ

ಶ್ರೀಲಂಕಾ ಪ್ರವಾಸದಲ್ಲಿ ಗಂಭೀರ್ ಅವರ ನೆರವು ಸಿಬ್ಬಂದಿಯಾಗಿರುವ ಮಾಜಿ ಕ್ರಿಕೆಟಿಗ ಅಭಿಷೇಕ್ ನಾಯರ್ ಮತ್ತು ನೆದರ್ಲೆಂಡ್ಸ್ ಬ್ಯಾಟರ್ ರಯನ್ ಟೆನ್ ಡಾಷೆ ಅವರೂ ಈ ಸಂದರ್ಭದಲ್ಲಿ ಕಾರ್ಯನಿರ್ವಹಿಸಿದರು. ಈ ಮೂವರೂ ಐಪಿಎಲ್ ಟೂರ್ನಿಯಲ್ಲಿ ಚಾಂಪಿಯನ್ ಆಗಿರುವ ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲಿದ್ದರು.

ಈ ಹಿಂದೆ ರಾಹುಲ್ ದ್ರಾವಿಡ್ ಅವರು ಕೋಚ್ ಆಗಿದ್ದ ಸಂದರ್ಭದಲ್ಲಿ ಫೀಲ್ಡಿಂಗ್ ಕೋಚ್ ಆಗಿದ್ದ ಟಿ. ದಿಲೀಪ್ ಅವರೂ ತಂಡದಲ್ಲಿ ಮುಂದುವರಿದಿದ್ದಾರೆ. ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಯಲ್ಲಿರುವ ಸಾಯಿರಾಜ್ ಬಹುತುಳೆ ಕೂಡ ಹಂಗಾಮಿ ಬೌಲಿಂಗ್ ಕೋಚ್ ಆಗಿ ತಂಡದಲ್ಲಿದ್ದಾರೆ.

ಭಾರತ ತಂಡವು ಈಚೆಗೆ ಟಿ20 ವಿಶ್ವಕಪ್ ಜಯಿಸಿದ ನಂತರ ಕೋಚ್ ಆಗಿದ್ದ ರಾಹುಲ್ ದ್ರಾವಿಡ್ ಅವರ ಕಾರ್ಯಾವಧಿಯು ಮುಕ್ತಾಯವಾಗಿತ್ತು. ಅವರ ನಂತರ ಗಂಭೀರ್ ನೇಮಕವಾಗಿದ್ದಾರೆ. ಇದೇ 27ರಿಂದ ಲಂಕಾ ವಿರುದ್ಧದ ಟಿ20 ಕ್ರಿಕೆಟ್ ಟೂರ್ನಿ ಆರಂಭವಾಗಲಿದೆ.

ಲಂಕಾ ತಂಡಕ್ಕೆ ಅಸಲಂಕ ನಾಯಕ

ಪೆಲೆಕೆಲೆ (ಪಿಟಿಐ): ಮಧ್ಯಮ ಕ್ರಮಾಂಕದ ಬ್ಯಾಟರ್ ಚರಿತ್ ಅಸಲಂಕ ಅವರನ್ನು ಪ್ರವಾಸಿ ಭಾರತ ತಂಡದ ವಿರುದ್ಧ ಇದೇ 27ರಂದು ಆರಂಭವಾಗುವ ಟಿ20 ಸರಣಿಗೆ ಶ್ರೀಲಂಕಾ ತಂಡದ ನಾಯಕರಾಗಿ ನೇಮಕ ಮಾಡಲಾಗಿದೆ.

ಮೂರು ಟಿ20 ಪಂದ್ಯಗಳು ಕ್ರಮವಾಗಿ ಜುಲೈ 27, 28 ಮತ್ತು 30ರಂದು ನಡೆಯಲಿವೆ. ಈ ಹಿಂದೆ ನಾಯಕರಾಗಿದ್ದ ಸ್ಪಿನ್ ಆಲ್‌ರೌಂಡರ್ ವನಿಂದು ಹಸರಂಗ ಅವರು ಕಳೆದ ತಿಂಗಳ ಟಿ20 ವಿಶ್ವಕಪ್‌ನಲ್ಲಿ ಶ್ರೀಲಂಕಾ ತಂಡದ ಕಳಪೆ ನಿರ್ವಹಣೆ ಕಾರಣ ಪದತ್ಯಾಗ ಮಾಡಿದ್ದರು.

27 ವರ್ಷ ವಯಸ್ಸಿನ ಅಸಲಂಕ ಈ ಹಿಂದೆಯೂ ನಾಯಕರಾಗಿ ಅನುಭವ ಹೊಂದಿದ್ದಾರೆ. ಐಸಿಸಿ ನೀತಿಸಂಹಿತೆ ಉಲ್ಲಂಘನೆ ಮಾಡಿದ್ದಕ್ಕಾಗಿ ಹಸರಂಗ ಅವರನ್ನು ಅಮಾನತು ಮಾಡಿದ್ದ ಸಂದರ್ಭದಲ್ಲಿ ಅವರು ಬಾಂಗ್ಲಾದೇಶ ಪ್ರವಾಸದಲ್ಲಿ (2 ಟಿ0 ಪಂದ್ಯ) ತಂಡವನ್ನು ಮುನ್ನಡೆಸಿದ್ದರು. ವಿಶ್ವಕಪ್ ತಂಡಕ್ಕೆ ಉಪನಾಯಕರಾಗಿದ್ದರು.

ತಂಡದಲ್ಲಿ ಕೆಲವು ಪ್ರಮುಖ ಬದಲಾವಣೆಗಳನ್ನು ಮಾಡಲಾಗಿದೆ. 16 ಮಂದಿಯ ತಂಡದಲ್ಲಿ ಅನುಭವಿಗಳ ಜೊತೆ ಯುವಮುಖಗಳೂ ಇವೆ.

ಅನುಭವಿ ಆಲ್‌ರೌಂಡರ್‌ಗಳಾದ ಆ್ಯಂಜೆಲೊ ಮ್ಯಾಥ್ಯೂಸ್, ಧನಂಜಯ ಡಿ ಸಿಲ್ವ, ವಿಕೆಟ್ ಕೀಪರ್ ಸದೀರ ಸಮರವಿಕ್ರಮ ಮತ್ತು ಎಡಗೈ ವೇಗದ ಬೌಲರ್ ದಿಲ್ಶನ್ ಮದುಶಂಕ ಅವರನ್ನು ಕೈಬಿಡಲಾಗಿದೆ. ಇವರು ಟಿ20 ವಿಶ್ವಕಪ್ ತಂಡದಲ್ಲಿದ್ದರು. 34 ವರ್ಷ ವಯಸ್ಸಿನ ಬ್ಯಾಟರ್ ದಿನೇಶ್ ಚಾಂಡಿಮಲ್ ತಂಡಕ್ಕೆ ಮರಳಿದ್ದಾರೆ. ಅವರು 2022ರ ಫೆಬ್ರುವರಿಯಲ್ಲಿ ಕೊನೆ ಸಲ ತಂಡಕ್ಕೆ ಆಡಿದ್ದರು. ಆಲ್‌ರೌಂಡರ್ ಚಮಿಂದು ವಿಕ್ರಮಸಿಂಘೆ ಅವರನ್ನು ಮೊದಲ ಬಾರಿ ತಂಡಕ್ಕೆ ಆಯ್ಕೆ ಮಾಡಲಾಗಿದೆ. ವೇಗದ ಬೌಲರ್ ಆಗಿರುವ ಅವರು ಚೆನ್ನೈನ ಎಂಆರ್‌ಎಫ್ ಪೇಸ್ ಅಕಾಡೆಮಿಯಲ್ಲಿ ತರಬೇತಿ ಪಡೆದಿದ್ದಾರೆ. ಲಂಕಾ ಪ್ರೀಮಿಯರ್ ಲೀಗ್‌ನಲ್ಲಿ ತೋರಿದ ಉತ್ತಮ ಪ್ರದರ್ಶನಕ್ಕೆ ಅವರಿಗೆ ಈ ಬಲುವಳಿ ನೀಡಲಾಗಿದೆ.

ಚರಿತ್ ಅಸಲಂಕ

ಸೂರ್ಯಕುಮಾರ್ ಯಾದವ್ ನೇತೃತ್ವದ ಭಾರತ ಟಿ20 ತಂಡ ಸೋಮವಾರ ರಾತ್ರಿ ಇಲ್ಲಿಗೆ ಬಂದಿಳಿದಿದೆ.

ತಂಡ ಹೀಗಿದೆ: ಚರಿತ್ ಅಸಲಂಕ (ನಾಯಕ), ಪಥುಮ್ ನಿಸಾಂಕ, ಕುಶಲ್ ಪೆರೀರಾ (ವಿಕೆಟ್ ಕೀಪರ್), ಅವಿಷ್ಕಾ ಫೆರ್ನಾಂಡೊ, ಕುಶಲ್ ಮೆಂಡಿಸ್, ದಿನೇಶ್ ಚಾಂಡಿಮಲ್, ಕಮಿಂದು ಮೆಂಡಿಸ್, ದಸುನ್ ಶನಕ, ವನಿಂದು ಹಸರಂಗ, ದುನಿತ್ ವೆಲ್ಲಾಳಗೆ, ಮಹೀಶ ತೀಕ್ಷಣ, ಚಮಿಂದು ವಿಕ್ರಮಸಿಂಘೆ, ಮತೀಶ ಪಥಿರಾಣ, ನುವಾನ್ ತುಷಾರ, ದುಷ್ಮಂತ ಚಮೀರ ಮತ್ತು ಬಿನುರ ಫೆರ್ನಾಂಡೊ.

ಮೈಸೂರು ರೇಸ್

ಮಿಸ್ಟಿಕ್ ಬಾಂಡ್ ಗೆಲ್ಲುವ ನಿರೀಕ್ಷೆ

ಮೈಸೂರು ಟ್ರೋಫಿ ಮೊದಲನೇ ಡಿವಿಜನ್ ರೇಸ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಿಸ್ಟಿಕ್ ಬಾಂಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು

1ನೇ ರೇಸ್: ಕಂಟ್ರೆಸ್ ಲೈಟ್ 3, ಆರ್ಮಮೆಂಟ್ 2, ಕಂಟ್ರೆಸ್ ಮೇಜರ್ 8
2ನೇ ರೇಸ್: ಸೆನ್ಸೇಷನಲ್ ಟೈಟ್ಲ್ 9, ನ್ಯಾಚುರಲ್ ಫ್ಲೈ 11, ವೈಟ್ ಲೈಸ್ 12
3ನೇ ರೇಸ್: ಸಿಯೊಲ್‌ಫಾರ್ ಬುಲ್ಲೆಟ್ 1, ಹೇಸ್ಟಿಂಗ್ ಸನ್‌ರೈಸ್ 3, ಮೂನ್‌ಲೈಟ್ ಕ್ವೀನ್ 5
4ನೇ ರೇಸ್: ಸರ್ವೋತ್ತಮ್ 9, ಎನ್ ಆರ್ ಐ ಮಿಲ್ಲೇನ್ನಿಯಮ್ 7, ಮೇಬರಿ 4
5ನೇ ರೇಸ್: ಮಿಸ್ಟಿಕ್ ಬಾಂಡ್ 7, ಶೀಬಾ 4, ಎಡ್ಡಿ ದಿ ಈಗಲ್ 3
6ನೇ ರೇಸ್: ಪ್ರಿನ್ಸ್ ಕಾರ್ಪೊರೇಟ್ 3, ಬ್ರೇವ್ ಟ್ರೂಪರ್ 7, ಸೆಗೆರಾ 2
7ನೇ ರೇಸ್: ಸೆರಾಯ್ 3, ರೋಡ್ ರನ್ನರ್ 5, ನೆವೆಡಾ ಗೋಲ್ಡ್ 6

ಉತ್ತಮ ಬೆಟ್: ಪ್ರಿನ್ಸ್ ಕಾರ್ಪೊರೇಟ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಹಾಕಿ: ಏಜೀಸ್ ತಂಡಕ್ಕೆ ಗೆಲುವು

ಬೆಂಗಳೂರು: ಏಜೀಸ್ ತಂಡವು ಕರ್ನಾಟಕ ಹಾಕಿ ಲೀಗ್ ಚಾಂಪಿಯನ್‌ಷಿಪ್ 8ನೇ ಆವೃತ್ತಿ ಟೂರ್ನಿಯ ಪಂದ್ಯದಲ್ಲಿ 4–2ರಿಂದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ (ಡಿವೈಇಎಸ್) 'ಬಿ' ತಂಡವನ್ನು ಸೋಲಿಸಿತು.

ಏಜೀಸ್‌ನ ರಹೀಲ್ (29ನೇ ನಿ), ನಿತಿನ್ ತಿಮ್ಮಯ್ಯ (38ನೇ ನಿ), ಜಯಪ್ರಕಾಶ (54ನೇ ನಿ), ಹರೀಶ್ ಮುತಗಾರ್ (57ನೇ ನಿ) ತಲಾ ಒಂದು ಗೋಲು ದಾಖಲಿಸಿದರು. ಡಿವೈಇಎಸ್ ತಂಡದ ಪರ ಕಿರಣ್‌ಕುಮಾರ್ (18ನೇ ನಿ), ಹುಮೈಝ್ (26ನೇ ನಿ) ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಡಿವೈಇಎಸ್ 'ಎ' ತಂಡವು 5–1ರಿಂದ ಬಾಯ್ಸ್ ಸ್ಪೋರ್ಟ್ಸ್ ಕಂಪನಿ ಎಂಇಜಿ ತಂಡವನ್ನು ಸೋಲಿಸಿತು. ಡಿವೈಇಎಸ್ ಪರ ಭರತ್ ಎಂ.ಕೆ. (18ನೇ ನಿ), ದೀಕ್ಷಿತ್ ಎ.ಎಚ್.(36ನೇ ನಿ), ರಾಹುಲ್ ಸಿ.ಜೆ.(44ನೇ ನಿ), ಹರ್ಷ ಎಚ್. ಆರ್.(46ನೇ ನಿ), ಮಜ್ಜಿ ಗಣೇಶ್ (49 ನೇ ನಿ) ತಲಾ ಒಂದು ಗೋಲು ಗಳಿಸಿದರು. ಎಂಇಜಿ ತಂಡದ ಪರ ನಿತೇಶ್ ಶರ್ಮಾ (10ನೇ ನಿ) ಏಕೈಕ ಗೋಲು ದಾಖಲಿಸಿದರು.

ಐಒಎಗೆ ಬಿಪಿಸಿಎಲ್ ಪ್ರಾಯೋಜಕತ್ವ

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆಯು (ಐಒಎ) ಮಂಗಳವಾರ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಅನ್ನು ಮುಂದಿನ ನಾಲ್ಕು ವರ್ಷಗಳ ಅವಧಿಗೆ ತನ್ನ ಅಧಿಕೃತ ಮುಖ್ಯ ಪ್ರಾಯೋಜಕರನ್ನಾಗಿ ಘೋಷಿಸಿದೆ.

ಐಒಎ ಮತ್ತು ಬಿಪಿಸಿಎಲ್ ನಡುವಿನ ಪಾಲುದಾರಿಕೆ ಒಪ್ಪಂದವು ಪ್ಯಾರಿಸ್ ಒಲಿಂಪಿಕ್ಸ್‌ನಿಂದ 2028ರ ಲಾಸ್ ಏಂಜಲೀಸ್ ಕೂಟದವರೆಗೆ ಚಾಲ್ತಿಯಲ್ಲಿರಲಿದೆ. ಈ ಮಧ್ಯೆ ನಡೆಯುವ ಕಾಮನ್‌ವೆಲ್ತ್ ಕ್ರೀಡಾಕೂಟ, ಏಷ್ಯನ್ ಕ್ರೀಡೆಗಳು, ಬೇಸಿಗೆ ಯೂತ್ ಒಲಿಂಪಿಕ್ಸ್, ಚಳಿಗಾಲದ ಒಲಿಂಪಿಕ್ಸ್ ಮತ್ತು ಚಳಿಗಾಲದ ಯೂತ್ ಒಲಿಂಪಿಕ್ಸ್‌ಗಳನ್ನು ಪ್ರಾಯೋಜಕತ್ವ ಒಳಗೊಳ್ಳುತ್ತದೆ.

ಭಾರತದ ಕ್ರೀಡಾಪಟುಗಳ ಪ್ರತಿಭೆಯನ್ನು ಬೆಂಬಲಿಸಲು ಐಒಎ ಜೊತೆಗೆ ಮುಂದಿನ ನಾಲ್ಕು ವರ್ಷ ಕೈಜೋಡಿಸಿರುವ ಬಿಪಿಸಿಎಲ್‌ಗೆ ಧನ್ಯವಾದಗಳು. ಈ ಪಾಲುದಾರಿಕೆಯು ಕ್ರೀಡಾ ಪ್ರತಿಭೆಯನ್ನು ಪೋಷಿಸುವ ಅದರ ಬದ್ಧತೆಯನ್ನು ಸೂಚಿಸುತ್ತದೆ' ಎಂದು ಐಒಎ ಅಧ್ಯಕ್ಷೆ ಪಿ.ಟಿ. ಉಷಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ನಮ್ಮ ಬೆಂಬಲವು ದೇಶದ ಕ್ರೀಡಾಪಟುಗಳ ಆತ್ಮವಿಶ್ವಾಸವನ್ನು ಇನ್ನಷ್ಟು ಹೆಚ್ಚಿಸಲಿದೆ. ಕ್ರೀಡಾಪಟುಗಳ ಆಕಾಂಕ್ಷೆಗಳಿಗೆ ನೀರೆರೆಯುವ ಕೆಲಸವನ್ನು ಬಿಪಿಸಿಎಲ್ ಮಾಡಲಿದೆ. ಭಾರತ ಒಲಿಂಪಿಕ್ ಸಂಸ್ಥೆಯೊಂದಿಗೆ ಪಾಲುದಾರರಾಗಲು ತುಂಬಾ ಸಂತೋಷ ಪಡುತ್ತೇವೆ' ಎಂದು ಬಿಪಿಸಿಎಲ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಜಿ. ಕೃಷ್ಣಕುಮಾರ್ ಹೇಳಿದ್ದಾರೆ.

ಬಿಪಿಸಿಎಲ್ ಈಗಾಗಲೇ ಸಾಕಷ್ಟು ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿದೆ. ಅದರಲ್ಲೂ 1980ರ ಮಾಸ್ಕೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಹಾಕಿ ತಂಡದಲ್ಲಿದ್ದ ಎಂ.ಎಂ. ಸೋಮಯ, 2016 ಮತ್ತು 2020ರ ಒಲಿಂಪಿಕ್ಸ್‌ನಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ವಿಜೇತರಾದ ಪಿ.ವಿ. ಸಿಂಧು ಅವರಿಗೆ ಉದ್ಯೋಗ ಕಲ್ಪಿಸಿದೆ. ಅಲ್ಲದೆ, ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿರುವ ಸೈನಾ ನೆಹ್ವಾಲ್, ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಭಾರತ ಹಾಕಿ ತಂಡದ ಐವರು ಇಲ್ಲಿ ಉದ್ಯೋಗಿಯಾಗಿದ್ದಾರೆ.

ಐಸಿಸಿ ಟಿ20 ರ‍್ಯಾಂಕಿಂಗ್: 5ನೇ ಸ್ಥಾನದಲ್ಲಿ ಮಂದಾನ

ದುಬೈ (ಪಿಟಿಐ): ಭಾರತ ಮಹಿಳಾ ತಂಡದ ಉಪ ನಾಯಕಿ ಸ್ಮೃತಿ ಮಂದಾನ ಅವರು ಮಂಗಳವಾರ ಬಿಡುಗಡೆಯಾದ ಐಸಿಸಿ ಮಹಿಳಾ ಟಿ20 ರ‍್ಯಾಂಕಿಂಗ್ ಪಟ್ಟಿಯಲ್ಲಿ 5ನೇ ಸ್ಥಾನವನ್ನು ಕಾಯ್ದುಕೊಂಡಿದ್ದಾರೆ.

ನಾಯಕಿ ಹರ್ಮನ್ ಪ್ರೀತ್ ಕೌರ್ ಮತ್ತು ಅಬ್ಬರದ ಬ್ಯಾಟರ್ ಶಫಾಲಿ ವರ್ಮಾ ಜಂಟಿ 11 ಕ್ರಮಾಂಕದಲ್ಲಿ ಇದ್ದಾರೆ. ಹರ್ಮನ್ ಪ್ರೀತ್ ಒಂದು ಸ್ಥಾನ ಮೇಲೇರಿದ್ದರೆ, ಶಫಾಲಿ ನಾಲ್ಕು ಸ್ಥಾನ ಏರಿಕೆ ಕಂಡಿದ್ದಾರೆ. ಉಳಿದಂತೆ ಜೆಮಿಯಾ ರಾಡ್ರಿಗ 19ನೇ ಸ್ಥಾನದಲ್ಲಿದ್ದಾರೆ. ಅಗ್ರ 20 ಬ್ಯಾಟರ್‌ಗಳ ಪಟ್ಟಿಯಲ್ಲಿ ಭಾರತದ ನಾಲ್ವರು ಸ್ಥಾನ ಪಡೆದಿದ್ದಾರೆ. ರಿಚಾ ಘೋಷ್ 24 ಕ್ರಮಾಂಕದಲ್ಲಿದ್ದಾರೆ. ಆಸ್ಟ್ರೇಲಿಯಾ ಬೆಥ್ ಮೂನಿ 769 ಅಂಕಗಳೊಂದಿಗೆ ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರ ಕ್ರಮಾಂಕದಲ್ಲಿದ್ದಾರೆ.

ಬೌಲರ್‌ಗಳ ಪಟ್ಟಿಯಲ್ಲಿ ದೀಪ್ತಿ ಶರ್ಮಾ ಮೂರನೇ ಕ್ರಮಾಂಕದಲ್ಲಿದ್ದು, ಸೀಮರ್ ರೇಣುಕಾ ಸಿಂಗ್ ಒಂಬತ್ತನೇ ಸ್ಥಾನದಲ್ಲಿದ್ದಾರೆ. ಕರ್ನಾಟಕದ ಶ್ರೇಯಾಂಕಾ ಪಾಟೀಲ 19 ಸ್ಥಾನ ಏರಿಕೆ ಕಂಡಿದ್ದು, 41ನೇ ಕ್ರಮಾಂಕದಲ್ಲಿದ್ದಾರೆ.

ಮುಕ್ತ ಪರಿಸರದಲ್ಲಿ ಸಾಸಿವೆ ಬೆಳೆಯಲು ನಿರಾಕರಿಸಿದ್ದ ಆದೇಶ ಪ್ರಶ್ನಿಸಿದ್ದ ಅರ್ಜಿ

ಕುಲಾಂತರಿ ಸಾಸಿವೆ: 'ಸುಪ್ರೀಂ' ಭಿನ್ನ ತೀರ್ಪು

ನವದೆಹಲಿ (ಪಿಟಿಐ): ಮುಕ್ತ ಪರಿಸರದಲ್ಲಿ ಕುಲಾಂತರಿ ಸಾಸಿವೆ ಬೆಳೆದು ಪರೀಕ್ಷೆಗೆ ಒಳಪಡಿಸಲು ಕೇಂದ್ರ ಸರ್ಕಾರ ಮುಂದಾಗಬಾರದು ಎಂದು 2022ರ ಆಗಸ್ಟ್‌ನಲ್ಲಿ ಸುಪ್ರೀಂ ಕೋರ್ಟ್ ಹೊರಡಿಸಿದ್ದ ಆದೇಶದ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ಕುರಿತು ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ಮಂಗಳವಾರ ಭಿನ್ನಮತದ ತೀರ್ಪು ನೀಡಿದೆ.

ಕುಲಾಂತರಿ ತಳಿ ಪರಿಶೀಲನಾ ಸಮಿತಿಯು (ಜಿಇಎಸಿ) ಸಾಸಿವೆ ತಳಿ ಡಿಎಂಎಚ್–11 ಅನ್ನು ಪರೀಕ್ಷೆಗೆ ಒಳಪಡಿಸಲು ಅನುಮತಿ ನೀಡುವಂತೆ ಕೇಂದ್ರಕ್ಕೆ ಶಿಫಾರಸು ಮಾಡಿತ್ತು. ಕೇಂದ್ರ ಅದನ್ನು ಅನುಮೋದಿಸಿತ್ತು. ಇದನ್ನು ವಿರೋಧಿಸಿ ಸಲ್ಲಿಕೆಯಾಗಿದ್ದ ಅರ್ಜಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಅನುಮತಿ ನಿರಾಕರಿಸಿ ಆದೇಶ ನೀಡಿತ್ತು.

ಈ ಆದೇಶ ಪ್ರಶ್ನಿಸಿ ಜೀನ್ ಕ್ಯಾಂಪೇನ್ ಎಂಬ ಸರ್ಕಾರೇತರ ಸಂಸ್ಥೆ (ಎನ್‌ಜಿಒ) ಮತ್ತು ಸಾಮಾಜಿಕ ಕಾರ್ಯಕರ್ತೆ ಅರುಣಾ ರೋಡ್ರಿಗ್ರಸ್ ಎಂಬುವವರು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿದ್ದರು. ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಸಂಜಯ್ ಕರೋಲ್ ಅವರಿದ್ದ ಪೀಠಕ್ಕೆ ಒಮ್ಮತದ ತೀರ್ಪು ನೀಡಲು ಸಾಧ್ಯವಾಗಲಿಲ್ಲ.

ಆದರೆ, ನ್ಯಾಯ ನಿರ್ಣಯಕ್ಕಾಗಿ ಈ ಪ್ರಕರಣವನ್ನು ಸೂಕ್ತ ನ್ಯಾಯಪೀಠಕ್ಕೆ ವರ್ಗಾಯಿಸುವಂತೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರಿಗೆ ಮನವಿ ಸಲ್ಲಿಸಲು ನ್ಯಾಯಮೂರ್ತಿಗಳಿಬ್ಬರು ನಿರ್ಧರಿಸಿದರು.

ಇದೇವೇಳೆ, ಕುಲಾಂತರಿ ತಳಿ (ಜಿಎಂ) ಬೆಳೆಗಳ ಕುರಿತು ರಾಷ್ಟ್ರೀಯ ನೀತಿ ರೂಪಿಸುವಂತೆ ಪೀಠವು ಒಮ್ಮತದಿಂದ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿತು. ನೀತಿ ರೂಪಿಸುವುದಕ್ಕೂ ನಾಲ್ಕು ತಿಂಗಳ ಮೊದಲೇ ಈ ವಿಷಯಕ್ಕೆ ಸಂಬಂಧಪಟ್ಟ ತಜ್ಞರಿಂದ ಮಾಹಿತಿ ಕಲೆಹಾಕುವ ಕೆಲಸವನ್ನು ಪರಿಸರ ಸಚಿವಾಲಯ ಮಾಡಬೇಕು ಎಂದೂ ಪೀಠವು ನಿರ್ದೇಶಿಸಿತು.

'ಕುಲಾಂತರಿ ತಳಿಗಳನ್ನು ತೆರೆದ ಪರಿಸರಲ್ಲಿ ಬೆಳೆದು ಪರೀಕ್ಷೆಗೆ ಒಳಪಡಿಸುವ ನಿಟ್ಟಿನಲ್ಲಿ ನಿರ್ಧಾರ ತೆಗೆದುಕೊಂಡ ಜಿಇಎಸಿ ತಂಡದಲ್ಲಿ ಆರೋಗ್ಯ ಇಲಾಖೆಯ ಯಾರೊಬ್ಬರೂ ಇರಲಿಲ್ಲ. ಹೀಗಾಗಿ ಈ ನಿರ್ಧಾರವು ಸಮರ್ಪಕವಾಗಿಲ್ಲ' ಎಂದು ನ್ಯಾ. ಬಿ.ವಿ. ನಾಗರತ್ನ ಅವರು ಹೇಳಿದರು.

ಇದೇವೇಳೆ, 'ಯಾರೊಬ್ಬರ ವೈಯಕ್ತಿಕ ಅನಿಸಿಕೆಯ ಕಾರಣಕ್ಕೆ ಜಿಇಎಸಿ ನಿರ್ಧಾರಕ್ಕೆ ಚ್ಯುತಿ ಆಗಬಾರದು, ಜೊತೆಗೆ ಅದರ ತೀರ್ಮಾನವು ಅಸಮರ್ಪಕವೂ ಅಲ್ಲ. ಕಠಿಣ ಮುಂಜಾಗ್ರತಾ ಕ್ರಮಗಳೊಂದಿಗೆ ಕುಲಾಂತರಿ ಸಾಸಿವೆಯನ್ನು ತೆರೆದ ಪರಿಸರದಲ್ಲಿ ಪರೀಕ್ಷಿಸಬಹುದು' ಎಂದು ನ್ಯಾಯಮೂರ್ತಿ ಕರೋಲ್ ಹೇಳಿದರು.

ವಿಜಯ ದಿವಸ...

ಕಾರ್ಗಿಲ್ ವಿಜಯ ದಿವಸ ಆಚರಣೆ ಅಂಗವಾಗಿ ರಾಜಸ್ಥಾನದ ಬಿಕಾನೇರ್‌ನಲ್ಲಿ ಮಂಗಳವಾರ ಆಯೋಜಿಸಿದ್ದ ಶಸ್ತ್ರಾಸ್ತ್ರಗಳ ಪ್ರದರ್ಶನವನ್ನು ವಿದ್ಯಾರ್ಥಿನಿಯರು ಕುತೂಹಲದಿಂದ ವೀಕ್ಷಿಸಿದರು –ಪಿಟಿಐ ಚಿತ್ರ

'ಅಂಗಡಿಗಳ ನಾಮಫಲಕ ತಮಿಳಿನಲ್ಲಿರಲಿ'

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನಲ್ಲಿರುವ ಎಲ್ಲ ಅಂಗಡಿ ಮತ್ತು ವಾಣಿಜ್ಯ ಕಟ್ಟಡಗಳ ನಾಮಫಲಕಗಳಲ್ಲಿ ತಮಿಳು ಭಾಷೆಗೆ ಆದ್ಯತೆ ನೀಡುವಂತೆ ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರು ಮಂಗಳವಾರ ಸೂಚಿಸಿದ್ದಾರೆ.

ವರ್ತಕರ ಕಲ್ಯಾಣ ಮಂಡಳಿಯ ಸಭೆಯಲ್ಲಿ ಮಾತನಾಡಿದ ಸ್ಟಾಲಿನ್ ಅವರು, 'ತಮಿಳುನಾಡಿನ ಯಾವುದೇ ರಸ್ತೆಗಳಲ್ಲಿ ತಮಿಳು ಕಾಣುವುದಿಲ್ಲ ಎಂದು ಯಾರು ಹೇಳಬಾರದು. ಕಡ್ಡಾಯವಾಗಿ ಸ್ಥಳಿಯ ಭಾಷೆ ಬಳಸಬೇಕು. ಆದರೆ, ಹಲವಾರು ವರ್ತಕರು ನಾಮಫಲಕಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಬರೆಸಿದ್ದಾರೆ' ಎಂದರು

'ಈ ನಿಯಮ ತಮಿಳುನಾಡಿನಲ್ಲಿ ಮಾತ್ರ ಇಲ್ಲ. ಕರ್ನಾಟಕ ಸೇರಿ ದಕ್ಷಿಣ ರಾಜ್ಯಗಳು ಸ್ಥಳಿಯ ಭಾಷೆಗಳಿಗೆ ಹೆಚ್ಚು ಒತ್ತು ನೀಡುತ್ತಿವೆ' ಎಂದು ಹೇಳಿದರು.

'ಒಂದು ಉತ್ತರ ಮಾತ್ರ ಸರಿ'

ಭೌತವಿಜ್ಞಾನ: 'ಸುಪ್ರೀಂ'ಗೆ ವರದಿ ಸಲ್ಲಿಸಿದ ತಜ್ಞರ ಸಮಿತಿ

ನವದೆಹಲಿ (ಪಿಟಿಐ): 2024ರ ನೀಟ್–ಯುಜಿ ಪರೀಕ್ಷೆಯಲ್ಲಿ ಭೌತವಿಜ್ಞಾನಕ್ಕೆ ಸಂಬಂಧಿಸಿದ ಪತ್ರಿಕೆಯಲ್ಲಿನ ನಿರ್ದಿಷ್ಟ ಪ್ರಶ್ನೆಗೆ ಒಂದೇ ಉತ್ತರ ಸರಿಯಾಗಿತ್ತು. ಆದರೆ, ಎರಡು ಸರಿಯಾದ ಉತ್ತರಗಳು ಇರಲಿಲ್ಲ ಎಂದು ದೆಹಲಿ ಐಐಟಿಯ ಮೂವರು ತಜ್ಞರ ಸಮಿತಿಯು ಸುಪ್ರೀಂ ಕೋರ್ಟ್‌ಗೆ ಮಂಗಳವಾರ ತಿಳಿಸಿದೆ.

ಈ ಕುರಿತು ಮಂಗಳವಾರ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಜೆ.ಬಿ. ಪಾರ್ದಿವಾಲಾ ಅವರಿದ್ದ ಪೀಠವು, 'ಭೌತವಿಜ್ಞಾನದ ಪ್ರಶ್ನೆ ಪತ್ರಿಕೆಯಲ್ಲಿನ ಪ್ರಶ್ನೆಯ ಉತ್ತರಕ್ಕೆ ಸಂಬಂಧಿಸಿ ದೆಹಲಿಯ ಐಐಟಿಯ ವರದಿ ನಮ್ಮ ಕೈಸೇರಿದೆ. ಐಐಟಿಯ ನಿರ್ದೇಶಕ ರಂಗನ್ ಬ್ಯಾನರ್ಜಿ ಅವರು ಉತ್ತರದ ಪರಿಶೀಲನೆಗಾಗಿ ಸಮಿತಿ ರಚಿಸಿದ್ದರು. ಮೂವರ ತಜ್ಞರ ಸಮಿತಿಯು ಪರಿಶೀಲನೆ ನಡೆಸಿದ್ದು, ಆ ನಿರ್ದಿಷ್ಟ ಪ್ರಶ್ನೆಗೆ ಸರಿಯಾದ ಉತ್ತರ ನಾಲ್ಕನೇ ಆಯ್ಕೆಯಾಗಿದೆ ಎಂಬುದಾಗಿ ಅವರು ವರದಿಯಲ್ಲಿ ವಿವರಿಸಿದ್ದಾರೆ' ಎಂದು ತಿಳಿಸಿದರು.

ನೀಟ್–ಯುಜಿ ಫಲಿತಾಂಶದಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಬಿಹಾರದ ಪಟ್ನಾದಲ್ಲಿ ಅಖಿಲ ಭಾರತ ವಿದ್ಯಾರ್ಥಿಗಳ ಸಂಘಟನೆಯ ಸದಸ್ಯರು ಮಂಗಳವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಈ ಪ್ರಶ್ನೆಗೆ 'ಮೊದಲನೆಯ ಹೇಳಿಕೆಯು ಸರಿಯಾಗಿದೆ. ಆದರೆ, 2ನೇಯ ಹೇಳಿಕೆಯು ತಪ್ಪಾಗಿದೆ' ಎಂಬ ನಾಲ್ಕನೇ ಆಯ್ಕೆಯು ಸರಿಯಾದ ಉತ್ತರ ಎಂದು ಮುಖ್ಯ ನ್ಯಾಯಮೂರ್ತಿ ತಿಳಿಸಿದರು. ಕೇಂದ್ರ ಸರ್ಕಾರ ಮತ್ತು ಎನ್‌ಟಿಎ ಪರವಾಗಿ ಸಾಲಿಸಿಟರ್ ಜನರ್ ತುಷಾರ್ ಮೆಹ್ತಾ ಅವರು ವಾದ ಮಂಡಿಸಿದರು.

ನೀಟ್: ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್

2 ದಿನಗಳಲ್ಲಿ ಅಂತಿಮ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ನವದೆಹಲಿ: ನೀಟ್–ಯುಜಿ ಅಂತಿಮ ಫಲಿತಾಂಶಗಳನ್ನು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು ಎರಡು ದಿನಗಳಲ್ಲಿ ಪ್ರಕಟಿಸಲಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಮಂಗಳವಾರ ತಿಳಿಸಿದ್ದಾರೆ.

ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಮೆರಿಟ್ ಪಟ್ಟಿಯನ್ನು ಪರಿಷ್ಕರಿಸಬಹುದು ಎಂದು ಹೇಳಿದರು.

ನೀಟ್– ಯುಜಿ ಪರೀಕ್ಷೆಗಳನ್ನು ರದ್ದುಗೊಳಿಸಲು ಕೋರಿದ ಅರ್ಜಿಗಳನ್ನು ವಜಾಗೊಳಿಸಿರುವ ಸುಪ್ರೀಂ ಕೋರ್ಟ್ ತೀರ್ಪನ್ನು ಸ್ವಾಗತಿಸಿದ ಪ್ರಧಾನ್, ಕೊನೆಗೂ ಸತ್ಯಕ್ಕೆ ಗೆಲುವು ಸಂದಿದೆ (ಸತ್ಯ ವಿಜಯ್ ಹುವಾ ಹೈ) ಎಂದರು.

'ಸುಪ್ರೀಂ ಕೋರ್ಟ್ ಮುಂದೆ ನಮ್ಮ ಪರ ವಾದ ಮಂಡಿಸುವಾಗ, ಮೋದಿ ಸರ್ಕಾರವು ಅಕ್ರಮವಿಲ್ಲದ ಮತ್ತು ದೋಷರಹಿತ ಹಾಗೂ ಪಾರದರ್ಶಕ ಪರೀಕ್ಷೆಯ ವ್ಯವಸ್ಥೆಗೆ ಬದ್ಧವಾಗಿದೆ ಎಂದು ಹೇಳಿದ್ದೇವೆ. ಈ ನಿಟ್ಟಿನಲ್ಲಿ, ನಾವು ಎನ್‌ಟಿಎಯನ್ನು ಪರಿಷ್ಕರಣೆ ಮಾಡಲು ನಾವು ಕೆಲವು ದಿನಗಳ ಹಿಂದೆ ತಜ್ಞರ ಸಮಿತಿಯನ್ನು ನೇಮಕ ಮಾಡಿದ್ದೇವೆ' ಎಂದು ಅವರು ಹೇಳಿದರು.

'ಸಮಾಜದ ದುರ್ಬಲ ವರ್ಗಗಳ ಮೇಲೆ ನೀಟ್ ರದ್ದತಿಯು ಪರಿಣಾಮ ಬೀರುತ್ತದೆ ಎನ್ನುವುದನ್ನು ಸುಪ್ರೀಂ ಕೋರ್ಟ್ ಪರಿಗಣಿಸಿದೆ. ಪರೀಕ್ಷೆ ರದ್ದಾಗಿದ್ದರೆ ಎಸ್‌ಸಿ, ಎಸ್‌ಟಿ, ಒಬಿಸಿ, ಆರ್ಥಿಕವಾಗಿ ದುರ್ಬಲ ವರ್ಗಗಳ ಮೇಲೆ ಪರಿಣಾಮ ಬೀರುತ್ತಿತ್ತು. ಈ ಬಗ್ಗೆ ನಾವು ಮೊದಲು ಧ್ವನಿ ಎದತ್ತಿದ್ದೆವು' ಎಂದು ಅವರು ಹೇಳಿದರು.

'ಪರೀಕ್ಷೆಯ ಅಕ್ರಮಗಳಲ್ಲಿ ಯಾರೇ ಭಾಗಿಯಾಗಿರುವುದು ಕಂಡುಬಂದರೆ, ಅವರನ್ನು ಸುಮ್ಮನೆ ಬಿಡುವುದಿಲ್ಲ. ಪರೀಕ್ಷೆಗಳ ಪಾರದರ್ಶಕತೆಯಲ್ಲಿ ಯಾವುದೇ ರೀತಿಯ ಉಲ್ಲಂಘನೆ Oಯನ್ನು ನಮ್ಮ ಸರ್ಕಾರ ಸಹಿಸುವುದಿಲ್ಲ. ಪರೀಕ್ಷೆಗಳ ಪಾವಿತ್ರ್ಯತೆ ನಮಗೆ ಅತ್ಯುನ್ನತವಾಗಿದೆ' ಎಂದು ಪ್ರಧಾನ್ ಹೇಳಿದ್ದಾರೆ.

'ನೀಟ್ ವಿವಾದದ ನಂತರ ಪ್ರತಿಪಕ್ಷಗಳ ಬಣ್ಣ ಬಯಲಾಗಿದೆ. ವಿಶೇಷವಾಗಿ ಲೋಕಸಭೆಯ ವಿರೋಧ ಪಕ್ಷದ ನಾಯಕ, ದೇಶದ ಶಿಕ್ಷಣ ವ್ಯವಸ್ಥೆಯು ಅಧ್ವಾನವಾಗಿದೆ ಎಂದು ಹೇಳಿರುವುದು ಅವರ ಮಾನಸಿಕ ಸ್ಥಿತಿಯನ್ನು ತೋರಿಸುತ್ತದೆ. ದೇಶದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಜಾಗತಿಕವಾಗಿ ಪ್ರಶಂಸಿಸಲಾಗಿದೆ. ನಮ್ಮ ವೈದ್ಯರು ಮತ್ತು ಎಂಜಿನಿಯರ್‌ಗಳು ವಿಶ್ವದಾದ್ಯಂತ ಉತ್ತಮರೆಂದು ಪರಿಗಣಿಸಲ್ಪಟ್ಟಿದ್ದಾರೆ. ಇದನ್ನೆಲ್ಲ ಟೀಕಿಸುವ ರಾಹುಲ್ ಗಾಂಧಿ ಇಡೀ ದೇಶವನ್ನು ಟೀಕಿಸುತ್ತಿದ್ದಾರೆ. ಅವರು ವಿದ್ಯಾರ್ಥಿಗಳನ್ನು ದಾರಿ ತಪ್ಪಿಸುತ್ತಿದ್ದಾರೆ ಮತ್ತು ಅರಾಜಕತೆಯನ್ನು ಹರಡಲು ಪ್ರಯತ್ನಿಸುತ್ತಿದ್ದಾರೆ ಎಂದು ಪ್ರಧಾನ್ ಆರೋಪಿಸಿದರು.

'ಆರಕ್ಷಣ ಬಚಾವೊ' ಯಾತ್ರೆ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದಲ್ಲಿ ಮರಾಠ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿಗೆ ಒತ್ತಾಯಿಸಿ ಎರಡು ಪ್ರತ್ಯೇಕ ಆಂದೋಲನಗಳು ನಡೆಯುತ್ತಿರುವ ನಡುವೆಯೇ, ಇದೇ 25ರಿಂದ ಆಗಸ್ಟ್ 7ರವರೆಗೆ ರಾಜ್ಯದಾದ್ಯಂತ 'ಆರಕ್ಷಣ ಬಚಾವೊ ಯಾತ್ರೆ' ಕೈಗೊಳ್ಳಲು ವಂಚಿತ್ ಬಹುಜನ ಅಘಾಡಿ ಸಂಸ್ಥಾಪಕ ಪ್ರಕಾಶ್ ಅಂಬೇಡ್ಕರ್ ಮುಂದಾಗಿದ್ದಾರೆ.

ಮಹಾರಾಷ್ಟ್ರದಲ್ಲಿ ವಿಧಾನಸಭೆ ಚುನಾವಣೆಗೆ ದಿನಗಣನೆ ಆರಂಭವಾಗಿರುವ ಬೆನ್ನಲ್ಲೇ, ಪ್ರಕಾಶ್ ಅಂಬೇಡ್ಕರ್ ಅವರು ಪರಿಶಿಷ್ಟ ಜಾತಿ, ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಮೀಸಲಾತಿಯ ರಕ್ಷಣೆಯ ಭಾಗವಾಗಿ ಈ ಯಾತ್ರೆಗೆ ನಿರ್ಧರಿಸಿದ್ದಾರೆ. ಮುಂಬೈ ನಲ್ಲಿರುವ ಚೈತ್ಯಭೂಮಿಯಲ್ಲಿ ಈ ಯಾತ್ರೆಗೆ ಚಾಲನೆ ಸಿಗಲಿದ್ದು, ಪುಣೆಯಲ್ಲಿರುವ ಜ್ಯೋತಿರಾವ್ ಫುಲೆ ಸ್ಮಾರಕ ಇರುವ ಫುಲೆ ವಾಡವರೆಗೆ ಯಾತ್ರೆ ಸಾಗಲಿದೆ.



ಪ್ರಕಾಶ್ ಅಂಬೇಡ್ಕರ್

ಹಿಂದೂ ದೇಗುಲಕ್ಕೆ ಹಾನಿ, ಭಾರತ ವಿರೋಧಿ ಬರಹ

ಒಟ್ಟಾವ (ಪಿಟಿಐ): ಕೆನಡಾದಲ್ಲಿರುವ ಬಿಎಪಿಎಸ್ ಸ್ವಾಮಿನಾರಾಯಣ ಮಂದಿರಕ್ಕೆ ಹಾನಿಯನ್ನುಂಟು ಮಾಡಿದ್ದು, ದುಷ್ಕರ್ಮಿಗಳು ಗೋಡೆಗಳ ಮೇಲೆ ದ್ವೇಷಪೂರಿತ ಮತ್ತು ಭಾರತ ವಿರೋಧಿ ಬರಹಗಳನ್ನು ಬರೆದಿದ್ದಾರೆ.

'ಎಡ್ಮಂಟನ್ ನಗರದಲ್ಲಿರುವ ಸ್ವಾಮಿನಾರಾಯಣ ಮಂದಿರವನ್ನು ಸೋಮವಾರ ಮುಂಜಾನೆ ಹಾನಿಗೊಳಿಸಿದ್ದು, ಇದನ್ನು ನಾವು ಖಂಡಿಸುತ್ತೇವೆ. ಕೆನಡಾ ಅಧಿಕಾರಿಗಳು ಈ ಬಗ್ಗೆ ತನಿಖೆ ನಡೆಸಿ, ದುಷ್ಕರ್ಮಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಕೆನಡಾದ ವ್ಯಾಂಕೋವರ್‌ನಲ್ಲಿರುವ ಭಾರತದ ಕಾನ್ಸುಲೇಟ್ ಜನರಲ್ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ದೇಗುಲದ ಆಡಳಿತ ನಡೆಸುತ್ತಿರುವ ಬಿಎಪಿಎಸ್–ಬೋಚಾಸನವಾಸಿ ಅಕ್ಷರ ಪುರುಷೋತ್ತಮಸ್ವಾಮಿ ನಾರಾಯಣ ಸಂಸ್ಥೆಯು ಈ ಬಗ್ಗೆ ಯಾವುದೇ ಪ್ರತಿಕ್ರಿಯೆಯನ್ನು ನೀಡಿಲ್ಲ. ಆರೋಪಿಗಳ ವಿರುದ್ಧ ಕ್ರಮಕೈಗೊಂಡಿರುವ ಬಗ್ಗೆಯೂ ಯಾವುದೇ ವರದಿಯಾಗಿಲ್ಲ.

'ಇದು ಕೇವಲ ದೇಗುಲದ ಮೇಲಿನ ದಾಳಿಯಲ್ಲ, ಹಿಂದೂ ಸಮುದಾಯದ ನಂಬಿಕೆ ಮತ್ತು ಭಾವನೆಗಳ ಮೇಲಿನ ದಾಳಿ. ಹಿಂದೂ ವಿರೋಧಿ ಮನಸ್ಥಿತಿಯನ್ನು ಖಂಡಿಸುತ್ತೇವೆ' ಎಂದು ಕೆನಡಾದ ಹಿಂದೂ ಚೇಂಬರ್ ಆಫ್ ಕಾಮರ್ಸ್ ತಿಳಿಸಿದೆ.

'ದೇಗುಲದ ಗೋಡೆಯ ಮೇಲೆ ದ್ವೇಷಪೂರಿತ ಬರಹ ಬರೆಯಲಾಗಿದೆ. ಭಯದ ವಾತಾವರಣವಿಲ್ಲ. ಇದು ಮೌಲ್ಯಗಳಿಗೆ ವಿರುದ್ಧ' ಎಂದು ಸಂಸದ ರಂಡಿ ಬಾಯ್ಸೋನಾಲ್ಟ್ ಅವರು ತಿಳಿಸಿದ್ದಾರೆ.

ಯೋಧ ಹುತಾತ್ಮ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿನ ಗಡಿ ನಿಯಂತ್ರಣ ರೇಖೆಯ ಬಳಿ ಮಂಗಳವಾರ ನಸುಕಿನ ಜಾವ ಉಗ್ರರ ಒಳನುಸುಳಿವಿಕೆಯ ಯತ್ನವನ್ನು ಸೇನೆ ವಿಫಲಗೊಳಿಸಿದೆ. ಈ ಘಟನೆಯಲ್ಲಿ ಒಬ್ಬ ಯೋಧ ಹುತಾತ್ಮರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಟ್ಟಲ್ ಸೆಕ್ಟರ್‌ನಲ್ಲಿ ಮಂಗಳವಾರ ನಸುಕಿನ ಜಾವ 3 ಗಂಟೆ ಸುಮಾರಿಗೆ ಉಗ್ರರು ಒಳನುಸುಳಲು ಯತ್ನಿಸಿದ್ದು, ಯೋಧರು ಉಗ್ರರನ್ನು ಹಿಮ್ಮೆಟ್ಟಿಸಿದರು.

ಇಥಿಯೋಪಿಯಾ:157 ಸಾವು

ಅಡಿಸ್ ಅಬಾಬಾ (ಎಪಿ): ಇಥಿಯೋಪಿಯಾದಲ್ಲಿ ಭಾರಿ ವರ್ಷಧಾರೆಯಿಂದ ಉಂಟಾದ ಮಣ್ಣು ಕುಸಿತದಲ್ಲಿ ಕನಿಷ್ಠ 157 ಜನರು ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ದಕ್ಷಿಣ ಇಥಿಯೋಪಿಯಾದ ಕೆಂಚೊ ಶಾಚಾ ಗೊಜ್ಜಿ ಜಿಲ್ಲೆಯಲ್ಲಿ ಸಂಭವಿಸಿದ ಮಣ್ಣು ಕುಸಿತದಲ್ಲಿ ಮಕ್ಕಳು, ಗರ್ಭಿಣಿಯರು ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಆಡಳಿತಾಧಿಕಾರಿ ಡಗ್ಮಾವಿ ಅಯೆಲೆ ಹೇಳಿದ್ದಾರೆ.

ಈ ಪ್ರದೇಶದಲ್ಲಿ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ. ಸೋಮವಾರ ಮೃತರ ಸಂಖ್ಯೆ 55 ಇದ್ದರೆ, ಮಂಗಳವಾರ 157ಕ್ಕೇರಿದೆ ಎಂದು ಗೋಫಾ ವಲಯ ಸಂವಹನ ಕಚೇರಿಯ ಮುಖ್ಯಸ್ಥ ಕಸ್ಸಾಹುನ್ ಅಬಯ್ನೆ ತಿಳಿಸಿದ್ದಾರೆ.

'ಜನರು ಮಣ್ಣಿನಡಿ ಸಿಲುಕಿರುವುದು ರಕ್ಷಣಾ ಕಾರ್ಯಾಚರಣೆ ವೇಳೆ ಗೋಚರಿಸುತ್ತಿದೆ. ಅವರಿಗಾಗಿ ಶೋಧ ನಡೆದಿದೆ' ಎಂದು ಗೋಫಾದ ವಿಪತ್ತು ನಿರ್ವಹಣೆ ಸಂಸ್ಥೆಯ ನಿರ್ದೇಶಕ ಮಾರ್ಕೊಸ್ ಮೆಲೆಸ್ ತಿಳಿಸಿದ್ದಾರೆ.

ಉದ್ಯೋಗ ವಾಣಿ

GSSS | GEETHA SHISHU SHIKSHANA SANGHA (R)
INSTITUTE OF ENGINEERING AND TECHNOLOGY FOR WOMEN
KRS Road, Metagalli, Mysuru – 570016

APPOINTMENT NOTIFICATION

Position	Department	Qual.&Exp.
Professor	CSE	As per AICTE Norms
Assoc. Prof.	CSE | ISE | AI & ML | AI & DS | MBA MBA : Specialization - Finance / HR	
Asst. Prof.	ECE | CSE | AI & ML | AI & DS | MBA | Physics. MBA : Specialization - Operations Management / Marketing	

- Salary: Based on credentials & experience.
- Accommodation will be provided for the post of Prof. & Assoc. Prof.
- Apply with color photo and copy of all certificates to The Hon. Secretary on or before 31-07-2024.

Dr. M. Jagannatha Shenoi, President, GSSS (R) — www.geethashishu.in — Smt. Vanaja B. Pandit, Hon. Secretary, GSSS (R)

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 11ರಿಂದ 60 ವರ್ಷದ ಪ್ರತಿಭೆಗಳು • ಕೆನಡಾದ ಜಿಲ್ ಇರ್ವಿಂಗ್ ಅತಿ ಹಿರಿಯ ಕ್ರೀಡಾಪಟು

ಚೀನಾದ ಝೆಂಗ್ ಅತಿ ಕಿರಿಯ ಅಥ್ಲೀಟ್

ನವದೆಹಲಿ (ಪಿಟಿಐ): ವಯಸ್ಸು ಎನ್ನುವುದು ಒಂದು ಸಂಖ್ಯೆ ಮಾತ್ರ. ಅದರಲ್ಲೂ ಒಲಿಂಪಿಕ್ ಕೂಟದ ವಿಷಯದಲ್ಲಿ ಇದು ಅಕ್ಷರಶಃ ಸತ್ಯ

ಏಕೆಂದರೆ; ಒಲಿಂಪಿಕ್ಸ್ ವೇದಿಕೆಯು ಎಲ್ಲ ವಯೋಮಾನದವರೆಗೂ ಅವಕಾಶ ಕಲ್ಪಿಸಿದೆ. ಇದು 26ರಿಂದ ಪ್ಯಾರಿಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್‌ನಲ್ಲಿ 11 ವರ್ಷದವರಿಂದ 60ರ ವಯಸ್ಸಿನವರೆಗಿನ ಸ್ಪರ್ಧಿಗಳು ಕಣದಲ್ಲಿದ್ದಾರೆ.

ಚೀನಾದ ಝೆಂಗ್ ಹೊವೊ

ಭಾರತದ ಧೀನಿಧಿ ದೇಸಿಂಗು

ಭಾರತದ ರೋಹನ್ ಬೋಪಣ್ಣ

ಕೆನಡಾದ ಜಿಲ್ ಇರ್ವಿಂಗ್

ಝೆಂಗ್ ಹೊವೊ (ಚೀನಾ, ಸ್ಕೇಟ್ ಬೋರ್ಡಿಂಗ್): ಸ್ಕೇಟ್ ಬೋರ್ಡಿಂಗ್ ಸ್ಪರ್ಧಾಳು ಚೀನಾದ ಝೆಂಗ್ ಹೊವೊಗೆ ಈಗ 11 ವರ್ಷ ಮತ್ತು 11 ತಿಂಗಳು. ಈ ಬಾಲಕಿಯು ಸದ್ಯದ ಒಲಿಂಪಿಕ್ ಕೂಟದಲ್ಲಿ ಅತ್ಯಂತ ಕಿರಿಯ ಕ್ರೀಡಾಪಟು. ಒಟ್ಟಾರೆ ಒಲಿಂಪಿಕ್ಸ್ ಇತಿಹಾಸದಲ್ಲಿ ಎರಡನೇಯವರು. 1896ರಲ್ಲಿ ನಡೆದಿದ್ದ ಕೂಟದಲ್ಲಿ ಸ್ಪರ್ಧಿಸಿದ್ದ ಗ್ರೀಕ್ ಜಿಮ್ನಾಸ್ಟ್ ದಿಮಿಟ್ರಿಯೊಸ್ ಲಾಂದ್ರಾಸ್ (10 ವರ್ಷ, 218ದಿನಗಳು) ಮೊದಲ ಸ್ಥಾನದಲ್ಲಿದ್ದಾರೆ.

ಬುಡಾಪೆಸ್ಟ್ ಮತ್ತು ಶಾಂಘೈನಲ್ಲಿ ನಡೆದಿದ್ದ ಕ್ವಾಲಿಫಿಕೇಷನ್ ಸ್ಪರ್ಧೆಗಳಲ್ಲಿ ಅವರು ಪ್ಯಾರಿಸ್‌ಗೆ ಅರ್ಹತೆ ಗಿಟ್ಟಿಸಿದ್ದರು. ಎಳನೇ ವಯಸ್ಸಿನಲ್ಲಿದ್ದಾಗಲೇ ಝೆಂಗ್ ಮೋಜಿಗಾಗಿ ಸ್ಕೇಟ್‌ಬೋರ್ಡಿಂಗ್ ಆಡಲು ಆರಂಭಿಸಿದ್ದರು.

‘ಸ್ಕೇಟಿಂಗ್ ಬೋರ್ಡಿಂಗ್ ಆಟ ಮಜವಾಗಿರುತ್ತದೆ ಎಂದು ಯಾರೋ ಹೇಳಿದ್ದರು. ಅದಕ್ಕಾಗಿ ಆಡಲು ಆರಂಭಿಸಿದ್ದೆ. ನನಗೆ ನಿಜಕ್ಕೂ ಅದರಿಂದ ಬಹಳ ಆನಂದವಾಗಿತ್ತು’ ಎಂದು ಝೆಂಗ್ ಹೇಳಿದ್ದಾರೆ. ಅವರು ಇದೇ ಆಗಸ್ಟ್ 11ರಂದು 12ನೇ ವರ್ಷಕ್ಕೆ ಕಾಲಿಡುವರು.

ಸ್ಕೇಟ್ ಬೋರ್ಡ್ ಕ್ರೀಡೆಯನ್ನು 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸೇರ್ಪಡೆ ಮಾಡಲಾಗಿತ್ತು.

ಜಿಲ್ ಇರ್ವಿಂಗ್ (ಕೆನಡಾ, ಈಕ್ವೆಸ್ಟ್ರಿಯನ್): ಕೆನಡಾದ ಈಕ್ವೆಸ್ಟ್ರಿಯನ್ ತಂಡದಲ್ಲಿರುವ ಜಿಲ್ ಇರ್ವಿಂಗ್ ಅವರಿಗೆ ಈಗ 61 ವರ್ಷ. ಈ ಕೂಟದಲ್ಲಿ ಸ್ಪರ್ಧಿಸುತ್ತಿರುವ ಅತಿ ಹಿರಿಯ ಕ್ರೀಡಾಪಟುವಾಗಿದ್ದಾರೆ.

ಆಸ್ಟ್ರೇಲಿಯಾದ ಮೇರಿ ಹನಾ ಅವರು 1996ರಿಂದೀಚೆಗೆ ಆರು ಒಲಿಂಪಿಕ್ಸ್‌ಗಳಲ್ಲಿ ಸ್ಪರ್ಧಿಸಿದ್ದಾರೆ. ಅವರಿಗೆ ಈಗ 69 ವರ್ಷ ಈ ಬಾರಿಯೂ ತಮ್ಮ ದೇಶದ ಈಕ್ವೆಸ್ಟ್ರಿಯನ್ ತಂಡದಲ್ಲಿ (ಡ್ರೆಸಾಜ್) ಮೀಸಲು ವಿಭಾಗದಲ್ಲಿದ್ದರೆ. ಆದರೆ ಅವರು ಪ್ಯಾರಿಸ್‌ನಲ್ಲಿ ಸ್ಪರ್ಧಾ ಕಣಕ್ಕೆ ಇಳಿಯುವುದು ಅನುಮಾನವೆನ್ನಲಾಗಿದೆ. ತಂಡದಲ್ಲಿರುವ ಯಾರಾದರೂ ಗಾಯಗೊಂಡು ಹೊರಬಿದ್ದರೆ ಮಾತ್ರ ಅವರು ಕಣಕ್ಕಿಳಿಯಬೇಕಾಗಬಹುದು ಎನ್ನಲಾಗಿದೆ.

1920ರಲ್ಲಿ ಆ್ಯಂಟ್‌ವರ್ಪ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಸ್ವೀಡನ್ ದೇಶದ ಶೂಟರ್ ಆಸ್ಕರ್ ಸ್ವಾನ್ ಅವರಿಗೆ 72 ವರ್ಷ ವಯಸ್ಸಾಗಿತ್ತು. ಅವರು ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಅತಿ ಹಿರಿಯ ಕ್ರೀಡಾಪಟುವಾಗಿದ್ದಾರೆ.

ಇರ್ವಿಂಗ್ ಅವರಷ್ಟೇ ಅಲ್ಲ. ಪ್ಯಾರಿಸ್ ಕೂಟದಲ್ಲಿ 50 ವರ್ಷ ವಯಸ್ಸು ದಾಟಿದ ಇನ್ನೂ ಕೆಲವರು ಸ್ಪರ್ಧಿಸುತ್ತಿದ್ದಾರೆ. ಮಾರಿಯೊ ಡೆಸ್‌ಲಾರಿರ್ಸ್ (ಕೆನಡಾ, ಈಕ್ವೆಸ್ಟ್ರಿಯನ್; 59), ಕಾರ್ಲಸ್ ಹೆಸ್ಟರ್ (ಗ್ರೇಟ್ ಬ್ರಿಟನ್ ಈಕ್ವೆಸ್ಟ್ರಿಯನ್; 57), ನಿನೊ ಸಲುಕವೇಜ್ (ಜಾರ್ಜಿಯಾದ ಶೂಟರ್: 55), ಆ್ಯಂಡಿ ಮ್ಯಾಕ್‌ಡೊನಾಲ್ಡ್ (ಗ್ರೇಟ್ ಬ್ರಿಟನ್ ಸ್ಕೇಟ್‌ಬೋರ್ಡರ್; 50)

ಧೀನಿಧಿ ದೇಸಿಂಗು (ಈಜುಪಟು; ಭಾರತ): ಬೆಂಗಳೂರಿನ 14 ವರ್ಷ ವಯಸ್ಸಿನ ಈಜುಪಟು ಧೀನಿಧಿ ದೇಸಿಂಗು ಅವರು ಪ್ಯಾರಿಸ್‌ನಲ್ಲಿ ಸ್ಪರ್ಧಿಸಲಿರುವ ಭಾರತದ ಅತಿ ಕಿರಿಯ ವಯಸ್ಸಿನ ಕ್ರೀಡಾಪಟುವಾಗಿದ್ದಾರೆ.

1952ರ ಹೆಲ್ಸಿಂಕಿ ಒಲಿಂಪಿಕ್ಸ್‌ನಲ್ಲಿ ಭಾಗವಿಸಿದ್ದ ಈಜು ಪಟು ಆರತಿ ಸಹಾ (11 ವರ್ಷ) ಅವರ ನಂತರದ ಸ್ಥಾನದಲ್ಲಿ ಧೀನಿಧಿ ಇದ್ದಾರೆ.

ಭಜನ್ ಕೌರ್ (ಆರ್ಚರಿ; 18ವರ್ಷ), ಈಶಾ ಸಿಂಗ್ (ಶೂಟಿಂಗ್ 19) ಅವರು ಕಿರಿಯ ಸ್ಪರ್ಧಿಗಳಾಗಿದ್ದಾರೆ.

ರೋಹನ್ ಬೋಪಣ್ಣ (ಟೆನಿಸ್, 44 ವರ್ಷ): ಕರ್ನಾಟಕದ ರೋಹನ್ ಬೋಪಣ್ಣ ಅವರು ಭಾರತ ತಂಡದಲ್ಲಿರುವ ಅತ್ಯಂತ ಹಿರಿಯ ಆಟಗಾರ. ಈ ಕೂಟದಲ್ಲಿ ಬೋಪಣ್ಣ ಅವರು ಶ್ರೀರಾಮ್ ಬಾಲಾಜಿ ಅವರೊಂದಿಗೆ ಪುರುಷರ ಡಬಲ್ಸ್‌ನಲ್ಲಿ ಆಡಲಿದ್ದಾರೆ. 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಬೋಪಣ್ಣ ಅವರು ಮಹೇಶ್ ಭೂಪತಿಯವರೊಂದಿಗೆ ಆಡಿದ್ದರು.

2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಬೋಪಣ್ಣ ಅವರು ಲಿಯಾಂಡರ್ ಪೇಸ್ ಜೊತೆಗೂಡಿ ಆಡಿದ್ದರು. ಮಿಶ್ರ ಡಬಲ್ಸ್‌ನಲ್ಲಿ ಬೋಪಣ್ಣ ಅವರು ಸಾನಿಯಾ ಮಿರ್ಜಾ ಜೊತೆಗೆ ಕಣಕ್ಕಿಳಿದಿದ್ದರು.

1924ರ ಒಲಿಂಪಿಕ್ಸ್‌ನಲ್ಲಿ ಆಡಿದ್ದ ಸಿಡ್ನಿ ಜೇಕಬ್ಸ್ (44 ವರ್ಷ, 267ದಿನಗಳು) ಟೆನಿಸ್‌ನಲ್ಲಿ ಆಡಿದ್ದ ಹಿರಿಯ ಆಟಗಾರನಾಗಿದ್ದಾರೆ. ಭಾರತದ ಸ್ಕೀಟ್ ಶೂಟರ್ ಭೀಮಸಿಂಗ್ ಬಹಾದ್ದೂರ್ (66ವರ್ಷ) ಅವರು 1976ರ ಮಾಂಟ್ರಿಯಲ್ ಒಲಿಂಪಿಕ್ಸ್‌ನಲ್ಲಿ ಕಣಕ್ಕಿಳಿದಿದ್ದರು.

ಈ ಬಾರಿ ಭಾರತದ ಟಿಟಿ ಆಟಗಾರ ಅಚಂತ ಶರತ್ ಕಮಲ್ (42 ವರ್ಷ) ಅವರು ಐದನೇ ಒಲಿಂಫಿಕ್ಸ್ ಆಡಲು ಸಿದ್ಧವಾಗಿದ್ದಾರೆ. ಆರ್ಚರಿಪಟು ತರುಣದೀಪ್ ರಾಯ್ (40 ವರ್ಷ) ಕೂಡ ನಾಲ್ಕನೇ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲು ಸಿದ್ಧರಾಗಿದ್ದಾರೆ.

ಅಮೆರಿಕಕ್ಕೆ ಅಗ್ರಸ್ಥಾನ ಖಚಿತ

ಪ್ಯಾರಿಸ್ (ಎಪಿ): ಪ್ಯಾರಿಸ್ ಒಲಿಂಪಿಕ್ಸ್‌ಗೆ ಇನ್ನು ಎರಡೇ ದಿನಗಳು ಉಳಿದಿರುವಂತೆ, ಅಮೆರಿಕವು ಹೆಚ್ಚು ಪದಕಗಳನ್ನು ಗೆಲ್ಲುವ ನೆಚ್ಚಿನ ತಂಡ ಎಂದು ಬಿಂಬಿತಗೊಂಡಿದೆ. ಒಟ್ಟಾರೆ ಪದಕಗಳ ಸಂಖ್ಯೆಯಲ್ಲಿ ಚೀನಾ ಅಮೆರಿಕವನ್ನು ಹಿಂದೆಹಾಕುವ ಸಾಧ್ಯತೆ ಕಡಿಮೆ. ಆದರೆ ಚಿನ್ನದ ಪದಕಗಳನ್ನು ಗೆಲ್ಲುವಲ್ಲಿ ಚೀನಾ, ಅಮೆರಿಕವನ್ನು ಹಿಮ್ಮೆಟ್ಟಿಸುವ ಸಾಧ್ಯತೆ ತಳ್ಳಿಹಾಕುವಂತಿಲ್ಲ.

ನೀಲ್ಸನ್ಸ್ ಗ್ರೇಸ್‌ನಾಟ್ ಇ ಸ್ಪೋರ್ಟ್ಸ್ ಸಂಸ್ಥೆಯ ಮುನ್ಸೂಚನೆ ಪ್ರಕಾರ ಅಮೆರಿಕ 112 ಪದಕಗಳನ್ನು ಗೆಲ್ಲಬಹುದಾಗಿದೆ. ಈ ಸಂಸ್ಥೆಯು ವಿಶ್ವದಾದ್ಯಂತ ವಿವಿಧ ಕ್ರೀಡಾ ಲೀಗ್‌ಗಳಿಗೆ ಅಂಕಿಸಂಖ್ಯೆಗಳ ವಿಶ್ಲೇಷಣೆ ಪೂರೈಸುತ್ತದೆ. ಒಲಿಂಪಿಕ್ಸ್‌ಗಿಂತ ಮೊದಲು ನಡೆಯುವ ಪ್ರಮುಖ ಕ್ರೀಡಾಕೂಟಗಳನ್ನೂ ಅದು ವಿಶ್ಲೇಷಣೆಗೆ ಒಳಪಡಿಸುತ್ತದೆ.

ಅಮೆರಿಕ ಗೆಲ್ಲುವ 112 ಪದಕಗಳಲ್ಲಿ 39 ಚಿನ್ನ, 32 ಬೆಳ್ಳಿ ಮತ್ತು 41 ಕಂಚಿನ ಪದಕಗಳು ಇರುತ್ತವೆ ಎಂದು ಅದು ಲೆಕ್ಕಾಚಾರ ಮಾಡಿದೆ. ಚೀನಾ 86 ಪದಕಗಳನ್ನು ಗೆಲ್ಲಬಹುದೆಂದು ಅದು ಲೆಕ್ಕಹಾಕಿದೆ. ಇದರಲ್ಲಿ 34 ಚಿನ್ನ, 27 ಬೆಳ್ಳಿ, 25 ಕಂಚಿನ ಪದಕಗಳಿರುತ್ತವೆ ಎಂಬುದು ಅದರ ಭವಿಷ್ಯ. 2021ರಲ್ಲಿ ನಡೆದ ಟೋಕಿಯೊ ಕ್ರೀಡೆಗಳಲ್ಲಿ ಅಮೆರಿಕ ಮೊದಲ ಸ್ಥಾನವನ್ನು, ಚೀನಾ ಎರಡನೇ ಸ್ಥಾನವನ್ನು ಪಡೆದಿದ್ದವು.

ಅಮೆರಿಕ ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯುವುದು ಅಚ್ಚರಿಯ ವಿಷಯವೇನಲ್ಲ. ಸತತ ಏಳು ಒಲಿಂಪಿಕ್ಸ್‌ಗಳಿಂದ ಅಮೆರಿಕ ಪದಕ ಪಟ್ಟಿಯಲ್ಲಿ ಮೊದಲ ಸ್ಥಾನ ಕಾಪಾಡಿಕೊಂಡು ಬಂದಿದೆ. 1992ರ ಬಾರ್ಸಿಲೋನಾ ಒಲಿಂಪಿಕ್ಸ್‌ನಲ್ಲಿ ಯುನಿಫೈಡ್ ತಂಡ (ಹಿಂದೆ ರಷ್ಯಾಕ್ಕೆ ಸೇರಿದ್ದ ಗಣರಾಜ್ಯಗಳ ಸಂಯುಕ್ತ ತಂಡ) ಮೊದಲ ಸ್ಥಾನ (45 ಚಿನ್ನ ಸೇರಿ 112 ಪದಕ) ಗಳಿಸಿತ್ತು. ಅಮೆರಿಕವನ್ನು (37 ಚಿನ್ನ ಸೇರಿ 108) ಎರಡನೇ ಸ್ಥಾನಕ್ಕೆ ತಳ್ಳಿತ್ತು.

ಅಮೆರಿಕ ಗರಿಷ್ಠ ಚಿನ್ನದ ಪದಕ ಗಳಿಸುವಲ್ಲಿ ಕೊನೆಯ ಬಾರಿ ಹಿಂದೆ ಬಿದ್ದಿದ್ದು 2008ರ ಬೀಜಿಂಗ್ ಕ್ರೀಡೆಗಳಲ್ಲಿ. ಮುನ್ಸೂಚನೆಯಂತೆ ಅಮೆರಿಕ ಮತ್ತು ಚೀನಾ ನಂತರದ ಸ್ಥಾನಗಳಲ್ಲಿ ಬ್ರಿಟನ್ (ಒಟ್ಟು ಪದಕ 63, ಚಿನ್ನ 17), ಫ್ರಾನ್ಸ್ (60, 27), ಆಸ್ಟ್ರೇಲಿಯಾ (54–15), ಜಪಾನ್ (47–13), ಇಟಲಿ (46–11), ಜರ್ಮನಿ (35–11), ನೆದರ್ಲೆಂಡ್ಸ್ (34–16), ದಕ್ಷಿಣ ಕೊರಿಯಾ (26–9) ಇವೆ.

ಆತಿಥೇಯ ರಾಷ್ಟ್ರ ಪದಕಗಳ ಸಂಖ್ಯೆ ಹೆಚ್ಚಿಸಿಕೊಳ್ಳುವುದು ಸಾಮಾನ್ಯ. ಹೆಚ್ಚು ವೆಚ್ಚಮಾಡುವುದು, ಜೊತೆಗೆ ತವರಿನ ಪರಿಸರದಲ್ಲಿ ಸ್ಪರ್ಧೆ, ಪ್ರೇಕ್ಷಕರ ಬೆಂಬಲ ಎಲ್ಲವೂ ಇದಕ್ಕೆ ಕಾರಣ. 2021ರ ಒಲಿಂಪಿಕ್ಸ್‌ನಲ್ಲಿ ಆತಿಥೇಯ ಜಪಾನ್ ದಾಖಲೆಯ 58 ಪದಕಗಳನ್ನು ಗೆದ್ದುಕೊಂಡಿತ್ತು. ಇದರಲ್ಲಿ 27 ಚಿನ್ನದ ಪದಕಗಳಿದ್ದವು. ಈ ಬಾರಿ ಫ್ರಾನ್ಸ್ ಎಂದಿಗಿಂತ ಹೆಚ್ಚು ಪದಕಗಳನ್ನು ಗಳಿಸಬಹುದೆಂಬ ನಿರೀಕ್ಷೆಯಿದೆ.

ಪ್ಯಾರಿಸ್ ಒಲಿಂಪಿಕ್ಸ್ ಕೊನೆಯ ಟೂರ್ನಿ ಎಂದ ಬ್ರಿಟಿಷ್ ಆಟಗಾರ

ನಿವೃತ್ತಿ ಪ್ರಕಟಿಸಿದ ಆ್ಯಂಡಿ ಮರ್ರೆ

ಪ್ಯಾರಿಸ್ (ಎಎಫ್‌ಪಿ): ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ ಹಾಗೂ ಮೂರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ಆ್ಯಂಡಿ ಮರ್ರೆ ಅವರು ಪ್ಯಾರಿಸ್ ಒಲಿಂಪಿಕ್ಸ್ ನಂತರ ಆಟದಿಂದ ನಿವೃತ್ತರಾಗುವುದಾಗಿ ಖಚಿತ ಪಡಿಸಿದ್ದಾರೆ. ಆ ಮೂಲಕ ಟೆನಿಸ್ ಸುವರ್ಣಯುಗದ ಮತ್ತೊಬ್ಬ ಆಟಗಾರ ವಿದಾಯ ಹೇಳಿದಂತಾಗಿದೆ.

‘ನನ್ನ ಕೊನೆಯ ಟೆನಿಸ್ ಟೂರ್ನಿಯನ್ನು ಒಲಿಂಪಿಕ್ಸ್‌ನಲ್ಲಿ ಆಡಲು ಪ್ಯಾರಿಸ್‌ಗೆ ಬಂದಿಳಿದಿದ್ದೇನೆ’ ಎಂದು 37 ವರ್ಷ ವಯಸ್ಸಿನ ಬ್ರಿಟನ್‌ನ ಅಗ್ರ ಸಿಂಗಲ್ಸ್ ಆಟಗಾರ ಹೇಳಿದ್ದಾರೆ.

ಮರ್ರೆ ಅವರು ಪ್ರಸ್ತುತ ವಿಶ್ವ ಕ್ರಮಾಂಕದಲ್ಲಿ 121ನೇ ಸ್ಥಾನದಲ್ಲಿದ್ದಾರೆ. ಆಗಾಗ ಗಾಯದ ಸಮಸ್ಯೆಗೆ ಅವರು ಒಳಗಾಗುತ್ತಿದ್ದರು. ಕೆಲಸಮಯದಿಂದ ಪಾದದ ನೋವಿನಿಂದಲೂ ಬಳಲುತ್ತಿದ್ದರು. ಬೆನ್ನು ಹುರಿಯಲ್ಲಿದ್ದ ಗಡ್ಡೆಯನ್ನು ತೆಗೆದುಹಾಕಲು ಅವರು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಪೂರ್ಣವಾಗಿ ಚೇತರಿಸದ ಕಾರಣ ಅವರು ವಿಂಬಲ್ಡನ್ ಸಿಂಗಲ್ಸ್‌ನಿಂದ ಹಿಂದೆಸರಿದಿದ್ದರು. ಸಹೋದರ ಜೇಮಿ ಜೊತೆ ಡಬಲ್ಸ್‌ನಲ್ಲಿ ಆಡಿದ್ದರೂ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದರು.

‘ನಾನು ಈ ಆಟವನ್ನು ಸದಾ ಆಡಬಯಸುತ್ತೇನೆ. ನಾನು ಟೆನಿಸ್‌ನಿಂದ ಸಾಕಷ್ಟು ಪಡೆದಿದ್ದೇನೆ. ಈ ಆಟವು ವೃತ್ತಿಜೀವನದಲ್ಲಿ ಸಾಕಷ್ಟು ಪಾಠಗಳನ್ನೂ ಕಲಿಸಿದೆ. ಮುಂದೆ ಅವು ಉಪಯೋಗಕ್ಕೆ ಬರಬಹುದು’ ಎಂದು ಸಾಮಾಜಿಕ ಜಾಲತಾಣದಲ್ಲಿ ಮರ್ರೆ ಬರೆದಿದ್ದಾರೆ.

ಬ್ರಿಟನ್‌ನ ಆ್ಯಂಡಿ ಮರ್ರೆ ಎಎಫ್‌ಪಿ ಚಿತ್ರ

2013ರಲ್ಲಿ ವಿಂಬಲ್ಡನ್ ಸಿಂಗಲ್ಸ್ ಪ್ರಶಸ್ತಿ ಗೆಲುವು ಅವರಿಗೆ ಪ್ರಸಿದ್ಧಿ ತಂದುಕೊಟ್ಟಿತು. ಆ ಮೂಲಕ ಮರ್ರೆ ಅವರು ಬ್ರಿಟನ್‌ನ 77 ವರ್ಷಗಳ ಕಾಯುವಿಕೆಯನ್ನು ಕೊನೆಗೊಳಿಸಿದ್ದರು. ತಮ್ಮ ದೀರ್ಘಕಾಲದ ಎದುರಾಳಿ ನೊವಾಕ್ ಜೊಕೊವಿಚ್ ಅವರನ್ನು ಫೈನಲ್‌ನಲ್ಲಿ ಸೋಲಿಸಿದ್ದರು. ಇದರ ಜೊತೆಗೆ ಅವರು 2012 ಮತ್ತು 2016ರಲ್ಲಿ ಅಮೆರಿಕ ಓಪನ್‌ನಲ್ಲೂ ಪ್ರಶಸ್ತಿ ಗೆದ್ದಿದ್ದರು.

2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ರೋಜರ್ ಫೆಡರರ್ ಅವರನ್ನು ಸೋಲಿಸಿ ತವರಿನಲ್ಲಿ ಟೆನಿಸ್ ಸಿಂಗಲ್ಸ್ ಚಾಂಪಿಯನ್ ಆಗಿದ್ದು ಅವರ ಪಾಲಿಗೆ ಭಾವನಾತ್ಮಕ ಗೆಲುವು. ಏಕೆಂದರೆ ನಾಲ್ಕು ವಾರಗಳ ಹಿಂದೆ ಅದೇ ಸೆಂಟರ್ ಕೋರ್ಟ್‌ನಲ್ಲಿ ನಡೆದಿದ್ದ ವಿಂಬಲ್ಡನ್ ಫೈನಲ್‌ನಲ್ಲಿ ಅವರು ಸ್ವಿಸ್ ಆಟಗಾರನಿಗೇ ಮಣಿದಿದ್ದರು.

ನಾಲ್ಕು ವರ್ಷಗಳ ನಂತರ ರಿಯೊ ಒಲಿಂಪಿಕ್ಸ್‌ನಲ್ಲಿ ಜುವಾನ್ ಮಾರ್ಟಿನ್ ಡೆಲ್ ಪೊಟ್ರೊ ಅವರನ್ನು ಮಣಿಸಿ ಸತತ ಒಲಿಂಪಿಕ್ಸ್‌ಗಳಲ್ಲಿ ಚಿನ್ನ ಗೆದ್ದ ಮೊದಲ ಟೆನಿಸಿಗನೆಂಬ ಗೌರವಕ್ಕೆ ಪಾತ್ರರಾದರು.

2015ರಲ್ಲಿ ಬ್ರಿಟನ್ ಡೇವಿಸ್ ಕಪ್ ಅನ್ನು ಗೆಲ್ಲುವಲ್ಲೂ ಅವರ ಪಾತ್ರ ಪ್ರಮುಖ. ಇದು 79 ವರ್ಷಗಳಲ್ಲಿ ಬ್ರಿಟನ್‌ಗೆ ಒಲಿದ ಮೊದಲ ಡೇವಿಸ್ ಕಪ್ ಪ್ರಶಸ್ತಿ ಎನಿಸಿತ್ತು.

ಅವರು ಟೆನಿಸ್ ವೃತ್ತಿಜೀವನದಲ್ಲಿ ಒಟ್ಟು 46 ಪ್ರಶಸ್ತಿಗಳನ್ನು ಜಯಿಸಿದ್ದರು. ಬಹುಮಾನ ಮೊತ್ತವಾಗಿ ಅವರು ಸುಮಾರು ₹544 ಕೋಟಿ ಗೆದ್ದಿದ್ದಾರೆ.

ಅವರು ಯಶಸ್ಸು ಕಂಡಿದಿದ್ದು, ರೋಜರ್ ಫೆಡರರ್, ನೊವಾಕ್ ಜೊಕೊವಿಚ್ ಮತ್ತು ರಫೆಲ್ ನಡಾಲ್ ಅವರು ವಿಜೃಂಭಿಸುತ್ತಿದ್ದ ಅವಧಿಯಲ್ಲಿ ಎಂಬುದು ಗಮನಾರ್ಹ. ಈ ಮೂವರು ತಮ್ಮ ನಡುವೆ 66 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದುಕೊಂಡು ಆಧಿಪತ್ಯ ಮೆರೆದಿದ್ದರು.

ಅಭಿನವ್ ಬಿಂದ್ರಾಗೆ ಐಒಸಿಯ ಒಲಿಂಪಿಕ್ ಆರ್ಡರ್ ಗೌರವ

ನವದೆಹಲಿ (ಪಿಟಿಐ): ಒಲಿಂಪಿಕ್ ಆಂದೋಲನಕ್ಕೆ ನೀಡಿದ ಗಣನೀಯ ಕೊಡುಗೆಗಾಗಿ ಭಾರತದ ಶೂಟಿಂಗ್ ಕ್ಷೇತ್ರದ ದಿಗ್ಗಜ ಅಭಿನವ್ ಬಿಂದ್ರಾ ಅವರು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ‘ಒಲಿಂಪಿಕ್ ಆರ್ಡರ್’ ಗೌರವಕ್ಕೆ ಪಾತ್ರರಾಗಿದ್ದಾರೆ.

ಒಲಿಂಪಿಕ್ಸ್ ಮುಕ್ತಾಯಕ್ಕೆ ಒಂದು ದಿನ ಮೊದಲು, ಆಗಸ್ಟ್ 10ರಂದು ಪ್ಯಾರಿಸ್‌ನಲ್ಲಿ ಐಒಸಿಯ 142ನೇ ಅಧಿವೇಶನ ನಡೆಯಲಿದ್ದು ಅಲ್ಲಿ ಪದಕ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಈ ಸಂಬಂಧ ಐಒಸಿ ಅಧ್ಯಕ್ಷರು ಬಿಂದ್ರಾ ಅವರಿಗೆ ಜುಲೈ 20ರಂದು ಪತ್ರ ಬರೆದಿದ್ದಾರೆ. ‘ಒಲಿಂಪಿಕ್ ಆಂದೋಲನಕ್ಕೆ ನೀವು ನೀಡಿದ ಅಮೋಘ ಕೊಡುಗೆಗಳಿಗಾಗಿ ಐಒಸಿ ಕಾರ್ಯಕಾರಿ ಸಮಿತಿ ಒಲಿಂಪಿಕ್ ಆರ್ಡರ್ ಗೌರವವನ್ನು ನಿಮಗೆ ಪ್ರಧಾನ ಮಾಡಲು ನಿರ್ಧರಿಸಿದೆ ಎಂದು ತಿಳಿಸಲು ಸಂತಸವಾಗುತ್ತಿದೆ’ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಒಲಿಂಪಿಕ್ ಆರ್ಡರ್, ಒಲಿಂಪಿಕ್ ಆಂದೋಲನಕ್ಕೆ ನೀಡುವ ಕೊಡುಗೆಗಾಗಿ ಐಒಸಿ ನೀಡುವ ಅತ್ಯುನ್ನತ ಗೌರವವಾಗಿದೆ. ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ಬಿಂದ್ರಾ ಅವರನ್ನು ಅಭಿನಂದಿಸಿದ್ದಾರೆ.

41 ವರ್ಷ ವಯಸ್ಸಿನ ಅಭಿನವ್ ಬಿಂದ್ರಾ, ಒಲಿಂಪಿಕ್ಸ್ ವೈಯಕ್ತಿಕ ಸ್ಪರ್ಧೆಗಳಲ್ಲಿ ಚಿನ್ನ ಗೆದ್ದ ಭಾರತದ ಮೊದಲ ಕ್ರೀಡಾಪಟು ಎನಿಸಿದ್ದಾರೆ. 2008ರ ಬೀಜಿಂಗ್ ಕ್ರೀಡೆಗಳಲ್ಲಿ ಅವರು ಪುರುಷರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ವಿಜೇತರಾಗಿದ್ದರು. ಅವರು 2010 ರಿಂದ 2020ರವರೆಗೆ ಇಂಟರ್‌ನ್ಯಾಷನಲ್ ಶೂಟಿಂಗ್ ಸ್ಪೋರ್ಟ್ಸ್ ಫೆಡರೇಷನ್‌ನ ಅಥ್ಲೀಟ್ಸ್ ಸಮಿತಿ ಸದಸ್ಯರಾಗಿದ್ದರು. 2014ರಲ್ಲಿ ಅಧ್ಯಕ್ಷತೆ ವಹಿಸಿದ್ದರು. 2018ರಿಂದ ಅವರು ಐಒಸಿ ಅಥ್ಲೀಟ್ಸ್ ಕಮಿಷನ್ ಸದಸ್ಯರಾಗಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕಾನೂನು ವಿವಿ ಅಥ್ಲೆಟಿಕ್ಸ್ ನಾಳೆಯಿಂದ

ಹುಬ್ಬಳ್ಳಿ: ‘ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಅಂತರ ಮಹಾ ವಿದ್ಯಾಲಯಗಳ ಎಂಟನೇ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಜುಲೈ 25 ಮತ್ತು 26ರಂದು ಧಾರವಾಡದ ಆರ್.ಎನ್. ಶೆಟ್ಟಿ ಕ್ರೀಡಾಂಗಣದಲ್ಲಿ ನಡೆಯಲಿದೆ’ ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಸಿ.ಬಸವರಾಜು ಹೇಳಿದರು.

‘ವಿಶ್ವವಿದ್ಯಾಲಯ ವ್ಯಾಪ್ತಿಯ 56 ಕಾಲೇಜುಗಳ 262 ವಿದ್ಯಾರ್ಥಿಗಳು ಕ್ರೀಡಾಕೂಟದಲ್ಲಿ ಭಾಗವಹಿಸುವರು. ಕೋವಿಡ್ ಕಾರಣ ಎರಡು ವರ್ಷ ಕ್ರೀಡಾಕೂಟ ನಡೆದಿರಲಿಲ್ಲ’ ಎಂದು ಅವರು ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

‘ಮೈಸೂರು, ಮಂಗಳೂರು, ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ, ಹುಬ್ಬಳ್ಳಿ ಮತ್ತು ಕಲಬುರಗಿ ವಲಯಗಳಲ್ಲಿ ಈಗಾಗಲೇ ಕ್ರೀಡಾಕೂಟ ನಡೆದಿದ್ದು, ಅಲ್ಲಿ ವಿಜೇತರಾದವರು ಈ ಕ್ರೀಡಾಕೂಟದಲ್ಲಿ ಭಾಗವಹಿಸುವರು’ ಎಂದರು.

ಟೆನಿಸ್: ಸೆಮಿಗೆ ತನು ವಿಶ್ವಾಸ್

ಬೆಂಗಳೂರು: ತನು ವಿಶ್ವಾಸ್ ಅವರು ಎಎನ್‌ಟಿ ಅಕಾಡೆಮಿ ಆಯೋಜಿಸಿರುವ ಎಎನ್‌ಟಿ–ಎಐಟಿಎ 16 ವರ್ಷದೊಳಗಿನವರ ಚಾಂಪಿಯನ್‌ಷಿಪ್ ಟೆನಿಸ್ ಟೂರ್ನಿಯ ಬಾಲಕಿಯರ ಸಿಂಗಲ್ಸ್‌ನಲ್ಲಿ ಸೆಮಿಫೈನಲ್ ತಲುಪಿದ್ದಾರೆ.

ಎಎನ್‌ಟಿ ಕೋರ್ಟ್‌ನಲ್ಲಿ ಮಂಗಳವಾರ ನಡೆದ ಹಣಾಹಣಿಯಲ್ಲಿ ತನು ಅವರು 4-6, 6-2, 7-5ರಿಂದ ಮೂರನೇ ಶ್ರೇಯಾಂಕದ ಸಂಸ್ಕೃತಿ ಅವರಿಗೆ ಆಘಾತ ನೀಡಿದರು.

ಮತ್ತೊಂದು ಪಂದ್ಯದಲ್ಲಿ ರೀತ್ ಝುವಾರ್ 6-3, 6-0 ನಾಲ್ಕನೇ ಶ್ರೇಯಾಂಕದ ವಿಧಿ ಗುಪ್ತಾ ಅವರನ್ನು ಸೋಲಿಸಿ ಸೆಮಿಫೈನಲ್ ಪ್ರವೇಶಿಸಿದರು. ಸುಹಾನಿ ಭಾಸಿನ್ ಮತ್ತು ಅದಿತಿ ಖಾನಾಪುರಿ ಕೂಡಾ ಸೆಮಿಗೆ ಪ್ರವೇಶಿಸಿದ್ದಾರೆ. ಬಾಲಕರ ಕ್ವಾರ್ಟರ್ ಫೈನಲ್ ಪಂದ್ಯಗಳು ಬುಧವಾರ ನಡೆಯಲಿವೆ.